"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

9ನೇ ಮಾರ್ಚ್ 2021
ಮಂಗಳವಾರ

## ವಿಷಯಾನುಕ್ರಮಣಿಕೆ

**01. ಸಂತಾಪ ಸೂಚನೆ**

**ವಿಷಯ:– ಪದ್ಮಶ್ರೀ ಹಾಗೂ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಹಿರಿಯ ಕೃಷಿ ವಿಜ್ಞಾನಿ ಪ್ರೊಫೆಸರ್ ಎಂ. ಮಹದೇವಪ್ಪ ಹಾಗೂ ಕವಿಗಳು, ಭಾಷಾಂತರಕಾರರು, ಸಾಹಿತಿಗಳಾದ ಡಾ: ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ ಅವರುಗಳ ನಿಧನದ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**02. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯ:– ಪೆಟ್ರೋಲ್, ಡೀಸೆಲ್ ಹಾಗೂ ಗ್ಯಾಸ್ ಬೆಲೆಯು ದಿನೇದಿನೇ ಹೆಚ್ಚಾಗುತ್ತಿರುವುದರಿಂದ ಸಾಮಾನ್ಯ ಜನರು ಜೀವನ ನಡೆಸಲು ಕಷ್ಟಸಾಧ್ಯವಾಗಿರುವ ಸಂಗತಿ ಬಗ್ಗೆ.**

– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

**03. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**822 – ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ.**

– ಶ್ರೀ ಹೆಚ್.ಎಂ.ರಮೇಶಗೌಡ
– ಶ್ರೀ ಸಿ.ಸಿ.ಪಾಟೀಲ್(ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**841 – ರಾಜ್ಯದಲ್ಲಿರುವ ಬಿಪಿಎಲ್ ಪಡಿತರ ಚೀಟಿದಾರರ ಬಗ್ಗೆ.**
- ಶ್ರೀ ಪಿ.ಆರ್.ರಮೇಶ್
- ಶ್ರೀ ಉಮೇಶ್ ಕತ್ತಿ(ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು)

**855 – ನಿವೇಶನ ನೀಡದೆ ವಂಚಿಸಿರುವ ಬಗ್ಗೆ**
- ಶ್ರೀ ಎನ್.ಅಪ್ಪಾಜಿಗೌಡ
- ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

**861 – ಸ್ಮಾರ್ಟ್ ಸಿಟಿ ಯೋಜನೆ ಕಾಮಗಾರಿಗಳ ಬಗ್ಗೆ.**
- ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)

**800 – ಸಕ್ಕರೆ ಕಾರ್ಖಾನೆಗಳು ಮತ್ತು ಅಲ್ಲಿ ಉತ್ಪಾದಿಸುವ ವಿದ್ಯುತ್ ಬಗ್ಗೆ.**
- ಶ್ರೀ ಅ.ದೇವೇಗೌಡ
- ಶ್ರೀ ಎನ್.ನಾಗರಾಜ್ ಎಂಟಿಬಿ(ಪೌರಾಡಳಿತ ಹಾಗೂ ಸಕ್ಕರೆ ಸಚಿವರು)

**865 – ರಾಜ್ಯದಲ್ಲಿರುವ ಬೃಹತ್ ಕೈಗಾರಿಕೆಗಳ ಬಗ್ಗೆ**
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

**828 – ಅನ್ನಭಾಗ್ಯ ಯೋಜನೆಯ ದುರುಪಯೋಗದ ಬಗ್ಗೆ.**
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಉಮೇಶ್ ಕತ್ತಿ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು)

**817 – ಮಡಿಕೇರಿ ನಗರದಲ್ಲಿರುವ ಉದ್ಯಾನವನಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ.**
- ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.
- ಶ್ರೀ ಎನ್.ನಾಗರಾಜ್ ಎಂಟಿಬಿ(ಪೌರಾಡಳಿತ ಹಾಗೂ ಸಕ್ಕರೆ ಸಚಿವರು)

**813 – ಮೈಸೂರು ಸಕ್ಕರೆ ಕಂಪನಿಯ ಬಗ್ಗೆ**
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಎನ್.ನಾಗರಾಜ್ ಎಂಟಿಬಿ(ಪೌರಾಡಳಿತ ಹಾಗೂ ಸಕ್ಕರೆ ಸಚಿವರು)

**824 – ಕೆ.ಐ.ಎ.ಡಿ.ಬಿ. ವತಿಯಿಂದ ಸೋಂಪುರ ಹೋಬಳಿಯ ಜಮೀನಿನ ಬಗ್ಗೆ.**
- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**856 – ಭತ್ತ ಖರೀದಿಯ ಬೆಂಬಲ ಬೆಲೆ ನೀಡಿಕೆ ಬಗ್ಗೆ**

– ಶ್ರೀ ಮರಿತಿಬ್ಬೇಗೌಡ

– ಶ್ರೀ ಉಮೇಶ್ ಕತ್ತಿ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು)

**ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**04. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ)** ಕೊಡಗು ಜಿಲ್ಲೆಯಲ್ಲಿ ಹುಲಿ ದಾಳಿಯಿಂದ ಮಾನವರು ಮತ್ತು ಜಾನುವಾರು ಬಲಿಯಾಗುತ್ತಿರುವ ಬಗ್ಗೆ.

– ಶ್ರೀಮತಿ ಎಸ್.ವೀಣಾ ಅಚ್ಚಯ್ಯ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ)** ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಡೊಮಗೇರಾ ಗ್ರಾಮವನ್ನು ನೂತನ ದಾಂಡೇಲಿ ತಾಲ್ಲೂಕಿಗೆ ಸೇರಿಸಬಾರದೆಂಬ ಬಗ್ಗೆ

– ಶ್ರೀ.ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಇ)** ಕಾಫಿ ಬೆಳೆಗಾರರಿಗೆ ಸರ್ಕಾರದ ನೆರವು ಕೋರಿದ ಮನವಿ ಬಗ್ಗೆ.

– ಶ್ರೀ ಕೆ.ಹರೀಶ್ ಕುಮಾರ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಈ)** ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಚುನಾವಣೆ ಬಗ್ಗೆ

– ಶ್ರೀ ಮಾನೆ ಶ್ರೀನಿವಾಸ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಉ)** ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಅರಣ್ಯ ಪ್ರದೇಶಕ್ಕೆ ಬೆಂಕಿಬಿದ್ದು ಅರಣ್ಯ ನಾಶವಾಗುತ್ತಿರುವ ಬಗ್ಗೆ.

– ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್)

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಊ)** ಕುಂದಾಪುರ ತಾಲ್ಲೂಕಿನ ಹಾಲಾಡಿಯ ಸಮೀಪ ವಾರಾಹಿ ನದಿಯಿಂದ ಉಡುಪಿ ನಗರಕ್ಕೆ ಕುಡಿಯುವ ನೀರು ಪೂರೈಕೆ ಬಗ್ಗೆ.

– ಶ್ರೀ ಕೆ.ಪ್ರತಾಪ ಚಂದ್ರಶೆಟ್ಟಿ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಋ)** ಕಾರವಾರ ಜಿಲ್ಲಾ ವೈದ್ಯಕೀಯ ವಿಜ್ಞಾನ ಕಾಲೇಜಿಗೆ ಭೂಮಿ ಒದಗಿಸುವ ಬಗ್ಗೆ.

– ಶ್ರೀ ಎಸ್.ವ್ಹಿ.ಸಂಕನೂರ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎ) ಕೊಡಗು ಜಿಲ್ಲೆ ತಿತಿಮತಿ ಗ್ರಾಮ ಪಂಚಾಯಿತಿ ಹಾಗೂ ಕಾನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಾಡಿಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ಕಟ್ಟಲು ಅರಣ್ಯ ಇಲಾಖೆಯ ನಿಯಮಗಳು ಅಡ್ಡಿಯಾಗಿರುವ ಬಗ್ಗೆ.

- ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಎ) ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕೊಪ್ಪ ಗ್ರಾಮದ ಕಾಲುವೆಗೆ ಘನತ್ಯಾಜ್ಯಗಳನ್ನು ಬಿಸಾಡಿ ಕಾಲುವೆ ಕಲುಷಿತಗೊಳ್ಳುತ್ತಿರುವ ಬಗ್ಗೆ.

- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**05.ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**06. ಅರ್ಜಿಗಳನ್ನೊಪ್ಪಿಸುವುದು**

**07. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ**

**ವಿಷಯ: (ಅ) ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಮರುಪಾವತಿಸುವಲ್ಲಿ ವಿಳಂಬವಾಗಿರುವ ಬಗ್ಗೆ.**

- ಶ್ರೀ ಬಸವರಾಜ ಪಾಟೀಲ್ ಇಟಗಿ
- ಶ್ರೀ ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

**08. ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆ**

**ವಿಷಯ:-** ದಿನಾಂಕ: 10.06.2020ರಂದು ಆರ್ಥಿಕ ಇಲಾಖೆಯವರು ಹೊರಡಿಸಿರುವ ಸುತ್ತೋಲೆ ಸಂಖ್ಯೆ:ಆಇ/157/ವೆಚ್ಚ-8/2020ನ್ನು ಹಿಂಪಡೆದು ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಹಾಗೂ ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ.

- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಡಾ: ಅಶ್ವತ್ಥನಾರಾಯಣ ಸಿ.ಎನ್(ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಐ.ಟಿ. ಮತ್ತು ಬಿ.ಟಿ, ವಿಜ್ಞಾನ ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಇಲಾಖೆ) (ಮುಖ್ಯ ಮಂತ್ರಿಗಳ ಪರವಾಗಿ)
- ಡಾ: ವೈ.ಎ.ನಾರಾಯಣಸ್ವಾಮಿ
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಮರಿತಿಬ್ಬೇಗೌಡ
- ಶ್ರೀ ಶಶೀಲ್ ಜಿ.ನಮೋಶಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**09. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ**

**ವಿಷಯ:– ಆ)** ಕೋಲಾರ ಜಿಲ್ಲೆಯ ಕೆರೆಗಳಿಗೆ ಸಂಸ್ಕರಿಸಿದ ನೀರನ್ನು ತುಂಬಿಸಲು ರೂಪಿಸಿರುವ ಕೆ.ಸಿ.ವ್ಯಾಲಿ ಯೋಜನೆಯಡಿಯಲ್ಲಿ ನೂರಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದರೂ ನಿರೀಕ್ಷಿತ ಪ್ರಮಾಣದಲ್ಲಿ ಕೆರೆಗಳಿಗೆ ನೀರನ್ನು ತುಂಬಿಸಲು ಆಗದಿರುವ ಬಗ್ಗೆ.

– ಡಾ:ವೈ.ಎ.ನಾರಾಯಣಸ್ವಾಮಿ
– ಶ್ರೀ ಜೆ.ಸಿ.ಮಾಧುಸ್ವಾಮಿ(ಸಣ್ಣ ನೀರಾವರಿ ಸಚಿವರು)

**10. ಪ್ರಕಟಣೆ**

**11. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ**

**ವಿಷಯ:–** ತಮಿಳುನಾಡು ಸರ್ಕಾರವು ಕಾವೇರಿ ನದಿ ಪಾತ್ರದಲ್ಲಿನ ಮಾಯನೂರು ಜಲಾಶಯವನ್ನು ಅಕ್ರಮವಾಗಿ ಬಳಸಿಕೊಂಡಿರುವ ಬಗ್ಗೆ.

– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು)
– ಶ್ರೀ ಸಿ.ಎಂ.ಲಿಂಗಪ್ಪ
– ಶ್ರೀ ಮರಿತಿಬ್ಬೇಗೌಡ
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ)
– ಶ್ರೀ ಎನ್.ಅಪ್ಪಾಜಿಗೌಡ

– – –

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(310) 11.00 09.03.2021 ಎಲ್‌ಎಲ್/ಎಕೆ**

**ಕರ್ನಾಟಕ ವಿಧಾನ ಪರಿಷತ್ತು**

**ಮಂಗಳವಾರ, 9ನೇ ಮಾರ್ಚ್ 2021**

**ಸದನವು ವಿಧಾನಸೌಧದ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 05 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಯವರು ಪೀಠದಲ್ಲಿ ಉಪಸ್ಥಿತರಾದರು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 01.ಸಂತಾಪ ಸೂಚನೆ

**ವಿಷಯ:- ಪದ್ಮಶ್ರೀ ಹಾಗೂ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಹಿರಿಯ ಕೃಷಿ ವಿಜ್ಞಾನಿ ಪ್ರೊಫೆಸರ್ ಎಂ. ಮಹದೇವಪ್ಪ ಹಾಗೂ ಕವಿಗಳು, ಭಾಷಾಂತರಕಾರರು, ಸಾಹಿತಿಗಳಾದ ಡಾ: ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ ಅವರುಗಳ ನಿಧನದ ಬಗ್ಗೆ**

– – –

**ಸಭಾಪತಿಯವರು:–** ಪದ್ಮಶ್ರೀ ಹಾಗೂ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಹಿರಿಯ ಕೃಷಿ ವಿಜ್ಞಾನಿ ಪ್ರೊಫೆಸರ್ ಎಂ. ಮಹದೇವಪ್ಪ ಹಾಗೂ ಕವಿಗಳು, ಭಾಷಾಂತಕಾರರು, ಸಾಹಿತಿಗಳಾದ ಡಾ: ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

**<u>ಪ್ರೊಫೆಸರ್ ಎಂ. ಮಹದೇವಪ್ಪ</u>**

**ಪದ್ಮಶ್ರೀ ಹಾಗೂ ಪದ್ಮಭೂಷಣ ಪ್ರಶಸ್ತಿ ಪರಸ್ಕೃತರಾದ ಹಿರಿಯ ಕೃಷಿ ವಿಜ್ಞಾನಿ, ಭತ್ತದ ತಳಿ ಸಂಶೋಧಕರಾದ ಪ್ರೊಫೆಸರ್ ಎಂ. ಮಹದೇವಪ್ಪ ಅವರು ದಿನಾಂಕ: 06.03.2021ರಂದು ನಿಧನ ಹೊಂದಿರುತ್ತಾರೆ.**

1937ರ ಆಗಸ್ಟ್. 04ರಂದು ಚಾಮರಾಜನಗರ ಜಿಲ್ಲೆಯ ಮಾದಾಪುರ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಹೆಬ್ಬಾಳದ ಕೃಷಿ ಕಾಲೇಜಿನಲ್ಲಿ ಬಿ.ಎಸ್ಸಿ., ಪದವಿಯನ್ನು ಮತ್ತು ಕೊಯಮತ್ತೂರಿನ ಕೃಷಿ ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿ ಮತ್ತು ಡಾಕ್ಟರೇಟ್‌ಅನ್ನು ಪಡೆದಿದ್ದರು. ಭತ್ತದ ಕೃಷಿಗೆ ನೀಡಿದ್ದ ಕೊಡುಗೆಗಳಿಂದ ಶ್ರೀಯುತರು "ಭತ್ತದ ಮಹದೇವಪ್ಪ" ಎಂದು ಪ್ರಸಿದ್ಧಿಯಾಗಿದ್ದರು. ಫಿಲಿಫೈನ್ಸ್ ದೇಶದಲ್ಲಿರುವ ಅಂತರ ರಾಷ್ಟ್ರೀಯ ಭತ್ತ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನೆ ನಡೆಸಿ, ಭತ್ತ ಬೆಳೆಯುವ ಆಧುನಿಕ ವಿಧಾನ ಮತ್ತು ತಂತ್ರಜ್ಞಾನಗಳ ಮಾಹಿತಿಯನ್ನು ಕನ್ನಡದಲ್ಲಿ ವರ್ಣಚಿತ್ರಗಳ ಸಹಿತ ಮಾಹಿತಿ ನೀಡುವ "ಭತ್ತದ ಕೈಪಿಡಿ"ಯನ್ನು ಹೊರತಂದು ರಾಜ್ಯದ ರೈತರಿಗೆ ಸುಲಭವಾಗಿ ತಲುಪುವಂತೆ ಮಾಡಿದ್ದರು. ಶ್ರೀಯುತರು "ಕೃಷಿ ಗೀತೆಗಳು" ಎಂಬ ಪುಸ್ತಕವನ್ನು ಸಹ ಹೊರತಂದಿದ್ದರು. ಮೈಸೂರಿನ ಸಿ.ಎಫ್.ಟಿ.ಆರ್.ಐ.ನಲ್ಲಿ ಹಿರಿಯ ಸಂಶೋಧಕರಾಗಿ, ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ತಳಿವರ್ಧಕರಾಗಿ, ಮಂಡ್ಯದ ವಿ.ಸಿ. ಫಾರ್ಮ್‌ನಲ್ಲಿ ಭತ್ತ ಸಸ್ಯ ವಿಜ್ಞಾನಿಯಾಗಿ, ಜೆ.ಎಸ್.ಎಸ್. ಮಹಾವಿದ್ಯಾಪೀಠದ ಗ್ರಾಮೀಣಾಭಿವೃದ್ಧಿ ವಿಭಾಗದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರಲ್ಲದೇ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿಗಳಾಗಿ ಎರಡು ಅವಧಿಗೆ ಶ್ರೀಯುತರು ಕಾರ್ಯನಿರ್ವಹಿಸಿದ್ದರು. ಸಮಾಜಕ್ಕೆ ಕೃಷಿ ವಿಜ್ಞಾನದ ಬೆಳಕು ಚೆಲ್ಲಿದ್ದ ಶ್ರೀಯುತರು ಪದ್ಮಶ್ರೀ, ಪದ್ಮಭೂಷಣ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಕಾಡೆಮಿಯ ಜೀವಮಾನ ಸಾಧನೆ ಪ್ರಶಸ್ತಿ, ಹೂಕರ್ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳಲ್ಲದೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ಕೃಷಿ ವಿಜ್ಞಾನಿಯನ್ನು ಕಳೆದುಕೊಂಡಂತಾಗಿದೆ.**

**ಡಾ: ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ**

**ಕವಿಗಳು, ಭಾಷಾಂತರಕಾರರು ಹಾಗೂ ಸಾಹಿತಿಗಳಾದ ಡಾ: ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ ಅವರು ದಿನಾಂಕ: 06.03.2021ರಂದು ನಿಧನ ಹೊಂದಿರುತ್ತಾರೆ**

1936ರ ಅಕ್ಟೋಬರ್. 29ರಂದು ಶಿವಮೊಗ್ಗದಲ್ಲಿ ಜನಿಸಿದ್ದ ಶ್ರೀಯುತರು ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಹಾಗೂ ಆಧುನಿಕ ಕನ್ನಡ ಕಾವ್ಯ ಕುರಿತು ಡಾಕ್ಟರೇಟ್ ಪಡೆದಿದ್ದರು. ತೀ.ನಂ.ಶ್ರೀ. ಅವರ ಮಾರ್ಗದರ್ಶನದಲ್ಲಿ ಸಂಶೋಧನಾ ವೃತ್ತಿಯನ್ನು ಪ್ರಾರಂಭಿಸಿ ಭಾಷಾಶಾಸ್ತ್ರ ಸಂಶೋಧಕರಾಗಿ, ಅಧ್ಯಾಪಕರಾಗಿ ಹಾಗೂ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸಿದ್ದರು. ಭಾವಗೀತೆಗಳನ್ನು ಧ್ವನಿಸುರಳಿಗಳ ಮೂಲಕ ನಾಡಿನಾದ್ಯಂತ ತಲುಪುವಂತೆ ಮಾಡಿದ್ದ ಶ್ರೀಯುತರು ಭಾವಗೀತೆಗಳ ಕವಿ ಎಂದು ಪ್ರಸಿದ್ಧರಾಗಿದ್ದರು. ಶಿಶುನಾಳ ಷರೀಫರ ಕಾವ್ಯವನ್ನು ಸಂಗ್ರಹಿಸಿ ಕನ್ನಡಿಗರಿಗೆ ಪರಿಚಯಿಸುವಲ್ಲಿ ಅಪಾರ ಶ್ರಮವಹಿಸಿದ್ದರು. ಆರು ವಿಮರ್ಶಾ ಗ್ರಂಥಗಳು, ನಾಲ್ಕು ನಾಟಕಗಳು, ಎಂಟು ಸಂಪಾದಿತ ಕೃತಿಗಳು, ಮೂರು ಶಾಸ್ತ್ರ ಸಹಿತ 60ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದ ಶ್ರೀಯುತರು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮೂಡಬಿದರೆಯ ಶಿವರಾಮ ಕಾರಂತ ಪ್ರತಿಷ್ಠಾಪನಾ ಪ್ರಶಸ್ತಿ, ಬಾಲ ಸಾಹಿತ್ಯ ಪ್ರಶಸ್ತಿ, ವರ್ಧಮಾನ ಮತ್ತು ಆರ್ಯಭಟ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಸಂಗೀತ ಗಂಗಾ ಪ್ರಶಸ್ತಿ, ನಿರಂಜನ ಪ್ರಶಸ್ತಿ, ಜೆ.ಎನ್.ಎಸ್. ಪ್ರಶಸ್ತಿ, ಶಿವರಾಂ ಕಾರಂತ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಬಾಲಸಾಹಿತ್ಯ ಪುರಸ್ಕಾರ, ಕೆ.ಎಸ್.ಎನ್ ಪ್ರಶಸ್ತಿ ಹಾಗೂ ಚುಂಚುಶ್ರೀ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಕನ್ನಡ ಸಾರಸ್ವತ ಲೋಕದ ಹಿರಿಯ ಸಾಹಿತಿಯೊಬ್ಬರನ್ನು ಕಳೆದುಕೊಂಡಂತಾಗಿದೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ದಿನ ಇಬ್ಬರು ಹಿರಿಯರಾಗಿರುವ ಪ್ರೊಫೆಸರ್ ಎಂ. ಮಹದೇವಪ್ಪ, "ಭತ್ತದ ಮಹದೇವಪ್ಪ" ಮತ್ತು ಡಾ: ಎನ್.ಎಸ್. ಲಕ್ಷ್ಮೀನಾರಾಯಣಭಟ್ಟರವರ ನಿಧನಕ್ಕೆ ಸಂತಾಪದ ಪ್ರಸ್ತಾವನೆಯನ್ನು ತಾವು ಮಂಡಿಸಿದ್ದೀರಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಎರಡು ಹಿರಿಯ ಜೀವಿಗಳು ರಾಜ್ಯಕ್ಕೆ ಅಪಾರವಾದ ಕೊಡುಗೆಯನ್ನು ಕೊಟ್ಟಿದ್ದನ್ನು ನಾನು ಈ ಸಂದರ್ಭದಲ್ಲಿ ಉಲ್ಲೇಖ ಮಾಡುತ್ತೇನೆ. ಪ್ರೊಫೆಸರ್ ಮಹದೇವಪ್ಪನವರದ್ದು ಒಂದು ವಿಶೇಷವಾದ ಶ್ರಮ ಆಗಿರುತ್ತದೆ. ಸಾಮಾನ್ಯವಾಗಿ ನಾವು ಕೃಷಿ ಏತಕ್ಕೆ ಸೋಲುತ್ತದೆಯೆಂದು ಕೇಳಿದರೆ, ಅದಕ್ಕೆ ಸಂಶೋಧನೆಗಳ ಕೊರತೆ ಇದೆ ಮತ್ತು ಆಧುನಿಕತೆಯ ಸ್ಪರ್ಶ ಮತ್ತು ಆಯಾ ಬೆಳೆಗೆ ಬೇಕಾದಂತಹ ಪೂರಕ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಎಲ್ಲಿಯೋ ಒಂದು ಕಡೆ ನಾವು ವಿಫಲರಾಗಿದ್ದೇವೆ ಎನ್ನುವಂತಹ ಸಂದರ್ಭದಲ್ಲಿ, ಭತ್ತದ ಮಹದೇವಪ್ಪ ಎನ್ನುವಂತಹ ಗೌರವಕ್ಕೆ ಪಾತ್ರರಾಗಿ ಭತ್ತದ ಬೆಳೆಗೆ ಒಂದು ಅಪಾರವಾದ ಸಂಶೋಧನೆ ಮಾಡಿರುವಂತಹ ಗೌರವ ಶ್ರೀಯುತ ಮಹದೇವಪ್ಪನವರಿಗೆ ಸಲ್ಲುತ್ತದೆ.

**(ಮುಂದು)**

**(311) 09.03.2021 11.10 ವೈಎಲ್-ಎಕೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):-**

ಆ ಕಾರಣಕ್ಕಾಗಿಯೇ 'ಭತ್ತದ ಮಹದೇವಪ್ಪ' ಎಂದು ಕರೆಯಲಾಗಿದೆ ಎಂದು ಉಲ್ಲೇಖಿಸಲಾಗಿದೆ. ಭತ್ತ ಬೆಳೆಯುವ ಆಧುನಿಕ ವಿಧಾನ ಮತ್ತು ತಂತ್ರಜ್ಞಾನಗಳ ಮಾಹಿತಿಯನ್ನು ಕನ್ನಡದಲ್ಲಿ ವರ್ಣಚಿತ್ರಗಳ ಮೂಲಕ ಮಾಹಿತಿ ನೀಡುವ "ಭತ್ತದ ಕೈಪಿಡಿ" ಯನ್ನು ಹೊರತಂದು ರಾಜ್ಯದ ರೈತರಿಗೆ ಸುಲಭವಾಗಿ ತಲುಪುವಂತೆ ಮಾಡಿ, ಭತ್ತದ ಕೃಷಿಕರಿಗೆ ಅಪಾರವಾದಂಥ ಸಹಾಯ ಮಾಡಿದ್ದಾರೆ. ಶ್ರೀಯುತರು "ಕೃಷಿ ಗೀತೆಗಳು" ಎಂಬ ಪುಸ್ತಕವನ್ನು ಬರೆಯುವ ಮೂಲಕ ಭತ್ತದ ಕೃಷಿಯ ಸಂಶೋಧನೆ ಮತ್ತು ತೆರಿಗೆ ಬಗ್ಗೆ ಸಮಗ್ರ ಮಾಹಿತಿ ನೀಡಿದ್ದಾರೆ. ಹೀಗೆ ಅನೇಕ ವಿಚಾರದಲ್ಲಿ ಭತ್ತದ ಮಹದೇವಪ್ಪನವರು ಭತ್ತದ ಕೃಷಿಕರಿಗೆ, ಅದರಲ್ಲಿಯು ರಾಜ್ಯದ ಕೃಷಿಕರಿಗೆ ತುಂಬ ಸಂಶೋಧಿತವಾದಂಥ ಸಹಾಯವನ್ನು ಮಾಡಿದ್ದಾರೆ. ಶ್ರೀಯುತರು ಬಿಟ್ಟುಹೋಗಿರುವ ಯೋಚನೆಗಳು ಮತ್ತು ಚಿಂತನೆಗಳು ನಮ್ಮ ಕೃಷಿಕರಿಗೆ ಹೆಚ್ಚು ಅನುಕೂಲವಾಗುತ್ತವೆ ಎಂದು ನಾನು ಭಾವಿಸಿದ್ದೇನೆ. ಭತ್ತದ ಕೃಷಿಗೆ ಸಂಬಂಧಿಸಿದಂತೆ ಅವರಿಗೆ ಸಿಕ್ಕಿರುವ ಪ್ರಶಸ್ತಿಗಳ ಸರಮಾಲೆಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಅತ್ಯಂತ ಉನ್ನತ ಪ್ರಶಸ್ತಿಗಳಾದ ಪದ್ಮಭೂಷಣ, ಪದ್ಮಶ್ರೀ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಜೀವಮಾನ ಸಾಧನೆ ಪ್ರಶಸ್ತಿ, ಹೂಕರ್ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆಯುವುದರ ಮೂಲಕ ಕೃಷಿಗೋಸ್ಕರ ಇಡೀ ತಮ್ಮ ಬದುಕನ್ನು ಸಮರ್ಪಣೆ ಮಾಡಿದ್ದಾರೆ. ಅದರಲ್ಲಿಯು ಭತ್ತದ ಕೃಷಿಗೆ ಹೊಸ ಆಯಾಮವನ್ನು ಕಲ್ಪಿಸಿಕೊಟ್ಟ ಪ್ರೊ|| ಎಂ.ಮಹದೇವಪ್ಪನವರ ನಿಧನದ ಸಂತಾಪಕ್ಕೆ ನಾನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಹಮತವನ್ನು ವ್ಯಕ್ತಪಡಿಸುತ್ತಾ, ನಮ್ಮ ಕರ್ನಾಟಕ ರಾಜ್ಯ ಮಾತ್ರವಲ್ಲದೆ, ಇಡೀ ರಾಷ್ಟ್ರವೇ ಶ್ರೇಷ್ಠ ಕೃಷಿ ವಿಜ್ಞಾನಿಯೊಬ್ಬರನ್ನು ಕಳೆದುಕೊಂಡಂತಾಗಿದೆ ಎನ್ನುವಂಥ ಭಾವನೆಯನ್ನು ವ್ಯಕ್ತಪಡಿಸುತ್ತೇನೆ.

ಡಾ॥ ಎನ್.ಎಸ್.ಲಕ್ಷ್ಮೀನಾರಾಯಣಭಟ್ಟರು ಆಧುನಿಕ ಕನ್ನಡ ಕಾವ್ಯಲೋಕದಲ್ಲಿ ವಿಶೇಷವಾದಂಥ ಶ್ರಮವಹಿಸಿರುವುದರಿಂದ ಡಾಕ್ಟರೇಟ್ ಪದವಿ ಪಡೆದಿದ್ದರು. ಭಾವಗೀತೆಗಳನ್ನು ಧ್ವನಿಸುರುಳಿಗಳ ಮೂಲಕ ನಾಡಿನಾದ್ಯಂತ ತಲುಪುವಂತೆ ಮಾಡಿ, ಜನಪ್ರಿಯವಾದಂಥ ಗೌರವಕ್ಕೆ ಪಾತ್ರರಾಗಿದ್ದಾರೆ. ಸಂತ ಶಿಶುನಾಳ ಷರೀಫರ ಕಾವ್ಯಗಳನ್ನು ಸಂಗ್ರಹಿಸಿ ಕನ್ನಡಿಗರಿಗೆ ಪರಿಚಯಿಸುವಲ್ಲಿ ಅಪಾರ ಶ್ರಮವಹಿಸಿದ್ದರು. ಆರು ವಿಮರ್ಶಾ ಗ್ರಂಥಗಳು, ನಾಲ್ಕು ನಾಟಕಗಳು, ಎಂಟು ಸಂಪಾದಿತ ಕೃತಿಗಳು, 60ಕ್ಕೂ ಹೆಚ್ಚು ಅನನ್ಯ ಕೃತಿಗಳನ್ನು ರಚಿಸಿದಂಥ ಶ್ರೀಯುತರಿಗೆ ಹಲವಾರು ಪ್ರಶಸ್ತಿಗಳು ಹುಡುಕಿಕೊಂಡು ಬಂದಿವೆ. ಈಗಾಗಲೇ ತಾವು ಹೇಳಿದ ಹಾಗೆ ಶಿವರಾಮ ಕಾರಂತ ಪ್ರತಿಷ್ಠಾನಾ ಪ್ರಶಸ್ತಿ, ಬಾಲ ಸಾಹಿತ್ಯ ಪ್ರಶಸ್ತಿ, ವರ್ಧಮಾನ ಮತ್ತು ಆರ್ಯಭಟ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಮಾಸ್ತಿ ಆಳ್ವಾಸ್ ಪ್ರಶಸ್ತಿ, ಇನ್ನಿತರ ಅನೇಕ ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದು, ಕೊನೆಗೆ ಚುಂಚಶ್ರೀ ಪ್ರಶಸ್ತಿಗೂ ಸಹ ಅವರು ಭಾಜನರಾಗಿದ್ದರು. ಸಾಹಿತ್ಯ ಲೋಕದಲ್ಲಿ ಹೆಚ್ಚು ಪ್ರಚಾರವಿಲ್ಲದೇ ಅದ್ಭುತವಾದಂಥ ಕವಿರತ್ನ ಕನಸುಗಾರ ಡಾ॥ ಎನ್.ಎಸ್.ಲಕ್ಷ್ಮೀನಾರಾಯಣಭಟ್ಟರ ನಿಧನದಿಂದ ಕನ್ನಡ ಸಾಹಿತ್ಯ ಲೋಕದ ಹಿರಿಯ ಸಾಹಿತಿಯನ್ನು ಕಳೆದುಕೊಂಡಂತಾಗಿದೆ.

ಮಾನ್ಯ ಸಭಾಪತಿಯವರೇ, ಈ ಇಬ್ಬರೂ ಅತ್ಯಂತ ಶ್ರೇಷ್ಠ ವ್ಯಕ್ತಿಗಳಾದಂಥ ಭತ್ತದ ಮಹದೇವಪ್ಪನವರು ಮತ್ತು ಕವಿ ಲಕ್ಷ್ಮೀನಾರಾಯಣಭಟ್ಟರ ನಿಧನಕ್ಕೆ ಸಂತಾಪವನ್ನು ಸೂಚಿಸುತ್ತೇನೆ. ಶ್ರೀಯುತರುಗಳ ಕುಟುಂಬಕ್ಕೆ ಅವರುಗಳ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸಿ, ಶ್ರೀಯುತರುಗಳ ನಿಧನದ ಸಂತಾಪಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಕೃಷಿಯಲ್ಲಿ ಶ್ರೇಷ್ಠ ವಿಜ್ಞಾನಿ ಎಂದು ಹೆಸರು ಗಳಿಸಿರುವ ಪ್ರೊಫೆಸರ್ ಎಂ. ಮಹದೇವಪ್ಪನವರು ಮತ್ತು ಶ್ರೇಷ್ಠ ಸಾಹಿತಿಗಳಾದಂತಹ ಡಾ॥ ಎನ್.ಎಸ್.ಲಕ್ಷ್ಮೀನಾರಾಯಣಭಟ್ಟರವರ ನಿಧನಕ್ಕೆ ಸಂಬಂಧಿಸಿದಂತೆ ತಾವು ತಂದಿರುವ ಸಂತಾಪ ಸೂಚನೆಯನ್ನು ಬೆಂಬಲಿಸಿ, ಆ ಬಗ್ಗೆ ನನಗೆ ಒಂದೆರಡು ವಿಚಾರಗಳನ್ನು ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸಲು ಬಯಸುತ್ತೇನೆ. ಪದ್ಮಶ್ರೀ ಮತ್ತು ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾದಂಥ ಇಡೀ ರಾಷ್ಟ್ರದ ಅತ್ಯಂತ ಹಿರಿಯ ಕೃಷಿ ವಿಜ್ಞಾನಿ, ಭತ್ತದ ತಳಿ ಸಂಶೋಧಕರಾದಂಥ ಪ್ರೊಫೆಸರ್ ಎಂ.ಮಹದೇವಪ್ಪನವರ ನಿಧನದಿಂದ ಕೇವಲ ನಮ್ಮ ನಾಡಿನ ಕೃಷಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ಷೇತ್ರ ಮಾತ್ರವಲ್ಲದೆ ಇಡೀ ರಾಷ್ಟ್ರದ ಕೃಷಿ ಕ್ಷೇತ್ರವೇ ಇವತ್ತು ಬರಡಾಗಿದೆ ಎಂದು ಹೇಳಲು ಇಚ್ಛಿಸುತ್ತೇನೆ. ಈಗಾಗಲೇ ತಾವು ಹೇಳಿದ ಹಾಗೆ ಶ್ರೀಯುತರನ್ನು 'ಭತ್ತದ ಮಹದೇವಪ್ಪ' ಎಂದೇ ಕರೆಯಲಾಗುತ್ತದೆ. ಅವರು ಭತ್ತದ ಸಂಶೋಧನೆಯಲ್ಲಿ ಅಗಾಧ ಸಾಧನೆ ಮಾಡಿದವರಾಗಿದ್ದಾರೆ. ಭತ್ತದ ಆಧುನಿಕ ತಂತ್ರಜ್ಞಾನ, ಇಳುವರಿ ಪದ್ಧತಿ ಬಗ್ಗೆ ಎಲ್ಲರಿಗೂ ಅರ್ಥವಾಗುವಂತೆ ರೈತಾಪಿ ಜನರಿಗೆ ತಮ್ಮದೇ ಆದಂಥ ಛಾಪು ಮೂಡಿಸಿದಂಥ ಪ್ರೊಫೆಸರ್ ಎಂ.ಮಹದೇವಪ್ಪನವರ ಅಗಲಿಕೆ ನಿಜವಾಗಿಯು ನಮಗೆ ಬಹಳಷ್ಟು ನೋವುಂಟು ಮಾಡಿದೆ ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜೀವಶಾಸ್ತ್ರ ಸಚಿವನಾಗಿದ್ದಂಥ ಸಂದರ್ಭದಲ್ಲಿ ನನಗೆ ಕೆಲವೊಂದು ಜಿಜ್ಞಾಸೆ ಇತ್ತು. ಸ್ವತಂತ್ರ ಸಿಗುವ ಮೊದಲು ಭಾರತ ದೇಶವು ಕೇವಲ 30.00 ಕೋಟಿ ಜನಸಂಖ್ಯೆಯಿಂದ ಕೂಡಿತ್ತು. ಆ ಸಂದರ್ಭದಲ್ಲಿ ಅತ್ಯಂತ ಹಿರಿಯ ವಿಜ್ಞಾನಿಯಾದ ಶ್ರೀಯುತರನ್ನು ನನ್ನ ಕೊಠಡಿಗೆ ಕರೆಯಿಸಿ, ಅವರೊಂದಿಗೆ ಕೆಲವು ವಿಚಾರವನ್ನು ಹಂಚಿಕೊಂಡಂತಹ ಸಂದರ್ಭದಲ್ಲಿ 'ಭಾರತ ದೇಶವು ಈಗ 130.00 ಕೋಟಿ ಜನಸಂಖ್ಯೆಯಿಂದ ಕೂಡಿದೆ. ಕೃಷಿ ಭೂಮಿಯು ಈಗ ಸಾಗುವಳಿ ಭೂಮಿ ಮಾತ್ರವಾಗಿದೆ, ನಗರೀಕರಣ ಮತ್ತು ಮೂಲಭೂತ ಸೌಲಭ್ಯಗಳಾದಂಥ ರಸ್ತೆಗಳು, ರೈಲು ಮಾರ್ಗಗಳು ಹಾಗೂ ಕೆಲವು ಉದ್ಯಮಗಳ ಸ್ಥಾಪನೆ ಸಲುವಾಗಿ ಸರ್ಕಾರ ಬಹಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವುದರಿಂದ ಕೃಷಿ ಭೂಮಿಯ ಪ್ರಮಾಣ ಕಡಿಮೆಯಾಗಿದೆ, 30.00 ಕೋಟಿ ಇದ್ದ ಜನಸಂಖ್ಯೆ 130.00 ಕೋಟಿಗೆ ಏರಿಕೆಯಾಗಿದ್ದು, ಇದನ್ನು ಹೇಗೆ ಬಗೆಹರಿಸುವುದು, horizontal development ಇಲ್ಲವೇ ಇಲ್ಲದಂತಾಗಿದೆ. ಒಂದು ಕಡೆ ಹಿಮಾಲಯ ಪರ್ವತ, ಮತ್ತೊಂದು ಕಡೆ ಸಮುದ್ರ ಇದೆ ಹೇಗೆ ಇದನ್ನು ಬಗೆಹರಿಸುವುದು' ಎಂದು ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜೀವಿಶಾಸ್ತ್ರ ಸಚಿವನಾಗಿದ್ದಂಥ ಸಂದರ್ಭದಲ್ಲಿ ನನ್ನಷ್ಟಕ್ಕೆ ನಾನೇ ಯೋಚನೆ ಮಾಡುತ್ತಿದ್ದಾಗ, ಶ್ರೀಯುತರು ತಕ್ಷಣವೇ 'ಅಭಿವೃದ್ಧಿಯಾಗುವ ಮಟ್ಟದಲ್ಲಿ ಅಂತೂ ಇಲ್ಲ ಪಾಟೀಲ್‌ರವರೆ, vertical development ಮಾಡಬೇಕು' ಎಂದು ಹೇಳಿದರು. ಅಲ್ಲದೆ 'ಇವತ್ತು ಪ್ರತಿ ಎಕರೆಯಲ್ಲಿ 10 ಕ್ವಿಂಟಾಲ್ ಏನು ಜೋಳ ಬೆಳೆಯುತ್ತೇವೆ, ಅದನ್ನು 20 ಕ್ವಿಂಟಾಲ್, 25 ಕ್ವಿಂಟಾಲ್‌ನಂತೆ ಹೆಚ್ಚು ಮಾಡಿದರೆ ಮಾತ್ರ ತಿನ್ನುವ ಬಾಯಿಗೆ ಅನ್ನ ನೀಡಲು ಸಾಧ್ಯ' ಎನ್ನುವಂತಹ ಮಾತನ್ನು ಹೇಳಿದರು. ಅದಕ್ಕಾಗಿ ನಾನು ಸಹ ಶ್ರೀಯುತರ ಜೊತೆ ಚರ್ಚಿಸಿ, ಜೀವಿಶಾಸ್ತ್ರದಲ್ಲಿ ಅವರಿಗೆ ಸೂಕ್ತವಾದಂಥ ಶ್ರೇಷ್ಠ ಸ್ಥಾನವನ್ನು ನೀಡಿದ್ದೆ. ನಾನು ಸಚಿವನಾಗಿದ್ದಂಥ ಸಂದರ್ಭದಲ್ಲಿ ಕೃಷಿಕನಾಗಿ, ರೈತನಾಗಿ ಶ್ರೀಯುತರಿಗೆ ಅತ್ಯುತ್ತಮವಾದಂಥ ಸ್ಥಾನ ಕಲ್ಪಿಸಿ, 'vertical development

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರದಲ್ಲಿ ಏನು ಸಂಶೋಧನೆ ಮಾಡುವುದಕ್ಕೆ ಸಾಧ್ಯ ಅದನ್ನು ಮಾಡಿ' ಎಂದು ಹೇಳಿದಾಗ, ಅವರು ಸಹ ಅದಕ್ಕೆ ಅತ್ಯುತ್ತಮ ಫಲಿತಾಂಶ ಒದಗಿಸಿದರು. ಪ್ರತಿ ಎಕರೆಯಲ್ಲಿ ಇಳುವರಿ ಹೆಚ್ಚು ಮಾಡಲು, ಏನೇನು ಮಾಡಬೇಕು ಎಂಬುದರಲ್ಲಿ ಬಹಳ ಶ್ರೇಷ್ಠ ವಿಜ್ಞಾನಿಯಾಗಿದ್ದರು. ಅವರ ಕೊಡುಗೆ ನಿಜವಾಗಿಯು ಅನನ್ಯವಾದದ್ದು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ವಿಶೇಷವಾಗಿ ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಶ್ರೀಯುತರು ಎರಡು ಸಲ ಕುಲಪತಿಯಾಗಿ ಸೇವೆ ಸಲ್ಲಿಸಿ ಶಾಶ್ವತವಾದ ಹೆಜ್ಜೆ ಗುರುತನ್ನು ಉಳಿಸಿದ್ದಾರೆ. ಅಗಾಧವಾದಂತಹ ಬದಲಾವಣೆಗಳನ್ನು ಮಾಡುವ ಮೂಲಕ ಅವರು ಕೃಷಿಕರಿಗೆ ನೀಡಿರುವಂಥ ಕೊಡುಗೆ ನಿಜವಾಗಿಯು ಅನನ್ಯವಾದದ್ದು ಎನ್ನುವ ಮಾತನ್ನು ಹೇಳಬಯಸುತ್ತೇನೆ. ಕೃಷಿ ಕ್ಷೇತ್ರದಲ್ಲಿ ಉಪ ಕುಲಪತಿಯಾಗಿ ಅವರು ಯಾವ ರೀತಿ ಕರ್ತವ್ಯ ನಿರ್ವಹಿಸಿದ್ದಾರೆ ಎಂದರೆ, ಸಾಮಾನ್ಯವಾಗಿ ಹಳ್ಳಿಗಳಲ್ಲಿ ನಮ್ಮ ರೈತರು ಬೆಳಗ್ಗೆ ಎದ್ದ ಕೂಡಲೇ ತಮ್ಮ ಗ್ರಾಮದ ಗ್ರಾಮದೇವತೆಗಳನ್ನು ನೋಡುತ್ತೇವೆಯೋ, ಅದೇ ರೀತಿ ಶ್ರೀಯುತರ ಮೊದಲ ಮಂದಿರ ಯಾವುದೆಂದರೆ ಕೃಷಿ ವಿಶ್ವವಿದ್ಯಾಲಯ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ನಮ್ಮ ಹಳ್ಳಿಯಲ್ಲಿ ಮಾರುತೇಶ್ವರ, ಬಸವೇಶ್ವರ, ಅಕ್ಕವ್ವ ಎನ್ನುವ ರೀತಿ ಏನು ದೇವತೆಗಳಿದ್ದಾರೆ, ಅದೇ ರೀತಿ ಅಲ್ಲಿನ ಸಂಶೋಧಕರನ್ನು ದೇವರ ರೀತಿ ನೋಡುತ್ತಿದ್ದರು. ಬಹಳ ಮೆಚ್ಚಿಕೊಳ್ಳುವಂಥ ಅತ್ಯದ್ಭುತವಾದ ಕೆಲಸವನ್ನು ಮಾಡಿ, ಅನೇಕ ಮಜಲಿನಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ. ಅದರ ಜೊತೆಗೆ ರಾಜ್ಯೋತ್ಸವ ಪ್ರಶಸ್ತಿ ಆದಿಯಾಗಿ ಬಹಳಷ್ಟು ಪ್ರಶಸ್ತಿಗಳಿಗೆ ಪುರಸ್ಕೃತರಾಗಿದ್ದಾರೆ. ಅವರ ಅಗಲಿಕೆಯಿಂದ ಕೃಷಿ ಕ್ಷೇತ್ರ ದೊಡ್ಡ ಆಘಾತವನ್ನು ಅನುಭವಿಸಿದೆ ಎನ್ನುವಂಥ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಡಾ॥ ಎನ್.ಎಸ್.ಲಕ್ಷ್ಮೀನಾರಾಯಣಭಟ್ಟರು ಕನ್ನಡ ಸಾರಸ್ವತ್ವ ಲೋಕದ ಅನರ್ಘ್ಯ ರತ್ನ ಎಂದು ಹೇಳುವುದಕ್ಕೆ ಬಯಸುತ್ತೇನೆ. ಶ್ರೇಷ್ಠ ಬರಹಗಾರರು ಮತ್ತು ಭಾಷಾಂತರಕಾರರು, ಅಷ್ಟೇ ಅಲ್ಲದೇ ಖ್ಯಾತ ಕವಿ ಎನ್ನುವುದರ ಜೊತೆಗೆ ನಾಡಿನ ಒಬ್ಬ ಶ್ರೇಷ್ಠ ವಿಮರ್ಶಕರಾಗಿ ಅತ್ಯುತ್ತಮ ಕೆಲಸವನ್ನು ನಿರ್ವಹಿಸುವುದಲ್ಲದೆ, ಅನೇಕ ಮೌಲಿಕ ಗ್ರಂಥಗಳನ್ನು ಸಹ ಈ ನಾಡಿಗೆ ಅರ್ಪಿಸಿದ್ದಾರೆ. ಶ್ರೀಯುತರಿಗೆ ಎಷ್ಟು ಪ್ರಶಸ್ತಿಗಳು ಬಂದಿವೆ ಎಂದರೆ, ಓದಲು ಸಾಧ್ಯವಿಲ್ಲದಷ್ಟು ಪ್ರಶಸ್ತಿಗಳು ಬಂದಿವೆ. ನಾವು ಬಹಳಷ್ಟು ಜನರ ಸಂತಾಪ ಸೂಚನೆಯಲ್ಲಿ ಭಾಗವಹಿಸಿದ್ದೇವೆ. ಆದರೆ, ಶ್ರೀಯುತರು ಸಾಹಿತ್ಯ ಕ್ಷೇತ್ರದಲ್ಲಿ ಇಷ್ಟು ಪ್ರಶಸ್ತಿಗಳಿಗೆ ಭಾಜನರಾದ ಅಪರೂಪದ ಸಾಹಿತಿಗಳು ಎಂದು ಹೇಳುವುದಕ್ಕೆ ಬಯಸುತ್ತೇನೆ. ಇಂತಹ ಅನೇಕ ಪ್ರಶಸ್ತಿಗಳಿಗೆ ಭಾಜನರಾದಂಥ ಕನ್ನಡ ಸಾರಸ್ವತ ಲೋಕವನ್ನೇ ಶ್ರೀಮಂತಗೊಳಿಸಿದಂಥ ಡಾ॥ ಎನ್.ಎಸ್.ಲಕ್ಷ್ಮೀನಾರಾಯಣಭಟ್ಟರ ನಿಧನದಿಂದ ನಿಜವಾಗಿಯು ಕನ್ನಡ ಸಾರಸ್ವತ ಲೋಕ ಬಡವಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಷ್ಟೇ ಅಲ್ಲದೆ ಒಬ್ಬ ಶ್ರೇಷ್ಠ ಕವಿ, ಖ್ಯಾತ ವಿಮರ್ಶಕರು, ಅತ್ಯಂತ ಉತ್ತಮ ಬರಹಗಾರರನ್ನು ಕಳೆದುಕೊಂಡು ನಾಡಿನ ಸಾಹಿತ್ಯ ಕ್ಷೇತ್ರ ಬರಡಾಗಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**(ಮುಂದು)**

**(312)09.03.2021/11.20/ಎಸ್‌ಕೆ-ಆರ್‌ಎನ್**

**ಶ್ರೀ ಎಸ್.ಆರ್. ಪಾಟೀಲ್ (ಮುಂದು):-**

ಕೃಷಿ ವಿಜ್ಞಾನಿ ಮತ್ತು ಶ್ರೇಷ್ಠ ಸಾಹಿತಿ ಇವರಿಬ್ಬರು ಸಾರ್ಥಕವಾದಂತಹ ಬದುಕಿನಲ್ಲಿ ಬದುಕಿದಂತಹವರು. ಹುಟ್ಟು ಮತ್ತು ಸಾವಿನ ಮಧ್ಯೆದಲ್ಲಿ ಅಗಾಧವಾಗಿ ಸಾಧನೆ ಮಾಡಿದಂತಹವರು. ಈ ನಾಡು ನುಡಿಗೆ ತಮ್ಮದೇ ಆದಂತಹ ಅಮೂಲ್ಯವಾದಂತಹ ಸೇವೆ ಸಲ್ಲಿಸುವುದರ ಜೊತೆಗೆ ಆಯ್ಕೆ ಮಾಡಿಕೊಂಡಂತಹ ಕ್ಷೇತ್ರಕ್ಕೆ ಅತ್ಯಅಮೂಲ್ಯವಾದ ಸೇವೆಯನ್ನು ಸಲ್ಲಿಸಿದವರು. ಇವತ್ತು ಭೌತಿಕವಾಗಿ ನಮ್ಮ ಮಧ್ಯೆ ಅವರಿಬ್ಬರೂ ಇಲ್ಲ. ನಮ್ಮ ಹೃದಯದಲ್ಲಿ ಅವರು ಶಾಶ್ವತವಾಗಿ ನೆಲೆಸಿದ್ದಾರೆ ಎನ್ನುವಂತಹ ಮಾತನ್ನು ಹೇಳುತ್ತಾ, ಮೃತರ ಆತ್ಮಕ್ಕೆ ಆ ಭಗವಂತನು ಶಾಂತಿಯನ್ನು ಕಲ್ಪಿಸಲಿ. ಅವರಿಬ್ಬರು ಶ್ರೇಷ್ಠ ಮಹಾನ್ ಚಿಂತಕರ ಅಗಲಿಕೆಯ ನೋವನ್ನು ಭರಿಸುವಂತಹ ಶಕ್ತಿಯನ್ನು ಅವರಿಬ್ಬರ ಕುಟುಂಬ ವರ್ಗಕ್ಕೆ ಮತ್ತು ಸಮಸ್ತ ನಾಡಿನ ಜನತೆಗೆ ನೀಡಲಿ ಎಂದು ಪ್ರಾರ್ಥಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರಗಳು.

**ಸಭಾಪತಿಯವರು:-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಪರಮಾತ್ಮ ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಈಗ ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭ ಮಾಡೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ. ಇಬ್ರಾಹಿಂ(ವಿಧಾನಸಭೆಯಿಂದ ಚುನಾಯಿತರಾದವರು):-**ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು privilege move ಮಾಡಬೇಕೆಂದು ಮಾಡಿದ್ದೇನೆ. ನಾಲ್ಕನೇ ತಾರೀಖು ಚುಕ್ಕೆ ಗುರುತಿನ ಪ್ರಶ್ನೆಗೆ ಸಿ.ಡಿ ಬಗ್ಗೆ ಕೇಳಿದಾಗ, ನನ್ನ ಗಮನಕ್ಕೆ ಬಂದಿಲ್ಲವೆಂದು ತಪ್ಪು ಮಾಹಿತಿಯನ್ನು ಈ ಸದನಕ್ಕೆ ಮತ್ತು ನನಗೆ ಕೊಟ್ಟಿದ್ದಾರೆ. ಆದ್ದರಿಂದ privilege motion ನಲ್ಲಿ ಕೊಡುತ್ತಿದ್ದೇವೆ. ಇದನ್ನು admit ಮಾಡಿಕೊಂಡು, ಚರ್ಚೆಗೆ ಒಂದು ಅವಕಾಶ ಮಾಡಿಕೊಡಬೇಕೆಂದು, ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಇಬ್ರಾಹಿಂರವರೇ, ತಾವು ಬರೆದು ಕಳುಹಿಸಿ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಆಯಿತು. ನಾನು ಬರೆದು ಕಳುಹಿಸುತ್ತೇನೆ. ಮಾನ್ಯ ಸಭಾಪತಿಯವರೇ, ಒಟ್ಟು ಪ್ಯಾಕೇಜ್ ಏನಾಯಿತು ಎಂದು ಕೇಳುವುದಕ್ಕೆ ಅಷ್ಟೆ.

**ಸಭಾಪತಿಯವರು:-** ನಾನು ಹೇಳಿದ ಮೇಲೆ ತಾವು ಮತ್ತೆ ಏಕೆ ಮಾತನಾಡುತ್ತೀರಾ?

## 02. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ

ವಿಷಯ:- ಪೆಟ್ರೋಲ್, ಡೀಸೆಲ್ ಹಾಗೂ ಗ್ಯಾಸ್ ಬೆಲೆಯ ದಿನೇ ದಿನೇ
ಹೆಚ್ಚಾಗುತ್ತಿರುವುದರಿಂದ ಸಾಮಾನ್ಯ ಜನರು ಜೀವನ ನಡೆಸಲು
ಕಷ್ಟ ಸಾಧ್ಯವಾಗಿರುವ ಸಂಗತಿ ಬಗ್ಗೆ.

----

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-**ಮಾನ್ಯ ಸಭಾಪತಿಯವರೇ, ನಿಯಮ 59 ರಡಿಯಲ್ಲಿ ನಾನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ಅದನ್ನು ನಾನು preliminary submission ಅನ್ನು ಎರಡು ನಿಮಿಷಗಳ ಕಾಲ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಾವೇ ಪೀಠದಿಂದ ಆದೇಶವನ್ನು ಕೊಟ್ಟಿದ್ದೀರಿ. ಪ್ರಶ್ನೋತ್ತರ ವೇಳೆಯಾದ ನಂತರ ತೆಗೆದುಕೊಳ್ಳಬೇಕು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾನಾಯಕರಿಗೆ ಸ್ವಲ್ಪ ಸಮಧಾನವಿರಲಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಾವು ಆದೇಶ ಮಾಡಿರುವಂತಹದ್ದನ್ನು ನಾವು ಪಾಲಿಸುತ್ತೇವೆ. ಅದರಲ್ಲಿ ಏನು ಗೊಂದಲವಿಲ್ಲ. ಪ್ರಶ್ನೋತ್ತರ ವೇಳೆಯಾದ ನಂತರ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ತಾವೇ ಆದೇಶವನ್ನು ಕೊಟ್ಟಿದ್ದು ಇದೆ.

**ಶ್ರೀ ಎಸ್.ಆರ್. ಪಾಟೀಲ್:–**ಮಾನ್ಯ ಸಭಾಪತಿಯವರೇ Business Advisory Committee ಯಲ್ಲಿ...

**ಸಭಾಪತಿಯವರು:–** ಒಂದು ನಿಮಿಷ. ನನ್ನ ಮಾತನ್ನು ಸ್ವಲ್ಪ ಕೇಳಿ

**ಶ್ರೀ ಎಸ್.ಆರ್. ಪಾಟೀಲ್:–** ತಮ್ಮ ಮಾತನ್ನು ಕೇಳಲೇಬೇಕು.

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿ ಮುಗಿದ ನಂತರ ತಮಗೆ ಮಾತನಾಡಲು ಅವಕಾಶವನ್ನು ಕೊಡುತ್ತೇನೆ. ಆಗ ತಾವು ಮಾತನಾಡಿ.

**ಶ್ರೀ ಎಸ್.ಆರ್. ಪಾಟೀಲ್:–**ಮಾನ್ಯ ಸಭಾಪತಿಯವರೇ, ನಾನು ಎರಡು ನಿಮಿಷ initiation ಮಾಡುತ್ತೇನೆ. ಏಕೆಂದರೆ ದಾಖಲೆಗೆ ಹೋಗಲಿ.

**ಸಭಾಪತಿಯವರು:–** ತಾವು ಕೊಡಿ.

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಅದನ್ನು ಅವರು ಓದುತ್ತಾರೆ. ಪ್ರಶ್ನೋತ್ತರವಾದ ನಂತರ ಕೊಡಿ.

**ಸಭಾಪತಿಯವರು:–** ನಾನು ಹೇಳುತ್ತಿರವಾಗ, ತಾವು ಏಕೆ ಮಾತನಾಡುತ್ತೀರಿ?

**ಶ್ರೀ ಎಂ. ನಾರಾಯಣಸ್ವಾಮಿ:–** ಅದನ್ನು ಪ್ರಸ್ತಾಪ ಮಾಡಿದ ನಂತರ ....

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಬಿಡಿ.

**ಶ್ರೀ ಎಸ್.ಆರ್. ಪಾಟೀಲ್:–**ಮಾನ್ಯ ಸಭಾಪತಿಯವರೇ, let it go on record. ಅಷ್ಟೆ. ಮಾನ್ಯ ಶಂಕರಮೂರ್ತಿಯವರು ಸಭಾಪತಿಯವರಾಗಿದ್ದಂತಹ ಸಂದರ್ಭದಲ್ಲಿ..,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಒಂದು ನಿಮಿಷ ನನ್ನ ಮಾತನ್ನು ಕೇಳಿ. ತಾವು ಎರಡು ನಿಮಿಷಗಳ ಕಾಲ ಮಾತನಾಡುವುದಕ್ಕೆ ತಮಗೆ ಅನುಮತಿಯನ್ನು ಕೊಟ್ಟಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-**ಮಾನ್ಯ ಸಭಾಪತಿಯವರೇ, ರಾಜ್ಯದ ಜನರ ಜೀವನೋಪಾಯಕ್ಕಾಗಿ ದಿನನಿತ್ಯ ಅವಶ್ಯಕವಾಗಿರುವ ಡೀಸೆಲ್, ಪೆಟ್ರೋಲ್ ಹಾಗೂ ಗ್ಯಾಸ್ ಬೆಲೆಯೂ ದಿನೇ ದಿನೇ ಹೆಚ್ಚಾಗುತ್ತಿರುವುದರಿಂದ, ರಾಜ್ಯದ ಜನರು ಉಪಯೋಗಿಸುವ ತರಕಾರಿ, ಹಣ್ಣು-ಹಂಪಲುಗಳು, ದವಸ-ಧಾನ್ಯಗಳ ಬೆಲೆ ಹೆಚ್ಚಾಗುತ್ತಿದ್ದು, ಬಡ ಜನರು ಪ್ರಯಾಣವನ್ನು ಮಾಡಲು ದುಬಾರಿ ಬೆಲೆಯನ್ನು ಕೊಟ್ಟು, ಬಸ್ ಟಿಕೆಟ್ ಖರೀದಿ ಮಾಡಿ, ಪ್ರಯಾಣ ಮಾಡಲೇ ಬೇಕಾದ ಪರಿಸ್ಥಿತಿ ಉಂಟಾಗಿರುವುದರಿಂದ, ರಾಜ್ಯದ ಜನರ ಆರ್ಥಿಕ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಸಾಮಾನ್ಯ ಜನರು ಜೀವನವನ್ನು ನಡೆಸಲು ಕಷ್ಟ ಸಾಧ್ಯವಾಗಿರುವ ಸಂಗತಿಯನ್ನು ಅತ್ಯಂತ ಸಾರ್ವಜನಿಕ ಮಹತ್ವವಾದ ವಿಚಾರವಿರುವುದರಿಂದ ನಿಯಮ 59 ರಡಿಯಲ್ಲಿ ನಮಗೆ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಬಡವರು ಮತ್ತು ಮಧ್ಯಮ ವರ್ಗದವರು ಜೀವನೋಪಾಯ ಹೇಗೆ ಮಾಡಬೇಕು ಎಂಬುದರ ಬಗ್ಗೆ ಅವರಿಗೆ ಮುಗಿಲು ಹರಿದು ತಲೆ ಮೇಲೆ ಬಿದ್ದಂತಾಗಿದೆ. ಬೆಳಗ್ಗೆ ಎದ್ದು ಕೂಡಲೇ ಗ್ಯಾಸ್, ಸಿಲೆಂಡರ್, ಡೀಸೆಲ್ ದಿನ ನಿತ್ಯ ಬಳಕೆ ಮಾಡುವ ವಸ್ತುಗಳ ಬೆಲೆ ಲೆಕ್ಕ ತಪ್ಪಿ ಗಗನಕ್ಕೇರಿದೆ. ಮೊದಲು ನಾವು ಏನು ಮಾಡುತ್ತಿದ್ದೇವೆಂದರೆ, ನಾವು ಜೇಬಿನಲ್ಲಿ ನೋಟು ಇಟ್ಟುಕೊಂಡು ಹೋಗಿ ಕೈಚೀಲದ ತುಂಬಾ ಕಾಯಿಪಲ್ಯ ಮತ್ತು ದವಸ ಧಾನ್ಯವನ್ನು ತೆಗೆದುಕೊಂಡು ಬರುತ್ತಿದ್ದೆವು. ಆದರೆ ಇವತ್ತಿನ ದಿನ ಕೈಚೀಲದಲ್ಲಿ ನೋಟನ್ನು ಇಟ್ಟುಕೊಂಡು ಹೋಗಿ, ಜೇಬಿನಲ್ಲಿ ತರುವಂತಹ ಪರಿಸ್ಥಿತಿ ಉಂಟಾಗಿದೆ. ನನ್ನ ಸಾರ್ವಜನಿಕ ಬದುಕಿನಲ್ಲಿ ಇಷ್ಟೊಂದು ಬೆಲೆ ಏರಿಕೆಯಾಗಿದ್ದು, ಸ್ವಾತಂತ್ರ್ಯ ಭಾರತದ ಇತಿಹಾಸದಲ್ಲೇ ಇದೇ ಮೊದಲು ಎನ್ನುವಷ್ಟರ ಮಟ್ಟಿಗೆ ಬೆಲೆ ಏರಿಕೆಯಾಗಿದೆ. ಜೀವನವನ್ನು ನಡೆಸುವಂತಹ ಕಷ್ಟದ ವಾತಾವರಣ ನಿರ್ಮಾಣವಾಗಿದೆ. ದಯವಿಟ್ಟು, ಇದು ಬಹಳ ಮಹತ್ವವುಳ್ಳದ್ದು. ಇಡೀ ನಾಡಿನ ಬಡ ಜನತೆಗೆ ಸಂಬಂಧಿಸಿದ್ದಾಗಿದೆ. ಮಧ್ಯಮ ವರ್ಗದವರು ಬಹಳ ಚಿಂತಾಜನಕ ಸ್ಥಿತಿಯಲ್ಲಿರುವುದರಿಂದ, ದಯವಿಟ್ಟು, ಮಾನ್ಯ ಸಭಾಪತಿಯವರೇ, ನಿಯಮ 59 ರಡಿಯಲ್ಲಿ ನಿಲುವಳಿ ಸೂಚನೆಯನ್ನು ನಾನು ಮತ್ತು ನನ್ನ ಸ್ನೇಹಿತರು ಕೊಟ್ಟಿದ್ದೇವೆ. ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ಸಮಯವನ್ನು ಹೆಚ್ಚಿಗೆ ತೆಗೆದುಕೊಳ್ಳಬಹುದು ಎಂದು ತಾವು ಹೇಳಿದಿರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಯವನ್ನು ಹೆಚ್ಚಿಗೆ ತೆಗೆದುಕೊಳ್ಳುವುದಾದರೆ, ನಾನು ಮಾತನಾಡುತ್ತೇನೆ. ನಾನು ಅದರ ಬಗ್ಗೆ initiation ಅನ್ನು ಮಾಡಿದ್ದೇನೆ. When you permit me to discuss, we will go in-detail. ದಯವಿಟ್ಟು, ಅದಕ್ಕೆ ಅವಕಾಶವನ್ನು ಕಲ್ಪಿಸಿಕೊಡಿ. ಒಂದು ವೇಳೆ ನಿಯಮ 59 ಅಡಿಯಲ್ಲಿ ತಾವು ಅವಕಾಶವನ್ನು ಕಲ್ಪಿಸದೇ ಇದ್ದರೆ, ಬೇರೆ ನಿಯಮ ಅಂದರೆ, ನಿಯಮ 68 ರಡಿಯಲ್ಲಿ ತಾವು ಅವಕಾಶವನ್ನು ಕಲ್ಪಿಸಿ. ಏಕೆಂದರೆ, ಇದರ ಬಗ್ಗೆ ಚರ್ಚೆಯಾದರೆ, ನಾಡಿನ ಜನತೆಗೆ ನ್ಯಾಯವನ್ನು ಒದಗಿಸಿದಂತಾಗುತ್ತದೆ.

**ಸಭಾಪತಿಯವರು:–** ನಿಯಮ 68 ರಡಿಯಲ್ಲಿ convert ಮಾಡುತ್ತೇನೆ. ಮಾನ್ಯ ಸಿ.ಸಿ. ಪಾಟೀಲ್‌ರವರು ಕೆಳಮನೆಗೆ ಹೋಗಬೇಕಾಗಿರುವುದರಿಂದ, ಮಾನ್ಯ ರಮೇಶ ಗೌಡರು ತಮ್ಮ ಪ್ರಶ್ನೆಯನ್ನು ಕೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 03.ಪ್ರಶ್ನೋತ್ತರಗಳು

## ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ 822**

**(ಉತ್ತರವನ್ನು ಲಗತ್ತಿಸಲಾಗಿದೆ)**

ಶ್ರೀ **ಹೆಚ್.ಎಂ. ರಮೇಶ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳು ಸಾಕಷ್ಟು ಪ್ರಮಾಣದಲ್ಲಿ ಇವತ್ತು ಉದ್ಯೋಗ ಇಲ್ಲದೇ ಇರುವಂತಹವರಿಗೆ, ಉದ್ಯೋಗ ಮಾಡುವಂತಹ ಕೈಗಳಿಗೆ ಕೆಲಸವನ್ನು ನೀಡಿದೆ. ಸಾಕಷ್ಟು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರಗಳು ಈಗಾಗಲೇ ಅವಕಾಶ ಮಾಡಿಕೊಡಬೇಕಾಗಿತ್ತು. ಆದರೆ ಆ ರೀತಿಯಾಗಿರಲಿಲ್ಲ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, ಇವತ್ತು ಕೋವಿಡ್-19 ಬಂದ ನಂತರ ಮತ್ತು ಅದಕ್ಕೆ ಮುಂಚೆಯೂ ಇರಬಹುದು. ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವವರ ಸಂಖ್ಯೆ ಬಹಳ ಕಡಿಮೆಯಾಗಿದೆ. ಏಕೆಂದರೆ, ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಅಲ್ಲಿರುವಂತಹ terms and condition ಏನಿವೆ ಅವುಗಳು ಸಾಕಷ್ಟು ಸರಳೀಕರಣ ಆಗಬೇಕಾಗುತ್ತದೆ. ಅದು ಆಗಿಲ್ಲ. ಹಾಗಾಗಿ ಅದನ್ನು ಸರ್ಕಾರ ಸರಳೀಕರಣ ಮಾಡಬೇಕೆಂದು, ನಾನು ತಮ್ಮ ಮುಖಾಂತರ ಹೇಳಬಯಸುತ್ತೇನೆ.

ಶ್ರೀ ಸಿ.ಸಿ. **ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೋವಿಡ್ ಬಂದಂತಹ ಸಂದರ್ಭದಲ್ಲಿ ಕೈಗಾರಿಕೋದ್ಯಮಕ್ಕೆ ಮಾನ್ಯ ಸದಸ್ಯರು ಹೇಳಿರುವಂತಹದ್ದು ಸತ್ಯವಿದೆ. ನಿನ್ನೆ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಣ್ಣ ಕೈಗಾರಿಕೋದ್ಯಮ ವಲಯಕ್ಕೆ ಸಾಕಷ್ಟು ಉತ್ತೇಜನ ಕೊಡುವಂತಹ ಭರವಸೆಯನ್ನು ಕೊಟ್ಟಿದ್ದಾರೆ. ಸುಮಾರು ಹತ್ತು ಸಾವಿರ ಕೋಟಿ ರೂಪಾಯಿಗಳು ಮುಂದಿನ ಮೂರು ವರ್ಷಗಳಲ್ಲಿ PPP ಮುಖಾಂತರ ಬೆಂಗಳೂರು-ಚೆನ್ನೈ ಕಾರಿಡಾರ್ ಮತ್ತು ಬೆಂಗಳೂರು-ಮುಂಬೈ ಕಾರಿಡಾರ್‌ನಲ್ಲಿ ಡಿಮ್ಯಾಂಡ್ ಸರ್ವೆ ಮಾಡಿ, ಎಲ್ಲೆಲ್ಲಿ ಉದ್ಯಮಗಳನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶವಿದೆಯೋ, ಖಂಡಿತವಾಗಿಯೂ ಅದರ ಕಡೆ ಗಮನವನ್ನು ಕೊಡುತ್ತೇವೆ. ಅದಕ್ಕೆ ಸಾಕಷ್ಟು ಹಣಕಾಸಿನ ನೆರವನ್ನು ಒದಗಿಸುವುದಕ್ಕೆ ಬಜೆಟ್‌ನಲ್ಲಿ ಅವಕಾಶವನ್ನು ಇಟ್ಟುಕೊಂಡಿದ್ದೇವೆ. ಪ್ರಪ್ರಥಮ ಬಾರಿಗೆ ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಈ ಭಾಗದಲ್ಲಿ ಅತ್ಯಂತ ದೊಡ್ಡದಾದಂತಹ ಉದ್ಯಮ. ಅದಕ್ಕೆ ಇದುವರೆಗೂ ಮೂಲಭೂತ ಸೌಕರ್ಯಕ್ಕೆ ಯಾರೂ ಕೂಡ ಹಣವನ್ನು ಒದಗಿಸಿರಲಿಲ್ಲ. ಈ ಸಾಲಿನ ಬಜೆಟ್‌ನಲ್ಲಿ ಸುಮಾರು ಒಂದು ನೂರು ಕೋಟಿ ರೂಪಾಯಿಗಳ ಹಣವನ್ನು ಮಾನ್ಯ ಮುಖ್ಯಮಂತ್ರಿಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದಕ್ಕಾಗಿ ಇಟ್ಟಿದ್ದಾರೆ. ಅಲ್ಲಿ ಉದ್ಯಮದಾರರ ಬೇಡಿಕೆಯಾದಂತಹ township ಅನ್ನು ಸ್ಥಾಪನೆ ಮಾಡಬೇಕಾಗಿತ್ತು. ಅದಕ್ಕೂ ಕೂಡ ಒಪ್ಪಿಗೆಯನ್ನು ಕೊಟ್ಟಿದ್ದೇವೆ. ತಮ್ಮ ಭಾವನೆಯನ್ನು ನಾವು ಗಮನದಲ್ಲಿಟ್ಟುಕೊಂಡು, ಉದ್ಯಮದಾರರಿಗೆ ಬೇಕಾದಂತಹ ಸೌಲಭ್ಯಗಳನ್ನು ಖಂಡಿತವಾಗಿಯೂ ನಮ್ಮ ಸರ್ಕಾರ ಕೊಡುತ್ತದೆ.

**ಶ್ರೀ ಹೆಚ್.ಎಂ. ರಮೇಶ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸುದೀರ್ಘವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ತಮ್ಮ ಮುಖಾಂತರ ನನ್ನ ಮನವಿ ಏನೆಂದರೆ, ಬಜೆಟ್‌ನಲ್ಲಿ ಏನೊಂದು ಪ್ರಸ್ತಾಪ ಮಾಡಿದ್ದಾರೆ. ಕಳೆದ ಬಾರಿ ಬಜೆಟ್‌ನಲ್ಲಿ ಹಣವನ್ನು ಮೀಸಲಿಟ್ಟಿದ್ದರು. ಆದರೆ ಯಾವುದೂ ಸಹ implement ಆಗಲಿಲ್ಲ. ಈ ಬಾರಿಯೂ ಸಹ ಹಣವನ್ನು ಮೀಸಲಿಟ್ಟಿದ್ದಾರೆ.

**(ಮುಂದು)**

**(313) 09.03.2021, 11.30, ಟಿಸಿಹೆಚ್-ಆರ್‌ಎನ್**

**ಶ್ರೀ ಹೆಚ್.ಎಂ.ರಮೇಶ್.ಗೌಡ (ಮುಂದು):-**

ಬಜೆಟ್‌ನಲ್ಲಿ ಏನು ಘೋಷಣೆ ಮಾಡಿ ಅನುದಾನವನ್ನು ಇಟ್ಟಿದ್ದಾರೆ, ಅದರಲ್ಲಿ ಶೇ.100ರಷ್ಟು ವಿನಿಯೋಗ ಮಾಡದಿದ್ದರೂ, ಕನಿಷ್ಠ ಶೇ.75 ಭಾಗವಾದರೂ ವಿನಿಯೋಗ ಮಾಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಆ ಹಣವನ್ನು ಉಪಯೋಗ ಮಾಡುವುದಕ್ಕೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.841**

**(ಉತ್ತರ ಲಗತ್ತಿಸಿದೆ)**

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. ದಯವಿಟ್ಟು ಮಾನ್ಯ ಸಚಿವರು ನಾನು ಕೇಳಿರತಕ್ಕಂಥ ಪ್ರಶ್ನೆಯನ್ನು ಸರಿಯಾಗಿ ಓದಬೇಕು. ನಾನು ಕೇಳಿರತಕ್ಕಂಥ ಎರಡನೆಯ ಪ್ರಶ್ನೆ ಬಿಪಿಎಲ್ ಪಡಿತರ ಚೀಟಿಗಳನ್ನು ಹೊಂದಿರುವ ಕುಟುಂಬಗಳಿಗೆ ಸರ್ಕಾರದಿಂದ ನೀಡುವ ಪಡಿತರ ಮತ್ತು ಅದರ ದರಗಳ ವಿವರಗಳನ್ನು ನೀಡುವುದು ಈ ಪಡಿತರ ದರಗಳನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಎಂದು ಕೇಳಿದ್ದೆನು. ಅದಕ್ಕೆ ಅವರು ಆದ್ಯತಾ ಪಡಿತರ ಚೀಟಿಗಳಿಗೆ ಪ್ರತಿ ಮಾಹೆ ಪ್ರತಿ ಸದಸ್ಯರಿಗೆ 5 ಕೆ.ಜಿ ಅಕ್ಕಿ ಹಾಗೂ ಪ್ರತಿ ಪಡಿತರ ಚೀಟಿಗೆ 2 ಕೆ.ಜಿ ಗೋಧಿ ಮತ್ತು ಅಂತ್ಯೋದಯ ಅನ್ನ ಪಡಿತರ ಚೀಟಿದಾರರಿಗೆ ಪ್ರತಿ ಪಡಿತರ ಚೀಟಿಗೆ 35 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುತ್ತಿದೆ ಎಂದು ಹೇಳಿದ್ದಾರೆ. ನಾನು ಕೇಳಿರತಕ್ಕಂಥ ಪ್ರಶ್ನೆಗೂ ಅವರು ಕೊಟ್ಟಿರತಕ್ಕಂಥ ಉತ್ತರಕ್ಕೂ ಏನಾದರೂ ಸಂಬಂಧ ಇದೆಯೇ? ಪಡಿತರದ ದರಗಳನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ? ಎಂದು ಕೇಳಿರುವುದಕ್ಕೆ ಹೆಚ್ಚಿಸುತ್ತೇವೆ ಅಥವಾ ಹೆಚ್ಚಿಸುವುದಿಲ್ಲ ಎಂದು ಉತ್ತರ ಕೊಡಬೇಕಾಗಿತ್ತು. ಆದರೆ ಅವೆರಡನ್ನೂ ಕೊಟ್ಟಿಲ್ಲ. ನನಗೆ ಎಲ್ಲಾ ಉತ್ತರವನ್ನು ಒಟ್ಟಿಗೆ ಕೊಡಬೇಕು. ನಂತರ ಮಾನ್ಯ ಸಚಿವರು ಪಡಿತರ ಚೀಟಿಯನ್ನು ಪಡೆದುಕೊಳ್ಳಲು ಇರತಕ್ಕಂಥ ಮಾನದಂಡಗಳ ಕುರಿತು ಹೇಳಿದ್ದಾರೆ. ಅವರು 2017ರಲ್ಲಿ ಹೊರಡಿಸಿರತಕ್ಕಂಥ ಆದೇಶದನುಸಾರ ಮಾಡಿದ್ದಾರೆ. ಆದರೆ, ರೂ.1.20 ಲಕ್ಷಗಳಿಗಿಂತ ಹೆಚ್ಚು ವಾರ್ಷಿಕ ಆದಾಯವನ್ನು ಹೊಂದಿರತಕ್ಕಂಥ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿ ಪಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ತೋರಿಸಿದ್ದಾರೆ. ಇವತ್ತಿನ ದಿವಸ ಯಾವ ಕುಟುಂಬ ರೂ.10,000/- ತೆಗೆದುಕೊಂಡು ಬದುಕುವುದಕ್ಕೆ ಆಗುತ್ತದೆಯೆ? ಸುಮಾರು 30 ವರ್ಷದ ಹಿಂದಿನದ್ದನ್ನು ಹಾಕಿದ್ದೀರಿ. ದಯವಿಟ್ಟು ಇದನ್ನೆಲ್ಲಾ ಸ್ವಲ್ಪಮಟ್ಟಿಗೆ ಪರಾಮರ್ಶಿಸಬೇಕು. ವಾಸ್ತವಾಂಶಕ್ಕೆ ಹತ್ತಿರವಾಗಿರಬೇಕು. ಆದರೆ, ನೀವು ಹಾಕಿರತಕ್ಕಂಥದ್ದು ಯಾವುದೂ ವಾಸ್ತವಾಂಶವಿಲ್ಲ. ಇವತ್ತಿನ ದಿವಸ ನಾವು ಬೇರೆ ಬೇರೆ ತಾಂತ್ರಿಕತೆಗಳಲ್ಲಿ ಜೀವನವನ್ನು ನಡೆಸುತ್ತಿದ್ದೇವೆ. ಮುಂದಿನ ದಿನಗಳಲ್ಲಿ ನಮಗೆ ಯಾವ ತಾಂತ್ರಿಕತೆಗಳು ಬರುತ್ತವೋ ಗೊತ್ತಿಲ್ಲ. 30 ವರ್ಷಗಳ ಹಿಂದೆ ಇವತ್ತು ನಮ್ಮ ಕೈಯಲ್ಲಿ ಮೊಬೈಲ್ ಫೋನ್ ಇರುತ್ತಿತ್ತು ಎಂದು ನಮಗೆ ಗೊತ್ತಿರಲಿಲ್ಲ. ಇದು ಇಷ್ಟು ಹತ್ತಿರಕ್ಕೆ ಬರುತ್ತದೆಂದು ನಮಗ್ಯಾರಿಗೂ ಗೊತ್ತಿರಲಿಲ್ಲ. ಇವತ್ತಿನ ದಿವಸ ಇಡೀ ಪ್ರಪಂಚ ನಮ್ಮ fingertips ನಲ್ಲಿದೆ. ಇಂತಹ ಸಂದರ್ಭದಲ್ಲಿ ಪ್ರತಿಯೊಬ್ಬರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೊಬೈಲ್ ಫೋನ್‌ನ್ನು ಇಟ್ಟುಕೊಳ್ಳುತ್ತಾರೆ. ಪ್ರತಿಯೊಬ್ಬರ ಮನೆಯಲ್ಲೂ ಟಿ.ವಿ. ಇರುತ್ತದೆ. ಆದರೆ, ನೀವು ಇದನ್ನೆಲ್ಲಾ ಹಾಕಿಲ್ಲ. ಇವತ್ತಿನದಿವಸ ನಾವು ಇಂತಹ ಒಂದು ಸನ್ನಿವೇಶದಲ್ಲಿದ್ದಾಗ, ನಮ್ಮ ಆದಾಯಗಳು ಹೆಚ್ಚಿಸತಕ್ಕಂಥದ್ದು ಆಗುತ್ತದೆ. 2017 ರಿಂದ ಜನಜೀವನ ಅಸ್ತವ್ಯಸ್ತವಾಗಿದೆ. ಹಾಗಾಗಿ, ಇವತ್ತಿನ ದಿವಸ ಸರ್ಕಾರ ಏನು ಬಿ.ಪಿ.ಎಲ್. ಪಡಿತರ ಚೀಟಿ ಪಡೆಯಲು ಮಾನದಂಡ ಹಾಕಿದೆ. ಈ ಹಿಂದಿನ ಸರ್ಕಾರದವರು ಒಂದು ಕುಟುಂಬಕ್ಕೆ ಒಂದು ತಿಂಗಳಿಗೆ 27,000 ರೂಪಾಯಿಗಳ ಮಾನದಂಡ ಹಾಕಲು ಪ್ರಯತ್ನಪಟ್ಟಿತ್ತು. ಆದರೆ, ಅದು ಏನಾಯಿತೋ ಗೊತ್ತಿಲ್ಲ. ಆದರೆ ಇವತ್ತಿನ ದಿವಸ ಸರ್ಕಾರ 10,000/- ರೂಪಾಯಿಗಳ ಮಾನದಂಡ ceiling ಹಾಕಿದೆ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳುವುದು ಬಹಳ ಮುಖ್ಯವಾದುದಾಗಿದೆ. ಮತ್ತೆ ನನ್ನ ಎರಡು ಪ್ರಶ್ನೆಗೆ ಮಾನ್ಯ ಸಚಿವರು ದಯವಿಟ್ಟು ಉತ್ತರ ಕೊಡಬೇಕು. ಇನ್ನು ಮೂರನೆಯದಾಗಿ, ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ತೆಗೆದಿದ್ದೇವೆಂದು ಹೇಳಿದ್ದಾರೆ. ಆದರೆ, ಅಂತ್ಯೋದಯ ಅನ್ನ ಪಡಿತರ ಚೀಟಿಯಲ್ಲಿ ಯಾವುದೂ ಅನರ್ಹ ಪಡಿತರ ಚೀಟಿ ಸಿಗಲಿಲ್ಲವೇ? ಏಕೆಂದರೆ, ಆದ್ಯತಾ ಪಡಿತರ ಚೀಟಿಗಳಿಗೆ ಪ್ರತಿ ಮಾಹೆ ಪ್ರತಿ ಸದಸ್ಯರಿಗೆ 5 ಕೆ.ಜಿ ಅಕ್ಕಿ ಮತ್ತು 2 ಕೆ.ಜಿ. ಗೋಧಿ ಹಾಗೂ ಅಂತ್ಯೋದಯ ಅನ್ನ ಪಡಿತರ ಚೀಟಿದಾರರಿಗೆ ಪ್ರತಿ ಪಡಿತರ ಚೀಟಿಗೆ 35 ಕೆ.ಜಿ ಅಕ್ಕಿಯನ್ನು ಉಚಿತವಾಗಿ ವಿತರಿಸುತ್ತಿದ್ದೇವೆಂದು ಹೇಳಿದ್ದಾರೆ. ಕಳೆದ ಮೂರು ವರ್ಷಗಳಿಂದ ಇದುವರೆಗೂ 2,28,188 ಆದ್ಯತಾ (ಬಿ.ಪಿ.ಎಲ್) ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ರದ್ದುಪಡಿಸಲಾಗಿದೆ ಹಾಗೂ ರೂ.3,07,36,170ಗಳ ದಂಡವನ್ನು ಕೂಡ ವಸೂಲಿ ಮಾಡಲಾಗಿದೆಯೆಂದು ಹೇಳಿದ್ದಾರೆ. ಆದರೆ ಅಂತ್ಯೋದಯ ಅನ್ನ ಪಡಿತರ ಚೀಟಿಯಲ್ಲಿ ನಿಮಗೆ ಒಂದು ಅನರ್ಹ ಪಡಿತರ ಚೀಟಿಯೂ ಸಿಗಲಿಲ್ಲವೇ? ಕಳೆದ ಮೂರು ವರ್ಷಗಳಿಂದ ಇದುವರೆಗೂ 2,28,188 ಆದ್ಯತಾ (ಬಿ.ಪಿ.ಎಲ್) ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ರದ್ದುಪಡಿಸಲಾಗಿದೆ. ಅಲ್ಲಿ ಸುಮಾರು 10,00,000 ಕ್ಕೂ ಹೆಚ್ಚುಪಟ್ಟು ಇದ್ದಾರೆ. ಅಂತಹ ಅನರ್ಹ ಪಡಿತರ ಚೀಟಿಗಳು ಏಕೆ ಸಿಕ್ಕಿಲ್ಲವೆಂದು ಮಾನ್ಯ ಸಚಿವರು ದಯವಿಟ್ಟು clarification ಕೊಡಬೇಕು.

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ತಾವು ಆಮೇಲೆ ಪ್ರಶ್ನೆ ಕೇಳಿ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಆಯಿತು.

**ಶ್ರೀ ಉಮೇಶ್.ವಿ.ಕತ್ತಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪಿ.ಆರ್. ರಮೇಶ್ ರವರು ಕೇಳಿರತಕ್ಕಂಥ ಪ್ರಶ್ನೆಗೆ ನಾನು ಸರಿಯಾದ ಉತ್ತರವನ್ನು ಕೊಟ್ಟಿದ್ದೇನೆಂದು ನನ್ನ ಅನಿಸಿಕೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದ್ಯತಾ (ಬಿ.ಪಿ.ಎಲ್) ಪಡಿತರ ಚೀಟಿ ಬಗ್ಗೆ ಉತ್ತರವನ್ನು ಸರಿಯಾಗಿ ಕೊಟ್ಟಿದ್ದೇನೆ. ಆದರೆ ಮಾನ್ಯ ಸದಸ್ಯರಿಗೆ ಏಕೆ ಅರ್ಥವಾಗುತ್ತಿಲ್ಲವೂ ಗೊತ್ತಿಲ್ಲ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ನಾನು ಕೇಳಿರತಕ್ಕಂಥ ಎರಡನೇ ಪ್ರಶ್ನೆಯಲ್ಲಿ ಬಿಪಿಎಲ್ ಪಡಿತರ ಚೀಟಿಗಳನ್ನು ಹೊಂದಿರುವ ಕುಟುಂಬಗಳಿಗೆ ಸರ್ಕಾರದಿಂದ ನೀಡುವ ಪಡಿತರ ಮತ್ತು ಅದರ ದರಗಳ ವಿವರಗಳನ್ನು ನೀಡುವುದು ಈ ಪಡಿತರದ ದರಗಳನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಎಂದು ಕೇಳಿದ್ದೇನೆ. ಅಂದರೆ ಮುಂದಿನ ದಿನಗಳಲ್ಲಿ ಅವರು ಹಣವನ್ನು ಕೊಟ್ಟರೆ, ಪಡಿತರವನ್ನು ಕೊಡುತ್ತಾರೆಯೇ ಎಂದು ಕೇಳಿದ್ದೇನೆ. ಅದು ಇದೆ ಅಥವಾ ಇಲ್ಲವೆಂದು ಹೇಳಿದರೆ ಆಯಿತು.

**ಶ್ರೀ ಉಮೇಶ್ ವಿ.ಕತ್ತಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪಿ.ಆರ್. ರಮೇಶ್ ರವರು ಕೇಳಿರತಕ್ಕಂಥ ಪ್ರಶ್ನೆಗೆ, ಒಂದು ಕುಟುಂಬದ ವಾರ್ಷಿಕ ಆದಾಯ 1.20 ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇದ್ದರೆ, ಅಂತಹವರು ಬಿ.ಪಿ.ಎಲ್., ಅಡಿಯಲ್ಲಿ ಬರುತ್ತಾರೆ. ಇದು ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಮಾಡಿದಂಥ ಮಾನದಂಡವಾಗಿದೆ. ಆ ಮಾನದಂಡವನ್ನು ನಾವು ಮಾಡಿಲ್ಲ. ನಾನು ಸಚಿವನಾಗಿ ಬಂದು ಕೇವಲ ಒಂದು ತಿಂಗಳಾಗಿದೆ. ನಾನು ಯಾವುದೇ ಆದೇಶವನ್ನು ಹೊರಡಿಸಿಲ್ಲ. ಅದರ ಬಗ್ಗೆ ಚರ್ಚೆಗಳು ಮತ್ತು ಸಭೆಗಳನ್ನು ಮಾಡುತ್ತಿದ್ದೇವೆ. ಇವತ್ತಿನ ದಿವಸ ಉದ್ಯೋಗ ಖಾತರಿ ಯೋಜನೆಯಲ್ಲಿ ಒಬ್ಬ ವ್ಯಕ್ತಿಗೆ ಪ್ರತಿದಿನ 275 ರೂಪಾಯಿಗಳು ಸಂಬಳ ಕೊಡಲಾಗುತ್ತಿದೆ. ಇದನ್ನು ಮಾನದಂಡವನ್ನಾಗಿ ಇಟ್ಟುಕೊಂಡು ಸರಿಯಾದ ಆದಾಯವನ್ನು ನಿರ್ವಹಣೆ ಮಾಡುತ್ತೇವೆ. ಸದ್ಯಕ್ಕೆ ಈ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ. ಅವರಿಗೆ ಪುಗಸಟ್ಟೆ ಆಹಾರ ಪಡಿತರ ಕೊಡುವುದಾಗಲಿ, ಅಥವಾ ಅವರಿಂದ ದುಡ್ಡನ್ನು ತೆಗೆದುಕೊಳ್ಳುವಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ. ಅದನ್ನೆಲ್ಲಾ ಸರಿಪಡಿಸಿದ ನಂತರ, ಅಂತಹ ವಿಷಯಗಳು ಬಂದಾಗ, ಮಾನ್ಯ ಸದಸ್ಯರಿಂದ ಸಲಹೆಗಳನ್ನು ಪಡೆದು, ಒಳ್ಳೆಯ ರೀತಿಯ ಆಹಾರ ಪಡಿತರ ಕೊಡುವುದಕ್ಕೆ charge ಮಾಡಿ ಕೊಡಬೇಕೆಂದು ತಮ್ಮ ಅನಿಸಿಕೆ ಇದೆಯೋ ಅದನ್ನು ಮಾಡುವಂಥ ಕೆಲಸವನ್ನು ಮಾಡುತ್ತೇವೆ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಕೇಳಿದ್ದಕ್ಕೆ ಉತ್ತರ ಕೊಡಲೇ ಇಲ್ಲ. ಅವರು ಅರ್ಥ ಮಾಡಿಕೊಳ್ಳದಿದ್ದರೆ, ತಾವೇ ಅವರಿಗೆ ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಶ್ರೀ ಪಿ.ಆರ್. ರಮೇಶ್ ರವರಿಗೆ ಉತ್ತರ ಕೊಟ್ಟು ಸಮಾಧಾನಪಡಿಸುವುದು ಬಹಳ ಕಷ್ಟ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಬರೀ ನನ್ನನ್ನು ಸಮಾಧಾನಪಡಿಸುವುದಲ್ಲಾ. ಈ ಸದನವನ್ನು ಸಮಾಧಾನ ಪಡಿಸಬೇಕು.

**ಸಭಾಪತಿಯವರು:–** ಮಾನ್ಯ ಪಿ.ಆರ್. ರಮೇಶ್‌ರವರೇ ತಾವು ಹೇಳಿ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಈಗ ಪುಗಸಟ್ಟೆ ಆಹಾರ ಪಡಿತರ ಕೊಡುವುದಾಗಲಿ ಅಥವಾ ದುಡ್ಡನ್ನು ತೆಗೆದುಕೊಂಡು ಆಹಾರ ಪಡಿತರ ವಿತರಣೆ ಮಾಡುವುದಕ್ಕೆ ಪ್ರಸ್ತಾವನೆ ಸರ್ಕಾರದ ಮುಂದಿಲ್ಲವೆಂದು ಹೇಳಿದ್ದಾರೆ. ಹಾಗಾದರೆ, ಇದರ ಅರ್ಥವೇನು? ಈಗ ನೀವು ಯಾವುದರಲ್ಲಿ ಕೊಡುತ್ತಿದ್ದಾರೆ?

**ಶ್ರೀ ಉಮೇಶ್ ವಿ.ಕತ್ತಿ:–** ಮಾನ್ಯ ಸಭಾಪತಿಯವರೇ, ಈಗ ಯಾವುದೂ ಇಲ್ಲ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಮುಂದಿನ ದಿನಗಳಲ್ಲಿ ಹಣವನ್ನು ತೆಗೆದುಕೊಂಡು ಆಹಾರ ಪಡಿತರ ವಿತರಣೆ ಮಾಡುವಂಥ ಪ್ರಸ್ತಾವನೆ ಇದೆಯೇ? ಮಾನ್ಯ ಸಚಿವರು ಇದೆ ಅಥವಾ ಇಲ್ಲ ಎಂದು ಹೇಳಬೇಕು.

**ಶ್ರೀ ಉಮೇಶ್ ವಿ.ಕತ್ತಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಮಾನ್ಯ ಪಿ.ಆರ್. ರಮೇಶ್ ರವರು ಇವತ್ತಿನ ದಿವಸ ಪ್ರತಿ ಕುಟುಂಬದ ವಾರ್ಷಿಕ ಆದಾಯವು 1.20 ಲಕ್ಷಗಳು ಇಟ್ಟಿರುವುದು ಕಡಿಮೆ ಆಯಿತೆಂದು ಹೇಳುತ್ತಿದ್ದಾರೆ. ಅವರೇ ಈಗ ಮೊಬೈಲ್ ಫೋನ್ ಬಂದಿದೆ, ಟಿ.ವಿ.ಬಂದಿದೆ ಮತ್ತು ಮೋಟಾರ್ ಸೈಕಲ್ ಬಂದಿದೆಯೆಂದು ಹೇಳುತ್ತಿದ್ದಾರೆ. ಅವೆಲ್ಲಾ ಮಾನದಂಡಗಳನ್ನು ಇಟ್ಟುಕೊಂಡು ಸರಿಯಾದ ಆದಾಯವನ್ನು ಮಾಡಿ...

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಇನ್ನೊಂದು ಅವರು relax ಮಾಡಬೇಕೆಂದು ಹೇಳಿದ್ದಾರೆ. ಇವತ್ತಿನ ದಿವಸ ಪಡಿತರವನ್ನು ಉಚಿತವಾಗಿ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಆದರೆ, ಮುಂದಿನ ದಿನಗಳಲ್ಲಿ ಆಹಾರ ಧಾನ್ಯಗಳಿಗೆ ಏನಾದರೂ ದರ ನಿಗಡಿಪಡಿಸುವಂಥ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಇದೆ ಅಥವಾ ಇಲ್ಲ ಎಂದು ಹೇಳಿದರೆ ಆಯಿತು. ಇನ್ನು ಎರಡನೆಯದಾಗಿ, ಸರ್ಕಾರ ಪ್ರತಿ ಕುಟುಂಬದ ವಾರ್ಷಿಕ ಆದಾಯವು 1.20 ಲಕ್ಷಗಳಿಗಿಂತ ಹೆಚ್ಚು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವಂತಹ ಕುಟುಂಬಗಳು ಎಂದು ಹೇಳಿದೆ. ಇವತ್ತಿನ ಪರಿಸ್ಥಿತಿಯಲ್ಲಿ ತಿಂಗಳಿಗೆ 10,000 ರೂಪಾಯಿಗಳ ಕಡಿಮೆ ಆದಾಯದಲ್ಲಿ ಯಾರು ಬದುಕುತ್ತಿದ್ದಾರೆ? ಇದರ ಬಗ್ಗೆ ceiling ಏನಾದರೂ ಹೆಚ್ಚಿಸುವುದಕ್ಕೆ ಸರ್ಕಾರದಲ್ಲಿ ಏನಾದರೂ ಪ್ರಸ್ತಾವನೆ ಇದೆಯೇ?

**ಶ್ರೀ ಉಮೇಶ್.ವಿ.ಕತ್ತಿ:-** ಮಾನ್ಯ ಸಭಾಪತಿಯವರೇ, 2017ರ ಆದೇಶದಲ್ಲಿ ಪ್ರತಿ ಕುಟುಂಬದ ವಾರ್ಷಿಕ ಆದಾಯ 120 ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇರಬೇಕು ಎಂದು ಮಾಡಿದ್ದಾರೆ. ಅದಾದ ನಂತರ ನಾವು ಯಾವುದೇ ಆದೇಶವನ್ನು ಹೊರಡಿಸಿಲ್ಲ. ನಾನು ಸಚಿವನಾಗಿ ಬಂದು ಒಂದು ತಿಂಗಳು ಆಯಿತು. ಈ ಒಂದು ತಿಂಗಳಿನಲ್ಲಿ ಮೂರ್‍ನಾಲ್ಕು ಸಭೆಗಳನ್ನು ಮಾಡಿದ್ದೇನೆ. ಈಗಾಗಲೇ ಉದ್ಯೋಗ ಖಾತರಿ ಯೋಜನೆಯಲ್ಲಿ ಪ್ರತಿ ದಿನ ಒಬ್ಬರಿಗೆ ಕನಿಷ್ಠ 275 ರೂಪಾಯಿಗಳು ಕೊಡುತ್ತಿದ್ದೇವೆ. ಒಬ್ಬ ಬಡವರಿಗೆ ವಾರ್ಷಿಕ 2.75 ಲಕ್ಷ ರೂಪಾಯಿಗಳು ಕೊಡುತ್ತಿದ್ದೇವೆ. ಇದನ್ನು ಆಧಾರವಾಗಿ ಇಟ್ಟುಕೊಂಡು, ಅವನು ವರ್ಷಪೂರ್ತಿ ದುಡಿದರೆ ಎಷ್ಟು ಆದಾಯ ಬರುತ್ತದೆ, ಅದಕ್ಕೆ ಏನು ಮಾನದಂಡ ಮಾಡಬೇಕಿದೆಯೊ ಅದನ್ನು ಮಾಡುತ್ತೇವೆ. ಹಿಂದಿನ ಸರ್ಕಾರಗಳು ಇಲ್ಲಿಯವರೆಗೆ ಪುಗಸಟ್ಟೆಯಾಗಿ ಅಕ್ಕಿ ಕೊಡುತ್ತಿದ್ದರು, ಅದನ್ನು ನಾವು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಅದಕ್ಕೆ ಈಗ ಮಾನ್ಯ ಸದಸ್ಯರು charges ಮಾಡಬೇಕೆಂದು ಹೇಳುತ್ತಿದ್ದಾರೆ. ಅಂತಹ ಏನಾದರೂ ಪ್ರಸಂಗಗಳು ಬಂದರೆ, ಅದಕ್ಕೆ charge ಮಾಡಿ, ಸರಿಯಾದ ಆಹಾರ ಪಡಿತರವನ್ನು ಕೊಡತಕ್ಕಂಥ ಕೆಲಸವನ್ನು ಮಾಡುತ್ತೇವೆ. ಕೇಂದ್ರ ಸರ್ಕಾರ ಆಹಾರ ಖಾತರಿ ಯೋಜನೆಯಡಿಯಲ್ಲಿ ಒಬ್ಬ ವ್ಯಕ್ತಿ ಬದುಕಲು ಇಷ್ಟು ಕೆ.ಜಿ ಆಹಾರ ಪಡಿತರವನ್ನು ಕೊಡಲೇಬೇಕೆಂದು ಹೇಳಿದ್ದಾರೆ. ಅದನ್ನು ನಾವು ಆಧಾರವಾಗಿಟ್ಟುಕೊಂಡು ಸರಿಯಾದ ಆಹಾರವನ್ನು ವಿತರಣೆ ಮಾಡುತ್ತೇವೆ. ಹಿಂದಿನ ಸರ್ಕಾರಗಳ ಆದೇಶಗಳ ಪ್ರಕಾರ, ಈಗಾಗಲೇ ಪುಗಸಟ್ಟೆ ಆಹಾರ ಪಡಿತರವನ್ನು ಕೊಡುತ್ತಿದ್ದೇವೆ. ಮುಂದಿನ ದಿನಮಾನಗಳಲ್ಲಿ ಅದನ್ನು ಸರಿಪಡಿಸಲಾಗುವುದು. ಮೊದಲು ಆದಾಯವನ್ನು ನಿಗದಿಪಡಿಸಿದ ನಂತರ, ಅವುಗಳನ್ನು ಯಾವ ರೀತಿ ಕೊಡಬೇಕೆಂದು ವಿಚಾರ ಮಾಡುತ್ತೇವೆ. ಸದ್ಯಕ್ಕೆ ಪುಗಸಟ್ಟೆ ಆಹಾರ ಪಡಿತರ ಕೊಡತಕ್ಕಂಥ ಕಾರ್ಯಕ್ರಮ ಮುಂದುವರೆಯುತ್ತಿದೆ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆಯನ್ನು ಕೇಳುತ್ತಿಲ್ಲ. ನಾನು ಇದಕ್ಕೆ ಅರ್ಧಗಂಟೆ ಕಾಲ ಚರ್ಚೆಗೆ ಅವಕಾಶ ಕೊಡಬೇಕೆಂದು ಕೇಳುತ್ತಿದ್ದೇನೆ. ಅದಾದ ನಂತರ. . .

**ಸಭಾಪತಿಯವರು:-** ಈಗ ಅಪ್ಪಾಜಿಗೌಡರವರು ಪ್ರಶ್ನೆ ಕೇಳಲಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಎಲ್ಲರಿಗೂ ಸಾಮಾನ್ಯ ಚರ್ಚೆಗೆ ಅವಕಾಶ ಕೊಡಿ.

**ಸಭಾಪತಿಯವರು:-** ಮಾನ್ಯ ಸಿ.ಎಂ.ಇಬ್ರಾಹಿಂ ರವರೇ, ತಾವು ಕೊಡಿ. ಒಪ್ಪುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಆಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಶ್ನೆ ಸಂಖ್ಯೆ.855**

**(ಉತ್ತರ ಲಗತ್ತಿಸಿದೆ)**

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಹಕಾರ ಸಚಿವರಿಗೆ, ಬೆಂಗಳೂರು ನಗರದಲ್ಲಿ ಇಲ್ಲಿಯವರೆಗೆ ನೋಂದಾಯಿಸಿಕೊಂಡು ಕಾರ್ಯನಿರ್ವಹಿಸುತ್ತಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಸಂಖ್ಯೆ ಎಷ್ಟು; ಅವು ಯಾವುವು ಎಂದು ಮಾಹಿತಿ ನೀಡುವಂತೆ ಕೇಳಿದ್ದೆನು. ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಎರಡನೆಯದಾಗಿ, ಇವುಗಳಲ್ಲಿ ಅವ್ಯವಹಾರ ಮಾಡಿರುವ ಆರೋಪ ಹೊಂದಿರುವ ಕಲಂ 64 ರ ವಿಚಾರಣೆ ನಡೆಯುತ್ತಿರುವ ಸಂಘಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದೆನು. ಅದಕ್ಕೆ ಅವರು ಸುಮಾರು 09 ಗೃಹ ನಿರ್ಮಾಣ ಸಹಕಾರ ಸಂಘಗಳ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64ರಡಿ ಶಾಸನಬದ್ಧ ವಿಚಾರಣೆಗೆ ಆದೇಶಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ.

**(ಮುಂದು)**

**(314)9.3.2021/11.40/ಎಂ.ಎಂ-ವಿ.ಕೆ**

**ಶ್ರೀ ಎನ್. ಅಪ್ಪಾಜಿಗೌಡ (ಮುಂದು):-**

ನ್ಯಾಷನಲ್ ಟೆಕ್ನೋಲಾಜಿಕಲ್ ಇನ್ಸ್ಟಿಟ್ಯೂಷನ್ಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ., ಕುಮಾರಕೃಪಾ (ವೆಸ್ಟ್), ಬೆಂಗಳೂರು ಈ ಸಂಘ ಯಾವಾಗ ಪ್ರಾರಂಭವಾಯಿತು? ಇದರ ಉದ್ದೇಶ ಏನೆಂದು ಪ್ರಶ್ನೆ ಕೇಳಿದ್ದೆ. ಇದರ ಬಗ್ಗೆ ಮಾನ್ಯ ಸಹಕಾರ ಸಚಿವರ ಬಹಳ ಸುದೀರ್ಘವಾದ ಉತ್ತರ ಕೊಟ್ಟಿದ್ದಾರೆ. ಬೆಂಗಳೂರು ಮತ್ತು ಕರ್ನಾಟಕ ರಾಜ್ಯದಲ್ಲಿ ಈ ಸಹಕಾರ ಸಂಘಗಳು ಯಾವ ರೀತಿ ಕಾರ್ಯನಿರ್ವಹಣೆ ಮಾಡುತ್ತಿವೆ ಎನ್ನುವ ಬಗ್ಗೆ ಮಾನ್ಯ ಸಹಕಾರ ಸಚಿವರಿಗೆ ಸಂಪೂರ್ಣವಾದ ಅರಿವಿದೆ. ಅವರು ಕೂಡ ಸಹಕಾರ ಕ್ಷೇತ್ರದಿಂದ ಬಂದಿದ್ದಾರೆ. ಹೌಸಿಂಗ್ ಸೊಸೈಟೀಸ್ ಹೇಗಿದೆ ಎಂದು ಗೊತ್ತಿದೆ. ಅವರು ಈ ಒಂದು ಪ್ರಶ್ನೆಗೆ ಸುಮಾರು 5-6 ಪ್ಯಾರಾಗ್ರಾಫ್ ಇರುವ ಸುದೀರ್ಘ ಉತ್ತರ ಕೊಟ್ಟಿದ್ದಾರೆ. ಇದರ ಬಗ್ಗೆ ಸುದೀರ್ಘವಾದ ಚರ್ಚೆ ಆಗಬೇಕಾಗಿದೆ. ಆದ್ದರಿಂದ ತಾವು ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು NTI ಹೌಸಿಂಗ್ ಸೊಸೈಟಿಯ ಬಗ್ಗೆ ಮಾಹಿತಿ ಕೇಳಿದ್ದಾರೆ. ಇದರ ಬಗ್ಗೆ ಅರ್ಜಿ ಸಮಿತಿಯಲ್ಲಿ ಕೂಡ ಅರ್ಜಿ ಹಾಕಿದ್ದಾರೆ, ಅಲ್ಲಿ ಕೂಡ ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. ಬೆಂಗಳೂರಿನಲ್ಲಿ ಎಷ್ಟು ಗೃಹ ನಿರ್ಮಾಣ ಸಹಕಾರ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಘಗಳಿವೆ, ಕಲಂ 64 ರ ವಿಚಾರಣೆ ಯಾವುದಿದೆ ಎನ್ನುವ ಸಂಪೂರ್ಣವಾದ ಮಾಹಿತಿ ಕೊಟ್ಟಿದ್ದೇವೆ. ಅದರಲ್ಲಿ ಇವರಿಗೆ ಬೇಕಾದವರಾದ ಶ್ರೀ ರಂಗನಾಥ್ ಎಂಬುವವರಿಗೆ ನಿವೇಶನ ಕೊಟ್ಟಿದ್ದರು. ಅದನ್ನು ರದ್ದುಪಡಿಸಿ ಶ್ರೀ ಸಿದ್ದಾರೆಡ್ಡಿ ಎಂಬುವವರಿಗೆ ನಿವೇಶನವನ್ನು ಹಂಚಿಕೆ ಮಾಡಿದ್ದರು. ಶ್ರೀ ಸಿದ್ದಾರೆಡ್ಡಿಯವರಿಗೆ ಕೊಟ್ಟಿರುವುದು ಕಾನೂನುಬಾಹಿರ ಎಂದು ಮಾಹಿತಿ ಬಂದ ನಂತರ ಕಲಂ 64ರ ವಿಚಾರಣೆಗೆ ಆದೇಶ ಮಾಡಿ ಅದನ್ನು ವಾಪಸ್ ಪಡೆಯಬೇಕೆಂದು ಸಂಘದ ಉದ್ದೇಶವಾಗಿತ್ತು. ಅವರು ಕಲಂ 64ರ ವಿಚಾರಣೆಗೆ ಹೈಕೋರ್ಟ್ ನಿಂದ 'ಸ್ಟೇ' ಮಾಡಿಸಿದ್ದಾರೆ. ಹೈಕೋರ್ಟ್ ಸ್ಟೇ ಆದ ನಂತರ ನಾವು parawise reply ಕೊಟ್ಟು ಅದನ್ನು withdraw ಮಾಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರು ಕೇಳಿರುವುದಕ್ಕೆ ಸಂಪೂರ್ಣ ಮಾಹಿತಿ ಕೊಟ್ಟಿದ್ದೇವೆ. ಇದಕ್ಕೆ ಅರ್ಧ ಗಂಟೆ ಚರ್ಚೆ ಮಾಡುವುದಕ್ಕೆ ಅವಶ್ಯಕತೆ ಏನೂ ಇಲ್ಲ. ಅವರು ಏನೇನನ್ನು ಕೇಳಿದ್ದಾರೆ ಅದನ್ನೆಲ್ಲಾ ಕೊಟ್ಟಿದ್ದೇವೆ. ಇದೇ ವಿಷಯವನ್ನು ಅರ್ಜಿ ಸಮಿತಿಯಲ್ಲಿ ಕೂಡ ಹಾಕಿದ್ದಾರೆ. ಅಲ್ಲಿಯೂ ಕೂಡ ಚರ್ಚೆ ನಡೆಯುತ್ತಿದೆ. ಅವರಿಗೆ ಬೇಕಾಗಿರುವ ಸಂಪೂರ್ಣವಾದ ಮಾಹಿತಿಯನ್ನು ಕೊಡುತ್ತಿದ್ದು, ಇನ್ನೂ ಏನಾದರೂ ಮಾಹಿತಿಗಳು ಬೇಕಾದರೆ ಕೊಡುವುದಕ್ಕೆ ಪ್ರಾರ್ಥನಾಡುತ್ತೇನೆ.

**ಶ್ರೀ ಎನ್. ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ನಾನು ಇಲ್ಲಿ 5-6 ಪ್ರಶ್ನೆಗಳನ್ನು ಕೇಳಿದ್ದೆ. ಅದರಲ್ಲಿ ನ್ಯಾಷನಲ್ ಟೆಕ್ನಾಲಜಿಕಲ್ ಇನ್ಸ್ಟಿಟ್ಯೂಷನ್ಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಯ ಶ್ರೀ ರಂಗನಾಥ್‌ರವರ ಬಗ್ಗೆ ಮಾನ್ಯ ಸಚಿವರು ಪ್ರಸ್ತಾಪ ಮಾಡಿದ್ದಾರೆ. ಅರ್ಜಿ ಸಮಿತಿಗೆ ಆ ಅರ್ಜಿಯನ್ನು ನಾವು ಹಾಕಿದ್ದಲ್ಲ, 4-5 ವರ್ಷಗಳ ಹಿಂದೆ ಅರ್ಜಿ ಸಮಿತಿಯಲ್ಲಿ ಆ ಪ್ರಶ್ನೆ ಬಂದಿತ್ತು. ಕಳೆದ ಸಲ ಅದು ಬರಬೇಕಾಗಿತ್ತು, ಆದರೆ ಕಾಲಾವಕಾಶದ ಸಮಯದಿಂದ ಅದು postpone ಆಯಿತು. ಇಲ್ಲಿ ಒಬ್ಬ ಸೊಸೈಟಿಗೆ ಅರ್ಜಿ ಹಾಕಿ ಸೈಟ್ ಕೇಳಿದ್ದಾರೆ, ಅದಕ್ಕೆ 2004ರಲ್ಲಿ ಅವರು ಹಣ ತುಂಬಿದ್ದಾರೆ, ಅಂತಹ ವ್ಯಕ್ತಿಗೆ ಅನ್ಯಾಯವಾಗಿರುವುದು; ಜೊತೆಗೆ ಅವ್ಯವಹಾರವಾಗಿರುವ ವಿಷಯ ಬಹಳ ಗಹನವಾದ ವಿಷಯವಾಗಿದೆ. ಈ ವ್ಯಕ್ತಿಗೆ ಅವರು ಸೈಟ್ ಕೊಡಬೇಕಾಗಿತ್ತು, ಆದರೆ ಕೊಡಲಿಲ್ಲ. ಅದರ ಬದಲು ಯಾವುದೋ ಕಾರಣಕ್ಕೋಸ್ಕರ ಸೈಟನ್ನು ಬೇರೆಯವರಿಗೆ ಕೊಟ್ಟರು. ಇವರಿಗೆ ಕೊಡಲಿಲ್ಲ. ಅದಕ್ಕೋಸ್ಕರ ಅವರು ಪೊಲೀಸ್ ಸ್ಟೇಷನ್‌ಗೆ, ಕಮೀಷನರ್‌ರವರ ಬಳಿಗೆ ಹೋಗಿದ್ದಾರೆ. ಇದೇ ಸೊಸೈಟಿಯವರು ತಮ್ಮಿಂದ ತಪ್ಪಾಗಿದೆಯೆಂದು ಜಿಲ್ಲಾಧಿಕಾರಿಯವರಿಗೆ ಪತ್ರ ಬರೆದಿದ್ದಾರೆ. ಇಷ್ಟೆಲ್ಲಾ ಆದರೂ ಈ 'ರಂಗನಾಥ್'ರವರ ಪರಿಸ್ಥಿತಿ ಏನು? ಅವರಿಗೆ ಈ ಸೊಸೈಟಿಯವರು ಸೈಟ್ ಕೊಡುತ್ತಾರೋ ಅಥವಾ ಕೊಡುವುದಿಲ್ಲವೋ? 'ರಂಗನಾಥ್' ಎನ್ನುವ ವ್ಯಕ್ತಿ ಈಗ depression ಗೆ ಹೋಗಿದ್ದಾರೆ. ಅವರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

medical report ಅನ್ನು ಕೂಡ ತಮಗೆ submit ಮಾಡುತ್ತೇನೆ. ಅವರು ಅಂತಹ ಚಿಂತಾಜನಕ ಸ್ಥಿತಿಯಲ್ಲಿದ್ದಾರೆ. ಒಂದು ಸೈಟ್‌ನ ಅಪೇಕ್ಷೆ ಪಟ್ಟಂತಹ ವ್ಯಕ್ತಿ depression ಗೆ ಹೋಗಿ, ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾರೆ. ಇವರಿಗೆ ಸೈಟ್ ಕೊಡಬೇಕಲ್ಲವೇ? ಇದರ ಬಗ್ಗೆ ಇಲಾಖೆ ಏನು ಕ್ರಮ ತೆಗೆದುಕೊಂಡಿದೆ ಎಂಬುದರ ಬಗ್ಗೆ ಮಾನ್ಯ ಸಚಿವರು ಹೇಳಲಿ.

**ಶ್ರೀ ಎಸ್.ಟಿ. ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಶ್ರೀ ರಂಗನಾಥ್ ಎನ್ನುವವರಿಗೆ ಮೊದಲಬಾರಿಗೆ ಸೈಟ್ ಹಂಚಿಕೆಯಾಗಿದೆ. ಅವರಿಗೆ ಹಂಚಿಕೆಯಾಗಿರುವ ನಿವೇಶನವನ್ನು ರದ್ದುಪಡಿಸಿ ಅದನ್ನು ‘ಸಿದ್ದಾರೆಡ್ಡಿ’ ಎನ್ನುವವರಿಗೆ ಹಂಚಿಕೆ ಮಾಡಿ ನೋಂದಣಿ ಮಾಡಿಕೊಟ್ಟಿದ್ದಾರೆ. ಅದು ಗೊತ್ತಾದ ಮೇಲೆ ಅದಕ್ಕೆ ಕಲಂ 64ರ ವಿಚಾರಣೆಗೆ ಆದೇಶ ಮಾಡಿದ್ದಾರೆ. ಅದನ್ನು ಕಾನೂನುಬಾಹಿರವಾಗಿ ಮಾಡಿದ್ದಾರೋ ಅಥವಾ ಏನು ಮಾಡಿದ್ದಾರೆ ಅದನ್ನು ವಾಪಸ್ ಪಡೆಯಬೇಕಾದರೆ ತನಿಖೆ ಮಾಡಬೇಕಾಗುತ್ತದೆ. ಕಲಂ 64ರ ವಿಚಾರಣೆಗೇ ಹೈಕೋರ್ಟ್‌ನಿಂದ ಸ್ಟೇ ಮಾಡಿಸಿದ್ದಾರೆ. ಅದನ್ನು ವೆಕೇಟ್ ಮಾಡಿಸಬೇಕೆಂದು parawise reply ಕೊಟ್ಟಿದ್ದೇವೆ, ಅದನ್ನು ವೆಕೇಟ್ ಮಾಡಿಸಿದ ಮೇಲೆ ಕಲಂ 64ರ ವಿಚಾರಣೆಯಾಗುತ್ತದೆ, ಕಾನೂನುಬಾಹಿರವಾಗಿ ‘ಸಿದ್ದಾರೆಡ್ಡಿ’ಯವರಿಗೆ ಸೈಟ್ ಕೊಡಲಾಗಿದೆ ಎಂದು ಆಗಿದೆ ಅದನ್ನು ರದ್ದುಮಾಡಿ ‘ರಂಗನಾಥ್’ರವರಿಗೆ ಕೊಡುವ ವ್ಯವಸ್ಥೆ ಮಾಡುತ್ತೇವೆ. ಹೈಕೋರ್ಟ್ ಮಧ್ಯಪ್ರವೇಶ ಮಾಡಿರುವುದರಿಂದ ಏನೂ ಕ್ರಮ ಕೈಗೊಳ್ಳಲಾರದ ಪರಿಸ್ಥಿತಿಯಾಗಿದೆ.

**ಸಭಾಪತಿಯವರು:–** ಈಗ ಅವರಿಗೆ ಏನು ಮಾಡುತ್ತೀರಿ ಎಂಬುದನ್ನು ಸದಸ್ಯರಿಗೆ ತಿಳಿಸಿ.

**ಶ್ರೀ ಎಸ್.ಟಿ. ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಹೈಕೋರ್ಟ್‌ನಲ್ಲಿ ಸ್ಟೇ ಇರುವುದನ್ನು ವೆಕೇಟ್ ಮಾಡಿಸುವುದಕ್ಕೆ ಮೂವ್ ಮಾಡಿದ್ದೇವೆ, ಅದಕ್ಕೆ parawise reply ಕೊಟ್ಟಿದ್ದೇವೆ, ಅದರ ಬಗ್ಗೆ ಅಡ್ವೊಕೇಟ್ ಜನರಲ್‌ರವರ ಜೊತೆಗೂ ಮಾತನಾಡಿದ್ದೇವೆ. ಅದು ವೆಕೇಟ್ ಆದ ತಕ್ಷಣ ಶ್ರೀ ಸಿದ್ದಾರೆಡ್ಡಿಯವರಿಗೆ ಹಂಚಿಕೆಯಾಗಿರುವ ನಿವೇಶನವನ್ನು ರದ್ದುಪಡಿಸಿ ಶ್ರೀ ರಂಗನಾಥ್‌ರವರಿಗೆ ನಿವೇಶನ ಕೊಡುವಂತಹ ವ್ಯವಸ್ಥೆ ಮಾಡುತ್ತೇವೆ.

**ಸಭಾಪತಿಯವರು:–** ಆಗಲಿ, ಬೇಗ ಕ್ರಮ ತೆಗೆದುಕೊಳ್ಳಿ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಚುಕ್ಕೆ ಪ್ರಶ್ನೆ ಸಂಖ್ಯೆ: 861**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ. ಸ್ಮಾರ್ಟ್ ಸಿಟಿ ಯೋಜನೆಯು ಪ್ರಧಾನಮಂತ್ರಿ ಮಾನ್ಯ ನರೇದ್ರಮೋದಿಯವರ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಆ ಯೋಜನೆಯಲ್ಲಿ ಬೆಳಗಾವಿ ನಗರ ಸಹ ಆಯ್ಕೆಯಾಗಿದೆ. 2016ರಿಂದ ಕೆಲಸ ಪ್ರಾರಂಭವಾಗಿದೆ. ಮಾನ್ಯ ಸಚಿವರು ಉತ್ತರದಲ್ಲಿ '999 ಕೋಟಿ ಮೊತ್ತದಲ್ಲಿ 108 ಕಾಮಗಾರಿಗಳ ಪೈಕಿ ರೂ. 95.28 ಕೋಟಿ ಮೊತ್ತದ 32 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಪ್ರಸ್ತುತದಲ್ಲಿ ರೂ. 750.53 ಕೋಟಿ ಮೊತ್ತದ 67 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಹಾಗೂ ರೂ. 153.47 ಕೋಟಿ ಮೊತ್ತದ 09 ಕಾಮಗಾರಿಗಳು ಟೆಂಡರ್ ಹಂತದಲ್ಲಿರುತ್ತವೆ' ಎಂದು ತಿಳಿಸಲಾಗಿದೆ. ಎರಡನೇ ಉತ್ತರದಲ್ಲಿ 'ರೂ. 750 ಕೋಟಿ ವೆಚ್ಚದಲ್ಲಿ 67 ಕಾಮಗಾರಿಗಳು ಪ್ರಗತಿಯಲ್ಲಿವೆ' ಎಂದು ಹೇಳಿದ್ದಾರೆ. ನಾನು ತಮ್ಮ ಮುಖಾಂತರ ಸಚಿವರಿಗೆ ಕೇಳುವುದು ಇಷ್ಟೇ, 2016–17ರಲ್ಲಿ ಟೆಂಡರ್ ಆಗಿ ಕೆಲಸಗಳು ಪ್ರಾರಂಭವಾದರೂ ಸಹಿತ, now we are in the year 2021. ಆದರೂ ಕಾಮಗಾರಿಗಳು ಇಷ್ಟು ವಿಳಂಬವಾಗಿವೆ. ಮಾನ್ಯ ಸಚಿವರು ಬೆಳಗಾವಿ ನಗರಕ್ಕೆ ಹಲವಾರು ಬಾರಿ ಭೇಟಿ ಕೊಟ್ಟಿದ್ದಾರೆ. ಸಂಬಂಧಪಟ್ಟಂತಹ ಅಧಿಕಾರಿಗಳ ಸಭೆ ಮಾಡಿದ್ದಾರೆ. ನನಗೆ ಒಂದು ಅರ್ಥವಾಗುತ್ತಿಲ್ಲ. ಕಾಮಗಾರಿಗಳು ಅನುಷ್ಠಾನಗೊಳ್ಳುವುದಕ್ಕೆ ಇಷ್ಟು ವೇಳೆ ಬೇಕಾಗುತ್ತದೆಯೇ? ಅದಕ್ಕೆ ಏನು ಕಾರಣ? Subcontract ಕೊಟ್ಟಿದ್ದಾರೆಯೇ? ಇಲ್ಲಿ ಕಳಪೆ ಕಾಮಗಾರಿಯಾಗಿದೆ. ಇದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ? ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಎಲ್ಲಾ ಸ್ಮಾರ್ಟ್ ಸಿಟಿಗಳಲ್ಲಿ command and control centre ಎಂದು ಮಾಡಿದ್ದಾರೆ. Which controls the entire system from one centre. ಮಾನ್ಯ ಮುಖ್ಯಮಂತ್ರಿಯವರು ಅದನ್ನು ಉದ್ಘಾಟನೆ ಮಾಡಿದ್ದಾರೆ. ಅಲ್ಲಿಂದಲೇ ನೇರವಾಗಿ ಎಲ್ಲಾ ವ್ಯವಸ್ಥೆಗಳನ್ನು ನೋಡುವುದಕ್ಕೆ ಅದನ್ನು ಮಾಡಿದ್ದಾರೆ. ಆದರೆ ಇವತ್ತಿನವರೆಗೂ command centre ಕಾರ್ಯನಿರ್ವಹಿಸುತ್ತಾ ಇಲ್ಲ. No body works from command centre. 150 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಕಮಾಂಡ್ ಸೆಂಟರ್ ಕೆಲಸ ಮಾಡದಿದ್ದರೆ ಹೇಗೆ? ಮಾನ್ಯ ಸಚಿವರು ಹಲವಾರು ಬಾರಿ ಸಭೆ ಮಾಡಿದ್ದಾರೆ, ಚರ್ಚೆ ಮಾಡಿದ್ದಾರೆ. ಆದರೆ ನನಗೆ ಒಂದು ಅರ್ಥವಾಗುತ್ತಿಲ್ಲ. ಯಾರು ಕಾಂಟ್ರ್ಯಾಕ್ಟ್ ಪಡೆದಿದ್ದಾರೆ, ಆ ಮುಖ್ಯ ಕಂಟ್ರ್ಯಾಕ್ಟರ್ ಅಲ್ಲಿ ಕೆಲಸಕ್ಕೇ ಬರುವುದಿಲ್ಲ. Subcontractor ಗೆ ಕೊಟ್ಟು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲಸ ಮಾಡಿಸುತ್ತಿದ್ದಾರೆ. ಕಳಪೆ ಕಾಮಗಾರಿಗಳನ್ನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ತೋರಿಸಲು ಬಯಸುತ್ತಿದ್ದೇನೆ. ಈ ರೀತಿ ಕಾಮಗಾರಿಗಳು ಹಲವಾರು ವರ್ಷಗಳಿಂದ; ನಾನು ಕಳೆದ ಬಾರಿ ಪ್ರಶ್ನೆ ಕೇಳಿದಾಗ 'ಕೋವಿಡ್' ಇದೆ, ಅಥವಾ ಅಲಿè flood ಬಂದಿದೆ, ಕಾಮಗಾರಿ ಕೆಲಸದಲ್ಲಿ ದೂರವಾಗುತ್ತದೆ ಎಂದು ಹೇಳುತ್ತಾರೆ. ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಕೇಳುವುದಿಷ್ಟೇ, ಕಾಮಗಾರಿಗಳು ಪೂರ್ತಿಯಾಗಿಲ್ಲ, ನಿಧಾನವಾಗಿ ಆಗುತ್ತಿವೆ.

**ಶ್ರೀ ಬಿ.ಎ. ಬಸವರಾಜ:–** ಮಾನ್ಯ ಸಭಾಪತಿಯವರೇ, ನಾನು ಹಲವಾರು ಬಾರಿ ಬೆಳಗಾವಿ ನಗರಕ್ಕೆ ವಿಸಿಟ್ ಮಾಡಿದ್ದೇನೆ. ಅಧಿಕಾರಿಗಳ ಜೊತೆ ಸಂಪೂರ್ಣವಾದ ಮಾಹಿತಿಗಳನ್ನು ಸಂಗ್ರಹ ಮಾಡಿದ್ದೇನೆ ಮತ್ತು ಆ ಕಾಮಗಾರಿಗಳ ವೀಕ್ಷಣೆ ಸಹ ಮಾಡಿದ್ದೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಕೇಳುತ್ತಿರುವುದು ಇಷ್ಟೇ, ಅಲ್ಲಿ ಕಳಪೆ ಕಾಮಗಾರಿಯಾಗಿದೆ ಹಾಗೂ ಸಬ್ ಕಾಂಟ್ರ್ಯಾಕ್ಟ್ ಕೊಟ್ಟಿದ್ದಾರೆ.

**ಶ್ರೀ ಬಿ.ಎ. ಬಸವರಾಜ:–** ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಎತ್ತಿದ್ದಾರೆ. ಆ ಸಂದರ್ಭದಲ್ಲಿ ಅನೇಕ ಶಾಸಕರು ಕೂಡ ನಮ್ಮ ಜೊತೆಯಲ್ಲಿದ್ದಾರೆ. ಈ ರೀತಿಯಾದ ಮಾಹಿತಿ ನನಗೆ ಯಾವತ್ತೂ ಬಂದಿಲ್ಲ. ಈಗ ಮಾನ್ಯ ಸದಸ್ಯರು ಈ ವಿಷಯವನ್ನು ಎತ್ತಿದ್ದಾರೆ. ಖಂಡಿತವಾಗಿಯೂ ಸರ್ಕಾರ ಅದನ್ನು ಗಂಭೀರವಾಗಿ ಪರಿಗಣಿಸಿ, ಮಾನ್ಯ ಸದಸ್ಯರು ಹೇಳಿರುವುದನ್ನು ಮಾಡುತ್ತೇವೆ. ಇಡೀ ದೇಶದಲ್ಲಿ 110 ಸ್ಮಾರ್ಟ್ ಸಿಟಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಬೆಳಗಾವಿ ನಗರಕ್ಕೆ 35ನೇ ರ್‍ಯಾಂಕನ್ನು ಕೊಟ್ಟಿದ್ದಾರೆ. ನಾನು ಸಚಿವನಾಗಿ ಬಂದ ಮೇಲೆ 4 ಬಾರಿ ಭೇಟಿ ಮಾಡಿ, ಈ ಕಾಮಗಾರಿಗೆ ವೇಗವನ್ನು ಕೊಡುವ ಕೆಲಸವನ್ನು ಮಾಡಿದ್ದೇನೆ. ಮಾನ್ಯ ಸದಸ್ಯರು ಹೇಳಿರುವುದಕ್ಕೆ ಸಂಬಂಧಪಟ್ಟಂತೆ ಅವರ ಸಮ್ಮುಖದಲ್ಲಿ ಇನ್ನೊಂದು ಸಭೆಯನ್ನು ಮಾಡಿ ಎಲ್ಲೆಲ್ಲಿ ತಪ್ಪುಗಳಾಗಿದೆ, ಅದನ್ನು ಸರಿಪಡಿಸುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆ. ಎಲ್ಲಾ ಕಾಮಗಾರಿಗಳನ್ನೂ ಕೂಡ ನಿಗದಿತ ಸಮಯದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಏನು ಸಮಯಾವಕಾಶ ಕೊಟ್ಟಿದ್ದಾರೆ, ಆ ನಿಗದಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕೆ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ.

**ಸಭಾಪತಿಯವರು:–** ಮಾನ್ಯ ಸದಸ್ಯರನ್ನು ಮೀಟಿಂಗ್‌ಗೆ ಕರೆದು ತೀರ್ಮಾನ ಮಾಡಿ.

**ಶ್ರೀ ಬಿ.ಎ. ಬಸವರಾಜ:–** ಆಗಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ದಯವಿಟ್ಟು ಛಿಂಟಟಚಿಟಜ ಛಿಜಟಣಡಿಜ ಬಗ್ಗೆ ಹೇಳಬೇಕು.

**ಸಭಾಪತಿಯವರು:–** ಮಾನ್ಯ ಸಚಿವರು ನಿಮ್ಮನ್ನೇ ಕರೆದು ಮೀಟಿಂಗ್ ಮಾಡುತ್ತಾರಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಛಿಂಟಟಚಿಟಜ ಛಿಜಟಣಡಿಜ ಗೆ 150 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.

**ಶ್ರೀ ಬಿ.ಎ. ಬಸವರಾಜ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಛಿಂಟಟಚಿಟಜ ಛಿಜಟಣಡಿಜ ಬಗ್ಗೆ ಪ್ರಶ್ನೆ ಎತ್ತಿದ್ದಾರೆ. ನಾನು ಹೋದಂತಹ ಸಂದರ್ಭದಲ್ಲಿ ಅಲ್ಲಿ ಕೆಲಸ ಆಗುತ್ತಿತ್ತು. ಅದನ್ನು ನಾನು ಕಣ್ಣಾರೆ ನೋಡಿದ್ದೇನೆ. ಮಾನ್ಯ ಸದಸ್ಯರು ಈಗ ಆ ಪ್ರಶ್ನೆಯನ್ನು ಎತ್ತಿದ್ದಾರೆ, ಅದು ಏತಕ್ಕೆ ಆಗುತ್ತಿಲ್ಲ ಎಂಬ ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡಿ ಅವರಿಗೆ ಮಾಹಿತಿ ತಿಳಿಸುವ ಕೆಲಸವನ್ನು ಖಂಡಿತವಾಗಿಯೂ ಮಾಡುತ್ತೇನೆ.

**(ಮುಂದು)**

**(315) 09–03–2021/ 11–50/ ಕೆಹೆಚ್–ವಿಕೆ**

**ಪ್ರಶ್ನೆ ಸಂಖ್ಯೆ: 803**

**ಶ್ರೀ ಆರ್.ಪ್ರಸನ್ನಕುಮಾರ್:–** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ನಾನು ಅಂದುಕೊಂಡಿದ್ದೇನೆ.

**ಸಭಾಪತಿಯವರು:–** ಮಾನ್ಯ ಆರ್.ಪ್ರಸನ್ನಕುಮಾರ್‌ರವರೇ, ತಾವು ಮೊದಲು ಪ್ರಶ್ನೆಯನ್ನು ಕೇಳಿ.

**ಶ್ರೀ ಆರ್.ಪ್ರಸನ್ನಕುಮಾರ್:–** ಮಾನ್ಯ ಸಭಾಪತಿಯವರೇ, **XXX**

**(ಗೊಂದಲ)**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಆರ್.ಪ್ರಸನ್ನಕುಮಾರ್‌ರವರೇ, ತಾವು ಮೊದಲು ಪ್ರಶ್ನೆಯನ್ನು ಕೇಳಿ. ಮಾನ್ಯ ಸದಸ್ಯರುಗಳೇ ಒಂದು ನಿಮಿಷ. ಯಾರೂ ಕೂಡ ಮಾತನಾಡಬೇಡಿ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):** ಮಾನ್ಯ ಸಭಾಪತಿಯವರೇ, ನಮ್ಮ ನಿಲುವು ಪ್ರಶ್ನೆಯನ್ನು ಕೇಳುವುದಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಒಂದು ನಿಮಿಷ. ನಾನು ಹೇಳುವುದನ್ನು ಮೊದಲು ಕೇಳಿ. ನಾನು ಮಾತನಾಡುವುದಕ್ಕೆ ಯಾರಿಗೆ ಅನುಮತಿ ಕೊಟ್ಟಿದ್ದೇನೆಯೋ, ಅದು ಮಾತ್ರ ರೆಕಾರ್ಡ್‌ಗೆ ಹೋಗಬೇಕು. ಬೇರೆ ಯಾವುದೂ ರೆಕಾರ್ಡ್‌ಗೆ ಹೋಗಬಾರದು. ಮಾನ್ಯ ಸದಸ್ಯರಾದ ಆರ್.ಪ್ರಸನ್ನಕುಮಾರ್‌ರವರೇ, ತಾವು ಪ್ರಶ್ನೆಯನ್ನು ಕೇಳುತ್ತೀರೋ, ಇಲ್ಲವೋ, ಉಳಿದದ್ದೆಲ್ಲಾ ಮಾತನಾಡಬೇಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರು ಬೇಜವಾಬ್ದಾರಿತನದ ಬಗ್ಗೆ ಮಾತನಾಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಆಯಿತು. ನಾನು ಈಗಾಗಲೇ ಇದರ ಬಗ್ಗೆ ಹೇಳಿದ್ದೇನೆಯಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವಂತಹ ಮಾತುಗಳನ್ನು ಮತ್ತು ಶಬ್ದಗಳನ್ನು ಕಡತದಿಂದ ತೆಗೆದು ಹಾಕಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸದಸ್ಯರು ಆ ಉದ್ದೇಶಕ್ಕೋಸ್ಕರ ಕೇಳುತ್ತಿಲ್ಲ.

**ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ಒಂದು ನಿಮಿಷ. ತಾವು ಈ ರೀತಿ ಹೇಳುವುದಕ್ಕೆ ಯಾರು ಹೇಳಿದರು? ಮೊದಲು ತಾವು ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಪ್ರಸನ್ನಕುಮಾರ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಆರ್.ಪ್ರಸನ್ನಕುಮಾರ್‌ರವರೇ, ಒಂದು ನಿಮಿಷ. ತಾವು ಪ್ರಶ್ನೆಯನ್ನು ಕೇಳಿ. **ಉಳಿದಿರುವುದು ಏನೂ ಮಾತನಾಡಿದ್ದಾರೋ ಅದನ್ನು ಕಡತದಿಂದ ತೆಗೆಯಬೇಕು.** ತಾವು ಪ್ರಶ್ನೆಯನ್ನು ಕೇಳುವುದಿದ್ದರೆ ಕೇಳಿ.

**(ಗೊಂದಲ)**

**ಶ್ರೀ ಆರ್.ಪ್ರಸನ್ನಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆಯನ್ನು ಕೇಳುವುದೇ ಇಲ್ಲ.

**ಸಭಾಪತಿಯವರು:-** ಇದನ್ನು ನಾನು allow ಮಾಡುವುದಿಲ್ಲ. ತಾವು ಪ್ರಶ್ನೆಯನ್ನು ಕೇಳದಿದ್ದರೆ ಬಿಡಿ. ಮಾನ್ಯ ಸದಸ್ಯರೇ ಮುಂದಿನ ಪ್ರಶ್ನೆಯನ್ನು ಕೇಳಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರುಗಳೇ, ಒಂದು ನಿಮಿಷ. ನಾನು ಹೇಳುವುದನ್ನು ಕೇಳಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ತಾವು ಮೊದಲು ಕುಳಿತುಕೊಳ್ಳಿ. ನಂತರ ನಾನು ಹೇಳುತ್ತೇನೆ. ಇದರ ಬಗ್ಗೆ ತಾವು ಏಕೆ ಮಾತನಾಡುತ್ತೀರಿ? ಮಾನ್ಯ ಸದಸ್ಯರು ಹೇಳುತ್ತಾರೆ. ತಾವು ಮೊದಲು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಎಲ್ಲರೂ ಸೇರಿ ಹೇಳಿದ್ದಾರೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಸಿ.ಎಂ.ಇಬ್ರಾಹಿಂಯವರೇ, ಒಂದು ನಿಮಿಷ. ಯಾರು ಕೂಡ ಮಾತನಾಡಬೇಡಿ. ಪ್ರಶ್ನೆ ಕೇಳಬೇಕಾಗಿರುವವರು ಕೇಳಬೇಕು. ನಾವು ಪ್ರಶ್ನೆಯನ್ನು ಕೇಳಿ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತೇವೆ ಅಷ್ಟೇ. ಪ್ರಶ್ನೆಯನ್ನು ಕೇಳಿದ ಮೇಲೆ ಈ ಪ್ರಶ್ನೆ ಮುಗಿದ ನಂತರ ಮಾನ್ಯ ಸದಸ್ಯರು ಏನು ಬೇಕಾದರೂ ಉಪ ಪ್ರಶ್ನೆಗಳನ್ನು ಕೇಳಲಿ. ನಂತರ ಇದರ ಬಗ್ಗೆ ನಾವು ವಿಚಾರ ಮಾಡುತ್ತೇವೆ.

**(ಗೊಂದಲ)**

**ಶ್ರೀ ಆರ್.ಪ್ರಸನ್ನಕುಮಾರ್:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಅದು ಅವರ ಹಕ್ಕು. Let it go into the record. ಇದು unparliamentary ಅಲ್ಲ. ಇದು parliamentary ಇದೆ. ಅದು ಸತ್ಯ ಇದೆ.

**ಸಭಾಪತಿಯವರು:–** ಮಾನ್ಯ ಸಿ.ಎಂ.ಇಬ್ರಾಹಿಂರವರೇ, ಒಂದು ನಿಮಿಷ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ತಾವು ಕುಳಿತುಕೊಳ್ಳಿ. ತಾವು ಏಕೆ ಮಾತನಾಡುತ್ತೀರಿ? **(ಗೊಂದಲ)** ಎಲ್ಲರೂ ಮಾತನಾಡಬೇಡಿ ಎಂದು ಹೇಳುತ್ತಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರೇ, ತಮ್ಮ ಪಕ್ಷದ ನಾಯಕರುಗಳಿಗೆ ಸ್ವಲ್ಪ ಹೇಳಿ. ಮಾನ್ಯ ಸದಸ್ಯರುಗಳು ಮಾತನಾಡುವುದೆಲ್ಲಾ ನಾನು allow ಮಾಡುವುದಿಲ್ಲ. ನಾನು ಹೇಳುವುದು ಇಷ್ಟೇ.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸಿ.ಎಂ.ಇಬ್ರಾಹಿಂರವರೇ, ಒಂದು ನಿಮಿಷ ಕೇಳಿ. ತಾವು ಈಗ ಕೇಳುತ್ತೀರೋ, ಇಲ್ಲವೋ? ಮಾನ್ಯ ಸದಸ್ಯರು ನಾನು ಇವತ್ತು ಪ್ರಶ್ನೆಯನ್ನು ಕೇಳುವುದಿಲ್ಲ ಎಂದರೆ ಮುಗಿಯಿತು. ಮೊದಲು ಮಾತನಾಡಿ ಪ್ರಶ್ನೆ ಕೇಳುವುದು ಸರಿಯಲ್ಲ. ನಾವು ನಿಯಮದ ಪ್ರಕಾರ ಹೋಗಬೇಕಾಗುತ್ತದೆ. ಪ್ರಶ್ನೋತ್ತರ ಅವಧಿಯಲ್ಲಿ ನಾನು ಪ್ರಶ್ನೆಯನ್ನು ಕೇಳುತ್ತೇನೆ ಎಂದರೆ ಆಯಿತು. ಇಲ್ಲದಿದ್ದರೆ ನಾನು ಪ್ರಶ್ನೆಯನ್ನು ಕೇಳುವುದಿಲ್ಲ ಎಂದು ಹೇಳಿದರೆ ಆಯಿತು. ಎರಡರಲ್ಲಿ ಒಂದು ಮಾತನ್ನು ಮಾನ್ಯ ಸದಸ್ಯರು ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಈ ಉದ್ದೇಶಕ್ಕೋಸ್ಕರ ಬಹಿಷ್ಕಾರ ಮಾಡುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ತಾವು ಏಕೆ ಮಾತನಾಡುತ್ತೀರಿ? ತಾವು ಏಕೆ ವಕೀಲಗಿರಿ ಮಾಡುತ್ತೀರಿ? ಈಗ ತಾವು ಮಾತನಾಡಬೇಡಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ. . . .

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧಪಕ್ಷದ ನಾಯಕರೇ, ಎಲ್ಲರಿಗೂ ಜವಾಬ್ದಾರಿ ಇರಲಿ. ಮಾನ್ಯ ಸದಸ್ಯರುಗಳೇ, ಒಂದು ನಿಮಿಷ. ನಾನು ಹೇಳುವುದನ್ನು ಕೇಳಿ. ಈ ಸದನದಲ್ಲಿ ಜವಾಬ್ದಾರಿ ಇರುವ ಜನರೇ ಇದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು ಇದ್ದಾರೆ. ಇದರ ಬಗ್ಗೆ ಅವರು ಏನಾದರೂ ಹೇಳುತ್ತಾರೆ. ಅವರು ಕೇಳಿರುವುದಕ್ಕೆ ಉತ್ತರ ಕೊಡುತ್ತಿದ್ದೇನೆ. ಪ್ರಶ್ನೆಯನ್ನು ಕೇಳುವವರು ಮೊದಲು ಪ್ರಶ್ನೆಯನ್ನು ಕೇಳಲಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ. ಅದರಲ್ಲಿ unparliamentary words ಯಾವುದೂ ಇಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರುಗಳೇ ಒಂದು ನಿಮಿಷ. ನಾನು ಹೇಳುವುದನ್ನು ಮೊದಲು ಕೇಳಿ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ, ಪ್ರಶ್ನೆಯನ್ನು ಬಹಿಷ್ಕಾರ ಮಾಡುತ್ತೇವೆ ಎಂದು ಹೇಳಿ. ಇದು unparliamentary ಅಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ಒಂದು ನಿಮಿಷ. ನಾನು ಹೇಳುವುದನ್ನು ಕೇಳಿ. ಮಾನ್ಯ ಸದಸ್ಯರೇ, ತಾವು ಪ್ರಶ್ನೆಯನ್ನು ಕೇಳಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್.ಪ್ರಸನ್ನಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಈ ಉದ್ದೇಶಕ್ಕೋಸ್ಕರ ಈ ಪ್ರಶ್ನೆಯನ್ನು ಬಹಿಷ್ಕಾರ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಆಯಿತು.

**ಪ್ರಶ್ನೆ ಸಂಖ್ಯೆ: 866**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿಯವರೇ, ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಸೋಮವಾರದಂದು ಕೊಡುತ್ತಾರೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 800**

**(ಉತ್ತರವನ್ನು ಲಗತ್ತಿಲಾಗಿದೆ)**

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಅ.ದೇವೇಗೌಡರವರೇ, ತಾವು ಪ್ರಶ್ನೆಯನ್ನು ಕೇಳಿ.

**ಶ್ರೀ ಅ.ದೇವೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರ ಸರಿಯಾಗಿ ಇದೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಉತ್ತರವನ್ನು ಹೇಳಿ.

**ಶ್ರೀ ಎನ್.ನಾಗರಾಜು.ಎಂ.ಟಿ.ಬಿ:–** ಮಾನ್ಯ ಸದಸ್ಯರು ಉತ್ತರ ಸರಿಯಾಗಿ ಇದೆ ಎಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 856**

**ಸಭಾಪತಿಯವರು:–** ಈ ಪ್ರಶ್ನೆಗೆ ಸಂಬಂಧಪಟ್ಟ ಸಚಿವರು ಯಾರು? ಮಾನ್ಯ ಸಭಾನಾಯಕರೇ, .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ತಾವು ಮತ್ತೊಂದು ಪ್ರಶ್ನೆಯನ್ನು ತೆಗೆದುಕೊಳ್ಳಿ.

**ಪ್ರಶ್ನೆ ಸಂಖ್ಯೆ: 789**

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಭಾರತಿಶೆಟ್ಟಿಯವರೇ, ತಮ್ಮ ಪ್ರಶ್ನೆ ವರ್ಗಾವಣೆಯಾಗಿದೆ. ಇದಕ್ಕೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ. ಮಾನ್ಯ ಸಭಾನಾಯಕರೇ, ಮಾನ್ಯ ಸಚಿವರಿಗೆ ಸದನದಲ್ಲಿ ಇರುವುದಕ್ಕೆ ಹೇಳಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 865**

**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಎಷ್ಟು ಬೃಹತ್ ಕೈಗಾರಿಕೆಗಳು ಕೆಲಸ ಮಾಡುತ್ತಿವೆ ಮತ್ತು ಅಲ್ಲಿ ಎಷ್ಟು ಜನ ಕಾರ್ಮಿಕರು ಇದ್ದಾರೆ ಎಂದು ನಾನು ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೇನೆ. ಇದರ ಬಗ್ಗೆ ಮಾನ್ಯ ಸಚಿವರು ಸವಿಸ್ತಾರವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ ಒಟ್ಟು 712 ಬೃಹತ್ ಕೈಗಾರಿಕೆಗಳು ಇವೆ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ ನನ್ನ supplementary ಪ್ರಶ್ನೆಯೇನೆಂದರೆ, ಮುಂದಿನ 2-3 ವರ್ಷದೊಳಗೆ ಹೊಸದಾಗಿ ಯಾವುದಾದರೂ ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರ ಅನುಮತಿ ಕೊಟ್ಟಿದೆಯೇ ಹಾಗೂ ಆ ಕಾರ್ಖಾನೆಗಳು ಯಾವಾಗ ಮತ್ತು ಎಷ್ಟು ಪ್ರಾರಂಭವಾಗುತ್ತದೆ ಎನ್ನುವುದು ನನ್ನ ಮೊದಲನೆಯ ಪ್ರಶ್ನೆ.

ಎರಡನೆಯದಾಗಿ, ರಾಜ್ಯದಲ್ಲಿ ಒಟ್ಟು 712 ಬೃಹತ್ ಕೈಗಾರಿಕೆಗಳು ಏನಿವೆ, ಇಡೀ ರಾಜ್ಯದಲ್ಲಿ 3 ಜಿಲ್ಲೆಗೆ ಮಾತ್ರ ಸೀಮಿತವಾಗಿದೆ. ಅಲ್ಲಿಯೇ concentrate ಆಗಿವೆ. ಬೆಂಗಳೂರು, ಕೋಲಾರ, ಮೈಸೂರು ಇರಬಹುದು. ಮೈಸೂರಿನಲ್ಲಿ ಸುಮಾರು 38 ಬೃಹತ್ ಕೈಗಾರಿಕೆಗಳು ಇವೆ. ಕೋಲಾರದಲ್ಲಿ ಸುಮಾರು 36 ಬೃಹತ್ ಕೈಗಾರಿಕೆಗಳು ಇವೆ. ಬೆಂಗಳೂರಿನಲ್ಲಿ ಸುಮಾರು 400 ಬೃಹತ್ ಕೈಗಾರಿಕೆಗಳು ಇವೆ. ಒಟ್ಟಾರೆ ರಾಜ್ಯದಲ್ಲಿ 3-4 ಜಿಲ್ಲೆಗೆ ಮಾತ್ರ ಒಟ್ಟು 712 ಬೃಹತ್ ಕೈಗಾರಿಕೆಗಳು ಸೀಮಿತವಾಗಿದೆ. Concentrate ಆಗಿವೆ. ಅದಕ್ಕಾಗಿ ಈ ಮಾಲಿನ್ಯವನ್ನು ನಿಯಂತ್ರಣ ಮಾಡುವುದಕ್ಕೆ ಮತ್ತು ಜನಸಂದಣಿಯನ್ನು ನಿಯಂತ್ರಣ ಮಾಡುವುದಕ್ಕೆ ಹಾಗೂ decentralise ಮಾಡುವುದಕ್ಕೆ ಯಾವ ರೀತಿ ಸರ್ಕಾರ ಕ್ರಮವನ್ನು ಕೈಗೊಂಡಿದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ನೀಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಮೂರನೆಯದಾಗಿ, ಸುಮಾರು 10 ತಿಂಗಳ ಕೋವಿಡ್ ಅವಧಿಯೊಳಗೆ ವಿಶೇಷವಾಗಿ 3 ತಿಂಗಳು ಲಾಕ್‌ಡೌನ್ ಆಗಿತ್ತು. ಈ ಒಂದು ಅವಧಿಯೊಳಗೆ ಈ ಕೈಗಾರಿಕೆಗಳು ಕೆಲಸ ಮಾಡಿವೆಯೇ ಅಥವಾ ಇಲ್ಲವೇ? ಕೋವಿಡ್ ಹಿನ್ನೆಲೆಯಲ್ಲಿ ಕಾರ್ಖಾನೆಗಳಿಗೆ ನಷ್ಟವಾಗಿದೆಯೇ ಅಥವಾ ಇಲ್ಲವೇ? ನಷ್ಟವಾಗಿದ್ದರೆ ಯಾವ ಪ್ರಮಾಣದಲ್ಲಿ ಆಗಿದೆ. ಇದರ ಹಾನಿಯನ್ನು ತುಂಬಿಕೊಡುವುದಕ್ಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಯಾವ ರೀತಿ ಪರಿಹಾರವನ್ನು ನೀಡಿದೆ. ಇದರ ಬಗ್ಗೆ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಸ್.ವ್ಹಿ.ಸಂಕನೂರರವರು ವಿವರವಾದಂತಹ ಕೆಲವೊಂದು ಪ್ರಶ್ನೆಗಳನ್ನು ಮತ್ತು ವಿವರಣೆಯನ್ನು ಕೇಳಿದ್ದಾರೆ. ಇದಕ್ಕೆಲ್ಲಾ ನಾವು ವಿವರವಾದಂತಹ ಉತ್ತರವನ್ನು ಕೊಟ್ಟಿದ್ದೇವೆ ಮತ್ತು ಕೆಲವೊಂದು ಪೂರಕವಾದಂತಹ ಪ್ರಶ್ನೆಗಳನ್ನು ಕೇಳಿದ್ದಾರೆ. ಇದರಲ್ಲಿ ಬಹಳ ಮುಖ್ಯವಾಗಿ ಕರೋನ ಸಂದರ್ಭದಲ್ಲಿ ಬಹುತೇಕ ಎಲ್ಲಾ ಕೈಗಾರಿಕೆಗಳು ಮುಚ್ಚಿ ಹೋಗಿ, ಎಷ್ಟೋ ಜನ ಕಾರ್ಮಿಕರು ತಮ್ಮ ತಮ್ಮ ರಾಜ್ಯಗಳಿಗೆ ವಲಸೆ ಹೋಗಿರುವುದನ್ನು ಸಹ ನಾವು ನೋಡಿದ್ದೇವೆ. ಬಹುತೇಕವಾಗಿ ಸುಮಾರು 3-4 ತಿಂಗಳು ಎಲ್ಲಾ ಕೈಗಾರಿಕೆಗಳು ಬಂದ್ ಆಗಿದ್ದವು. ಆ ಸಂದರ್ಭದಲ್ಲಿ ನಾನು ಕೈಗಾರಿಕಾ ಸಚಿವನಾಗಿ ನನಗೆ ಮತ್ತು ಸರ್ಕಾರಕ್ಕೆ ಏನು ಅನಿಸಿದೆಯೆಂದರೆ, ಮತ್ತೆ ಕೈಗಾರಿಕೆಗಳು ಪ್ರಾರಂಭವಾಗುತ್ತವೋ, ಇಲ್ಲವೋ? ಕಾರ್ಮಿಕರು ಬೀದಿಗೆ ಬೀಳುತ್ತಾರೆ ಎನ್ನುವಂತಹ ಪರಿಸ್ಥಿತಿ ಇತ್ತು. ಆದರೆ, ನಮ್ಮ ದೇಶದ ಪ್ರಧಾನ ಮಂತ್ರಿಯಾದ ನರೇಂದ್ರ ಮೋದಿಯವರು ಕೆಲವೊಂದು ನಿರ್ಧಾರಗಳನ್ನು ತೆಗೆದುಕೊಂಡರು. ಏನೆಂದರೆ, ಕರೋನಾ ಸ್ವಲ್ಪ ಕಡಿಮೆಯಾದ ಮೇಲೆ ಕೈಗಾರಿಕೆಗಳನ್ನು ತಕ್ಷಣ ಪ್ರಾರಂಭ ಮಾಡಬೇಕೆಂಬ ನಿರ್ಧಾರದ ಬಗ್ಗೆ ತಿಳಿಸಿದರು. ಕೇಂದ್ರ ಸರ್ಕಾರದ ಜೊತೆ ನಮ್ಮ ರಾಜ್ಯದ ಮುಖ್ಯಮಂತ್ರಿಯವರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ನೇತೃತ್ವದಲ್ಲಿ ಹಲವಾರು ಸಭೆಗಳನ್ನು ಮಾಡಿ, ಆ ಕೈಗಾರಿಕೋದ್ಯಮಿಗಳನ್ನು ಕರೆಯಿಸಿ, ತಕ್ಷಣವೇ ಈ ಕೈಗಾರಿಕೆಗಳನ್ನು ಪ್ರಾರಂಭ ಮಾಡಬೇಕೆನ್ನುವಂತಹ ನಿರ್ದೇಶನಗಳನ್ನು ಕೊಟ್ಟ ಮೇಲೆ, ಬಹುಶಃ ಈ ಕರೋನಾ ನಿಯಂತ್ರಣಕ್ಕೆ ಬಂದಂತಹ ಸಂದರ್ಭದಲ್ಲಿ ಮೊಟ್ಟ ಮೊದಲ ಬಾರಿಗೆ ಇಡೀ ದೇಶದಲ್ಲಿ ಯಾವುದಾದರೂ ಕೈಗಾರಿಕೆಗಳನ್ನು ಪುನರ್ ಪ್ರಾರಂಭ ಮಾಡುವಂತಹ ರಾಜ್ಯ ಇದ್ದರೆ, ಅದು ಕರ್ನಾಟಕದಲ್ಲಿ ಮಾತ್ರ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ.

**(ಮುಂದು)**

**(316) 09/03/2021/ಎಸ್‌ಪಿಆರ್/ಬಿಎನ್‌ಎಸ್/12:00**

**ಶ್ರೀ ಜಗದೀಶ ಶೆಟ್ಟರ್ (ಮುಂದು):-**

ಇದರಿಂದಾಗಿ ತಕ್ಷಣವೇ ಕೈಗಾರಿಕೆಗಳು ಪ್ರಾರಂಭವಾದವು. ಇದಲ್ಲದೇ ಕೇಂದ್ರ ಸರ್ಕಾರವು ಸಣ್ಣ ಕೈಗಾರಿಕೆಗಳಿಗೆ ಕೆಲವೊಂದು ಪ್ಯಾಕೇಜ್‌ಗಳನ್ನು ಘೋಷಿಸಿದೆ. ಅದರನ್ವಯ ಇವತ್ತಿನ ದಿವಸ ಸಾಕಷ್ಟು ಸಣ್ಣ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೈಗಾರಿಕೆಗಳಿಗೆ ಉತ್ತೇಜನ ದೊರೆತು, ಅವುಗಳು ಪುನರಾರಂಭವಾಗುವುದಕ್ಕೆ ಸಾಧ್ಯವಾಯಿತು. ಅಷ್ಟೇ ಅಲ್ಲದೇ, ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಕೈಗಾರಿಕೆಗಳ ವಿದ್ಯುತ್ ಬಿಲ್ಲನ್ನು ಮೂರು ತಿಂಗಳವರೆಗೆ ಮುಂದೂಡಿದರು. ಇದರಿಂದಾಗಿ ಸಾಕಷ್ಟು ಕೈಗಾರಿಕೆಗಳಿಗೆ ಅನುಕೂಲವಾಯಿತು. ಸಣ್ಣ ಕೈಗಾರಿಕೆಗಳಿಗೆ ಮೂರು ತಿಂಗಳ ವಿದ್ಯುತ್ ಬಿಲ್ಲನ್ನು ಸಂಪೂರ್ಣವಾಗಿ ಮನ್ನಾ ಮಾಡಿದ್ದರಿಂದ ಸಾಕಷ್ಟು ಅನುಕೂಲವಾಗಿದೆ. ಇದರ ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕೆಲವು ವಿನಾಯಿತಿಗಳಿಂದಲೂ ಸಹ ಸಣ್ಣ ಕೈಗಾರಿಕೆಗಳಿಗೆ ಅನುಕೂಲವಾಗಿವೆ.

ಇವತ್ತಿನ ದಿವಸ ಬೆಂಗಳೂರು ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಾತ್ರವೇ ಕೈಗಾರಿಕೆಗಳು ಕೇಂದ್ರೀಕೃತಗೊಂಡಿರುವ ಬಗ್ಗೆ ಮಾನ್ಯ ಶ್ರೀ ಎಸ್.ವ್ಹಿ.ಸಂಕನೂರುರವರು ಪ್ರಸ್ತಾಪಿಸಿದರು. ಅಂತಹ ಕೈಗಾರಿಕೆಗಳನ್ನು ಟೈರ್-2 ಮತ್ತು ಟೈರ್-3 ನಗರಗಳಿಗೆ ವಿಸ್ತರಿಸುವುದಕ್ಕಾಗಿ ನಮ್ಮ ರಾಜ್ಯದ 2020-25ರ ಹೊಸ ಕೈಗಾರಿಕೆ ನೀತಿಯನ್ವಯ ಹೆಚ್ಚು ಸೌಲಭ್ಯಗಳನ್ನು ನೀಡುವಂತಹ ಕೆಲಸಗಳನ್ನು ಮಾಡಿದ್ದೇವೆ. ಇದಕ್ಕೆ ಸಂಬಂಧಿತ ಅಂಕಿ-ಅಂಶಗಳು ನನ್ನ ಬಳಿ ಇವೆ. ಸಮಯದ ಅಭಾವದಿಂದಾಗಿ ನಾನು ಅವುಗಳನ್ನು ಪ್ರಸ್ತಾಪಿಸುತ್ತಿಲ್ಲ. ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಯಾವ ರೀತಿಯಾದ ಕೈಗಾರಿಕೆಗಳನ್ನು ಸ್ಥಾಪಿಸಲಾಗುತ್ತಿದೆ ಎನ್ನುವ ಅಂಕಿ-ಅಂಶಗಳನ್ನೂ ಸಹ ನಾನು ಹೇಳಬಹುದು. ನಮ್ಮ ಪಕ್ಷದ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಅಂದರೆ, ಕಳೆದ ಒಂದು-ಒಂದೂವರೆ ವರ್ಷದಿಂದ ಟೈರ್-2 ಟೈರ್-3 ನಗರಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕೈಗಾರಿಕೆಗಳ ಬೆಳವಣಿಗೆಯಾಗುತ್ತಿದ್ದು, ಇವುಗಳ ಅಂಕಿ-ಅಂಶಗಳೂ ಸಹ ನಮ್ಮ ಬಳಿ ಲಭ್ಯವಿದೆ. ಈ ರೀತಿಯ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ. ಬೆಂಗಳೂರು ನಗರದ ಮೇಲೆ ಹೆಚ್ಚು ಒತ್ತಡವಿದೆ. ಇದನ್ನು ಕಡಿಮೆ ಮಾಡುವುದಕ್ಕಾಗಿ ಮತ್ತು ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಕೈಗಾರಿಕೆಗಳ ಬೆಳವಣಿಗೆಗಾಗಿ ನಾವು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದೇವೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಮುಂದಿನ 2-3 ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಯಾವುದಾದರೂ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಮತಿ ನೀಡಲಾಗಿದೆಯೇ ಮತ್ತು ಎಷ್ಟು ಎನ್ನುವ ಬಗ್ಗೆ ಪ್ರಶ್ನೆಯನ್ನು ನಾನು ಕೇಳಿದ್ದು, ಅದಕ್ಕೆ ಉತ್ತರ ದೊರೆತಿಲ್ಲ.

**ಶ್ರೀ ಜಗದೀಶ್ ಶೆಟ್ಟರ:-** ಮಾನ್ಯ ಸಭಾಪತಿಯವರೇ, ನನ್ನ ಅಧ್ಯಕ್ಷತೆಯಲ್ಲಿರುವ, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿರುವ ಮತ್ತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ವಿವಿಧ ಸಮಿತಿಗಳು ನಮ್ಮ ಪಕ್ಷದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಅಂದರೆ ಜೂನ್–2019 ರಿಂದ ಡಿಸೆಂಬರ್ – 2020ರ ವರೆಗೆ, ಒಟ್ಟು ಸುಮಾರು 76,376 ಕೋಟಿ ರೂಪಾಯಿಗಳ ಯೋಜನೆಗಳಿಗೆ ಅನುಮೋದನೆಯನ್ನು ನೀಡಿವೆ. ಇದರಿಂದಾಗಿ 1,77,000 ಜನರಿಗೆ ಉದ್ಯೋಗಾವಕಾಶಗಳು ದೊರೆಯುವಂತಾಗಿದೆ. ಇವತ್ತಿನ ದಿವಸ ಇಷ್ಟು ದೊಡ್ಡ ಪ್ರಮಾಣದಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗುವುದಕ್ಕೆ ಸಾಧ್ಯವಾಗಿದೆ. ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಬಂಡವಾಳ ಹೂಡಿಕೆ ಮಾಡಲಾಗುತ್ತಿದೆ. ನಮ್ಮ ಧಾರವಾಡ ಜಿಲ್ಲೆಯ ಉದಾಹರಣೆಯನ್ನು ನೀಡುವುದಾದರೆ ಸುಮಾರು 25,000 ಕೋಟಿ ರೂಪಾಯಿಗಳಷ್ಟು ಬಂಡವಾಳವು ಅಲ್ಲಿ ಹರಿದು ಬರುತ್ತಿದೆ. ಇದೇ ರೀತಿಯಾಗಿ ರಾಜ್ಯದ ಮೈಸೂರು ಮತ್ತಿತರೆ ಜಿಲ್ಲೆಗಳಿಗೆ ಬಂಡವಾಳವು ಹರಿದು ಬರುತ್ತಿದೆ.

**ಸಭಾಪತಿಯವರು:–** ಇದಕ್ಕೆ ಸಂಬಂಧಿತ ಪಟ್ಟಿಯನ್ನು ಸದಸ್ಯರಿಗೆ ಕಳುಹಿಸಿಕೊಡಿ.

**ಶ್ರೀ ಜಗದೀಶ ಶೆಟ್ಟರ:–** ಮಾನ್ಯ ಸಭಾಪತಿಯವರೇ, ಸದರಿ ಪಟ್ಟಿಯನ್ನು ಸದಸ್ಯರಿಗೆ ಕಳುಹಿಸಿಕೊಡಲಾಗುವುದು.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಶ್ರೀ ಬಿ.ಕೆ.ಹರಿಪ್ರಸಾದ್ ರವರದ್ದು.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಸಂಬಂಧಪಟ್ಟಂತೆ ಮತ್ತೊಂದು ಮಾಹಿತಿಯನ್ನು ಕೇಳಬಯಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 828**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಇದು ಬಹಳ ಮಹತ್ವದ ಕಾರ್ಯಕ್ರಮವಾಗಿತ್ತು. ಅವರು ಬಡವರಿಗೆ ತಿಂಗಳಿಗೆ 7 ಕೆ.ಜಿ. ಅಕ್ಕಿಯನ್ನು ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಆದರೆ ಪ್ರಸ್ತುತ ಅಕ್ಕಿ ವಿತರಣೆ ಪ್ರಮಾಣವನ್ನು 5 ಕೆ.ಜಿ.ಗಳಿಗೆ ಇಳಿಸಿದ್ದಾರೆ. ಅನ್ನಭಾಗ್ಯ ಯೋಜನೆಯಲ್ಲಿ ಅಕ್ಕಿ ಮತ್ತು ಇತರೆ ಆಹಾರ ಧಾನ್ಯಗಳನ್ನು ಅಕ್ರಮವಾಗಿ ಸಂಗ್ರಹಿಸಿ, ದಾಸ್ತಾನು ಮಾಡಿ ಮಾರಾಟ ಮಾಡುವ ಪ್ರಕರಣಗಳ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆನು. ಇದರ ಬಗ್ಗೆ ಸರ್ಕಾರವು ನೀಡಿರುವ ಲಿಖಿತ ಉತ್ತರವನ್ನು ನೋಡಿದರೆ, 2018–19 ನೇ ಸಾಲಿನಲ್ಲಿ ಅಕ್ರಮ ಅಕ್ಕಿ ದಾಸ್ತಾನು ಪ್ರಮಾಣ 12,967.47 ಆಗಿತ್ತು; ಇದೇ ಪ್ರಮಾಣವು 2020–21 ನೇ ಸಾಲಿನಲ್ಲಿ 33,092.39 ಕ್ಕೆ ಏರಿಕೆಯಾಗಿದೆ. ಈ ಪ್ರಮಾಣವು ಟನ್ ಅಥವಾ ಮೆಟ್ರಿಕ್ ಟನ್ ಎನ್ನುವುದು ಗೊತ್ತಾಗುತ್ತಿಲ್ಲ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆಹಾರ ಧ್ಯಾನಗಳ ಅಕ್ರಮ ದಾಸ್ತಾನು ಮಾಡಲಾಗಿತ್ತು. ಇದು ಬಡವರ ಹೊಟ್ಟೆಗೆ ಹೊಡೆಯುವ ಕೆಲಸವೆಂದು ತಿಳಿಯುತ್ತದೆ. ಸರ್ಕಾರವು ನಾನು ಕೇಳಿರುವ ಪ್ರಶ್ನೆಗೆ ಲಿಖಿತ ಉತ್ತರವನ್ನು ನೀಡಿದೆ, ಅದರಲ್ಲಿ ಸತ್ಯವನ್ನು ಹೇಳಿದ್ದಾರೆ, ಆದರೆ, ಅದು ಅರ್ಧಸತ್ಯವಾಗಿದೆ ಎಂದು ನಾನು ಹೇಳುತ್ತೇನೆ. ಇದರಿಂದಾಗಿ ಬಡವರ ಮೇಲೆ ಯಾವ ರೀತಿಯಾಗಿ ಹೊಡೆತ ಬಿದ್ದಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ಎನ್ನುವುದು ಗೊತ್ತಿಲ್ಲ. ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್ ರವರ ಪ್ರಶ್ನೆಗೆ ಸರ್ಕಾರವು ಉತ್ತರವನ್ನು ನೀಡಿದೆ. ಅದರಲ್ಲಿ ಕಳೆದ ಮೂರು ವರ್ಷಗಳಲ್ಲಿ ಇದುವರೆಗೆ 2,28,188 ಬಿ.ಪಿ.ಎಲ್. ಮತ್ತು ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ರದ್ದು ಪಡಿಸಲಾಗಿದೆ ಎಂದು ತಿಳಿಸಲಾಗಿರುತ್ತದೆ. ಇದರರ್ಥ ಕಣ್ಣಿಗೆ ಕಾಣಿಸುವಷ್ಟೇ ಮಾತ್ರವೇ ದೊರೆತಿದೆ. ಈ ಹಿಂದೆ 7 ಕೆ.ಜಿ. ಅಕ್ಕಿಯನ್ನು ನೀಡಲಾಗುತ್ತಿತ್ತು ; ಆದರೆ ಅದನ್ನು ಈಗ 5 ಕೆ.ಜಿ.ಗಳಿಗೆ ಇಳಿಸಿದ್ದಾರೆ. ಅಗತ್ಯ ವಸ್ತುಗಳ ಕಾಯ್ದೆಯನ್ನು ಈಗಾಗಲೇ ಕೇಂದ್ರ ಸರ್ಕಾರವು ರದ್ದುಗೊಳಿಸಿದೆ. ಇಂತಹ ಸಂದರ್ಭಗಳಲ್ಲಿ ಆಹಾರ ಧಾನ್ಯಗಳ ಅಕ್ರಮ ದಾಸ್ತಾನು ಮಾಡುವುದಕ್ಕೆ ಅವಕಾಶವಾಗುತ್ತಿದೆ. ಇಂತಹ ಅಕ್ರಮಗಳನ್ನು ತಡೆಯುವುದಕ್ಕಾಗಿ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎನ್ನುವ ಅಂಶದ ಬಗ್ಗೆ ಸರ್ಕಾರವು ತಿಳಿಸಿದೆ. 3,00,07,336 ರೂಪಾಯಿಗಳಷ್ಟು ದಂಡವನ್ನು ಈಗಾಗಲೇ ವಸೂಲು ಮಾಡಲಾಗಿದೆ ಎಂದು ಸರ್ಕಾರವು ತಿಳಿಸಿದೆ. ಇಂತಹ ಪರಿಸ್ಥಿತಿಗಳಲ್ಲಿ ಬಡವರು ಎಲ್ಲಿಗೆ ಹೋಗಬೇಕು? ಅವರಿಗೆ ಕೊಡಬೇಕಾದ ಅಕ್ಕಿಯನ್ನು ಅಕ್ರಮವಾಗಿ ದಾಸ್ತಾನು ಮಾಡಿ ಬೇರೆಯವರಿಗೆ ಮಾರಾಟ ಮಾಡುವ ಮತ್ತು ಕಾಳಸಂತೆಯಲ್ಲಿ ಮಾರಾಟ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವ ಸಂದರ್ಭಗಳಲ್ಲಿ ಬಡವರ ಪರಿಸ್ಥಿತಿ ಏನಾಗಿದೆ ಎನ್ನುವ ಬಗ್ಗೆ ವರದಿಯನ್ನು ತರಿಸಿಕೊಂಡಿದೆಯೇ ಎನ್ನುವುದರ ಬಗ್ಗೆ ಸರ್ಕಾರವು ತಿಳಿಸಬೇಕು.

**ಶ್ರೀ ಉಮೇಶ್ ಪಿ.ಕತ್ತಿ:-** ಮಾನ್ಯ ಸಭಾಪತಿಯವರೇ, ಪ್ರಶ್ನಿತ ಯೋಜನೆಯು 2017 ರಲ್ಲಿ ಪ್ರಾರಂಭಗೊಂಡಿದ್ದು, ಅಂದಿನಿಂದಲೂ ಮುಂದುವರೆದುಕೊಂಡು ಬರುತ್ತಿದೆ. ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವು ಅಸ್ತಿತ್ವದಲ್ಲಿದ್ದಾಗ 7 ಕೆ.ಜಿ. ಅಕ್ಕಿಯನ್ನು ನೀಡಲಾಗುತ್ತಿತ್ತು. ಕೊರೋನಾ ನಂತರದ ಅವಧಿಯಲ್ಲಿ ಎಲ್ಲರಿಗೂ ಹಂಚಿ ಕೊಡಬೇಕೆನ್ನುವ ಉದ್ದೇಶದಿಂದ ಅಕ್ಕಿ ವಿತರಣೆ ಪ್ರಮಾಣವನ್ನು 5 ಕೆ.ಜಿ.ಗಳಿಗೆ ಇಳಿಕೆ ಮಾಡಿರುವುದು ನಿಜಾಂಶವಾಗಿದೆ. ಆದಾಯ ತೆರಿಗೆ ಪಾವತಿದಾರರು ಮತ್ತು ಸರ್ಕಾರಿ ನೌಕರರು ಹೊಂದಿರುವ ಬಿ.ಪಿ.ಎಲ್. ಕಾರ್ಡ್‌ಗಳನ್ನು ಪತ್ತೆ ಹಚ್ಚಿ ಅವುಗಳನ್ನು ಮರಳಿಸುವಂತೆ ವಿನಂತಿ ಮಾಡಲಾಗುತ್ತದೆ ವಿನಃ ನಾವು ಯಾವ ಬಡವರಿಗೂ ತೊಂದರೆಯನ್ನು ನೀಡುತ್ತಿಲ್ಲ. ಮಾನ್ಯ ಸದಸ್ಯರು ತಿಳಿದುಕೊಂಡಂತೆ, ಬಡವರಿಂದ ನಾವು ಬಿ.ಪಿ.ಎಲ್.ಕಾರ್ಡ್‌ಗಳನ್ನು ಹಿಂಪಡೆಯುತ್ತಿಲ್ಲ. ಸರ್ಕಾರಿ ಮತ್ತು ಅರೇ ಸರ್ಕಾರಿ ಅಧಿಕಾರಿ ಮತ್ತು ನೌಕರರು ಹೊಂದಿರುವ ಬಿ.ಪಿ.ಎಲ್. ಕಾರ್ಡ್‌ಗಳನ್ನು ಸರ್ಕಾರಕ್ಕೆ ಮರಳಿಸುವಂತೆ ಕೇಳಲಾಗಿದೆ. ಈ ಸಂಬಂಧ 3,07,00,000 ರೂಪಾಯಿಗಳಷ್ಟು ದಂಡವನ್ನೂ ಸಹ ವಸೂಲಿ ಮಾಡಲಾಗಿದೆ. 2,22,000 ಕಾರ್ಡ್‌ಗಳನ್ನು ಮರಳಿ ಪಡೆಯಲಾಗಿದೆ. ಈ ತಿಂಗಳ ಕೊನೆಯವರೆಗೆ ಈ ರೀತಿಯಾಗಿ ಹೊಂದಿರುವ ಬಿ.ಪಿ.ಎಲ್.ಕಾರ್ಡ್‌ಗಳನ್ನು ಯಾರು ಮರಳಿ ಸರ್ಕಾರಕ್ಕೆ ನೀಡುವುದಿಲ್ಲವೋ ಅವರುಗಳನ್ನು ಲಾಕ್ ಮಾಡಲಾಗುತ್ತಿದೆ. ಅರ್ಹರಿರುವವರಿಗೆ ಬಿ.ಪಿ.ಎಲ್. ಕಾರ್ಡ್‌ಗಳನ್ನು ನೀಡಲಾಗುತ್ತದೆ. ಅವಶ್ಯವಿದ್ದಲ್ಲಿ ಬೇರೆ ಊರಿಗೆ ಹೋದ ಬಡವರಿಗೂ ಸಹ ಬಿ.ಪಿ.ಎಲ್. ಕಾರ್ಡ್‌ಗಳನ್ನು ನೀಡಲಾಗುತ್ತದೆ. ಆದರೆ ಅನರ್ಹರು ತಾವು ಹೊಂದಿದ ಬಿ.ಪಿ.ಎಲ್. ಕಾರ್ಡ್‌ಗಳನ್ನು ಸರ್ಕಾರಕ್ಕೆ ಮರಳಿಸಬೇಕು; ಒಂದು ವೇಳೆ ಹಿಂದಿರುಗಿಸದಿದ್ದರೆ, ಅಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಲಾಗುವುದು; ದಂಡವನ್ನು ವಸೂಲಿ ಮಾಡಲಾಗುವುದು ಮತ್ತು ಗಂಭೀರ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಪತ್ರಿಕೆಗಳಲ್ಲಿ ಹೇಳಿಕೆ ಹಾಗೂ ಜಾಹೀರಾತುಗಳನ್ನು ನೀಡಲಾಗಿದೆ. ಇಂತಹ ಕಾರ್ಯಕ್ರಮಗಳನ್ನು ಸರ್ಕಾರವು ರೂಪಿಸುತ್ತಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ಮೊದಲೇ ತಿಳಿಸಿದಂತೆ, ಸರ್ಕಾರವು ನೀಡಿರುವ ಉತ್ತರದಲ್ಲಿ ಅರ್ಧ ಸತ್ಯ ಮಾತ್ರವೇ ಇದೆ. ಕರ್ನಾಟಕ ರಾಜ್ಯ ಮಾತ್ರವಲ್ಲದೇ ದೇಶದ ಇನ್ನಿತರೆ ರಾಜ್ಯಗಳನ್ನು ಪರಿಗಣಿಸಿದಾಗ, ರಾಜ್ಯವೊಂದಲ್ಲಿ ಒಂದು ಲಕ್ಷ ಕೋಟಿಗಿಂತಲೂ ಹೆಚ್ಚಿನ ಅವ್ಯವಹಾರ ನಡೆದಿದ್ದನ್ನು ನಾವು ನೋಡಿದ್ದೇವೆ. ಸರ್ಕಾರವು ಲಿಖಿತ ಉತ್ತರ ಕೊನೆಯ ಭಾಗದಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಕ್ರಮವಾಗಿ ಸಂಗ್ರಹಿಸಿದ ಅಕ್ಕಿ ದಾಸ್ತಾನು 63,637.11 ಎಂದು ತಿಳಿಸಿದೆ. ಇದು ಮೆಟ್ರಿಕ್ ಟನ್ ಅಥವಾ ಟನ್ ಎನ್ನುವ ಪ್ರಮಾಣವು ಗೊತ್ತಾಗಿಲ್ಲ. ಅದರರ್ಥ ಇಷ್ಟು ಪ್ರಮಾಣದಲ್ಲಿ ಅನ್ನಭಾಗ್ಯ ಯೋಜನೆಯಡಿ ವಿತರಿಸಬೇಕಾದ ಆಹಾರ ಧಾನ್ಯಗಳು ಬೇರೆ ಕಡೆಗೆ ಹೋಗಿವೆ. ಇದರಿಂದಾಗಿ ಬಹಳ ದೊಡ್ಡ ಪ್ರಮಾಣದಲ್ಲಿ ಅವ್ಯವಹಾರವು ನಡೆದಿದೆ ಎನ್ನುವುದು ಬಹಳ ಸ್ಪಷ್ಟವಾಗಿ ಗೋಚರಿಸುತ್ತದೆ. ರಾಜ್ಯದ ಬಳ್ಳಾರಿ ಜಿಲ್ಲೆಯಲ್ಲಿ ಅಕ್ರಮ ದಾಸ್ತಾನಿನ ಪ್ರಮಾಣ 13,266.23 ; ಕಲಬುರಗಿ ಜಿಲ್ಲೆಯಲ್ಲಿ 5,832.45 ; ಚಿತ್ರದುರ್ಗ ಜಿಲ್ಲೆಯಲ್ಲಿ 3,172.17 ಗಳಷ್ಟು ಆಗಿರುತ್ತದೆ. ಮಂತ್ರಿಗಳು ಹೊಟ್ಟೆತುಂಬಿದವರಾಗಿದ್ದಾರೆ. ಕೊರೋನಾ ಸಂದರ್ಭದಲ್ಲಿ ಎಲ್ಲರಿಗೂ ಹಂಚಬೇಕೆನ್ನುವ ಉದ್ದೇಶದಿಂದ ಈ ಹಿಂದೆ ನೀಡಲಾಗುತ್ತಿದ್ದ 7 ಕೆ.ಜಿ. ಅಕ್ಕಿಯನ್ನು 5 ಕೆ.ಜಿ.ಗಳಿಗೆ ಇಳಿಸಲಾಗಿರುವುದಾಗಿ ಮಂತ್ರಿಗಳು ತಿಳಿಸಿದ್ದಾರೆ. ಕೊರೋನಾ ವಿರುದ್ಧ ಹೋರಾಟ ಮಾಡುವಲ್ಲಿ ನಮ್ಮ ರಾಜ್ಯವು ಇಡೀ ರಾಷ್ಟ್ರದಲ್ಲಿಯೇ ಬಹಳ ಹೆಸರುವಾಸಿಯಾಗಿದೆ ಎಂದು ಮತ್ತೊಂದೆಡೆ ಮುಖ್ಯಮಂತ್ರಿಗಳು ತಿಳಿಸುತ್ತಾರೆ. ಕೊರೋನಾ ಸಂದರ್ಭದಲ್ಲಿ ಸಾಹುಕಾರ ಮತ್ತು ಬಡವರು ಎಲ್ಲರೂ ಒಂದೇ ಸಾಲಿಗೆ ಬಂದುಬಿಟ್ಟರು. **'ಏಕ್ ಹೀ ಸಫ್ ಮೇ ಖಡೆ ಹೋಗಯೇ ; ಮೆಹಮೂದ್ ಔರ್-ವೋ ಆಯಾಜ್ ; ನ ಕೋಯಿ ಬಂದಾ ರಹಾ ಔರ್ ನ ಕೋಯಿ ಬಂದಾ-ನವಾಜ್'** ಎನ್ನುವ ಹಿಂದಿ ನಾಣ್ಣುಡಿಯಂತೆ ಪರಿಸ್ಥಿತಿಯಾಯಿತು. ಎಲ್ಲರೂ ಒಂದೇ ಸಾಲಿಗೆ ಬಂದರು. ವಾಸ್ತವಾಂಶದಲ್ಲಿ ಕೊರೋನಾ ಸಂದರ್ಭದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ವಿತರಿಸಬೇಕಾಗಿತ್ತು. ಆದರೆ ಯಾವ ಕಾರಣಕ್ಕಾಗಿ ಕೊಡುತ್ತಿದ್ದ ಪ್ರಮಾಣವನ್ನು ಕಡಿಮೆ ಮಾಡಲಾಯಿತು? ಇವರದ್ದು 'ತುಘಲಕ್ ದರ್ಬಾರ್' ನಂತೆ ಕಾಣುತ್ತಿದೆ. ರಾಜ್ಯದ ಒಟ್ಟಾರೆ ಅಕ್ರಮ ದಾಸ್ತಾನಿನ ಪ್ರಮಾಣ 63,637.11 ಎಂದು ಸರ್ಕಾರವು ಲಿಖಿತ ಉತ್ತರದಲ್ಲಿ ತಿಳಿಸಿದೆ. ಇದು ಟನ್ ಅಥವಾ ಮೆಟ್ರಿಕ್‌ಟನ್ನ ಎನ್ನುವುದು ನನಗೆ ತಿಳಿದಿಲ್ಲ. ಸರ್ಕಾರವು ಈ ವಿಚಾರದಲ್ಲಿ ಸಂಪೂರ್ಣವಾದ ತನಿಖೆಯನ್ನು ನಡೆಸಿ, ಸತ್ಯಾಂಶಗಳನ್ನು ಹೊರಗೆಡೆ ತರಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಆಗ್ರಹಿಸುತ್ತೇನೆ.

**ಶ್ರೀ ಉಮೇಶ ವಿ.ಕತ್ತಿ:-** ಮಾನ್ಯ ಸಭಾಪತಿಯವರೇ, ಈ ಹಿಂದೆ ನೀಡಲಾಗುತ್ತಿದ್ದ ಅಕ್ಕಿಯ ಪ್ರಮಾಣವನ್ನು ಕೊರೋನಾ ಸಂದರ್ಭದಲ್ಲಿ ಯಾವ ಕಾರಣಕ್ಕಾಗಿ ಕಡಿಮೆ ಮಾಡಲಾಯಿತು ಎಂಬುದರ ಬಗ್ಗೆ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ರಾಜ್ಯದಲ್ಲಿನ ಅಕ್ಕಿಯನ್ನು ಸರಿಯಾಗಿ ಬಡವರಿಗೆ ಹಂಚಿಕೆ ಮಾಡಬೇಕೆನ್ನುವ ಉದ್ದೇಶದಿಂದ ಈ ಹಿಂದೆ ಕೊಡಲಾಗುತ್ತಿದ್ದ ಅಕ್ಕಿಯ ಪ್ರಮಾಣವನ್ನು ಕಡಿಮೆ ಮಾಡಲಾಯಿತು ಮತ್ತು ಅದನ್ನು ಬಡತನ ರೇಖೆಗಿಂತ ಕೆಳಗಿರುವವರಿಗೆ ಹಂಚಿಕೆ ಮಾಡಲಾಯಿತು. ಇದಲ್ಲದೇ ಕೇಂದ್ರ ಸರ್ಕಾರವೂ ಸಹ 10 ಕೆ.ಜಿ.ಯಷ್ಟು ಅಕ್ಕಿಯನ್ನು ಪುಕ್ಕಟೆಯಾಗಿ ವಿತರಿಸಿದೆ. ಒಟ್ಟಾರೆಯಾಗಿ ರಾಜ್ಯದಲ್ಲಿನ ಬಡವರ ಹೊಟ್ಟೆಗೆ ತೊಂದರೆಯಾಗಬಾರದು; ಯಾವುದೇ ರೀತಿಯ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನ್ಯಾಯವಾಗಬಾರದು ಎನ್ನುವ ದೃಷ್ಟಿಯಿಂದ ಈ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು. ಇದರ ಹೊರತಾಗಿ 63,000 ಟನ್ ಅಕ್ಕಿ . . .

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಲಿಖಿತ ಉತ್ತರದಲ್ಲಿ ಟನ್ ಅಥವಾ ಮೆಟ್ರಿಕ್ ಟನ್ ಎಂದು ಸರ್ಕಾರವು ಸ್ಪಷ್ಟವಾಗಿ ತಿಳಿಸಿಲ್ಲ. ಕೇವಲ ಅಂಕಿ ಅಂಶಗಳನ್ನು ಮಾತ್ರವೇ ನೀಡಿದೆ.

**ಶ್ರೀ ಉಮೇಶ ಪಿ.ಕತ್ತಿ:–** ಮಾನ್ಯ ಸಭಾಪತಿಯವರೇ, 63,000 ಕ್ವಿಂಟಾಲ್ ಪ್ರಮಾಣದಷ್ಟು ಅಕ್ರಮ ದಾಸ್ತಾನು ಅಕ್ಕಿಯನ್ನು ವಶಪಡಿಸಿಕೊಳ್ಳಲಾಗಿದ್ದು, ಅದನ್ನು ಪಡಿತರ ಚೀಟಿಗಳ ಮುಖೇನ ವಿತರಣೆಯನ್ನೂ ಸಹ ಮಾಡಲಾಗಿದೆ. ಅಕ್ರಮ ದಾಸ್ತಾನುದಾರರ, ನ್ಯಾಯಬೆಲೆ ಅಂಗಡಿ ಮಾಲೀಕ ಮತ್ತು ಸರ್ಕಾರಿ ಅಧಿಕಾರಿ/ನೌಕರರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ತಪ್ಪಿತಸ್ಥರಿಂದ ದಂಡವನ್ನೂ ಸಹ ವಸೂಲಿ ಮಾಡಲಾಗಿದೆ. ಈ ರೀತಿಯ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

**(ಮುಂದು)**

**(317)/9–3–2021/12–10/ಎಲ್‌ಎಂ/ಬಿಎನ್‌ಎಸ್**

**ಶ್ರೀ ಉಮೇಶ್ ಕತ್ತಿ(ಮುಂದು):–**

63 ಲಕ್ಷ ಟನ್ ಎಂದು ಹೇಳಿರುವುದು ತಪ್ಪಾಗಿರಬಹುದು.

**ಶ್ರೀ ಬಿ.ಕೆ.ಹರಿಪ್ರಸಾದ್:–** 63 ಲಕ್ಷ ಎಂದು ನಾನು ಹೇಳಲಿಲ್ಲ. 63,000 ಮೆಟ್ರಿಕ್ ಟನ್ ಎಂದು ಹೇಳುತ್ತಿದ್ದೀರೊ ಅಥವಾ ಟನ್ ಎಂದು ಹೇಳುತ್ತಿದ್ದೀರೊ. ತಾವು ಕ್ವಿಂಟಾಲ್ ಎಂದು ಹೇಳುತ್ತಿದ್ದೀರಿ. ಲಕ್ಷ ಟನ್ ಎಂದು ನಾವು ಎಲ್ಲಿಯು ಹೇಳಿರುವುದಿಲ್ಲ. ಲಕ್ಷ– ಟನ್ ಎಲ್ಲಾ ನಿಮಗೆ ಬಿಟ್ಟಿದ್ದೇವೆ. ನಾವು ಇನ್ನು ಕ್ವಿಂಟಾಲ್‌ನಲ್ಲಿಯೇ ಇರುವವರು.

**ಸಭಾಪತಿಯವರು:–** ತಪ್ಪು ಮಾಹಿತಿಯಾಗಿದೆ ಎಂದು ಮಂತ್ರಿಗಳು ಹೇಳಿದ್ದಾರೆ.

**ಶ್ರೀ ಉಮೇಶ್.ವಿ. ಕತ್ತಿ:–** ಮಾನ್ಯ ಸಭಾಪತಿಗಳೆ, ಮರುವಿತರಣೆ ಮಾಡುವ ವ್ಯವಸ್ಥೆ ಮಾಡಿದ್ದೇವೆ. ಉಳಿದ ಅಧಿಕಾರಿಗಳು, ದಾಸ್ತಾನುದಾರರ ಮತ್ತು ವಿತರಕರ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಸರಿಯಾದ ರೀತಿಯಲ್ಲಿ ವಿತರಣೆ ಮಾಡುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ **ಬಿ.ಕೆ.ಹರಿಪ್ರಸಾದ್**:- ಮಾನ್ಯ ಸಭಾಪತಿಗಳೆ, ಇದು ಬಹಳ ಗಂಭೀರವಾದ ವಿಚಾರ ಆದ್ದರಿಂದ ದಯಮಾಡಿ ಇದರ ಬಗ್ಗೆ ಚರ್ಚೆ ಮಾಡಲು ಅರ್ಧ ಗಂಟೆ ಕಾಲಾವಧಿಯಲ್ಲಿ ಅವಕಾಶ ಮಾಡಿ ಕೊಡಬೇಕಾಗಿ ವಿನಂತಿ.

**ಸಭಾಪತಿಯವರು**:- ನೋಟಿಸ್ ಕಳುಹಿಸಿ ಕೊಡಿ.

**ಶ್ರೀ ಸಿ.ಎಂ.ಇಬ್ರಾಹಿಂ**:- ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಯಲ್ಲಿ ತೆಗೆದುಕೊಳ್ಳಿ ಎಂದು ನಾನು ಆಗಲೇ ಹೇಳಿದೆ.

**ಸಭಾಪತಿಯವರು**:- ತಾವು ಬುದ್ಧಿವಂತರೆಂದು ಅವರಿಗೆ ಮೊದಲೆ ಗೊತ್ತಿದೆ. ಅದಕ್ಕೆ ಅವರು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 817**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.:–** ಮಾನ್ಯ ಸಭಾಪತಿಗಳೆ, ಸರ್ಕಾರದಿಂದ ಉತ್ತರವನ್ನು ಒದಗಿಸಿದ್ದಾರೆ. ಮಡಿಕೇರಿ ನಗರದಲ್ಲಿ ಎಷ್ಟು ಪಾರ್ಕ್‌ಗಳು ಇವೆ ಎನ್ನುವ ನನ್ನ ಪ್ರಶ್ನೆಗೆ ಸುಮಾರು 15 ಪಾರ್ಕ್‌ಗಳಿವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ತಮ್ಮ ಮುಖಾಂತರ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದು, ಕೊಡುಗು ಜಿಲ್ಲೆಯ ಜನರು ಜೀವನ ನಡೆಸಲು ಇಂದು ಪ್ರವಾಸೋದ್ಯಮವನ್ನೇ ಅವಲಂಬಿಸಬೇಕಾಗಿದೆ. ಏಕೆಂದರೆ ತೋಟದ ಕೆಲಸ ಮಾಡಲು ಆಗುವುದಿಲ್ಲ. ಏಕೆಂದರೆ ನಿನ್ನೆಯೂ ಸಹ ಹುಲಿ ದಾಳಿ ಮಾಡಿ ಇಬ್ಬರ ಬಲಿ ತೆಗೆದುಕೊಂಡಿದೆ. ಪ್ರವಾಸೋದ್ಯಮದಿಂದ ಸರ್ಕಾರದ ಬೊಕ್ಕಸಕ್ಕೂ ಹಣ ಬರುತ್ತದೆ. ಹೋಟೆಲ್ ಉದ್ಯಮ ಬೆಳೆಯುತ್ತದೆ, ಪೆಟ್ರೋಲ್ ಬಂಕ್‌ನಲ್ಲಿ ವ್ಯವಹಾರ ಜಾಸ್ತಿಯಾಗುತ್ತದೆ, ಬ್ರ್ಯಾಂಡ್ ಶಾಪ್‌ಗಳಿಂದ, ಬಾರ್‌ಗಳಿಂದ ಆದಾಯ ಬರುತ್ತದೆ. ಆದರೆ ನಮ್ಮಲ್ಲಿ ಇರುವ 15 ಪಾರ್ಕ್‌ಗಳು ಕಾಡು ಪಾಲಾಗಿವೆ. ಅವುಗಳನ್ನು ಸರಿಯಾದ ರೀತಿಯಲ್ಲಿ ಇಟ್ಟಿರುವುದಿಲ್ಲ. ಬರುವ ಪ್ರವಾಸಿಗರು ಪಾರ್ಕ್‌ನಲ್ಲಿ ಕೂಡುತ್ತಾರೆ. ಹೀಗಾಗಿ ಆ ಪಾರ್ಕ್‌ಗಳು ಕ್ಲೀನ್ ಆಗಿರಬೇಕಾಗುತ್ತದೆ. ಪ್ರವಾಸಿಗರು ಬಂದರೆ ಮಾತ್ರ ನಮ್ಮ ಜಿಲ್ಲೆಯಲ್ಲಿ ಜನರು ಬದುಕಲು ಸಾಧ್ಯ.  ಕಾಫಿ ತೋಟಗಳಿಂದ ಇಂದು ಬದುಕಲು ಆಗುವುದಿಲ್ಲ. ಏಕೆಂದರೆ ಕಾಫಿ ಬೆಳೆಗೆ 10 ವರ್ಷದ ಹಿಂದೆ ಇದ್ದ ಬೆಲೆಯೇ ಇವತ್ತು ಇದೆ.  ಇದು ಅಲ್ಲದೆ ಆನೆ ದಾಳಿಯಿಂದ, ಹುಲಿ ದಾಳಿಯಿಂದ ನಾವು ಹೆದರಿಕೊಂಡಿದ್ದೇವೆ. ಹೀಗಾಗಿ ಇರುವ ಪಾರ್ಕ್‌ಗಳನ್ನು ಸರಿಯಾದ ರೀತಿಯಲ್ಲಿ ಇಡಬೇಕು. ಮಾನ್ಯ ಸಚಿವರು ಕೊಡಗು ಜಿಲ್ಲೆಗೆ ಭೇಟಿ ಕೊಟ್ಟು ಆ ಪಾರ್ಕ್‌ಗಳನ್ನು ವೀಕ್ಷಿಸಿ ಅವುಗಳನ್ನು ಸರಿಯಾದ ರೀತಿಯಲ್ಲಿ ಇಡಲು ವ್ಯವಸ್ಥೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎನ್.ನಾಗರಾಜ್ ಎಂಟಿಬಿ:–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ, 15 ಪಾರ್ಕ್‌ಗಳ ಬಗ್ಗೆ ವಿವರಣೆಯನ್ನು ಉತ್ತರದಲ್ಲಿ ಕೊಟ್ಟಿದೇವೆ. ಇಲ್ಲಿ ಒಂದು ಎಕರೆ ಹತ್ತು ಗಂಟೆ, 8 ಎಕರೆ ಹತ್ತು 4 ಎಕರೆಯ ಮೂರು ದೊಡ್ಡ ಪಾರ್ಕ್‌ಗಳು ಇವೆ. ಇವುಗಳು ಈಗ ಚಾಲನೆಯಲ್ಲಿವೆ. ಇವು ಅಲ್ಲದೆ 9.2 ಸೆಂಟ್ಸ್, 4 ಸೆಂಟ್ಸ್ ಮತ್ತು 3 ಸೆಂಟ್ಸ್ ಈ ರೀತಿಯ 12 ಪಾರ್ಕ್‌ಗಳು ಇವೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇವೆ. ಇವುಗಳ ಅಭಿವೃದ್ಧಿಗಾಗಿ ಅನುದಾನವನ್ನು ಕೇಳಿದ್ದಾರೆ. ಮಡಿಕೇರಿ ನಗರಸಭೆ ವ್ಯಾಪ್ತಿಯಲ್ಲಿ 2015–16ನೇ ಸಾಲಿನಿಂದ 2019–20ನೇ ಸಾಲಿನವರೆಗೆ 14ನೇ ಹಣಕಾಸು ಆಯೋಗದ ಅನುದಾನದಡಿ  35.71 ಲಕ್ಷ ರೂ.ಗಳ ಅನುದಾನವನ್ನು ಉದ್ಯಾನವನಗಳ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭಿವೃದ್ಧಿಗಾಗಿ ನಿಗದಿಪಡಸಿಕೊಂಡು ವೆಚ್ಚ ಮಾಡಲಾಗಿದೆ. ಇದು ಅಲ್ಲದೆ 15ನೇ ಹಣಕಾಸು ಆಯೋಗದ ಅನುದಾನದಡಿ 2020-21ನೇ ಸಾಲಿನಲ್ಲಿ ಹಂಚಿಕೆಯಾದ ಒಟ್ಟು ಮೊತ್ತದ ಶೇಕಡ 50 ರಷ್ಟರ ಮುಕ್ತ ಅನುದಾನದಡಿ 20.00 ಲಕ್ಷ ರೂ.ಗಳನ್ನು ಉದ್ಯಾನವನ ಅಭಿವೃದ್ಧಿಗಾಗಿ ಮೀಸಲಿರಿಸಲಾಗಿದೆ. ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸ್ವಂತ ಸಂಪನ್ಮೂಲಗಳಿಂದ, ತೆರಿಗೆ ಹಣದಿಂದ ಉದ್ಯಾನಗಳನ್ನು ನಿರ್ವಹಣೆ ಮಾಡಲು ಅವಕಾಶವಿದೆ. ಸರ್ಕಾರ ಕೊಟ್ಟಿರುವ ಅನುದಾನದಲ್ಲಿ 15 ರಿಂದ 20% ಹಣವನ್ನು ಉದ್ಯಾನವನಗಳ ನಿರ್ವಹಣೆಗೆ ಖರ್ಚು ಮಾಡಲು ಕಾನೂನಿನಲ್ಲಿ ಅವಕಾಶವಿದೆ. ಉದ್ಯಾನವನಗಳ ಅಭಿವೃದ್ಧಿಯಾಗಬೇಕಾದರೆ ಏನು ಮಾಡಬೇಕು ಎನ್ನುವುದನ್ನು ತಿಳಿದುಕೊಳ್ಳಬೇಕಾದರೆ ಒಂದು ಸಾರಿ ಕೊಡಗು ಜಿಲ್ಲೆಗ ಭೇಟಿ ಕೊಟ್ಟು ಉದ್ಯಾನವನಗಳನ್ನು ವಿಕ್ಷೀಸಬೇಕೆಂದು ಮಾನ್ಯ ಸದಸ್ಯರು ಕೇಳಿಕೊಂಡಿದ್ದಾರೆ. ಒಂದು ಬಾರಿ ಮಾನ್ಯ ಸದಸ್ಯರ ಜೊತೆಯಲ್ಲಿ ಆ ಉದ್ಯಾನವನಗಳಿಗೆ ಭೇಟಿ ಕೊಟ್ಟು ಅವುಗಳನ್ನು ಅಭಿವೃದ್ಧಿಪಡಿಸಲು ಏನು ಕ್ರಮ ತೆಗೆದುಕೊಳ್ಳಬೇಕು ತೆಗೆದುಕೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಪ್ರಶ್ನೆ ಸಂಖ್ಯೆ: 813

## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಗಳೆ, ಸರ್ಕಾರದ ಉತ್ತರವನ್ನು ನೋಡಿ ಬಹಳ ನೋವಾಗಿದೆ. ಮೈಸೂರು ಸಕ್ಕರೆ ಕಾರ್ಖಾನೆಗೆ ಈ ರಾಜ್ಯದಲ್ಲಿ ಉಜ್ವಲವಾದ ಮತ್ತು ಒಂದು ಶತಮಾನದ ಇತಿಹಾಸವಿದೆ. ನಮ್ಮ ಜಿಲ್ಲೆಯ ಮಗನಾದ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ. ಮೊದಲನೆಯ ಬಜೆಟ್ ಸಮಯದಲ್ಲಿ ನಾನು ಮಾತನಾಡುವಾಗ ಈ ಸಕ್ಕರೆ ಕಾರ್ಖಾನೆಯಲ್ಲಿ ಹೊಸ ಮಿಲ್ ಹಾಕಿದ್ದಾರೆ, ಕೋಜನ್ ಇದೆ, ಡಿಸ್ಟಿಲರಿ ಇದೆ. ಯಥನಾಲ್ ಘಟಕ ಇದೆ. ಅದನ್ನು ರನ್ ಮಾಡಲು ಕೇವಲ 10 ರಿಂದ 12 ಕೋಟಿ ರೂಪಾಯಿಗಳಷ್ಟೆ ಬೇಕು. 2015-16 ಮತ್ತು 2016-17ನೇ ಹಂಗಾಮುಗಳಲ್ಲಿ ಕಬ್ಬು ನುರಿಸುವಿಕೆಯನ್ನು ಸ್ಥಗಿತಗೊಳಿಸಿದ್ದು, 2017-18 ಮತ್ತು 2018-19ನೇ ಸಾಲಿನಲ್ಲಿ ಕಬ್ಬು ನುರಿಸಲಾಗಿದೆ. ಮುಂದುವರೆದು 2019-20ನೇ ಸಾಲಿನಲ್ಲಿ ಕಬ್ಬು ನುರಿಸುವಿಕೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈ ವಿಚಾರವಾಗಿ ಮಾನ್ಯ ಮುಖ್ಯಮಂತ್ರಿಗಳು ಕರೆದಿದ್ದ ಸಭೆಗೂ ನಾವು ಹಾಜರಾಗಿದ್ದೇವೆ. ಸಾವಿರಾರು ಕೋಟಿ ರೂಪಾಯಿಗಳ ಆಸ್ತಿ ಈ ಕಾರ್ಖಾನೆಯಲ್ಲಿದೆ. ಬೆಂಗಳೂರಿನಲ್ಲಿ, ಮಂಡ್ಯ ಜಿಲ್ಲೆಯಲ್ಲಿ ಮತ್ತು ಅದರ ಜಮೀನು ಸೇರಿ ಸಾವಿರಾರು ಕೋಟಿ ರೂಪಾಯಿಗಳ ಆಸ್ತಿ ಈ ಕಾರ್ಖಾನೆಯಲ್ಲಿ ಇದೆ. ಹೀಗೆ ಇರುವಾಗ 40 ವರ್ಷಗಳಿಗೆ ಲೀಸ್ ಕೊಡಲು ಸಿದ್ಧತೆಯನ್ನು ಮಾಡಿಕೊಳ್ಳಲು ತೀರ್ಮಾನವಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಒಂದು ಕಾರ್ಖಾನೆಯನ್ನು ಸರ್ಕಾರ ತನ್ನ ಜವಾಬ್ದಾರಿಯಲ್ಲಿ ನಡೆಸಲಿಲ್ಲ ಎಂದರೆ, ಇಡೀ ಸಕ್ಕರೆ ಕಾರ್ಖಾನೆಗಳ ಲಾಬಿಯನ್ನು ಹತೋಟಿಯಲ್ಲಿಡುವುದು ಹೇಗೆ? ಸರ್ಕಾರ ಮೊದಲು ಅನುಷ್ಠಾನಕ್ಕೆ ತಂದಿರುವುದೆ 'ಮೈ ಶುಗರ್ ಕಂಪನಿ'. ಉಳಿದವರು ಅದನ್ನು ಅನುಸರಿಸುತ್ತಿದ್ದರು. ಈಗ ಈ ಕಂಪನಿಯನ್ನು 5 ವರ್ಷವಲ್ಲ 10 ವರ್ಷವಲ್ಲ 40 ವರ್ಷಗಳಿಗೆ ಲೀಸ್ ಕೊಡಲು ಸರ್ಕಾರ ತೀರ್ಮಾನ ಮಾಡಿದೆ. ಔ ಚಿಟಿಜ ಒ (ಔಠಿಜಡಿಚಿಣಐಂಟಿ ಚಿಟಿಜ ಟಚಿಟಿಚಿರಿಜಟಿಚಿಟಿಛಿಜ) ಅನ್ನು ಮಾತ್ರ ಕೊಡೋಣ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅಂದರೆ, ಆಡಳಿತದ ಜವಾಬ್ದಾರಿ ಸರ್ಕಾರದ ಕೈಯಲ್ಲಿ ಇರುತ್ತದೆ. ಕಬ್ಬು ನುರಿಸುವುದನ್ನು ಮಾತ್ರ ಖಾಸಗಿಯವರಿಗೆ ಕೊಡೋಣ ಎಂದು ಹೇಳಿದರು. ಆದರೆ ಈಗ ಇಡೀ ಕಾರ್ಖಾನೆಯನ್ನು ಒಂದು ತಲೆಮಾರಿಗೆ ಅಂದರೆ ಇಡೀ 40 ವರ್ಷಗಳ ಕಾಲ ಖಾಸಗಿಯವರು ನಡೆಸಲು ಕೊಡುವುದಾದರೆ ಅಲ್ಲಿ ಇರುವ ಸಾವಿರಾರು ಕೋಟಿ ರೂಪಾಯಿಗಳ ಆಸ್ತಿ ವಿಚಾರವೇನು? ಮತ್ತು ಮಂಡ್ಯ ಜಿಲ್ಲೆಯ ಜನರ ಬದುಕು ಈ ಕಾರ್ಖಾನೆಯ ಮೇಲೆ ನಿಂತಿದೆ. ಇದರ ಕುರಿತು ದೊಡ್ಡ ಹೋರಾಟಗಳು ನಡೆದಿವೆ. ಮಾನ್ಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿ.ಮಾದೇಗೌಡರಂತಹವರೂ ಇವತ್ತು ಬೀದಿಗೆ ಬಿದ್ದಿದ್ದಾರೆ. ಇಲ್ಲಿ ಇವತ್ತು ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, ಅವರಲ್ಲಿ ಪ್ರಾಮಾಣಿಕತೆ ಇದೆ, ಇದರ ಬಗ್ಗೆ ಕಾಳಜಿ ಇದೆ, ಜಿಲ್ಲೆಯ ಮಗನಾಗಿ ಒಂದು ಸಕ್ಕರೆ ಕಾರ್ಖಾನೆಯನ್ನು ಉಳಿಸಿಕೊಳ್ಳದೆ ಹೋದರೆ ನಮ್ಮ ಜಿಲ್ಲೆಯ ಜನರಿಗೆ ಮುಖ ತೋರಿಸುವುದು ಹೇಗೆ? ಈ ಕಾರ್ಖಾನೆಯನ್ನು ಸರ್ಕಾರದ ಜವಾಬ್ದಾರಿಯಲ್ಲಿಯೇ ನಡೆಸಬೇಕು. ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.

**ಶ್ರೀ ಎನ್.ನಾಗರಾಜ್ ಎಂಟಿಬಿ:–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಒಳ್ಳೆಯ ಪ್ರಶ್ನೆಯನ್ನು ಎತ್ತಿದ್ದಾರೆ. 1933ರಲ್ಲಿ ಈ ಕಾರ್ಖಾನೆ ಸ್ಥಾಪನೆಯಾಗಿದೆ. ಸ್ವಾತಂತ್ರ್ಯ ಪೂರ್ವ ಮಹಾರಾಜರ ಕಾಲದಲ್ಲಿ ಸ್ಥಾಪನೆಯಾಗಿದೆ. 500 ಟಿಸಿಡಿ ಕಬ್ಬು ನುರಿಸುವ ಸಾಮರ್ಥ್ಯ, 30 ಮೆಗಾವ್ಯಾಟ್ ಕೋಜನ್ ಉತ್ಪಾದಿಸುವ ಘಟಕ ಮತ್ತು 26 ಏಐಕಳ ಸಾಮರ್ಥ್ಯದ ಝುಣುಟಟಜಡಿಥಿ ಯನ್ನು ಈ ಕಾರ್ಖಾನೆ ಹೊಂದಿದೆ. ಉತ್ತರದಲ್ಲಿ ಎಲ್ಲ ಮಾಹಿತಿಯನ್ನು ಕೊಟ್ಟಿದ್ದೇವೆ. 2005ರಿಂದ 2021ರ ವರೆಗೆ ಆ ಕಾರ್ಖಾನೆಗೆ ಹಿಂದಿನ ಸರ್ಕಾರಗಳಿಂದ ಸುಮಾರು 529 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಲಾಗಿದೆ. ಆದರೂ ಕೂಡಾ ಆ ಕಾರ್ಖಾನೆ ನಷ್ಟದಲ್ಲಿಯೇ ಇದೆ. ಇಲ್ಲಿಯವರೆಗೆ ಆದ ನಷ್ಟದ ಅಂದಾಜು ಇನ್ನು ಹೆಚ್ಚಾಗುವ ಸಂಭವವಿದೆ. ಇನ್ನು 5 ವರ್ಷದ ಆಡಿಟ್ ಆಗಿರುವುದಿಲ್ಲ. 5 ವರ್ಷದ ಆಡಿಟ್ ಆದ ಮೇಲೆ ಇನ್ನು ಎಷ್ಟು ನಷ್ಟದಲ್ಲಿದೆ ಎನ್ನುವ ಸರಿಯಾದ ಉತ್ತರ ಸಿಗಬಹುದು. ಎಲ್ಲಾ ಸರ್ಕಾರಗಳ ಅವಧಿಯಲ್ಲಿಯು ಈ ಕಾರ್ಖಾನೆಗೆ ಅನುದಾನವನ್ನು ಕೊಟ್ಟಿದ್ದಾರೆ. ಸುಮಾರು ಎರಡುವರೆ ವರ್ಷಗಳಿಂದ ಆ ಕಾರ್ಖಾನೆ ಸ್ಥಗಿತಗೊಂಡಿದೆ. ಈಗ 40 ವರ್ಷಗಳಿಗೆ ಲೀಸ್ ಕೊಡಬೇಕೆಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿದೆ. ಕಾರ್ಖಾನೆ ಸ್ಥಾಪಿತವಾಗಿರುವ 155 ಎಕರೆ ಪೈಕಿ 87 ಎಕರೆಯನ್ನು ಮಾತ್ರ ಲೀಸ್‌ಗೆ ನೀಡಲಾಗುತ್ತದೆ. ಮುಂದಿನ 10 ವರ್ಷಗಳಲ್ಲಿ ಲೀಸ್ ಪಡೆದಿರುವ ಸದರಿ ಕಾರ್ಖಾನೆಯು ಕೂಡ ಕಬ್ಬನ್ನು ನುರಿಸುವ ಕ್ಷಮತೆಯನ್ನು 5,000 ದಿಂದ 7,000 ಟಿಸಿಡಿಗೆ ಏರಿಸಲಾಗುತ್ತದೆ. ಪ್ರಸಕ್ತ ವರ್ಷ ನವೆಂಬರ್‌ನಲ್ಲಿ ಪ್ರಾರಂಭವಾಗಬೇಕೆಂದು ಸರ್ಕಾರ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡಿದೆ. 40 ವರ್ಷದ ಲೀಸ್‌ಗೆ ನಾವು ಇಲಾಖೆಯಿಂದ ಅಪ್ರೂವಲ್ ಕೊಟ್ಟಿದ್ದೇವೆ. ಇದಕ್ಕೆ 100 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಒದಗಿಸಬೇಕೆಂದು ಕೇಳಿದ್ದೇವೆ. ಅಲ್ಲಿ 30 ಕೋಟಿ ರೂಪಾಯಿಗಳಷ್ಟು ಖಟಿಛಿಡಿಟಜ ಖಿಚಿಥ ಬಾಕಿ ಇದೆ, 27 ಕೋಟಿ ರೂಪಾಯಿಗಳಷ್ಟು ಪವರ್ ಬಿಲ್ ಕಟ್ಟುವುದು ಬಾಕಿ ಇದೆ, ಅಲ್ಲಿಯ 24 ಜನರು ನಿವೃತ್ತರಾಗಿದ್ದಾರೆ ಅವರಿಗೆ ಕೊಡುವ ಹಣ 8 ಕೋಟಿ ರೂಪಾಯಿಗಳು ಬಾಕಿ ಇದೆ. ಒಟ್ಟಾರೆ ಈ ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕಾದರೆ 70 ರಿಂದ 75 ಕೋಟಿ ರೂಪಾಯಿಗಳನ್ನು ಖರ್ಚು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕಾಗಿದೆ. ಎಲ್ಲಾ ಬಾಕಿ ಬಿಲ್‌ಗಳನ್ನು ಪಾವತಿ ಮಾಡಬೇಕು. ಈಗ ಈ ಕಾರ್ಖಾನೆ ಇರುವ ಪರಿಸ್ಥಿತಿ ನೋಡಿದರೆ ಇದನ್ನು ಪ್ರಾರಂಭ ಮಾಡಿ ಕಬ್ಬನು ನುರಿಸಬೇಕಾದರೆ ಇನ್ನು 100 ರಿಂದ 150 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇದೆಲ್ಲವನ್ನು ಸರ್ಕಾರ ಗಮನಿಸಿದೆ. ಈ ಕಾರ್ಖಾನೆಯಿಂದ ಈಗಾಗಲೇ ನೂರಾರು ಕೋಟಿ ರೂಪಾಯಿಗಳ ನಷ್ಟವಾಗಿದೆ. ಅಲ್ಲಿ ಇರುವಂತಹ ಆಡಳಿತ ಮಂಡಳಿ ಸರಿಯಾದ ರೀತಿಯಲ್ಲಿ ಕಾರ್ಖಾನೆಯನ್ನು ನಡೆಸಲಿಲ್ಲ ಎನ್ನುವ ಕಾರಣಕ್ಕೆ ಸರ್ಕಾರ ಇವತ್ತು ಈ ತೀರ್ಮಾನವನ್ನು ತೆಗೆದುಕೊಂಡಿದೆ.

**(ಮುಂದು)**

**(318)09-03-2021(12-20)ಬಿಎಸ್‌ಡಿ-ಜಿಆರ್**

**ಶ್ರೀ ಎನ್.ನಾಗರಾಜ್ ಎಂಟಿಬಿ (ಮುಂದು):**

ಕಾರ್ಖಾನೆ ಸ್ಥಗಿತವಾಗಿರುವುದರಿಂದ ಬಹಳ ರೈತರಿಗೆ transportation ಮಾಡಲು, ಪಕ್ಕದ ಆ Constituency ಯಲ್ಲಿ ಬರುವ ರೈತರಿಗೆ 20-25 Kilometer ವರೆಗೆ transportation ಗೆ ಹೋಗಬೇಕಾಗಿದ್ದು, ಕಬ್ಬು ನುರಿಸುವ ರೈತರಿಗೆ ಬಹಳ ಕಷ್ಟಕರವಾಗಿದೆ. ಸರ್ಕಾರ ಮತ್ತು ನಮ್ಮೆಲ್ಲರ ಉದ್ದೇಶವೂ ಕಾರ್ಖಾನೆ ಬೇಗ ಪ್ರಾರಂಭವಾಗಬೇಕು ಎನ್ನುವುದಾಗಿದೆ. ರೈತರಿಗೆ transportation ನ ಹೆಚ್ಚಿನ ಹೊರೆ ಕಡಿಮೆಯಾಗಬೇಕು ಎಂಬುದು ನಮ್ಮೆಲ್ಲರ ಉದ್ದೇಶವಾಗಿದೆ. ಹಾಗಾಗಿ ಸರ್ಕಾರವು ಈ ತೀರ್ಮಾನವನ್ನು ತೆಗೆದುಕೊಂಡಿದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಹೊಸ ಮಿಲ್ ಹಾಕಿದ್ದಾರೆ, ಹೊಸ ಕಾರ್ಖಾನೆ, ಹೊಸ unit ಅನ್ನು ಹಾಕಿದ್ದಾರೆ. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ರೂ.100 ಕೋಟಿ Budget ಅನ್ನು ಕೊಟ್ಟಿದ್ದರು. ಇನ್ನು ಒಂದು unit ಅನ್ನು 100 ಎಕರೆ ಜಮೀನು ಇರುವ ಕಡೆ ಮಾಡೋಣ ಹಾಗೂ ಸಕ್ಕರೆ ಕಾರ್ಖಾನೆ ಉಳಿಸಿಕೊಳ್ಳೋಣ ಎಂದಿತ್ತು. ಈಗ ಏಕಾಏಕಿ ಸರ್ಕಾರದ ವತಿಯಿಂದ ಆಗುವುದಿಲ್ಲ ಎಂದರೆ ಹೇಗೆ? ಹೊಸ Mill ಅನ್ನು ಹಾಕಿದ್ದಾರೆ, ಖಾಸಗಿಯವರ ಬಂಡವಾಳ ಹಾಕುವಂತಿಲ್ಲ. ಏನಿದ್ದರೂ ಡಿಜಿಟಿಚಿಡಿ, overhaul ಮಾಡುವುದಕ್ಕೆ ಸುಮಾರು ರೂ.10-12 ಕೋಟಿಗಳು ಬೇಕು. ಎಲ್ಲಾ units ಇವೆ, Cogen ಇದೆ. ಅದಕ್ಕೂ ನೂರಾರು ಕೋಟಿ ಬಂಡವಾಳ ಹಾಕಿದ್ದಾರೆ. Distillery ಸಹ ಇದೆ. Ethanol ಇದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Just run ಮಾಡುವುದಕ್ಕೆ, overhaul ಮಾಡುವುದಕ್ಕೆ, ಸಣ್ಣಪುಟ್ಟ repair ಗೆ there is a need for Rs.10 to 12 crores. ಅಷ್ಟೇ. ರೂ.10-12 ಕೋಟಿಗಳಿಗೋಸ್ಕರ 40 ವರ್ಷದ ಸಾವಿರಾರು ಕೋಟಿ ಆಸ್ತಿಯನ್ನು ಖಾಸಗಿಯವರಿಗೆ ಕೊಡುವುದರಲ್ಲಿ ಉದ್ದೇಶ ಏನಿದೆ? ದಯಮಾಡಿ ಈಗ ನೀಡಿರುವ ಉತ್ತರವನ್ನು ವಾಪಸ್ಸು ಪಡೆಯಬೇಕು. ಸರ್ಕಾರ ಜವಾಬ್ದಾರಿಯಿಂದ ಕಾರ್ಖಾನೆ ನಡೆಸಬೇಕು, ಇಲ್ಲದಿದ್ದರೆ ಮಂಡ್ಯ ಭಾಗದ ಜನ ಸುಮ್ಮನೆ ಕುಳಿತುಕೊಳ್ಳುವವರಲ್ಲ. ದೊಡ್ಡ ಹೋರಾಟ ನಡೆಯುತ್ತದೆ. ಮಾನ್ಯ ಸಚಿವರು ಇದಕ್ಕೆ ಬದ್ಧರಿದ್ದಾರೆ ಎಂದುಕೊಂಡಿದ್ದೇನೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಜಿಲ್ಲೆಯ ಮಗನಾಗಿ ಸದನದಲ್ಲಿಯೇ ಇದ್ದಾರೆ. ಒಂದು ಸಣ್ಣ ಸಕ್ಕರೆ ಕಾರ್ಖಾನೆಯನ್ನು ಸರ್ಕಾರದ ಜವಾಬ್ದಾರಿಯಲ್ಲಿ ನಡೆಸಿದ್ದರೆ ಜನರಿಗೆ ಉತ್ತರ ಹೇಳುವುದು ಹೇಗೆ? ಇವತ್ತು ಖಾಸಗಿಯವರು ನಡೆಸಬಹುದು. ಈ ಕಾರ್ಖಾನೆ ಮಧ್ಯೆ ಮಧ್ಯೆ ಆದಾಯವನ್ನು ತಂದುಕೊಟ್ಟಿದೆ. ಒಳ್ಳೆಯ M.D., ಮತ್ತು ಅಧಿಕಾರಿಗಳನ್ನು ಹಾಕಿದ ಸಂದರ್ಭದಲ್ಲಿ ಆದಾಯ ತಂದುಕೊಟ್ಟಿದ್ದು, mismanagement ಆದಾಗ loss ಆಗಿದೆ. ಅದು ಆಡಳಿತ ವೈಫಲ್ಯವಷ್ಟೇ. ಇವತ್ತು ಪಾಂಡವಪುರ ಭಾಗದ ಒಬ್ಬ ರೈತನನ್ನು ಒಬ್ಬ ಖಾಸಗಿ Chairman ಆಗಿ ನೇಮಿಸಿದ್ದಾರೆ. ಒಂದು ಕಡೆ ಖಾಸಗಿ Chairman ಅನ್ನು ಕಾರ್ಖಾನೆ ನಡೆಸಲು ಹೇಳಿ, ಇನ್ನೊಂದು ಕಡೆ tender ಕರೆಯಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ ಎಂದು ಹೇಳುತ್ತಾರೆ. ಇದರ ಅರ್ಥ ಏನು? ಇಡೀ ಖಾಸಗಿ ಸಕ್ಕರೆ ಲಾಬಿಗೆ ಸರ್ಕಾರದವರು ಮಣಿಯುತ್ತಿದ್ದಾರೆಯೇ? ಒಂದು ಸಕ್ಕರೆ ಕಾರ್ಖಾನೆಯನ್ನು ಸರ್ಕಾರದಿಂದ ನಡೆಸಲು ಆಗುವುದಿಲ್ಲ ಎಂದರೆ ಅರ್ಥ ಏನು? ಮಹಾರಾಜರ ಕಾಲದಲ್ಲಿ ಕೋಲ್‌ಮನ್ ಎಂಬ ಒಬ್ಬ ಮನುಷ್ಯ ನಡೆಸಿದಂತಹ ಕಾರ್ಖಾನೆಯಾಗಿದ್ದು, ಮಂಡ್ಯ ಸಕ್ಕರೆ ಕಾರ್ಖಾನೆ ಎಂದರೆ ಇಡೀ ರಾಜ್ಯದಲ್ಲಿಯೇ ಸುದ್ದಿಯಾಗಿದ್ದು, ಇದು ಇಡೀ ಏಷ್ಯಾದಲ್ಲಿಯೇ ಮೊದಲ ಕಾರ್ಖಾನೆಯಾಗಿದೆ. ಅಂತಹ ಸಾವಿರಾರು ಕೋಟಿ ರೂಪಾಯಿಗಳ ಆಸ್ತಿಯನ್ನು ಖಾಸಗಿಯವರಿಗೆ ಕೊಡಲು ಸಂಪೂರ್ಣ ವಿರೋಧ ಇದೆ. ದಯಮಾಡಿ ಉತ್ತರವನ್ನು ವಾಪಸ್ಸು ಪಡೆದು, ಸರ್ಕಾರದ ಜವಾಬ್ದಾರಿಯಲ್ಲಿ ನಡೆಸುವ ಆಶ್ವಾಸನೆಯನ್ನು ರಾಜ್ಯಕ್ಕೆ ಕೊಡಬೇಕೆಂದು ಕೋರುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸಾವಿರಾರು ಕೋಟಿ ರೂಪಾಯಿಗಳ ಆಸ್ತಿಯಾಗಿದ್ದು, ಅದರಲ್ಲಿ ಹೊಸ mill ಹಾಕಿದ್ದಾರೆ. ಅದಕ್ಕೆ cogeneration ಇದೆ. Distillery Unit ಇದೆ. ಸಾವಿರಾರು ಕೋಟಿ ರೂಪಾಯಿಗಳ ಆಸ್ತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವ ಕಾರ್ಖಾನೆಯನ್ನು ಸರ್ಕಾರ ನಡೆಸಬೇಕು, ಆಡಳಿತ ಮಂಡಳಿ ಎಂದರೆ ಸರ್ಕಾರ ಆಗಿದೆ. ಸರ್ಕಾರದ ಮೂಗಿನ ಕೆಳಗೆ ನಡೆಯುವ ಒಂದು ಸಂಸ್ಥೆ. ಈ ಸರ್ಕಾರಿ ಸಂಸ್ಥೆಯನ್ನು ನಡೆಸುವುದಕ್ಕೆ ಆಗಲಿಲ್ಲವೆಂದರೆ ಹೇಗೆ? ಮಾನ್ಯ ಶ್ರೀಕಂಠೇಗೌಡರು ಹೇಳಿದಂತೆ ರೂ.10 ರಿಂದ 12 ಕೋಟಿಗಳನ್ನು invest ಮಾಡಿದರೆ ರೈತರಿಗೆ ಅನುಕೂಲ ಮಾಡಿದಂತೆ ಆಗುತ್ತದೆ. ಆ ಕಾರ್ಖಾನೆಯನ್ನು ಯಾವ ಚುನಾಯಿತ ಸರ್ಕಾರವು ಸ್ಥಾಪಿಸಿಲ್ಲ. ಹಿಂದೆ ಮೈಸೂರು ಮಹಾರಾಜರ ಪುಣ್ಯದಿಂದ ಸ್ಥಾಪಿಸಲ್ಪಟ್ಟಿದ್ದು, ಇವರದ್ದು ಏನೂ ಇಲ್ಲ. ಯಾವ ಚುನಾಯಿತ ಸರ್ಕಾರವು ಒಂದು ರೂಪಾಯಿ ಕೊಟ್ಟಿಲ್ಲ. ಈ ಕಾರ್ಖಾನೆಯನ್ನು ಮಾರುವುದಷ್ಟೇ ಉದ್ದೇಶವಾಗಿದೆಯೇ? ನಾಳೆ ವಿಧಾನ ಸೌಧದಲ್ಲಿ ಏನೋ ತೊಂದರೆ ಆಯಿತು ಎಂದು ಬಾಡಿಗೆಗೆ ಕೊಡುವ ವಿಚಾರ ಬರಬಹುದು ಎಂದನಿಸುತ್ತಿದೆ. ಇಂತಹ blunder mistake ಬೇಡ. ದಯಮಾಡಿ ಸರ್ಕಾರ ಖಾಸಗಿಯವರಿಗೆ lease ಕೊಡುವುದು ಬೇಡ. ಮಾನ್ಯ ಮುಖ್ಯಮಂತ್ರಿಯವರು ಸದನಕ್ಕೆ ಇವತ್ತು ಬಂದಿದ್ದು, ಅವರು ಮಂಡ್ಯದ ಮಗನಾಗಿದ್ದೇನೆ ಎಂದು ಹೇಳುತ್ತಾರೆ. ನಮಗೂ ಅವರ ಬಗ್ಗೆ ಅಭಿಮಾನ ಇದೆ. ಅವರು ಬಹಳ ಹೋರಾಟದಿಂದ ಈ ಜಾಗಕ್ಕೆ ಬಂದು ಕುಳಿತಿದ್ದಾರೆ. ಇಂತಹ ಸಾವಿರಾರು ಕೋಟಿ ರೂಪಾಯಿಗಳ ಆಸ್ತಿಯನ್ನು ಖಾಸಗಿಯವರಿಗೆ ಕೊಟ್ಟರೆ ಹೇಗೆ? ಅಂದರೆ ಅವರು ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದಾಯಿತು. ಮಾನ್ಯ ಮುಖ್ಯಮಂತ್ರಿಯವರ ಅವಧಿಯಲ್ಲಿ ಒಂದು ಸಣ್ಣ ಸಕ್ಕರೆ ಕಾರ್ಖಾನೆಯನ್ನು ನಡೆಸಲು ಸಾಧ್ಯವಿಲ್ಲದೇ ಖಾಸಗಿಯವರಿಗೆ ಕೊಡುತ್ತೇವೆ ಎಂದರೆ ಅದೊಂದು ಕಪ್ಪುಚುಕ್ಕೆಯಾಗುತ್ತದೆ. ಅವರ ಮೇಲೆ ನನಗೆ ಬಹಳ ಗೌರವ-ಅಭಿಮಾನ ಇದೆ. ಈ ನಿರ್ಧಾರದಿಂದ ಅವರು ವಿಮುಖವಾಗಬೇಕು. ದಯಮಾಡಿ ಸಕ್ಕರೆ ಕಾರ್ಖಾನೆಯನ್ನು ಖಾಸಗಿಯವರಿಗೆ ಕೊಡುವುದರಿಂದ ದೂರ ಉಳಿಯಬೇಕು. Fortunately, ಸುದೈವದಿಂದ ಮಾನ್ಯ ಮುಖ್ಯಮಂತ್ರಿಯವರು ನಾಡಿನ ಹಿರಿಯರು ಹಾಗೂ ಸಾರ್ವಜನಿಕವಾಗಿ ಬಹಳ ಕಳಕಳಿಯನ್ನು ಹೊಂದಿದವರಾಗಿದ್ದಾರೆ. ಪ್ರತಿಪಕ್ಷದ ಮಾತಿಗೆ ಬಹಳ ಗೌರವ ಕೊಡುತ್ತಾರೆ. ಈ ನಿರ್ಣಯವನ್ನು ತೆಗೆದುಕೊಳ್ಳಬಾರದು, ಇದು ಸರ್ಕಾರಕ್ಕೆ ಕಪ್ಪುಚುಕ್ಕೆ ಎಂದು ಹೇಳಬಯಸುತ್ತೇನೆ. ಅವರು ನಿಶ್ಚಿತವಾಗಿ ಈ ಮಾತಿಗೆ ಗೌರವ ಕೊಡುತ್ತಾರೆ ಎಂದು ಭಾವಿಸುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ಈ ಹಿಂದೆ ನಾನು ಸುಮಾರು ರೂ.200 ಕೋಟಿ ಹಣ ಕೊಟ್ಟು ನಡೆಸುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಅಲ್ಲಿ ಗುಂಪುಗಾರಿಕೆ ಮಾಡಿಕೊಂಡು ಕಾರ್ಖಾನೆ ನಡೆಯಲಿಲ್ಲ ಎಂದು ಇಲ್ಲಿರುವ ಎಲ್ಲರಿಗೂ ಮತ್ತು ಮಂಡ್ಯದವರಿಗೂ ಗೊತ್ತಿದೆ. ಮೂರ್ನಾಲ್ಕು ಬಾರಿ ಸಭೆ ಕರೆದು ಚರ್ಚೆ ಮಾಡಿದ್ದೇನೆ. ಖಾಸಗಿಯವರಿಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡಬೇಕು ಎಂಬ ಉದ್ದೇಶ ನಮಗಿಲ್ಲ, ಆದರೆ ನಾವು ನಡೆಸುವ ಸ್ಥಿತಿಯಲ್ಲಿ ಇಲ್ಲ. ಏಕೆಂದರೆ ಅಲ್ಲಿಯ ಪರಿಸ್ಥಿತಿ ಆ ರೀತಿ ಇದೆ. ಅದಕ್ಕಾಗಿ ಇನ್ನೊಮ್ಮೆ ಎಲ್ಲರನ್ನು ಕರೆದು ಮಾತನಾಡುತ್ತೇನೆ. ಖಾಸಗಿಯವರಿಗೆ ಕೊಡಬೇಕೆಂಬ ಉದ್ದೇಶ ನಮಗಿಲ್ಲ. ಎಲ್ಲರನ್ನು ಕರೆದು ಚರ್ಚೆ ಮಾಡಿದಾಗ ಸಲಹೆಗಳನ್ನು ಕೊಡಲಿ. ಅದರಲ್ಲಿ ಉತ್ತಮವಾದ ಸಲಹೆಗಳನ್ನು ಹಾಗೂ ಆ ಭಾಗದ ಜನರ ಅಭಿಪ್ರಾಯಗಳನ್ನು ತಿಳಿದುಕೊಂಡು ತೀರ್ಮಾನಕ್ಕೆ ಬರೋಣ.

**(ಗೊಂದಲ)**

**ಸಭಾಪತಿಯವರುಃ–** ಮಾನ್ಯ ಮುಖ್ಯಮಂತ್ರಿಯವರು ಸಭೆ ಕರೆದು ಚರ್ಚೆ ಮಾಡಿ ನಂತರ ತೀರ್ಮಾನ ತೆಗೆದುಕೊಳ್ಳುತ್ತಾರೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡಃ–** ಮಾನ್ಯ ಮುಖ್ಯಮಂತ್ರಿಯವರಿಗೆ ನನ್ನ ನಮಸ್ಕಾರಗಳು, ಸರ್ಕಾರದ ಜವಾಬ್ದಾರಿಯಲ್ಲಿಯೇ ನಡೆಸಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ಃ–** ಮಾನ್ಯ ಮುಖ್ಯಮಂತ್ರಿಗಳು ಸಭೆ ಕರೆದು, ಚರ್ಚೆ ಮಾಡಿ, ಆ ಭಾಗದ ಜನರ ಆದ್ಯತೆ ಮತ್ತು ವಿಚಾರಗಳಿಗೆ ಬೆಲೆ ಕೊಟ್ಟು ಖಾಸಗಿಯವರಿಗೆ ಕೊಡುವ ಕೆಲಸಕ್ಕೆ ಕೈಹಾಕಬಾರದು ಎಂದು ಮನವಿ ಮಾಡುತ್ತೇನೆ. ಅವರು ಚರ್ಚೆ ಮಾಡಿ ನಿರ್ಣಯ ಕೈಗೊಳ್ಳುವ ವಿಚಾರವನ್ನು submit ಮಾಡಿರುವುದಕ್ಕೆ ನಾನು ಸ್ವಾಗತ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ; 796**

**ಶ್ರೀ ಬಸವರಾಜ ಪಾಟೀಲ್ ಇಟಗಿಃ–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ಮಾನ್ಯ ನಗರಾಭಿವೃದ್ಧಿ ಸಚಿವರಿಗೆ ಕೇಳಿದ್ದು, ನಾನು ಈ ಉತ್ತರವನ್ನು ಬಹಿಷ್ಕಾರ ಮಾಡುತ್ತೇನೆ. ಕಾರಣವೇನೆಂದರೆ...

**ಸಭಾಪತಿಯವರುಃ–** ಆಯಿತು, Next, ಮಾನ್ಯ ಪ್ರಕಾಶ್ ರಾಥೋಡ್ ಪ್ರಶ್ನೆ ಕೇಳಿ.

**ಶ್ರೀ ಬಸವರಾಜ ಪಾಟೀಲ್ ಇಟಗಿಃ–** ಕಾರಣವನ್ನು ತಿಳಿಸಲು ಮಾತನಾಡುವುದಕ್ಕೆ ಬಿಡಿ.

**ಸಭಾಪತಿಯವರುಃ–** ಹೇಳಿದ್ದೀರಿ, ಬಿಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಪಾಟೀಲ್ ಇಟಗಿಃ-** ಕಾರಣವನ್ನು ಹೇಳಬಾರದೇ?

**(ಗೊಂದಲ)**

**ಸಭಾಪತಿಯವರುಃ-** ತಾವು ಉತ್ತರವನ್ನು ಬಹಿಷ್ಕಾರ ಮಾಡಿರುವ ಬಗ್ಗೆ ತಿಳಿಸಿದಾಗ ನಾನು ಆಯಿತು ಎಂದು ಹೇಳಿದ್ದೇನೆ, ಅಲ್ಲಿಗೆ ವಿಷಯ ಮುಗಿದಿದೆ. ಮುಂದಿನ ಪ್ರಶ್ನೆ ಶ್ರೀ ಪ್ರಕಾಶ್ ರಾಥೋಡ್‌ರವರು ಕೇಳಿ.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿಃ-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರುಃ-** ಯಾವ ವಿಚಾರವೂ ಕಡತಕ್ಕೆ ಹೋಗಬಾರದು. ನಾನು ಅವಕಾಶ ಕೊಡುವುದಿಲ್ಲ. ನಾನು ಹೇಳುವುದನ್ನು ಕೇಳಿ.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿಃ-** ತಾವು ಹೇಳಿದ್ದನ್ನೇ ಕೇಳಬೇಕು, ನಾವು ಹೇಳುವುದಕ್ಕೆ right ಇಲ್ಲ ಎಂದರೆ ಹೇಗೆ?

**ಸಭಾಪತಿಯವರುಃ-** ಇಲ್ಲಿ ನಿಯಮಗಳು ಇದ್ದು, ನಿಯಮಗಳನ್ನು ಪಾಲಿಸಬೇಕು. ನಿಯಮಗಳನ್ನು ಕೇಳುತ್ತೀರಿ, ಆದರೆ ವಾದ ಮಾಡಬೇಡಿ. ವಾದ ಮಾಡತಕ್ಕದ್ದಲ್ಲ. **(ಗೊಂದಲ)** ಪ್ರಶ್ನೆ ಕೇಳುತ್ತೇನೆ ಅಥವಾ ಕೇಳುವುದಿಲ್ಲ ಎಂದು ಹೇಳಿ. ಅದಕ್ಕೆ explanation ಬೇಡ. ಪ್ರಶ್ನೆ ಕೇಳುವುದಿಲ್ಲ ಎಂದಾಗ ಮುಗಿಯಿತು.

**ಶ್ರೀ ಬಸವರಾಜ ಪಾಟೀಲ್ ಇಟಗಿಃ-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರುಃ-** ಮಾನ್ಯ ಇಟಗಿಯವರೇ, ನಾನು allow ಮಾಡುವುದಿಲ್ಲ, ತಾವು ಪ್ರಶ್ನೆ ಕೇಳುವುದಿಲ್ಲ ಎಂದಾಗ ನಾನು ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಪ್ರಕಾಶ್ ರಾಥೋಡ್ ಪ್ರಶ್ನೆ ಕೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರಿಗೆ ಅವಕಾಶ ಕೊಡದಿದ್ದರೆ ನಾವು ಬಾವಿಗೆ ಬರುತ್ತೇವೆ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಬಾವಿಗೆ ಬರಲು ಪ್ರಾರಂಭಿಸಿದರು)**

**ಸಭಾಪತಿಯವರು:–** ಆಯಿತು. ಪ್ರಶ್ನೆ ಕೇಳುವುದಿದ್ದಾಗ ಪ್ರಶ್ನೆ ಕೇಳಬೇಕು. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೇ, ಇದು ಸರಿಯಲ್ಲ. ಏನು ಭಾಷಣ ಮಾಡುತ್ತೀರಾ?

**(ಮುಂದು)**

**(319)/09.03.2021/12.30/ಹೆಚ್‌ವಿ:ಜಿಆರ್**

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಹೇಳುವ ಮಾತನ್ನು ಒಂದು ನಿಮಿಷ ಕೇಳಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಪ್ರಶ್ನೆ ಕೇಳುವುದು ಬಿಡುವುದು ಮಾನ್ಯ ಸದಸ್ಯರ ಹಕ್ಕಾಗಿದೆ. 'ನಾನು ಪ್ರಶ್ನೆ ಕೇಳುವ ಇಚ್ಛೆಯನ್ನು ವ್ಯಕ್ತಪಡಿಸುತ್ತಿಲ್ಲ' ಎನ್ನುವ ಮಾತನ್ನು ಅವರು ಹೇಳಿದ್ದಾರೆ. 'ಯಾಕೆ ಪ್ರಶ್ನೆಯನ್ನು ಕೇಳುತ್ತಿಲ್ಲ' ಎನ್ನುವುದನ್ನು ಮಾನ್ಯ ಸದಸ್ಯರು ಒಂದೆರಡು ವಾಕ್ಯಗಳಲ್ಲಿ ಹೇಳಿದರೆ ತಪ್ಪೇನಿಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಪ್ರಶ್ನೆ ಕೇಳುವುದಕ್ಕೆ ಮಾತ್ರ ಪ್ರಶ್ನೋತ್ತರ ವೇಳೆಯಲ್ಲಿ ಅವಕಾಶವಿದೆ, ಭಾಷಣ ಮಾಡುವುದಕ್ಕೆ ಅವಕಾಶವಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾ ನಾಯಕರೇ, ನಾನು ಹೇಳುವುದನ್ನು ಕೇಳುವಷ್ಟು ತಾಳ್ಮೆ ತಮಗೆ ಇಲ್ಲವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬಸವರಾಜ ಪಾಟೀಲ್ ಇಟಗಿಯವರು ಪ್ರಶ್ನೆ ಕೇಳುವುದಿಲ್ಲವೆಂದು ಹೇಳಿದಾಗ, ತಾವು 'ಯಾಕೆ ಪ್ರಶ್ನೆ ಕೇಳುವುದಿಲ್ಲ' ಎಂದು ಅವರನ್ನು ಕೇಳಬಹುದಾಗಿತ್ತು. ಆ ಕೆಲಸವನ್ನು ತಾವು ಮಾಡಲಿಲ್ಲ. ಅದಕ್ಕಾಗಿ ಅವರು ಪ್ರಶ್ನೆ ಕೇಳದೇ ಇರುವುದಕ್ಕೆ ಕಾರಣವೇನು ಎನ್ನುವುದರ ಬಗ್ಗೆ ಒಂದೆರಡು ವಾಕ್ಯಗಳಲ್ಲಿ ಸ್ಪಷ್ಟೀಕರಣವನ್ನು ನೀಡಲು ಹೊರಟಿದ್ದಾರೆ. Nothing more than that.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಪ್ರಶ್ನೆ ಕೇಳುವುದಿಲ್ಲವೆಂದು ಹೇಳಿದಂತಹ ಉದಾಹರಣೆಗಳು ಇವೆಯೇ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, I am a quite reasonable man. ಅದನ್ನು ನೀವು ತಿಳಿದುಕೊಳ್ಳಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಹೇಳುವ ಮಾತುಗಳನ್ನು ಕೇಳಿ. ಪ್ರಶ್ನೆ ಕೇಳುವುದು ಮಾನ್ಯ ಸದಸ್ಯರ ಹಕ್ಕಾಗಿದೆ. ಪ್ರಶ್ನೆ ಕೇಳುವುದಿಲ್ಲವೆಂದು ಹೇಳಿದರೆ, ನಾನು ಒತ್ತಾಯ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಸನ್ಮಾನ್ಯ ಸಭಾಪತಿಯವರೇ, ಯಾವ ಕಾರಣಕ್ಕಾಗಿ ನಾನು ಪ್ರಶ್ನೆ ಕೇಳುವುದಿಲ್ಲವೆಂದು ಹೇಳಿದೆ ಎನ್ನುವುದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ತಾವು ಅವಕಾಶವನ್ನು ಮಾಡಿ ಕೊಡಬೇಕು.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಅವರು ಏತಕ್ಕೋಸ್ಕರ ಪ್ರಶ್ನೆ ಕೇಳುವುದಿಲ್ಲವೆಂದು ಹೇಳಿದ್ದಾರೆ ಎನ್ನುವುದರ ಬಗ್ಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡುವುದಕ್ಕಾದರೂ ತಾವು ಅವಕಾಶ ಕೊಡಬೇಕು ಅಥವಾ ಯಾಕೆ ಕೇಳುವುದಿಲ್ಲವೆಂದು ತಾವು ಕೇಳಬೇಕಾಗಿತ್ತು.

**(ಗೊಂದಲ)**

**ಸಭಾಪತಿಯವರುಃ–** ಆ ರೀತಿ ರೂಲ್ ಇಲ್ಲ. ಯಾಕೆ ಪ್ರಶ್ನೆ ಕೇಳುವುದಿಲ್ಲವೆಂದು ನಾನು ಅವರನ್ನು ಕೇಳುವುದಿಲ್ಲ. ಪ್ರಶ್ನೆ ಕೇಳುವುದಿಲ್ಲವೆಂದು ಅವರು ಹೇಳಿದ್ದಾರೆ, ಅಲ್ಲಿಗೆ ಮುಗಿತು. ಪ್ರಶ್ನೆ ಕೇಳಿ ಎಂದು ನಾನು ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ತಮ್ಮ ಬಗ್ಗೆ ನಮಗೆ ಗೌರವವಿದೆ ಅವರು ಪ್ರಶ್ನೆಯನ್ನು ಬಹಿಷ್ಕರಿಸುತ್ತೇನೆಂದು ಹೇಳಿದಾಗ, 'ಯಾಕೆ' ಎಂದು ತಾವು ಕೇಳಬೇಕಾಗಿತ್ತು.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿಃ–** ಸನ್ಮಾನ್ಯ ಸಭಾಪತಿಯವರೇ, . . . .

**ಸಭಾಪತಿಯವರುಃ–** ಮಾನ್ಯ ಇಟಗಿಯವರೇ, ........ ಯಾವುದೂ ಕಡತಕ್ಕೆ ಹೋಗಬಾರದು.

**(ಸನ್ಮಾನ್ಯ ಸಭಾಪತಿಯವರ ನಿರ್ದೇಶನದ ಮೇರೆಗೆ ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಪಾಟೀಲ್ ಇಟಗಿಯವರು ಮಾತನಾಡಿದ್ದನ್ನು ದಾಖಲಿಸಿರುವುದಿಲ್ಲ.)**

**ಶ್ರೀ ಬಸವರಾಜ ಪಾಟೀಲ್ ಇಟಗಿಃ–** ಸನ್ಮಾನ್ಯ ಸಭಾಪತಿಯವರೇ, ...........

**(ಗೊಂದಲ)**

**ಡಾ|| ವೈ.ಎ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ................

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ್ಃ–** ಸನ್ಮಾನ್ಯ ಸಭಾಪತಿಯವರೇ, ............

**ಸಭಾಪತಿಯವರುಃ–** ಆಮೇಲೆ ನೀವು ಚರ್ಚೆ ಮಾಡಿ, ಮುಂದಿನ ಪ್ರಶ್ನೆ ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರದು. ಮಾನ್ಯ ರಾಥೋಡ್‌ರವರೇ, ತಾವು ಪ್ರಶ್ನೆ ಕೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 824**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ನನಗೆ ಯಾವ ಮಾಹಿತಿ ಬೇಕಾಗಿತ್ತು, ಆ ಮಾಹಿತಿಯನ್ನು ಸರಿಯಾಗಿ ಒದಗಿಸಿಲ್ಲವೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. 'ಕೆ.ಐ.ಎ.ಡಿ.ಬಿ. ವತಿಯಿಂದ ಸೋಂಪುರ ಹೋಬಳಿಯಲ್ಲಿ ಎಷ್ಟು ಎಕರೆ ಜಮೀನನ್ನು ಕೈಗಾರಿಕೆ ಉಪಯೋಗಕ್ಕಾಗಿ ನೀಡಲಾಗಿದೆ' ಎನ್ನುವ ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಎರಡನೆಯ ಪ್ರಶ್ನೆ, 'ಉದ್ದಿಮೆಗಳಿಗೆ ಪ್ರತಿ ಎಕರೆ ಜಮೀನಿಗೆ ನಿಗದಿಪಡಿಸುವ ಮೊತ್ತ ಎಷ್ಟು' ಎನ್ನುವ ಪ್ರಶ್ನೆಗೂ ಉತ್ತರವನ್ನು ನೀಡಿದ್ದಾರೆ. 'ಸೋಂಪುರ ಹೋಬಳಿ ನಿಗದಿತ ಪ್ರದೇಶದಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿ ಬಫರ್ ಝೋನ್ ಎಂದು ಗುರುತಿಸಿ ಎಷ್ಟು ಕೈಗಾರಿಕೆಗಳನ್ನು ಸ್ಥಳಾಂತರಗೊಳಿಸಿದೆ' ಎನ್ನುವ ನನ್ನ ಪ್ರಶ್ನೆಗೆ ಸಮಜಂಸವಾದ ಉತ್ತರವನ್ನು ನೀಡಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಈ ಪ್ರದೇಶ ಬಫರ್ ಝೋನ್‌ನಲ್ಲಿ ಬರುತ್ತದೆಂದು ತಿಳಿದ ಮೇಲೂ ಕೆ.ಐ.ಎ.ಡಿ.ಬಿ., ಯವರು ಇದನ್ನು ಕೈಗಾರಿಕೆಗಳಿಗೆ ಹಂಚಿಕೆ ಮಾಡಿ, ನಂತರ ರದ್ದುಪಡಿಸಿದ್ದಾರೆ. ಹಂಚಿಕೆ ಮಾಡುವಂತಹ ಸಂದರ್ಭದಲ್ಲಿ ಒಂದು ಎಕರೆಗೆ 53 ಲಕ್ಷ ರೂಪಾಯಿಗಳ ದರ ನಿಗದಿಪಡಿಸಿ ಹಂಚಿಕೆ ಮಾಡಿದ್ದಾರೆ. ತದನಂತರ ಬೇರೆ ಕಡೆ ನಿವೇಶನಗಳನ್ನು ನೀಡಿ, ಅದರ ನೋಂದಣಿ ಶುಲ್ಕವೆಂದು ಹೆಚ್ಚುವರಿಯಾಗಿ 73 ಲಕ್ಷ ರೂಪಾಯಿಗಳನ್ನು ಪಡೆದುಕೊಂಡಿದ್ದಾರೆ. ಪ್ರಸ್ತುತ 1 ಕೋಟಿ 03 ಲಕ್ಷ ರೂಪಾಯಿಗಳಿಗೆ ನೋಂದಣಿ ಮಾಡಿಕೊಡುತ್ತಿದ್ದಾರೆ. ಬಫರ್ ಝೋನ್‌ನಲ್ಲಿ ಇರುವುದನ್ನು ಹಂಚಿಕೆ ಮಾಡಿರುವುದು ತಪ್ಪಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಬಫರ್ ಝೋನ್‌ನಲ್ಲಿ ಇರುವಂತಹ 140 ಎಕರೆ ಜಮೀನನ್ನು ಉದ್ದಿಮೆದಾರರಿಗೆ ಹಳೆಯ ದರದಲ್ಲಿಯೇ ಹಂಚಿಕೆ ಮಾಡಬೇಕಾಗಿತ್ತು. ಅದರ ಬದಲಿಗೆ ದರವನ್ನು ಹೆಚ್ಚಿಗೆ ಮಾಡಿ 1 ಕೋಟಿ 03 ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಇದರಿಂದ ಉದ್ದಿಮೆದಾರರಿಗೆ ಸಾಕಷ್ಟು ತೊಂದರೆಗಳಾಗಿವೆ. ಹಂಚಿಕೆದಾರರು 57 ಲಕ್ಷ ರೂಪಾಯಿಗಳಂತೆ ತಾತ್ಕಾಲಿಕ ಹಂಚಿಕೆ ದರದಲ್ಲಿ ಹಣ ಪಾವತಿಸಿ ಗುತ್ತಿಗೆ ಕರಾರು ಪತ್ರವನ್ನು ಪಡೆದುಕೊಂಡ ಪ್ರಕರಣಗಳಲ್ಲಿ, ಪರಿಷ್ಕರಿಸಿದ ತಾತ್ಕಾಲಿಕ ಹಂಚಿಕೆ ದರ 73 ಲಕ್ಷ ರೂಪಾಯಿಗಳಾಗಿದ್ದು, ಈ ವ್ಯತ್ಯಾಸದ ಮೊತ್ತವನ್ನು ಪಾವತಿಸಿಕೊಂಡು ಸಪ್ಲಿಮೆಂಟರಿ ಗುತ್ತಿಗೆ ಕರಾರು ಪತ್ರ ಮಾಡಿಕೊಡಲಾಗಿದೆ. ಸಪ್ಲಿಮೆಂಟರಿ ಗುತ್ತಿಗೆ ಕರಾರು ಪತ್ರದಲ್ಲಿ ಹಿಂದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋಂದಣಿಯಾಗಿರುವ ಗುತ್ತಿಗೆ ಕರಾರು ಪತ್ರದ ನೋಂದಣಿ ಸಂಖ್ಯೆಯನ್ನು ನಮೂದಿಸಿ ಹೆಚ್ಚುವರಿಯಾಗಿ ಪಾವತಿಸಿರುವ ವ್ಯತ್ಯಾಸ ಮೊತ್ತವನ್ನು ನಮೂದಿಸಲಾಗಿದೆ. ಕೆ.ಐ.ಎ.ಡಿ.ಬಿ., ಯವರು ನೀಡಿರುವ ಸಪ್ಲಿಮೆಂಟರಿ ಗುತ್ತಿಗೆ ಕರಾರು ಪತ್ರದ ಅನ್ವಯ ಹೆಚ್ಚುವರಿಯಾಗಿ ಪಾವತಿಸಿರುವ ವ್ಯತ್ಯಾಸದ ಮೊತ್ತಕ್ಕೆ ಸಂಬಂಧಪಟ್ಟ ಉಪ ನೋಂದಣಾಧಿಕಾರಿಯವರು ಒಪ್ಪುತ್ತಿಲ್ಲವೆಂದು ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ತಿಳಿಸಿದ್ದಾರೆ. ಆ ಅಧಿಕಾರಿ ಕಂದಾಯ ಇಲಾಖೆಗೆ ಸೇರಿರಬಹುದು ಅಥವಾ ನೋಂದಣಾಧಿಕಾರಿ ಇರಬಹುದು ಮಾನ್ಯ ಸಚಿವರು ಅವರನ್ನು ಒಪ್ಪಿಸಿ ಹಳೆಯ ದರದಲ್ಲಿಯೇ ಹಂಚಿಕೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಜಗದೀಶ ಶೆಟ್ಟರ್ಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಸರ್ಕಾರದ ವತಿಯಿಂದ ಉತ್ತರವನ್ನು ಒದಗಿಸಲಾಗಿದೆ. ಆದರೆ, ಅವರ ಮೂಲ ಪ್ರಶ್ನೆ ನನಗೆ ಅರ್ಥವಾಗಿದೆ. ದಿನಾಂಕಃ 18.11.2003ರಲ್ಲಿ ತಿಪ್ಪಗೊಂಡನಹಳ್ಳಿಲ್ಲಿರುವ 189 ಎಕರೆ ಪ್ರದೇಶ ಜಲಾನಯನ ಪ್ರದೇಶಕ್ಕೆ ಒಳಪಡುತ್ತದೆಂದು ಒಂದು ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಅಷ್ಟರಲ್ಲಿ ಕೆಲವು ಉದ್ದಿಮೆದಾರರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿತ್ತು. ಇವರಿಗೆ ಪರ್ಯಾಯ ನಿವೇಶನಗಳನ್ನು ಕೊಡಬೇಕಾಗಿತ್ತು. ಅದಕ್ಕಾಗಿಯೇ ಸುಮಾರು 144 ಎಕರೆ ಪರ್ಯಾಯ ಜಮೀನನ್ನು ಗುರುತುಪಡಿಸಿ, ಅವರುಗಳನ್ನು ಅಲ್ಲಿಗೆ ಸ್ಥಳಾಂತರಗೊಳಿಸಲಾಗಿದೆ. ಇಲ್ಲಿ ಒಟ್ಟು 119 ಉದ್ದಿಮೆದಾರರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಇದರ ಬಗ್ಗೆ ಯಾವುದೇ ವಿವಾದಗಳು ಇಲ್ಲ. ಕೇವಲ ದರ ಮಾತ್ರ ಹೆಚ್ಚಾಗಿದೆ. ಪರ್ಯಾಯವಾಗಿ ನೀಡಲಾಗಿದ್ದ ನಿವೇಶನಕ್ಕೆ ಯಾವ ದರವನ್ನು ನಿಗದಿಪಡಿಸಲಾಗಿತ್ತು ಆ ದರವನ್ನು ನೀಡುವುದಕ್ಕೆ ಬಹಳಷ್ಟು ಜನ ಉದ್ದಿಮೆದಾರರು ಒಪ್ಪಿಕೊಂಡಿದ್ದಾರೆ.

ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂತೆ, ಮೊದಲು ಹಂಚಿಕೆ ಮಾಡಿದ್ದ ನಿವೇಶನಗಳಿಗೆ 57 ಲಕ್ಷ ರೂಪಾಯಿಗಳನ್ನು ನಿಗದಿಗೊಳಿಸಿ ನೋಂದಣಿ ಮಾಡಿಕೊಡಲಾಗಿದೆ. ಆದರೆ, ನಂತರ ಪರ್ಯಾಯವಾಗಿ ನೀಡಲಾದ ನಿವೇಶನಗಳ ದರ 73 ಲಕ್ಷ ರೂಪಾಯಿಗಳಿಗೆ ಹೆಚ್ಚಾದ ಹಿನ್ನೆಲೆಯಲ್ಲಿ, ಅವರು 73 ಲಕ್ಷ ರೂಪಾಯಿಗಳಿಗೆ ನೋಂದಣಿ ಮಾಡಿಸಿಕೊಳ್ಳಲು ಹೋದಾಗ, 73 ಲಕ್ಷ ರೂಪಾಯಿಗಳನ್ನು ತುಂಬಬೇಕು, ಹಳೆಯ ದರಕ್ಕೆ ನೋಂದಣಿ ಮಾಡಿಕೊಡಲು ಸಾಧ್ಯವಿಲ್ಲವೆಂದು ಸಬ್–ರಿಜಿಸ್ಟ್ರಾರ್‌ರವರು ಹೇಳುತ್ತಿದ್ದಾರೆ. ಹೊಸ ಜಾಗದಲ್ಲಿ 119 ಉದ್ದಿಮೆದಾರರ ಪೈಕಿ 80 ಜನರು ಈಗಾಗಲೇ ನೋಂದಣಿ ಮಾಡಿಕೊಂಡಿದ್ದಾರೆ. ಉಳಿದ 40 ಜನರ ಪೈಕಿ 20 ಜನರು ಈಗಾಗಲೇ ನೋಂದಣಿ ಮಾಡಿಕೊಂಡಿದ್ದಾರೆ. ಉಳಿದ 20 ಜನ ಉದ್ದಿಮೆದಾರರು 57 ಲಕ್ಷ ಹಾಗೂ 73 ಲಕ್ಷ ರೂಪಾಯಿಗಳ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡುವೆ ಇರುವಂತಹ ವ್ಯತ್ಯಾಸದ ಮೊತ್ತಕ್ಕೆ ನೋಂದಣಿ ಮಾಡುವುದಕ್ಕೆ ಕಂದಾಯ ಇಲಾಖೆಯವರ ನಿರ್ದೇಶನ ಬೇಕಾಗುತ್ತದೆ. ಮಾನ್ಯ ಸದಸ್ಯರ ಭಾವನೆಗಳನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಹಳೆ ಮತ್ತು ಹೊಸ ದರಗಳ ನಡುವೆ ಇರುವಂತಹ ವ್ಯತ್ಯಾಸ ಮೊತ್ತಕ್ಕೆ ತಾವು ನೋಂದಣಿ ಮಾಡಿಕೊಡಿ ಎನ್ನುವ ನಿಟ್ಟಿನಲ್ಲಿ ನಿರ್ದೇಶನವನ್ನು ಹೊರಡಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ನಾನು ಕಂದಾಯ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಸಮಾಲೋಚನೆ ಮಾಡಿ, ಒಂದು ನಿರ್ಧಾರವನ್ನು ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಸನ್ಮಾನ್ಯ ಸಭಾಪತಿಯವರೇ, ಕಂದಯ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಚರ್ಚಿಸಿ ಈ ಮೊತ್ತವನ್ನು ಕಡಿಮೆ ಮಾಡಿಸುತ್ತೇನೆ ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಈಗಾಗಲೇ ಹೊಸ ದರಕ್ಕೆ ಅನ್ವಯವಾಗುವಂತೆ ನೋಂದಣಿ ಮಾಡಿಸಿಕೊಂಡಿರುವ ಉದ್ದಿಮೆದಾರರು ಸಹ ಒತ್ತಡದಿಂದ ಮಾಡಿಕೊಂಡಿದ್ದಾರೆ. ಪ್ರಸ್ತುತ 20 ಉದ್ದಿಮೆದಾರರು ಹೊಸ ದರಕ್ಕೆ ನೋಂದಣಿ ಮಾಡಿಕೊಂಡಿದ್ದಾರೆಂದು ಮಾನ್ಯ ಸಚಿವರು ಹೇಳಿದ್ದಾರೆ ಅವರುಗಳು ಲೋನ್ ತೆಗೆದುಕೊಳ್ಳುವುದಕ್ಕೆ ಅಥವಾ ಬೇರೆ ಉದ್ದೇಶಗಳಿಗಾಗಿ ಒತ್ತಡದಿಂದ ನೋಂದಣಿ ಮಾಡಿಸಿಕೊಂಡಿದ್ದಾರೆ. ಉದ್ದಿಮೆದಾರರಿಗೆ ಪ್ರೋತ್ಸಾಹವನ್ನು ನೀಡುವ ನಿಟ್ಟಿನಲ್ಲಿ ಇಲ್ಲಿ ನಿವೇಶನಗಳನ್ನು ಹಳೆಯ ದರದಲ್ಲಿ ಕೊಟ್ಟರೆ ಉತ್ತಮ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಎಲ್ಲಾ ಉದ್ದಿಮೆದಾರರ ಅಭಿಪ್ರಾಯವೂ ಇದೇ ಆಗಿದೆ. ಕೆ.ಐ.ಎ.ಡಿ.ಬಿ. 2003ರಲ್ಲಿ ಇದನ್ನು ಹಂಚಿಕೆ ಮಾಡಿದೆ. ಈಗ ಹೆಚ್ಚುವರಿ ದರವನ್ನು ನಿಗದಿಪಡಿಸಿರುವುದರಿಂದ ಉದ್ದಿಮೆದಾರರಿಗೆ ತೊಂದರೆಯಾಗುತ್ತಿದೆ. ಆದಕಾರಣ ದರವನ್ನು ಕಡಿಮೆ ಮಾಡಬೇಕೆಂದು ಒತ್ತಾಯಿಸುತ್ತಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್:–** ಸನ್ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟಂತೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಕಂದಾಯ ಮಂತ್ರಿಗಳೊಂದಿಗೆ ಮತ್ತು ಅಧಿಕಾರಿಗಳೊಂದಿಗೆ ಚರ್ಚಿಸಿ ಇದಕ್ಕೊಂದು ಪರಿಹಾರವನ್ನು ಹುಡುಕುವ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 856**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮರಿತಿಬ್ಬೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಎಂ.ಎಸ್.ಪಿ., ದರದಲ್ಲಿ ಭತ್ತ, ರಾಗಿ ಮತ್ತು ಜೋಳವನ್ನು ಖರೀದಿ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಂಡಿದೆ. ಇದಕ್ಕಾಗಿ ಸರ್ಕಾರ 162 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಮತ್ತು 136 ಕೋಟಿ ರೂಪಾಯಿಗಳನ್ನು ಬಾಕಿ ಉಳಿಸಿಕೊಳ್ಳಲಾಗಿದೆ. ಬಾಕಿ ಇರುವಂತಹ ಈ ಮೊತ್ತವನ್ನು ಯಾವಾಗ ರೈತರಿಗೆ ನೀಡಲಾಗುತ್ತದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವ ರೈಸ್‌ಮಿಲ್ ಮಾಲೀಕರಿಗೆ 2018–19ನೇ ಸಾಲಿನಲ್ಲಿ ಪಾವತಿಸಬೇಕಾಗಿರುವ ಮೊತ್ತದ ಬಾಕಿಯಲ್ಲಿ ಡ್ರೈಯೆಜ್ ಶುಲ್ಕವನ್ನು ಮಾತ್ರ ಉಳಿಸಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

**(ಮುಂದು)**

**(320) 9.3.2021 12.40 ಪಿಕೆ:ಎಂಡಿ**

**ಶ್ರೀ ಮರಿತಿಬ್ಬೇಗೌಡ (ಮುಂದು):–**

ಡ್ರೈಯೆಜ್ ಶುಲ್ಕದ ಮೊತ್ತವೆಷ್ಟು ಮತ್ತು ಅದನ್ನು ಯಾವಾಗ ಪಾವತಿಸುತ್ತೀರಿ ಎಂದು ಹೇಳಬೇಕು. ಇದು 2018–19ನೇ ಸಾಲಿನದ್ದಾಗಿದೆ. ರೈಸ್ ಮಿಲ್ ಮಾಲೀಕರ ಪರಿಸ್ಥಿತಿ ಬಹಳ ಕೆಟ್ಟದಾಗಿದೆ ಎನ್ನುವುದು ತಮಗೆ ಗೊತ್ತಿದೆ. ಈ ಡ್ರೈಯೆಜ್ ಶುಲ್ಕದ ಬಾಕಿ ಮೊತ್ತವನ್ನು ಯಾವಾಗ ಕೊಡಿಸುತ್ತೀರಿ ಎನ್ನುವುದನ್ನು ತಿಳಿಸಬೇಕು.

2018–19ನೇ ಸಾಲಿನಲ್ಲಿ ತಮ್ಮ ಇಲಾಖೆಯ ಅಧಿಕಾರಿಗಳು 5 ತಿಂಗಳು ಮಾತ್ರ ಗೋಡೌನ್ ಬಾಡಿಗೆ ತೆಗೆದುಕೊಳ್ಳಲು ಅವಕಾಶ ಕೊಟ್ಟಿದ್ದರು. ಆದರೆ, ಅಕ್ಕಿಯನ್ನು 8 ತಿಂಗಳುಗಳ ಕಾಲ ದಾಸ್ತಾನು ಮಾಡುವ ಅನಿವಾರ್ಯ ಕಾರಣ ಉಂಟಾಯಿತು. ಹಾಗಾಗಿ ಆ 3 ತಿಂಗಳ ಗೋಡೌನ್ ಬಾಡಿಗೆಯನ್ನು ರೈಸ್ ಮಾಲೀಕರು ಕಟ್ಟಬೇಕೆಂದು ಹೇಳುತ್ತಿದ್ದಾರೆ. ಇದರಿಂದ ರೈಸ್ ಮಿಲ್ ಮಾಲೀಕರಿಗೆ ತೊಂದರೆ ಉಂಟಾಗುತ್ತದೆ. ಆದ್ದರಿಂದ ಡ್ರೈಯೆಜ್ ಶುಲ್ಕದ ಜೊತೆಗೆ ಆ 3 ತಿಂಗಳ ಗೋಡೌನ್ ಬಾಡಿಗೆಯನ್ನು ಇಲಾಖೆ ಪಾವತಿಸಬೇಕು. ಇದರ ಬಗ್ಗೆ ತಮ್ಮಿಂದ ನಾನು ಉತ್ತರ ಬಯಸುತ್ತೇನೆ. 2019–20ನೇ ಸಾಲಿನಲ್ಲಿ ಅಕ್ಕಿ ಗಿರಣಿ ಮಾಲೀಕರಿಗೆ ಕಾಸ್ಟಿಂಗ್ ಶೀಟ್‌ನ ಪ್ರಕಾರ ಸುಮಾರು ರೂ. 6 ಕೋಟಿಗಳ ಬಾಕಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಳಿಸಿಕೊಂಡಿದ್ದೀರಿ. ಇದುವರೆಗೂ ಕೊಟ್ಟಿಲ್ಲ. ರೂ. 6 ಕೋಟಿಗಳನ್ನು ಯಾವ ಸಮಯದಲ್ಲಿ ತಾವು ಬಿಡುಗಡೆ ಮಾಡುತ್ತೀರಿ?

ಹಲ್ಲಿಂಗ್ ಚಾರ್ಜ್ ಎಂದು ರೈಸ್ ಮಿಲ್ ಮಾಲೀಕರಿಗೆ ಒಂದು ಕ್ವಿಂಟಾಲ್‌ಗೆ ರೂ. 10.00ರಂತೆ ಕೊಡುತ್ತಿದ್ದೀರಿ. ಇದನ್ನು ಕೇಂದ್ರ ಸರ್ಕಾರ ನಿಗದಿಗೊಳಿಸುತ್ತದೆ ಎಂದು ಹೇಳುತ್ತೀರಿ. 2010–11ನೇ ಸಾಲಿನ ನಂತರ ಹಲ್ಲಿಂಗ್ ವೆಚ್ಚದಲ್ಲಿ ಯಾವುದೇ ಪರಿಷ್ಕರಣೆ ಆಗಿರುವುದಿಲ್ಲ ಎಂದು ಉತ್ತರದಲ್ಲಿ ತಿಳಿಸಿದ್ದೀರಿ. ಇವತ್ತಿಗೂ ಒಂದು ಕ್ವಿಂಟಾಲ್ ಹಲ್ಲಿಂಗ್ ಮಾಡಲು ರೂ. 10.00 ಗಳನ್ನೇ ಕೊಡುತ್ತಿದ್ದೀರಿ. ವಿದ್ಯುಚ್ಛಕ್ತಿಯ ದರ ದಿನೇ ದಿನೇ, ವರ್ಷಾನುವರ್ಷ ಜಾಸ್ತಿಯಾಗುತ್ತಲೇ ಇದೆ. ರೈಸ್ ಮಿಲ್ ಮಾಲೀಕರು ಅದಕ್ಕೋಸ್ಕರ ಹಲ್ಲಿಂಗ್ ಮಾಡುವುದಕ್ಕೆ ಮುಂದೆ ಬರುತ್ತಿಲ್ಲ. ರೈಸ್ ಮಿಲ್ ಮಾಲೀಕರು ತಾವು ತೊಂದರೆಯಲ್ಲಿದ್ದರೂ ನಿಮ್ಮ ಇಲಾಖೆಗೆ ಬಹಳಷ್ಟು ಸಹಕಾರ ಕೊಡುತ್ತಿದ್ದಾರೆ. ಪಕ್ಕದ ಕೇರಳ ಮತ್ತು ತಮಿಳುನಾಡು ರಾಜ್ಯಗಳಿಗೆ ಕೇಂದ್ರ ಸರ್ಕಾರ ಹಲ್ಲಿಂಗ್ ಚಾರ್ಜ್ ಎಂದು ಪ್ರತಿ ಕ್ವಿಂಟಾಲ್‌ಗೆ ರೂ.10.00 ಗಳನ್ನು ಕೊಟ್ಟರೂ ಆ ರಾಜ್ಯ ಸರ್ಕಾರಗಳು ಒಂದು ಕ್ವಿಂಟಾಲ್‌ಗೆ ರೂ. 50–60 ಗಳನ್ನು ಕೊಡುತ್ತಿದೆ. ಆದರೆ ನಮ್ಮ ರಾಜ್ಯದಲ್ಲಿ ಸರ್ಕಾರ ಇದುವರೆಗೂ ಹಲ್ಲಿಂಗ್ ಚಾರ್ಜನ್ನು ಹೆಚ್ಚು ಕೊಡುವುದಕ್ಕೆ ಮುಂದಾಗಲಿಲ್ಲ. ಇದು ಬಹಳ ವಿಷಾದನೀಯ ಸಂಗತಿಯಾಗಿದೆ. ಈ ಸಾಲಿನಿಂದಾದರೂ ಕೂಡ, ಕೇಂದ್ರ ಸರ್ಕಾರ ಕೊಡುವ ಹಲ್ಲಿಂಗ್ ಚಾರ್ಜ್‌ನ ಜೊತೆಗೆ, ಕೇರಳ ಮತ್ತು ತಮಿಳುನಾಡಿನಲ್ಲಿ ಇರುವಂತೆ ಇಲ್ಲೂ ಕೂಡ ಒಂದು ಕ್ವಿಂಟಾಲ್‌ಗೆ ರಾಜ್ಯ ಸರ್ಕಾರ ರೂ. 50.00 ಗಳನ್ನು ಕೊಡುವುದಕ್ಕೆ ಚಿಂತನೆ ಮಾಡುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಉಮೇಶ ವಿ. ಕತ್ತಿ:–** ಮಾನ್ಯ ಸಭಾಪತಿಯವರೇ, ಒಟ್ಟು ರೂ. 5,93,16,550.00 ಮೊತ್ತ ಬಿಡುಗಡೆಗೆ ಬಾಕಿ ಇರುತ್ತದೆ. ಇದನ್ನು ಒಂದು ವಾರದಲ್ಲಿ ಅಥವಾ 10 ದಿವಸಗಳಲ್ಲಿ ಬಿಡುಗಡೆ ಮಾಡುತ್ತೇವೆ. ಎಂಎಸ್‌ಪಿಯಲ್ಲಿ ರೈತರಿಗೆ ಇಲ್ಲಿಯವರೆಗೆ ಎಲ್ಲಾ ಕೊಟ್ಟಾಗಿದೆ, ಯಾವುದೇ ಹಳೆಯ ಬಾಕಿಯನ್ನು ಉಳಿಸಿಕೊಂಡಿಲ್ಲ. ಹೊಸದಾಗಿ ಕೂಡ ಕೊಡುತ್ತಿದ್ದು, ಇದು ನಿರಂತರ ಪ್ರಕ್ರಿಯೆ ಆಗಿರುತ್ತದೆ. ಮಾರ್ಚ್ 31ರವರೆಗೆ ಎಷ್ಟು ಭತ್ತವನ್ನು ಕೊಡುತ್ತಾರೋ ಅದಕ್ಕೆ ದುಡ್ಡು ಬಿಡುಗಡೆ ಮಾಡುತ್ತೇವೆ. ರೈತರಿಗೆ ಕೊಡಬೇಕಾದುದು ಏನು ಬಾಕಿ ಇದೆಯೋ ಅದನ್ನೂ ವಾರ ಅಥವಾ 10 ದಿವಸದ ಒಳಗೆ ಬಿಡುಗಡೆ ಮಾಡುತ್ತೇವೆ. ಕೇರಳ ಮತ್ತು ತಮಿಳುನಾಡಿನಲ್ಲಿ ಹಲ್ಲಿಂಗ್ ಚಾರ್ಜ್ ಎಂದು 1 ಕ್ವಿಂಟಾಲ್‌ಗೆ ರೂ. 50.00 ಕೊಡುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆ ವಿವರಗಳನ್ನು ನಾವು ತರಿಸಿಕೊಳ್ಳುತ್ತೇವೆ. ಈ ಕುರಿತು ನಾವೂ ಕೂಡ ಕರ್ನಾಟಕ ರಾಜ್ಯದ ವತಿಯಿಂದ ಕೇಂದ್ರ ಸರ್ಕಾರಕ್ಕೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಿಫಾರಸ್ಸು ಮಾಡುತ್ತೇವೆ. ಸರ್ಕಾರದ ನಿಯಮಗಳ ಪ್ರಕಾರ ಆಹಾರ ಪೂರೈಕೆ ಮತ್ತು ಖಾತ್ರಿ, ಇದರಡಿ ನಾವು ಕೆಲಸ ಮಾಡಲೇಬೇಕಾಗುತ್ತದೆ. ಇದರ ಜೊತೆಗೆ ಯಾವುದಾದರೂ ಹಣವನ್ನು ಕೊಡುವುದು ಬಾಕಿ ಉಳಿದಿದ್ದರೆ ಅದನ್ನೂ ಕೊಡುವ ಕೆಲಸ ಮಾಡುತ್ತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಡೀ ರಾಜ್ಯದಲ್ಲಿ ಜೋಳ, ರಾಗಿ ಮತ್ತು ಭತ್ತ ಖರೀದಿ ಮಾಡಿ, ಹಲ್ಲಿಂಗ್ ಮಾಡಿ, ಬಿಪಿಎಲ್ ಅಡಿಯಲ್ಲಿರುವ ಜನರಿಗೆ, ಅಂತ್ಯೋದಯ ಯೋಜನೆ ಅಡಿ ಇರುವಂತಹ ಜನರಿಗೆ ಹಂಚಿಕೆ ಮಾಡುತ್ತೇವೆ. ಇದನ್ನು ಏಪ್ರಿಲ್ 1 ರಿಂದ ಮಾಡುತ್ತಿದ್ದೇವೆ. ಇದಕ್ಕೆ ತಾವೂ ಕೂಡ ಒಳ್ಳೆಯ ಸಹಕಾರ ಕೊಡಬೇಕು ಎಂದು ಹೇಳಬಯಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** 2018–19ನೇ ಸಾಲಿಗೆ ಸಂಬಂಧಪಟ್ಟಂತೆ ಡ್ರೈಯೆಜ್ ಕೊಡಬೇಕಿದೆ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ.

**ಶ್ರೀ ಉಮೇಶ ವಿ. ಕತ್ತಿ:–** ಅದನ್ನು ಒಂದು ವಾರದ ಒಳಗೆ ಕೊಡುತ್ತೇವೆ.

**ಶ್ರೀ ಮರಿತಿಬ್ಬೇಗೌಡ:–** ತಾವು, ಕಾಸ್ಟಿಂಗ್ ಶೀಟ್ ಪ್ರಕಾರ ಏನು ರೂ. 5,93,16,550.00 ಇದೆಯೋ ಅದನ್ನು ಒಂದು ವಾರದ ಒಳಗೆ ಕೊಡುತ್ತೇವೆ ಎಂದು ಹೇಳಿದ್ದೀರಿ. ಆ ಡ್ರೈಯೆಜ್ ಚಾರ್ಜನ್ನೂ ಒಂದು ವಾರದ ಒಳಗೆ ಕೊಡುತ್ತೀರಾ?

**ಶ್ರೀ ಉಮೇಶ ವಿ. ಕತ್ತಿ:–** ಈ ಸದರಿ ಮೊತ್ತ ಅದೇ ಮೊತ್ತವಾಗಿದೆ.

**(ಈ ಹಂತದಲ್ಲಿ ಉಪ ಸಭಾಪತಿಯವರಾದ ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಸಭಾ ಪೀಠವನ್ನು ಅಲಂಕರಿಸಿದರು)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರು ದಯವಿಟ್ಟು ಗಮನಿಸಬೇಕು. 2019–20ರಲ್ಲಿ ಕಾಸ್ಟಿಂಗ್ ಶೀಟ್ ಪ್ರಕಾರ ಸುಮಾರು ರೂ. 6 ಕೋಟಿ ಬಾಕಿ ಇದೆ ಎಂದು ಹೇಳಿದ್ದೀರಿ. ಆದರೆ, 2018–19ನೇ ಸಾಲಿಗೆ ಸಂಬಂಧಪಟ್ಟಂತೆ ಮಾತ್ರ ಡ್ರೈಯೆಜ್ ಚಾರ್ಜಸ್ ಕೊಡುವುದು ಬಾಕಿ ಇದೆ ಎಂದು ತಮ್ಮ ಉತ್ತರದಲ್ಲಿದೆ. ಇದೇ ಪ್ರತ್ಯೇಕವಾದುದಾಗಿದೆ.

**ಶ್ರೀ ಉಮೇಶ ವಿ. ಕತ್ತಿ:–:–** ಉತ್ತರದಲ್ಲಿ, "2019–20ನೇ ಸಾಲಿನಲ್ಲಿ ಭತ್ತದ ಹಲ್ಲಿಂಗ್‌ಗೆ ಸಂಬಂಧಿಸಿದಂತೆ ಈಗಾಗಲೇ ಅಕ್ಕಿ ಗಿರಣಿ ಮಾಲೀಕರಿಗೆ ಹಣವನ್ನು ಪಾವತಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ" ಎಂದು ಹೇಳಿದ್ದೇವೆ. ಇನ್ನೂ ಒಟ್ಟು ರೂ.5,93,16,550.00 ಕೋಟಿ ಹಣ ಬಿಡುಗಡೆಗೆ ಬಾಕಿ ಇರುತ್ತದೆ. ಅದನ್ನು ಒಂದು ವಾರದ ಒಳಗೆ ಬಿಡುಗಡೆ ಮಾಡುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:–** ಆದರೆ ರೈತರಿಗೆ ಸುಮಾರು ರೂ 136 ಕೋಟಿಗಳನ್ನು ಕೊಡುವುದು ಬಾಕಿ ಇದೆ.

**ಶ್ರೀ ಉಮೇಶ ವಿ. ಕತ್ತಿ:–** ನನ್ನ ಪ್ರಕಾರ ರೂ. 93 ಕೋಟಿಗಳು ಬಾಕಿ ಇದೆ. ಮಾರ್ಚ್ 31ರ ಒಳಗೆ ಭತ್ತ ನಿರಂತರವಾಗಿ ಬರುತ್ತಿರುತ್ತದೆ ಮತ್ತು ಹೋಗುತ್ತಿರುತ್ತದೆ. ಅಲ್ಲಿಯವರೆಗೆ ಕೊಡುತ್ತಿರುತ್ತೇವೆ. ಒಟ್ಟು ಬಾಕಿಯನ್ನೂ ಸಹ 10 ದಿವಸದ ಒಳಗೆ ಕೊಡುತ್ತೇವೆ.

**ಶ್ರೀ ಮರಿತಿಬ್ಬೇಗೌಡ:– 3** ತಿಂಗಳ ಬಾಡಿಗೆಯನ್ನು ರೈಸ್ ಮಿಲ್ ಮಾಲೀಕರು ಹೇಗೆ ಕಟ್ಟುತ್ತಾರೆ?

**ಶ್ರೀ ಉಮೇಶ ವಿ. ಕತ್ತಿ:–** ಇವತ್ತು ಈ ವಿಷಯ ಕುರಿತು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರದ ವತಿಯಿಂದ ಕೊಡುವುದು ಬಾಕಿ ಇದ್ದರೆ ಕೊಟ್ಟೇ ಕೊಡುತ್ತೇವೆ. ಆದರೆ 6 ತಿಂಗಳುಗಳ ಕಾಲ ಬಾಡಿಗೆಗೆ ತೆಗೆದುಕೊಳ್ಳಲಾಗಿತ್ತು. ಇದರ ಬಗ್ಗೆ ವಿಚಾರಣೆ ಮಾಡಿ ಮಾಹಿತಿ ಪಡೆದುಕೊಂಡು ಕೊಡುವುದಿದ್ದರೆ ಅದನ್ನೂ ಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 9ನೇ ಮಾರ್ಚ್ 2021ರ ಸಮೂಹ 2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 79 ಪ್ರಶ್ನೆಗಳ ಪೈಕಿ 56 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 04. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

**ಅ) ವಿಷಯ:-** ಕೊಡಗು ಜಿಲ್ಲೆಯ ಹುಲಿ ದಾಳಿಯಿಂದ ಮಾನವರು ಮತ್ತು ಜಾನುವಾರು ಬಲಿಯಾಗುತ್ತಿರುವ ಬಗ್ಗೆ.

– – –

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯಲ್ಲಿ ಹುಲಿ ದಾಳಿಗಳು ಅಧಿಕವಾಗಿದ್ದು, ಜಾನುವಾರು ಹಾಗೂ ಮಾನವರು ನಿರಂತರವಾಗಿ ಬಲಿಯಾಗುತ್ತಿದ್ದಾರೆ. ಇತ್ತೀಚೆಗೆ ಹುಲಿ ದಾಳಿಗಳು ಸತತವಾಗಿ ಹೆಚ್ಚಾಗಿದ್ದು, ಜಾನುವಾರು ಹಾಗೂ ಮನುಷ್ಯನ ಜೀವಕ್ಕೆ ಕುತ್ತು ತರುತ್ತಿರುವುದು ಅತ್ಯಂತ ಅಪಾಯಕಾರಿ ಹಾಗೂ ಆತಂಕಕಾರಿ ಸಮಸ್ಯೆಯಾಗಿ ಪರಿಣಮಿಸಿದೆ.

ನಿನ್ನೆ ದಿನಾಂಕ 08.03.2021 ರಂದು ಪೊನ್ನಂಪೇಟೆ ತಾಲ್ಲೂಕಿನ ಬೆಳ್ಳೂರು ಗ್ರಾಮದಲ್ಲಿ ತೋಟದ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ರಂಗಸ್ವಾಮಿ ಎಂಬ ಎಂಟು ವರ್ಷದ ಬಾಲಕ ಹಾಗೂ ಆತನ ತಾತ ಕೆಂಚ ಎಂಬುವರ ಮೇಲೆ ಹುಲಿ ಮಾರಣಾಂತಿಕ ದಾಳಿ ಮಾಡಿದ್ದು, ಒಬ್ಬರು ಸಾವನ್ನಪ್ಪಿದ್ದಾರೆ. ಹತ್ತು ದಿನಗಳ ಹಿಂದೆ ಶ್ರೀಮಂಗಲ ಭಾಗದಲ್ಲಿ ಒಬ್ಬ ವೃದ್ಧ ಹಾಗೂ ಒಬ್ಬ ಹದಿನಾಲ್ಕು ವರ್ಷದ ಹುಡುಗ ಹುಲಿ ದಾಳಿಯಿಂದ ಮೃತರಾಗಿದ್ದಾರೆ. ಕೇವಲ 15 ದಿನಗಳ ಅಂತರದಲ್ಲಿ ಹುಲಿ ದಾಳಿಗೆ 3 ಜನ ಅಸುನೀಗಿದ್ದಾರೆ ಎಂದರೆ ವಿಷಯದ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಇತ್ತೀಚೆಗೆ ಪೊನ್ನಂಪೇಟೆ ಹಾಗೂ ವಿರಾಜಪೇಟೆಯ ತೆರಾಲು, ತಾವಳಗೇರಿ, ಕುಮಟೂರು ಹಾಗೂ ಬಾಡರಕೇರಿಯಲ್ಲಿ ಹುಲಿ ಹಾವಳಿಯಿಂದಾಗಿ ಹನ್ನೆರಡು ದಿನಗಳಲ್ಲಿ ಹನ್ನೆರಡು ಜಾನುವಾರುಗಳು ಬಲಿಯಾಗಿದ್ದು, ಪ್ರಕರಣ ತುಂಬಾ ಸೂಕ್ಷ್ಮ ಮತ್ತು ಗಂಭೀರವಾಗಿದೆ. ಈ ರೀತಿಯಲ್ಲಿ ಜಿಲ್ಲೆಯಲ್ಲಿ ನಿರಂತರವಾಗಿ ಹುಲಿ ದಾಳಿಯ ಪ್ರಕರಣಗಳು ವರದಿಯಾಗುತ್ತಿದ್ದು, ಹಲವು ಸಾವು-ನೋವು ಸಂಭವಿಸಿರುವುದರಿಂದ, ಜನರು ಜೀವಭಯದಿಂದ ಹೊರಗಡೆ ಹೋಗಲು ಹಿಂಜರಿಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ.

ಆದುದರಿಂದ ಜಿಲ್ಲೆಯಲ್ಲಿ ಸತತವಾಗಿ ಆಗುತ್ತಿರುವ ಜಾನುವಾರು ಹಾಗೂ ಮಾನವರ ಮೇಲಿನ ಹುಲಿ ದಾಳಿಯನ್ನು ತಡೆಯಲು ಕೂಡಲೇ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ಅರಣ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದಂತಹ ವಿಷಯವಾಗಿದೆ. ಹುಲಿ ಕಾಡನ್ನು ಬಿಟ್ಟು ನಾಡಿಗೆ ಬಂದು 10–15 ದಿವಸಗಳ ಅವಧಿಯಲ್ಲಿ 3 ಜನರ ಪ್ರಾಣ ತೆಗೆದುಕೊಂಡಿದೆ. ಸುಮಾರು 15 ಜಾನುವಾರುಗಳು ಪ್ರಾಣ ಕಳೆದುಕೊಂಡಿವೆ. ಜನ ಬಹಳಷ್ಟು ಭಯಭೀತರಾಗಿದ್ದಾರೆ. ಇದಕ್ಕೆ ಸಂಬಂಧಪಟ್ಟ ಸಚಿವರು ಬಂದು ಉತ್ತರ ಕೊಡಬೇಕು. ಈ ಕುರಿತು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು ಎಂದು ನಾನು ಭಾವಿಸುತ್ತೇನೆ. ಶ್ರೀಮತಿ ವೀಣಾ ಅಚ್ಚಯ್ಯನವರು ಈ ಪ್ರಶ್ನೆಯನ್ನು ಸುಮಾರು ಸಲ ಕೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈ ಕುರಿತು ಮಾನ್ಯ ಅರಣ್ಯ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**(ಮುಂದು)**

**(321) 09–03–2021 12.50 ಡಿಎಸ್–ಎಂಡಿ**

**ಆ) ವಿಷಯ:–** ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಡೊಮಗೇರಾ ಗ್ರಾಮವನ್ನು ನೂತನ ದಾಂಡೇಲಿ ತಾಲ್ಲೂಕಿಗೆ ಸೇರಿಸಬಾರದೆಂಬ ಬಗ್ಗೆ.

---

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಡೊಮಗೇರಾ ಗ್ರಾಮವನ್ನು ದಾಂಡೇಲಿ ತಾಲ್ಲೂಕಿಗೆ ಸೇರ್ಪಡೆಗೊಳಿಸಬಾರದೆಂದು ಆಗ್ರಹಿಸಿ ಗ್ರಾಮಸ್ಥರು ಪ್ರತಿಭಟನೆ ಮಾಡುತ್ತಿದ್ದು, ಈಗಾಗಲೇ ಸದರಿ ವಿಷಯದಲ್ಲಿ ಸಂಬಂಧಪಟ್ಟ ಗ್ರಾಮಸ್ಥರು ಎಲ್ಲಾ ಅಧಿಕಾರಿಗಳಿಗೆ ಪತ್ರದ ಮುಖಾಂತರ ಕೂಡ ವಿನಂತಿಸಿಕೊಂಡಿದ್ದೇವೆ. ಹಳಿಯಾಳ ತಲ್ಲೂಕಿನ ಡೊಮಗೇರಾ ಗ್ರಾಮವನ್ನು ಹಳಿಯಾಳಕ್ಕೆ ಸೇರಿಸಲು ಅವಶ್ಯ ಕಾರಣಗಳು ಇರುತ್ತದೆ.

1. ಹಳಿಯಾಳ ತಾಲ್ಲೂಕು ಕೇವಲ 7 ಕಿ.ಮೀ. ಅಂತರದಲ್ಲಿರುತ್ತದೆ. ಸದರಿ ಗ್ರಾಮದ ಎಲ್ಲಾ ವ್ಯವಹಾರಗಳು ಹಳಿಯಾಳದಲ್ಲಿಯೇ ನಡೆಯುತ್ತದೆ. ಈಗ ಹೊಸದಾಗಿ ರಚನೆಯಾದ ದಾಂಡೇಲಿ ತಾಲ್ಲೂಕು ಕೇಂದ್ರ ಸುಮಾರು 15 ಕಿ.ಮೀ. ದೂರವಿರುತ್ತದೆ. ಇದರಿಂದ ಗ್ರಾಮಸ್ಥರಿಗೆ ತೊಂದರೆಯಾಗುತ್ತದೆ.
2. ಸದರಿ ಡೊಮಗೇರಾ ಗ್ರಾಮದ ಎಲ್ಲಾ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸಕ್ಕೆ ಸಮೀಪದ ಹಳಿಯಾಳಕ್ಕೆ ಹೋಗುತ್ತಾರೆ ಹಾಗೂ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಹಳಿಯಾಳ ಬಹಳ ಅನುಕೂಲವಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

3. ಡೊಮಗೇರಾ ಗ್ರಾಮದಿಂದ ಕೆಸರೊಳ್ಳಿ ಗ್ರಾಮ ಪಂಚಾಯತಿ ಕೇವಲ 3 ಕಿ.ಮೀ ಅಂತರದಲ್ಲಿರುತ್ತದೆ. ಆದರೆ ಹೊಸದಾಗಿ ಸೇರ್ಪಡೆಯಾದ ದಾಂಡೇಲಿ ತಾಲ್ಲೂಕಿನ ಆಲೂರು ಗ್ರಾಮ ಪಂಚಾಯಿತಿ 9 ಕಿ.ಮೀ ಅಂತರವಿರುತ್ತದೆ ಮತ್ತು ಅರಣ್ಯದ ಭಾಗವಾಗಿರುತ್ತದೆ.
4. ಡೊಮಗೇರಾ ಗ್ರಾಮವು ಕೃಷಿ ಅವಲಂಬಿತವಾಗಿದ್ದು, ಸದರಿ ಗ್ರಾಮಸ್ಥರಿಗೆ ಬೇಕಾದ ಕೃಷಿ ಸಾಮಾಗ್ರಿಗಳು ಹಳಿಯಾಳದಲ್ಲಿ ಸುಲಭವಾಗಿ ಸಿಗುತ್ತದೆ. ಹಾಗೂ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ಎ.ಪಿ.ಎಂ.ಸಿ. ಕೂಡ ಹತ್ತಿರವಿರುತ್ತದೆ.
5. ಡೊಮಗೇರಾ ಗ್ರಾಮದಲ್ಲಿ ಸಹಕಾರಿ ಸೇವಾ ಕೇಂದ್ರ (ಸೊಸೈಟಿ) ಪಕ್ಕದ ಯಡೋಗಾ ಗ್ರಾಮದಲ್ಲಿದ್ದು ಕೇವಲ 2 ಕಿ.ಮೀ. ಅಂತರದಲ್ಲಿದೆ. ಆದರೆ ದಾಂಡೇಲಿ 15 ಕಿ.ಮೀ. ದೂರವಿದ್ದು ಜನರಿಗೆ ಮಹಿಳೆಯರಿಗೆ ಓಡಾಡಲು ತೊಂದರೆಯಾಗುತ್ತದೆ.
6. ಡೊಮಗೇರಾ ಗ್ರಾಮವು ಹಳಿಯಾಳ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿದೆ. ಮತ್ತು ಎಲ್ಲಾ ಬ್ಯಾಂಕಿನ ಆರ್ಥಿಕ ಚಟುವಟಿಕೆಗಳು ಹಳಿಯಾಳದಲ್ಲಿ ನಡೆಯುತ್ತವೆ.

ಇವೆಲ್ಲಾ ಕಾರಣಗಳಿಂದ ಡೊಮಗೇರಾ ಗ್ರಾಮದ ಹಿತದೃಷ್ಟಿಯಿಂದ ಡೊಮಗೇರಾ ಗ್ರಾಮವು ದಾಂಡೇಲಿಗೆ ಸೇರ್ಪಡೆಗೊಳಿಸದೇ ಹಳಿಯಾಳ ತಾಲ್ಲೂಕಿನಲ್ಲಿಯೇ ಇಡಬೇಕೆಂದು ಮಾನ್ಯ ಕಂದಾಯ ಸಚಿವರಿಗೆ ತಮ್ಮ ಮುಖಾಂತರ ವಿನಂತಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಕಾಂತ್ ಘೋಟ್ನೇಕರ್‌ರವರು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಕಂದಾಯ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಇ) ವಿಷಯ:-** ಕಾಫಿ ಬೆಳೆಗಾರರಿಗೆ ಸರ್ಕಾರದ ನೆರವು ಕೋರಿ ಮನವಿ.

---

**ಶ್ರೀ ಕೆ.ಹರೀಶ್‌ಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕೊಡಗು-ಚಿಕ್ಕಮಗಳೂರು ಇತರೆ ಕಾಫಿ ಬೆಳೆಯುವ ಜಿಲ್ಲೆಗಳಲ್ಲಿ ಕಾಫಿ ಬೆಳೆಗಾರರು ಬೆಲೆ ಕುಸಿತ, ಆನೆ ಹಾವಳಿ, ವಿದ್ಯುತ್ ಬಿಲ್‌ನ ಹೊರೆ, ಕಾರ್ಮಿಕರ ಕೊರತೆ, ಅಕಾಲಿಕವಾಗಿ ಸುರಿದ ಆಲಿಕಲ್ಲು ಮಳೆಯಿಂದಾಗಿ ಬೆಳೆ ನಷ್ಟದಿಂದ ರೋಸಿ ಹೋಗಿರುತ್ತಾರೆ. ಆದ್ದರಿಂದ ಸರ್ಕಾರವು ಕಾಫಿ ಬೆಳೆಗಾರರ ನೆರವಿಗೆ ಧಾವಿಸಿ ಕೃಷಿ ವಿದ್ಯುತ್ ಪಂಪ್‌ಸೆಟ್‌ಗಳಿಗಿರುವಂತೆ 10 ಹೆಚ್.ಪಿ. ಗಿಂತ ಕೆಳಗಿರುವ ವಿದ್ಯುತ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಂಪ್‌ಸೆಟ್‌ಗಳಿಗೆ ರಿಯಾಯಿತಿ ನೀಡುವುದು, ಆನೆ ದಾಳಿಯಿಂದ ಬಚಾವಾಗಲು ಕಾಲರ್ ಐಡಿ ಮತ್ತು ಸೋಲಾರ್ ವಿದ್ಯುತ್ ಬೇಲಿ ನಿರ್ಮಿಸಲು ಶೇಕಡ 75 ರಷ್ಟು ರಿಯಾಯಿತಿ ನೀಡುವುದು ಸಹಕಾರಿ ಸಂಸ್ಥೆಗಳಿಂದ ಶೂನ್ಯ ಬಡ್ಡಿ ದರದಲ್ಲಿ ಈ ಮೊದಲು ಇರುವಂತೆ ಕುಟುಂಬದ ಇಬ್ಬರು ಸದಸ್ಯರಿಗೆ ಸಾಲ ನೀಡುವುದು ಸೇರಿದಂತೆ ಸರ್ಕಾರವು ಒಟ್ಟಾರೆಯಾಗಿ ಕಾಫಿ ಬೆಳೆಗಾರರ ನೆರವಿಗೆ ಧಾವಿಸಬೇಕೆಂದು ನಾನು ಮನವಿ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಈ ವಿಷಯವನ್ನು ತಾವು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಇದರಿಂದ ವಾಸ್ತವವಾಗಿ ಭಾರೀ ಸಮಸ್ಯೆಯುಂಟಾಗಿದೆ. ಇದರ ಬಗ್ಗೆ ಸದನದಲ್ಲೂ ಹಲವಾರು ಬಾರಿ ಚರ್ಚೆಯಾಗಿದೆ. ಆದರೆ ಇದಕ್ಕೆ ಎಲ್ಲೂ ಪರಿಹಾರ ಸಿಕ್ಕಿಲ್ಲ. ಈ ವಿಷಯ ಮತ್ತೆ ಮತ್ತೆ ಪ್ರಸ್ತಾಪವಾಗುತ್ತಲೇ ಇದೆ. ಆದ್ದರಿಂದ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು.

**ಈ) ವಿಷಯ:–** ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಚುನಾವಣೆ ಬಗ್ಗೆ.

---

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಚುನಾವಣೆಯನ್ನು ನಡೆಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಗಳ ವಾರ್ಡ್ ಮರು ವಿಂಗಡನೆಯನ್ನು ಮಾಡಿದ್ದು, ಸದರಿ ವಾರ್ಡ್ ಮರು ವಿಂಗಡನೆ ಬಗ್ಗೆ ಸಾರ್ವಜನಿರಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ದಿನಾಂಕ 10.03.2021 ರವರೆಗೆ ಅವಕಾಶವನ್ನು ಒದಗಿಸಿ ಕೊಟ್ಟಿರುತ್ತದೆ. ಆದರೆ ಸದರಿ ವಾರ್ಡ್ ಮರು ವಿಂಗಡನೆಗಳ ಬಗ್ಗೆ ಆಕ್ಷೇಪಣೆ ಸಲ್ಲಿಸಲು ಅವಶ್ಯವಾಗಿದ್ದು, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವಾರ್ಡ್ ಮರು ವಿಂಗಡನೆಗಳ ನಕಾಶೆಯು ಜಿಲ್ಲಾಡಳಿತ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಕರಡು ಅಧಿಸೂಚನೆ ಪ್ರಕಟಿಸಿದ ಕೂಡಲೇ ಕಚೇರಿಯಲ್ಲಿ ಸಾರ್ವಜನಿಕರಿಗೆ ಪ್ರಕಟಿಸಬೇಕಾಗಿತ್ತು. ಆದರೆ ಅದನ್ನು ಮಾಡಿರಲಿಲ್ಲ. 4 ದಿನಗಳ ಹಿಂದೆ ಅಧಿಕಾರಿಗಳ ಗಮನಕ್ಕೆ ತಂದ ಮೇಲೆ ಮಾಹಿತಿಯನ್ನು ಕಚೇರಿಯಲ್ಲಿ ಹಾಗೂ ಅಂತರ್ಜಾಲದಲ್ಲಿ ಪ್ರಕಟಿಸಿದ್ದಾರೆ. ಇದರಿಂದಾಗಿ ಸಾರ್ವಜನಿಕರಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಸೂಕ್ತ ಕಾಲಾವಕಾಶ ದೊರೆತಿರುವುದಿಲ್ಲ. ಆದ್ದರಿಂದ ಸದರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಕ್ಷೇಪಣೆ ಸಲ್ಲಿಸುವ ಕಾಲಾವಕಾಶವನ್ನು ದಿನಾಂಕ: 20.03.2021 ರವರೆಗೆ ಮುಂದುವರೆಸಲು ಅವಕಾಶ ಒದಗಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ನಗರಾಭಿವೃದ್ಧಿ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಉ) ವಿಷಯ:–** ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಅರಣ್ಯ ಪ್ರದೇಶಕ್ಕೆ ಬೆಂಕಿಬಿದ್ದು ಅರಣ್ಯ ನಾಶವಾಗುತ್ತಿರುವ ಬಗ್ಗೆ.

---

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳು ಸಂಪದ್ಭರಿತ ಅರಣ್ಯ ಪ್ರದೇಶದಿಂದ ಕೂಡಿದ್ದು, ಮೂರು ಸಂರಕ್ಷಿತ ವನ್ಯಧಾಮಗಳು ರಾಷ್ಟ್ರೀಯ ಉದ್ಯಾನವನಗಳು ಈ ಜಿಲ್ಲೆಯಲ್ಲಿವೆ. ಆದರೆ ಈ ಜಿಲ್ಲೆಗಳ ಅರಣ್ಯ ಪ್ರದೇಶಕ್ಕೆ ಪ್ರತಿ ವರ್ಷ ಬೆಂಕಿ ಬಿದ್ದು ಅಪಾರ ಅರಣ್ಯ ನಾಶವಾಗುತ್ತಿದ್ದು, ವನ್ಯ ಜೀವಿಗಳು ಕೂಡ ಸಾಯುತ್ತಿವೆ. ಕಳೆದ 15–20 ದಿನಗಳಿಂದ ಈಚೆಗೆ ಈ ಎರಡೂ ಜಿಲ್ಲೆಗಳಲ್ಲಿ ಅರಣ್ಯಕೆ ಬೆಂಕಿ ಬಿದ್ದಿರುವ ಪ್ರಕರಣಗಳು ಈ ಕೆಳಗಿನಂತಿವೆ.

ಕಳೆದ ಶನಿವಾರ ಕಾವೇರಿ ವನ್ಯಜೀವಿಧಾಮದ ವ್ಯಾಪ್ತಿಯ ಬಂಡಹಳ್ಳಿ ಬಾವಿಗುಡ್ಡ ಅರಣ್ಯದಲ್ಲಿ ಬೆಂಕಿ ಬಿದ್ದು ನೂರಾರು ಎಕರೆ ಅರಣ್ಯ ನಾಶವಾಗಿದೆ. ಬೃಹತ್ ಗುಡ್ಡದಲ್ಲಿರುವ ಅರಣ್ಯಕ್ಕೆ ಬಿದ್ದ ಬೆಂಕಿ ಸುತ್ತಮುತ್ತಲ ಪ್ರದೇಶಕ್ಕೆಲ್ಲಾ ಕಾಣುತ್ತಿತ್ತು. ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ನಾಗರಹೊಳೆ ಅರಣ್ಯ ವ್ಯಾಪ್ತಿಗೆ ಸೇರುವ ಕಬನಿ ಹಿನ್ನೀರಿನ ಅಂತರಸಂತೆ, ಡಿ.ಬಿ.ಕುಪ್ಪೆ ಅರಣ್ಯ ವಲಯಕ್ಕೆ ಸೇರಿದ ಉದ್ಬೂರು ಅರಣ್ಯ ಪ್ರದೇಶದಲ್ಲಿ ಕಳೆದ ಒಂದು ತಿಂಗಳಲ್ಲಿ ಐದು ಬಾರಿ ಬೆಂಕಿ ಬಿದ್ದಿದ್ದು, ಸುಮಾರು 30–40 ಎಕರೆ ಕಾಡು ಸುಟ್ಟು ಬೂದಿಯಾಗಿದೆ. ಕಳೆದ 3–4 ವರ್ಷಗಳಿಂದ ಪ್ರತಿ ಸಲ ಈ ಅಂತರಸಂತೆ ವಲಯದಲ್ಲಿ ಕಾಡ್ಗಿಚ್ಚಿಗೆ ಸುಮಾರು 20 ಹೆಕ್ಟೇರ್ ಕಾಡು ನಾಶವಾಗಿದೆ.

ಬಿಳಿಗಿರಿರಂಗನ ಬೆಟ್ಟ ಸಂರಕ್ಷಿತ ಅರಣ್ಯ ಪ್ರದೇಶದ ಬೈಲೂರು ಅರಣ್ಯದಲ್ಲಿ ನೂರಾರು ಎಕರೆಯಲ್ಲಿ ಬೆಳೆದಿರುವ ಬಿದಿರು ಮೆಳೆಗಳು ಒಣಗಿ ನಿಂತಿದ್ದು, ಅದಕ್ಕೆ ಬೆಂಕಿ ಬೀಳಬಹುದಾದ ಸಂಭವವಿರುವುದರಿಂದ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕಾಗಿರುತ್ತದೆ. ನಂಜನಗೂಡು ತಾಲ್ಲೂಕಿನ ಕೊಣನೂರು, ಹನುಮನಪುರ, ಬಿದರಹಳ್ಳಿ ಗ್ರಾಮಗಳ ವ್ಯಾಪ್ತಿಯ ಕಿರು ಅರಣ್ಯಕ್ಕೆ ಕಳೆದ ತಿಂಗಳಲ್ಲಿ 5 ಬಾರಿ ಬೆಂಕಿಬಿದ್ದು ಸುಮಾರು 15–20 ಎಕರೆ ಕಿರು ಅರಣ್ಯ ನಾಶವಾಗಿದ್ದು, ವನ್ಯಜೀವಿಗಳೂ ನಾಶವಾಗಿವೆ. ಕಳೆದ ತಿಂಗಳು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಳ್ಳೇಗಾಲ ತಾಲ್ಲೂಕಿನ ಜಾಗೇರಿ ಸಮೀಪದ ಬೋಳಿ ಗುಡ್ಡದ ಅರಣ್ಯಕ್ಕೆ ಬೆಂಕಿ ಬಿದ್ದು 10 ಎಕರೆ ಕಾಡು ನಾಶವಾಗಿದೆ. ಕಳೆದ ತಿಂಗಳಿನಲ್ಲಿ ಟಿ.ನರಸಿಪುರ ತಾಲ್ಲೂಕಿನ ತುಂಬಲ ವ್ಯಾಪ್ತಿಯ ಅರಣ್ಯಕ್ಕೆ ಬೆಂಕಿ ಬಿದ್ದು, 40 ಎಕರೆ ಕಿರು ಅರಣ್ಯ ನಾಶವಾಗಿದೆ. ಇನ್ನು ಮುಂದೆ 2-3 ತಿಂಗಳ ಕಾಲ ಬಿರುಬೇಸಿಗೆ ಇದ್ದು, ಅರಣ್ಯಕ್ಕೆ ಬೆಂಕಿ ಬೀಳಬಹುದಾದ ಸನ್ನಿವೇಶಗಳಿರುವುದರಿಂದ, ಕಾಡ್ಗಿಚ್ಚಿನಿಂದ ಕಾಡನ್ನು ಸಂರಕ್ಷಿಸಲು, ವನ್ಯ ಜೀವಿಗಳನ್ನು ಸಂರಕ್ಷಿಸಲು ಅರಣ್ಯ ಇಲಾಖೆಯವರು ಕೂಡಲೇ ಸೂಕ್ತ ಮುಂಜಾಗರೂಕತಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಅರಣ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ವನ್ಯ ಜೀವಿಗಳು ನೀರನ್ನು ಅರಸಿ ಕಾಡಂಚಿನ ಗ್ರಾಮಗಳಿಗೆ ನುಗ್ಗುವ ಭೀತಿ ಇರುವುದರಿಂದ ಕೂಡಲೇ ಕಾಡಿನ ಒಳಗೆ ಇರುವ ಬಾಂದಾರಗಳು ಕಟ್ಟೆಗಳಿಗೆ ನೀರನ್ನು ತುಂಬಿಸಿ, ವನ್ಯಜೀವಿಗಳಿಗೆ ನೀರು ಸಿಗುವಂತೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಅರಣ್ಯ ಸಚಿವರಿಗೆ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಅರಣ್ಯ ಮತ್ತು ಕನ್ನಡ ಸಂಸ್ಕೃತಿ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಊ) ವಿಷಯ:-** ಕುಂದಾಪುರ ತಾಲ್ಲೂಕಿನ ಹಾಲಾಡಿಯ ಸಮೀಪ ವಾರಾಹಿ ನದಿಯಿಂದ ಉಡುಪಿ ನಗರಕ್ಕೆ ಕುಡಿಯುವ ನೀರು ಪೂರೈಕೆ ಬಗ್ಗೆ.

---

**ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಕುಂದಾಪುರ ತಾಲ್ಲೂಕಿನ ಹಾಲಾಡಿಯ ಸಮೀಪ ವಾರಾಹಿ ನದಿಯಿಂದ 38 ಕಿ.ಮೀ. ದೂರದ ಉಡುಪಿ ನಗರಕ್ಕೆ ಮತ್ತು ಈ ಕೊಳವೆಯು ಹಾದು ಹೋಗುವ ಮಾರ್ಗ ಮಧ್ಯದಲ್ಲಿ ಬರುವ ಗ್ರಾಮ ಪಂಚಾಯಿತಿಗಳಿಗೆ ಶುದ್ಧ ಕುಡಿಯುವ ನೀರನ್ನು ಪೂರೈಕೆ ಮಾಡುವ 122 ಕೋಟಿ ರೂಪಾಯಿ ವೆಚ್ಚದ ಯೋಜನೆಯಲ್ಲಿ ಕೊಳವೆ ಮಾರ್ಗವು ಹಾದು ಹೋಗುವ ಸ್ಥಳಗಳ ಭೂಸ್ವಾಧೀನ ಮಾಡದೇ ರಸ್ತೆಯ ಪಕ್ಕದಲ್ಲಿಯೇ ಕಾಮಗಾರಿಯನ್ನು ಮಾಡಲು ಯೋಜಿಸಲಾಗಿರುತ್ತದೆ. ಇದರ ಅಂದಾಜು ಪಟ್ಟಿಯಲ್ಲಿ 6 ಅಡಿ ಆಳದಲ್ಲಿ ಲಭ್ಯವಿರುವ ಮಣ್ಣನ್ನು ಉಪಯೋಗಿಸಿ ನೀರು ಹಾಕಿ ಡಾಮಾಸು ಮಾಡಿ ಕೊಳವೆ ಅಳವಡಿಸಬೇಕಾಗಿದ್ದು, ಆದರೆ ವಾಸ್ತವದಲ್ಲಿ ನೇರವಾಗಿ ಕಂದಕದಲ್ಲಿ ಕೊಳವೆ ಅಳವಡಿಸಲಾಗುತ್ತಿದೆ. ಕೊಳವೆಗಳ ವೆಲ್ಡಿಂಗ್‌ಗಳನ್ನು ಕೂಡ ಸರಿಯಾಗಿ ಮಾಡಲಾಗಿರುವುದಿಲ್ಲ. ಅಂದಾಜು ಪಟ್ಟಿಯಲ್ಲಿ ಮಾನವ ಶ್ರಮಕ್ಕೆ ಅವಕಾಶವಿದ್ದರೂ ಸಂಪೂರ್ಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜೆಸಿಬಿಯಿಂದಲೇ ಕಾಮಗಾರಿಯನ್ನು ನಡೆಸಲಾಗುತ್ತಿದೆ. ಈ ಯೋಜನೆಯಲ್ಲಿ ಸಬ್ ಕಾಂಟ್ರಾಕ್ಟ್‌ಗೆ ಅವಕಾಶವಿಲ್ಲದಿದ್ದರೂ ಟೆಂಡರ್ ಪಡೆದ ಗುತ್ತಿಗೆದಾರರು ಸಬ್ ಕಾಂಟ್ರಾಕ್ಟ್ ಮೂಲಕ ಕಾಮಗಾರಿಯನ್ನು ನಡೆಸುತ್ತಿರುವುದು ಕಂಡು ಬಂದಿರುತ್ತದೆ. ತೀರಾ ಅವೈಜ್ಞಾನಿಕ ಮತ್ತು ಗುಣಮಟ್ಟವಿಲ್ಲದ ಈ ಕಾಮಗಾರಿಗಳಿಗೆ ಬಿಲ್‌ನ್ನು ಪಾವತಿಸುವ ಪೂರ್ವದಲ್ಲಿ ನುರಿತ ತಾಂತ್ರಿಕ ತಜ್ಞರ ಪರಿಶೀಲನೆ ನಡೆಸಿ ವರದಿ ಪಡೆಯುವುದು ಅತೀ ಅವಶ್ಯಕವಾಗಿರುತ್ತದೆ. ಇಲ್ಲವಾದಲ್ಲಿ ಭವಿಷ್ಯದಲ್ಲಿ ಆಗಬಹುದಾದ ಭಾರಿ ಅನಾಹುತಕ್ಕೆ ಸರ್ಕಾರವೇ ಜವಾಬ್ದಾರಿಯನ್ನು ಹೊರಬೇಕಾಗಿರುತ್ತದೆ. ಆದ್ದರಿಂದ ಸರ್ಕಾರವರು ಈ ಬಗ್ಗೆ ಪರಿಶೀಲಿಸಿ ಕೂಡಲೇ ಕಾಮಗಾರಿಯ ಬಗ್ಗೆ ತನಿಖೆ ನಡೆಸಿ ಗುಣಮಟ್ಟವನ್ನು ಪರಿಶೀಲಿಸಲು ಅಗತ್ಯ ಕ್ರಮವಹಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ನಗರಾಭಿವೃದ್ಧಿ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಖ) ವಿಷಯ:-** ಕಾರವಾರ ಜಿಲ್ಲಾ ವೈದ್ಯಕೀಯ ವಿಜ್ಞಾನ ಕಾಲೇಜಿಗೆ
ಭೂಮಿ ಒದಗಿಸುವ ಬಗ್ಗೆ.

---

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕಾರವಾರ ಜಿಲ್ಲಾ ವೈದ್ಯಕೀಯ ವಿಜ್ಞಾನ ಕಾಲೇಜಿಗೆ ದಾಖಲೆಗಳ ಪ್ರಕಾರ 23 ಎಕರೆ ಭೂಮಿ ಇರುವುದು. ಆದರೆ ವಾಸ್ತವದಲ್ಲಿ 17 ಎಕರೆ ಮಾತ್ರ ಕಾಣಿಸುತ್ತಿದೆ. ಉಳಿದ 6 ಎಕರೆ ಭೂಮಿಗಾಗಿ ಇದೀಗ ಹುಡುಕಾಟ ಪ್ರಾರಂಭವಾಗಿದೆ. ವೈದ್ಯಕೀಯ ವಿಜ್ಞಾನ ಸಂಸ್ಥೆಗಾಗಿ ಇದ್ದಂತಹ ಭೂಮಿಯನ್ನು ಇದಕ್ಕೆ ಹೊಂದಿಕೊಂಡಿರುವ ಕಾರಾಗೃಹದವರು (ಬಂದಿಖಾನೆ ಇಲಾಖೆಯವರು) ಹಾಗೂ ಖಾಸಗಿಯವರು ಅತಿಕ್ರಮಣ ಮಾಡಿರುವುದು ಎಂದು ಅನುಮಾನವಿರುತ್ತದೆ. ಈ ಅತಿಕ್ರಮಣ ದಶಕಗಳ ಹಿಂದೆಯೇ ಆಗಿರಬಹುದೆಂದು ಊಹಿಸಲಾಗಿದೆ. ಒತ್ತುವರಿಯಾಗಿರುವ ಜಾಗವನ್ನು ಪತ್ತೆ ಹಚ್ಚಲು ಸರ್ವೆ ಕಾರ್ಯ ಪ್ರಾರಂಭವಾಗಿದ್ದು ಅಂತಿಮ ಹಂತದಲ್ಲಿ ಇರುವುದಾಗಿ ಪತ್ರಿಕೆಯಲ್ಲಿ ವರದಿ ಮಾಡಲಾಗಿದೆ. ಈ ಎಲ್ಲಾ ಕಾರಣಗಳಿಂದ ಉತ್ತರ ಕನ್ನಡ ಜಿಲ್ಲೆಯ ಬಹುದಿನಗಳ ಬೇಡಿಕೆಯಾದ ಸುಸಜ್ಜಿತ ಜಿಲ್ಲಾ ಆಸ್ಪತ್ರೆ ನಿರ್ಮಾಣ ಆಗಬೇಕು ಎಂಬ ಕೂಗು ಕನಸಾಗಿಯೇ ಉಳಿದಿದೆ. ಸುಸಜ್ಜಿತ ಆಸ್ಪತ್ರೆ ನಿರ್ಮಾಣ ಆಗಬೇಕು ಎಂಬುದರ ಕುರಿತು ಇಲ್ಲಿಯವರೆಗೆ ಅನೇಕ ಹೋರಾಟಗಳು ನಡೆದಿವೆ. ಇದಲ್ಲದೇ ಅನೇಕ ಜನಪ್ರತಿನಿಧಿಗಳು ಸರ್ಕಾರದ ಮೇಲೆ ಒತ್ತಡ ತಂದಿದ್ದರೂ ಕೂಡ ಬೇಡಿಕೆ ಸಾಕಾರಗೊಳ್ಳದ್ದಕ್ಕಾಗಿ ಇಡೀ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜಿಲ್ಲೆಯ ಜನರು ಅತ್ಯಂತ ನಿರಾಸೆ ಹೊಂದಿದ್ದಾರೆ. ಸದ್ಯ ಪ್ರಾರಂಭವಾಗಿರುವ ಕಾರವಾರ ವೈದ್ಯಕೀಯ ಕಾಲೇಜಿನಲ್ಲಿ ಇನ್ನಷ್ಟು ಹೊಸ ವಿಭಾಗಗಳು ಪ್ರಾರಂಭವಾಗಬೇಕು, ಅದರ ಮೂಲಕ ಸಂಸ್ಥೆಯನ್ನು ಉನ್ನತ ದರ್ಜೆಗೆ ಎತ್ತರಿಸಬೇಕು ಎಂಬ ಆಸೆ ಸರ್ಕಾರಕ್ಕಿದ್ದರು ಭೂಮಿಯ ಕೊರತೆಯಿಂದ ಯಾವ ಬೇಡಿಕೆಗಳು ಈಡೇರದಂತೆ ಆಗಿದೆ.

ಆದ್ದರಿಂದ ಸರ್ಕಾರ ಈ ಕಡೆಗೆ ತೀವ್ರ ಗಮನಹರಿಸಿ ಕಾರವಾರ ಜಿಲ್ಲಾ ವೈದ್ಯಕೀಯ ವಿಜ್ಞಾನ ಕಾಲೇಜಿಗೆ ಇದ್ದಂತಹ ಭೂಮಿಯ ಅತಿಕ್ರಮಣವನ್ನು ಕೂಡಲೇ ಖಾಲಿ ಮಾಡಿಸಿ ವಶಕ್ಕೆ ಪಡೆಯಬೇಕು ಹಾಗು ಅವಶ್ಯವಿದ್ದಲ್ಲಿ ಹೆಚ್ಚಿನ ಜಾಗವನ್ನು ಒದಗಿಸಿ ಕಾರವಾರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸರ್ವಾಂಗೀಣಾ ಬೆಳವಣಿಗೆಗೆ ಸರ್ಕಾರ ಕೂಡಲೇ ಮುಂದಾಗಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**(ಮುಂದು)**

**(322)09–03–2021/1–00/ಬಿಕೆಪಿ–ಎಕೆ**

**ಎ) ವಿಷಯ:–** ಕೊಡಗು ಜಿಲ್ಲೆ ತಿತಿಮತಿ ಗ್ರಾಮ ಪಂಚಾಯಿತಿ ಹಾಗೂ ಕಾನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಾಡಿಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ಕಟ್ಟಲು ಅರಣ್ಯ ಇಲಾಖೆಯ ನಿಯಮಗಳು ಅಡ್ಡಿಯಾಗಿರುವ ಬಗ್ಗೆ.

– – –

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**ಮಾನ್ಯ ಸಭಾಪತಿಯವರೇ, ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:07–03–2021ರ ವಿಜಯಕರ್ನಾಟಕ ಪತ್ರಿಕೆಯಲ್ಲಿ **"ಹಾಡಿಗಳಲ್ಲಿ ಅಂಗನವಾಡಿ ಕಟ್ಟಡಕ್ಕೂ ಅಡ್ಡಿ"**ಎಂಬ ಶೀರ್ಷಿಕೆಯಡಿಯಲ್ಲಿ ಬಂದಿರುವ ವರದಿಯನ್ನು ಇಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ. ಕೊಡಗು ಜಿಲ್ಲೆ ತಿಮತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರೆಕಂಡಿ, ತಾಯಿರ ಸುಳಿ, ಜಂಗಲ್ ಹಾಡಿ, ಬಾಳುಮನೆ ಮತ್ತು ಖಾನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೋಣಿಗದ್ದೆ, ಬೋಮ್ಮಡು, ಕೊಂಗೆ ಮರ್ತಘೂ ನಾಗರಹೊಳೆ ಹಾಡಿಯ ಮಕ್ಕಳು ಅರಣ್ಯ ಇಲಾಖೆಯ ದೋರಣೆಯಿಂದ ಅಂಗನವಾಡಿ ಕೇಂದ್ರ ಮತ್ತು ಮೂಲ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಈ ಎಂಟು ಹಾಡಿಗಳಲ್ಲಿ ಇನ್ನೂರಕ್ಕೂ ಹೆಚ್ಚು ಮಕ್ಕಳಿದ್ದಾರೆ. ಇದನ್ನು ಮನಗಂಡು ಸ್ಥಳೀಯ ಗ್ರಾಮ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಂಚಾಯಿತಿಗಳು ಜೋಪಡಿಗಳನ್ನು ನಿರ್ಮಿಸಿಕೊಟ್ಟಿವೆ. ಇವುಗಳೇ ಇಲ್ಲಿನ ಅಂಗನವಾಡಿ ಕೇಂದ್ರಗಳಾಗಿವೆ. ಇದೀಗ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನರೇಗಾ ಯೋಜನೆಯಿಂದ ಇಲ್ಲಿ ಅಂಗನವಾಡಿ ಕೇಂದ್ರಗಳನ್ನು ಕಟ್ಟಲು ತಲಾ 8 ಲಕ್ಷ ರೂಪಾಯಿಗಳ ಅನುದಾನದಲ್ಲಿ ಕಟ್ಟಡ ಕಾಮಗಾರಿಗೆ ನೀಲನಕ್ಷೆಯನ್ನು ತಯಾರಿಸಿ ಅರಣ್ಯ ಇಲಾಖೆಯ ಅನುಮತಿಯನ್ನು ಕೇಳಿ ಹಲವು ತಿಂಗಳುಗಳೇ ಕಳೆದರೂ ಅರಣ್ಯ ಇಲಾಖೆ ಅನುಮತಿಯನ್ನು ನೀಡಿಲ್ಲ.

ಆನೆಚೌಕ್ರು ವನ್ಯಜೀವಿ ವಲಯದ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಈ ಹಾಡಿಗಳಿದ್ದು ಹೀಗಾಗಿ ಕಟ್ಟಡ ನಿರ್ಮಾಣ, ಕುಡಿಯುವ ನೀರಿನ ಯೋಜನೆ, ರಸ್ತೆ ಚರಂಡಿ ಕಾಮಗಾರಿಗಳನ್ನು ಕೈಗೊಳ್ಳುವಂತಿಲ್ಲ ಎಂದು ಅರಣ್ಯ ಇಲಾಖೆಯು ಈ ಪ್ರಸ್ತಾವನೆಯನ್ನು ತಿರಸ್ಕರಿಸಿದೆ, ಆದರೆ ಸರ್ಕಾರ ಈ ಹಾಡಿಗಳ ಜನರಿಗೆ ಹಕ್ಕು ಪತ್ರವನ್ನು ನೀಡಿದ್ದು, ಸರ್ಕಾರದ ಮೂಲಭೂತ ಸೌಕರ್ಯಗಳನ್ನು ಪಡೆಯುವ ಅರ್ಹತೆಯನ್ನು ಹಾಡಿಯ ಜನರೂ ಹೊಂದಿರುತ್ತಾರೆ. ಆದ್ದರಿಂದ ಅರಣ್ಯ ಇಲಾಖೆಯು ಈ ಕಠಿಣ ನೀತಿಯನ್ನು ನಿಲ್ಲಿಸಿ ಈ ಹಾಡಿಗಳ ಜನರಿಗೆ ಮೂಲಭೂತ ಸೌಕರ್ಯಗಳನ್ನು ನೀಡಲು ಮುಂದಾಗುವಂತೆ ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯರೇ, ಮಾನ್ಯ ಸದಸ್ಯರಾದ ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ. ರವರು ಕೊಡಗು ಜಿಲ್ಲೆಯ ಅಂಗನವಾಡಿ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಾಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಅರಣ್ಯ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಎ) ವಿಷಯ:-** ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕೊಪ್ಪ ಗ್ರಾಮದ ಕಾಲುವೆಗೆ ಘನತ್ಯಾಜ್ಯಗಳನ್ನು ಬಿಸಾಡಿ ಕಾಲುವೆ ಕಲುಷಿತಗೊಳ್ಳುತ್ತಿರುವ ಬಗ್ಗೆ.

- - -

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯರೇ, ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ತ್ಯಾಜ್ಯದಿಂದ ತುಂಬಿದ ಕೊಪ್ಪ ಕಾಲುವೆ, ಘನ ತ್ಯಾಜ್ಯ ಮತ್ತಿತರ ಭಾಗಗಳಿಂದ ಕೂಡಿದ ರಾಶಿಗಳಿಂದ ದುರ್ವಾಸನೆ ಬೀರುವ ಕಾಲುವೆ, ಸಾರ್ವಜನಿಕರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಕ್ರೋಶವಾಗಿರುವ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಟ್ಟ ಮಾನ್ಯ ಸಭಾಪತಿಯವರಿಗೆ ಧನ್ಯವಾದಗಳು.

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕೊಪ್ಪ ಗ್ರಾಮದ ಕೆರೆಯಿಂದ ಟಿ.ಬೆಳ್ಳೆಕೆರೆ, ತಗ್ಗಹಳ್ಳಿ, ಅರಗಿನಮೇಳೆ, ಸೇರಿದಂತೆ ಇತರ ಗ್ರಾಮಗಳ ರೈತರ ಜಮೀನಿಗೆ ಕೊಪ್ಪ ಕಾಲುವೆಯು ಸಂಪರ್ಕವನ್ನು ಕಲ್ಪಿಸುತ್ತಿದ್ದು, ನೂರಾರು ಎಕರೆ ಪ್ರದೇಶದಲ್ಲಿ ಬೆಳೆದಿರುವ ಬೆಳೆಗಳಿಗೆ ಈ ಕಾಲುವೆಯ ನೀರು ಆಧಾರವಾಗಿರುತ್ತದೆ. ಈ ಕಾಲುವೆ ಅಂತಿಮವಾಗಿ ಶಿಂಷಾ ನದಿಗೆ ಸೇರುತ್ತದೆ.

ಈ ಕಾಲುವೆಗೆ ಕೊಪ್ಪ ಗ್ರಾಮದ ವ್ಯಾಪಾರಿಗಳು ಘನತ್ಯಾಜ್ಯಗಳನ್ನು ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಬಿಸಾಡುತ್ತಿರುವುದರಿಂದ ಕೊಪ್ಪ ಬಸ್ ನಿಲ್ದಾಣದ ಬಳಿ ಹಾದುಹೋಗುವ ಈ ಕಾಲುವೆ ಕಲುಷಿತಗೊಂಡಿದ್ದು ದುರ್ವಾಸನೆ ಬೀರುತ್ತಿದ್ದು ಇದರಿಂದ ಸಾರ್ವಜನಿಕರಿಗೆ ರೋಗರುಜಿನ ಭೀತಿ ಉಂಟಾಗುತ್ತಿದ್ದು, ಅಲ್ಲದೆ ಕಾಲುವೆ ಸ್ವಚ್ಛಗೊಳ್ಳದ ಕಾರಣ ರೈತರು ಸಹ ಸಂಕಷ್ಟಕ್ಕೆ ಸಿಲುಕಿರುತ್ತಾರೆ. ಆದ್ದರಿಂದ, ಈ ಬಗ್ಗೆ ಸ್ಥಳೀಯ ಗ್ರಾಮ ಪಂಚಾಯಿತಿಯು ಸೂಕ್ತ ಗಮನಹರಿಸಿ ವ್ಯಾಪಾರಿಗಳು ಮತ್ತು ಸಾರ್ವಜನಿಕರು ಕಸವನ್ನು ಕಾಲುವೆಗೆ ಬಿಸಾಡದಂತೆ ಅಲ್ಲಲ್ಲಿ ಕಸದಬುಟ್ಟಿಗಳನ್ನು ಇಟ್ಟು ಕಸವನ್ನು ಕಸದ ಬುಟ್ಟಿಯಲ್ಲಿ ಹಾಕುವಂತೆ ಸಾರ್ವಜನಿಕರಿಗೆ ಮತ್ತು ವ್ಯಾಪಾರಿಗಳಿಗೆ ತಿಳುವಳಿಕೆಯನ್ನು ಮೂಡಿಸಬೇಕು ಹಾಗೂ ಸದರಿ ಕಾಲುವೆಯನ್ನು ಸ್ವಚ್ಛಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರವರು ಘನ ತ್ಯಾಜ್ಯ ವಿಲೇವಾರಿ ಬಗ್ಗೆ ಶೂನ್ಯವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**05. ಸಭೆಯ ಮುಂದಿಡಲಾದ ಕಾಗದಪತ್ರಗಳು**

**(ಪಟ್ಟಿಯನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**06. ಅರ್ಜಿಗಳನ್ನೊಪ್ಪಿಸುವುದು**

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):** ಮಾನ್ಯ ಸಭಾಪತಿಯವರೆ, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಮರಡಿಪುರ ಗ್ರಾಮದಲ್ಲಿ ಒತ್ತುವರಿಯಾಗಿರುವ ಗೋಮಾಳ ಜಮೀನನ್ನು ತೆರವುಗೊಳಿಸುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):** ಮಾನ್ಯ ಸಭಾಪತಿಯವರೆ, ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕು, ಪುರಸಭೆ ವ್ಯಾಪ್ತಿಯಲ್ಲಿ ಮಂಜೂರಾದ ನಿವೇಶನಗಳನ್ನು ಸಕ್ರಮಗೊಳಿಸುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ(ನಾಮ ನಿರ್ದೇಶಿತರು):** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದ ಖಾಸಗಿ ಪದವಿ ಪೂರ್ವ ಕಾಲೇಜುಗಳ/ಶಿಕ್ಷಣ ಸಂಸ್ಥೆಗಳ ಮೂಲಭೂತ ಸೌಲಭ್ಯಗಳ ಕುರಿತಂತೆ 2018ರ ಆದೇಶವನ್ನು ಪೂರ್ವಾನ್ವಯವಾಗುವಂತೆ ನಿರ್ದೇಶನ ನೀಡುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

**ಉಪ ಸಭಾಪತಿಯವರು:** ಅರ್ಜಿಗಳನ್ನೊಪ್ಪಿಸಲಾಯಿತು.

ಈಗ ಗಮನಸೆಳೆಯುವ ಸೂಚನೆಗಳು, ಮಾನ್ಯ ಸದಸ್ಯರಾದ ಶ್ರೀ ಎಂ ನಾರಾಯಣಸ್ವಾಮಿ, ವಿರೋಧ ಪಕ್ಷದ ಮುಖ್ಯ ಸಚೇತಕರು. ಅವರು ಕೇಳಿದ ಪ್ರಶ್ನೆಗೆ ಕಂದಾಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಎಂ ನಾರಾಯಣಸ್ವಾಮಿ, (ವಿರೋಧ ಪಕ್ಷದ ಮುಖ್ಯ ಸಚೇತಕರು):–**ಮಾನ್ಯ ಸಭಾಪತಿಯವರೇ, ಕಳೆದ ಬಾರಿ ನಡೆದಂತಹ ಅಧಿವೇಶನದಲ್ಲಿಯು ಸಹ ಈ ಪ್ರಶ್ನೆಯನ್ನು ಕೇಳಿದ್ದೆ. ಬಹಳ ಗಂಭೀರವಾದಂತಹ ಪ್ರಶ್ನೆ ಇದಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪುಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, 2–3 ಜನ ಮಾನ್ಯ ಸದಸ್ಯರುಗಳು ಮಾನ್ಯ ಮುಖ್ಯಮಂತ್ರಿಗಳಿಗೆ ಸರ್ಕಾರಿ ನೌಕರರ ವೇತನದ ವಿಚಾರವಾಗಿ ಕೇಳಿದಂತಹ ಪ್ರಶ್ನೆಗೆ ಕೊಟ್ಟಂತಹ ಉತ್ತರ ಸಮರ್ಪಕವಾಗಿಲ್ಲ. ಆದ್ದರಿಂದ ಆ ಉತ್ತರವನ್ನು ವಾಪಸ್ಸು ಪಡೆದುಕೊಂಡು ಮರು ಉತ್ತರ ಕೊಡಬೇಕೆಂದು ಕೇಳಿದ್ದಾರೆ ಹಾಗೂ ಪರಿಶೀಲಿಸಿ ಎಂದು ಸಹಿ ಹಾಕಿದ್ದಾರೆ. ಅದಕ್ಕೆ ಪ್ರತಿಗಳು ಬರುತ್ತದೆ. ಉತ್ತರದ ಪ್ರತಿಗಳು ಬಂದ ಮೇಲೆ ಉತ್ತರವನ್ನು ನೀಡಲಾಗುವುದು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಡಬೇಕು. ಜನರ ಸಮಸ್ಯೆಗಳಿಗೆ ಉತ್ತರ ಕೊಡಲಿಕ್ಕೆ ಮಂತ್ರಿಗಳು ಇರುವುದಿಲ್ಲ. ಅವರ ಬದಲಿಗೆ ಸಭಾನಾಯಕರು ಅರ್ಧ ಉತ್ತರವನ್ನು ಕೊಡುತ್ತಾರೆ. ನಂತರ ಸದಸ್ಯರುಗಳಿಗೆ 1% ಉತ್ತರ ಸಿಗುವುದಿಲ್ಲ. ಸರಿಯಾದ ಉತ್ತರ ಬಂದರೆ ಜನರ ಸಮಸ್ಯೆಗಳು ಬಗೆಹರಿಯುತ್ತವೆ,

**ಉಪ ಸಭಾಪತಿಯವರು:-** ಶ್ರೀ ಎಂ ನಾರಾಯಣ ಸ್ವಾಮಿಯವರ ಪ್ರಶ್ನೆಗೆ ಉತ್ತರ ಬಂದಿದೆ. ಮೊದಲನೆ ಪ್ರಶ್ನೆಗೆ ಈಗ ಉತ್ತರ ತರಿಸುತ್ತೇವೆ ಎಂದು ಸಭಾನಾಯಕರು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-**ಮಾನ್ಯ ಸಭಾಪತಿಯವರೆ, ಮಾನ್ಯ ಮಂತ್ರಿಗಳು ಮಾನ್ಯ ಸದಸ್ಯರುಗಳ ನಿಯಮ330, ಗಮನಸೆಳೆಯುವ ಸೂಚನೆಗಳಿಗೆ ಉತ್ತರಗಳನ್ನು ಸಿದ್ಧಗೊಳಿಸಿ ಅವರವರ ಮನೆಗಳಿಗೆ ಕಳುಹಿಸಿದರೆ ಸರಿ ಹೋಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ಹಿಂದೆ ಶ್ರೀ ಎಸ್.ಆರ್. ಪಾಟೀಲ್ ರವರು ಸಭಾನಾಯಕರಾಗಿದ್ದಂತಹ ಸಂದರ್ಭದಲ್ಲಿ ಮಂತ್ರಿಗಳ ಪರವಾಗಿ ಉತ್ತರ ಕೊಡುತ್ತಿದ್ದರು. ಅದನ್ನು ನಾವುಗಳು ಸ್ವೀಕಾರ ಮಾಡುತ್ತಿದ್ದೆವು. ಹಾಗೆಯೇ ಈಗ ಮಂತ್ರಿಗಳು ಉತ್ತರವನ್ನು ಕಳುಹಿಸಿ ಕೊಟ್ಟಿದ್ದಾರೆ. ನಾನು ಅದನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

**(ಮುಂದು)**

**(323) 09.03.2021 01.10 ಎಸ್‌ಬಿ-ಎಕೆ**

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮುಂದಿನ ದಿನಗಳಲ್ಲಿ ಮಾನ್ಯ ಸಚಿವರು ಸದನದಲ್ಲಿ ಹಾಜರಿರುವ ವ್ಯವಸ್ಥೆಯನ್ನು ತಾವು ಮಾಡಬೇಕು.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 27.01.2021ರಂದು ನಡೆದ ಅಧಿವೇಶನದಲ್ಲಿಯೂ ನಾನು ಇದೇ ವಿಷಯವನ್ನು ಪ್ರಸ್ತಾಪ ಮಾಡಿದ್ದೆನು. ಸಂಬಂಧಪಟ್ಟ ಕಂದಾಯ ಸಚಿವರು ಇದಕ್ಕೆ ಉತ್ತರ ಕೊಡಬೇಕಿತ್ತು. ಬೆಳಗಿನಿಂದ ಸಂಜೆಯವರೆವಿಗೂ ಸಚಿವರು ಕಾದಿದ್ದರು. ನನ್ನ ಪ್ರಶ್ನೆ ಬರುವ ವೇಳೆಗೆ ಬೇರೆ ಸಚಿವರು ನಾವು ಉತ್ತರವನ್ನು ಕೊಡುತ್ತೇವೆಂದು ಹೇಳಿ ಅವರನ್ನು ಹೊರಗೆ ಕಳುಹಿಸಿದರು. ಅಂದು ಕೂಡ ನಾನು ಇದು ಬಹಳಷ್ಟು ಗಂಭೀರವಾದ ವಿಷಯವಾಗಿರುವುದರಿಂದ ಸಂಬಂಧಪಟ್ಟ ಸಚಿವರೇ ಇದಕ್ಕೆ ಉತ್ತರಿಸಬೇಕೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರಲ್ಲಿ ಮನವಿ ಮಾಡಿಕೊಂಡಿದ್ದೆನು. ಅದಕ್ಕೆ ಮಾನ್ಯ ಸಚಿವರು ನೀಡುವ ಉತ್ತರವನ್ನು ಕೇಳಿ, ಸಮಾಧಾನವಾಗದಿದ್ದಲ್ಲಿ ಪುನಃ ಕೇಳಿ ಎಂದು ಮಾನ್ಯ ಸಭಾಪತಿಯವರು ಹೇಳಿದ್ದರು. ಇಂದು ಅದೇ ವಿಷಯವನ್ನು ನಾನು ಮರು ಪ್ರಸ್ತಾಪಿಸುತ್ತಿದ್ದೇನೆ. ಈಗಲೂ ಕೂಡ ಇಲ್ಲಿ ಸಚಿವರು ಹಾಜರಿಲ್ಲ. ಸುಮಾರು 70 ಕೋಟಿ ಬೆಲೆ ಬಾಳುವ 4 ಎಕರೆ 18 ಗುಂಟೆ ಸರ್ಕಾರಿ ಜಮೀನನ್ನು ಅಕ್ರಮವಾಗಿ ಭಿಂಟಿತಜಢುಂಟ ಮಾಡಿ, ಖಾತೆ ಮಾಡಿ ಅಭಿವೃದ್ಧಿ ಪಡಿಸುತ್ತಿರುವ ಫೋಟೊಗಳನ್ನು ನಾನು ನೀಡಿದ್ದೇನೆ. ಹಿಂದಿನ ಬಾರಿ ಈ ವಿಷಯವನ್ನು ಪ್ರಸ್ತಾಪಿಸಿದಾಗ, ಅಲ್ಲಿ ನಡೆಯುತ್ತಿರುವ ಕೆಲಸವನ್ನು ನಿಲ್ಲಿಸಬೇಕೆಂದು ನಾನು ಹೇಳಿದ್ದೆನು. ಮಾನ್ಯ ಸಚಿವರು ನಿಲ್ಲಿಸುತ್ತೇವೆಂದು ಹೇಳಿದ್ದರು. ಆದರೂ ಕೂಡ ರಾಜಾರೋಷವಾಗಿ ಗೂಂಡಾಗಳನ್ನು ಇಟ್ಟುಕೊಂಡು ರಾತ್ರಿ-ಹಗಲು ಕೆಲಸ ಮಾಡುತ್ತಿದ್ದಾರೆ. ಸರ್ಕಾರಿ ಜಮೀನನ್ನು ಉಳಿಸಿಕೊಳ್ಳುವಂತಹ ಜವಾಬ್ದಾರಿ ಇರುವಂತಹ ಮಾನ್ಯ ಕಂದಾಯ ಸಚಿವರು ಇದಕ್ಕೆ ಉತ್ತರಿಸುವುದಿಲ್ಲ ಎನ್ನುವುದಾದರೆ ನಾನು ಏಕೆ ಪ್ರಶ್ನೆಯನ್ನು ಕೇಳಬೇಕು?

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕೋಟ್ಯಂತರ ರೂಪಾಯಿಗಳ ವ್ಯವಹಾರವು ನಡೆಯುತ್ತಿದೆ.

**ಉಪ ಸಭಾಪತಿಯವರು:–** ಮಾನ್ಯ ಹರಿಪ್ರಸಾದ್ ಅವರೇ, ಇದಕ್ಕೆ ಉತ್ತರ ಬಂದಿದೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮತ್ತೆ ಮತ್ತೆ ಉತ್ತರವನ್ನು ನೀಡುತ್ತಿದ್ದರೆ ಅಷ್ಟೇ ಸಾಕೆ?

**ಶ್ರೀ ಬಿ.ಎ.ಬಸವರಾಜು (ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಇದು ನನ್ನ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯವಾಗಿದೆ. ನಿಜವಾಗಿಯೂ ಹೇಳುತ್ತಿದ್ದೇನೆ, ಇದು ಸರ್ಕಾರಿ ಸ್ವತ್ತಲ್ಲ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ, ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ಸಚಿವರು ಅವರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯವನ್ನು ಏನೋ ಹೇಳುತ್ತಿದ್ದಾರೆ. ಕೇಳಿಕೊಂಡು ಮಾತನಾಡಿ. ನಿಮಗೆ ಮಾತನಾಡಲು ಅವಕಾಶವಿದೆ. ಈಗ ಉತ್ತರ ಬಂದಿದೆ. ಮಾನ್ಯ ಸಚಿವರು ಸಂಬಂಧಪಟ್ಟ ಸ್ಥಳೀಯ ಶಾಸಕರಾಗಿರುವ ದಿಸೆಯಿಂದ ಅವರು ತಮ್ಮ ವಿಚಾರವನ್ನು ಹೇಳುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):-** ಮಾನ್ಯ ನಾರಾಯಣಸ್ವಾಮಿಯವರೇ, ಮಾನ್ಯ ನಗರಾಭಿವೃದ್ಧಿ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ. ಕೇಳಿ. ನಿಮಗೆ ಸಮಾಧಾನವಾಗದಿದ್ದಲ್ಲಿ ಪುನಃ ನೋಡೋಣ. ಒಮ್ಮೆ ಕೇಳುವುದರಲ್ಲಿ ತೊಂದರೆಯೇನು?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕೋಟ್ಯಂತರ ರೂಪಾಯಿಗಳ ವ್ಯವಹಾರ ಅಲ್ಲಿ ನಡೆದಿದೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಇದು ಸರ್ಕಾರಿ ಜಮೀನಲ್ಲ. ಅವರು ದುರುದ್ದೇಶಪೂರ್ವಕವಾಗಿ ಇದನ್ನು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಸರ್ಕಾರಿ ಜಮೀನು ಎನ್ನುವ ದಾಖಲೆಗಳಿದ್ದರೆ ಕೊಡಲಿ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್ ಅವರೇ, ನೀವು ಕುಳಿತುಕೊಳ್ಳಿ. ಮಾನ್ಯ ನಾರಾಯಣಸ್ವಾಮಿಯವರು ಮಾತನಾಡಲಿ. ನಂತರ ನಿಮಗೂ ಅವಕಾಶವಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರಿಂದ ಉತ್ತರವನ್ನು ನಾವು ಕೇಳುತ್ತಿದ್ದೇವೆ.

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್ ಅವರೇ, ಮಾನ್ಯ ಕಂದಾಯ ಸಚಿವರ ಪರವಾಗಿ ಮಾನ್ಯ ಸಭಾನಾಯಕರು ಉತ್ತರವನ್ನು ಕೊಡುತ್ತಾರೆ. ಅವರು ಸಮರ್ಥರೂ ಇದ್ದಾರೆ.

**(ಗೊಂದಲ)**

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಇದು ನನ್ನ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೊಳಪಡುವುದರಿಂದ ನಾನು ಮಾತನಾಡುತ್ತಿದ್ದೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಲ್ಲಿ ಯಾರು ಉತ್ತರವನ್ನು ಕೊಡಲು ಹೊರಟಿದ್ದಾರೆಯೋ ಅವರೇ ಶಾಮೀಲಾಗಿದ್ದಾರೆ. ಆದ್ದರಿಂದ ಮಾನ್ಯ ಕಂದಾಯ ಸಚಿವರೇ ಉತ್ತರವನ್ನು ಕೊಡಬೇಕು. ಸುಮಾರು 70 ಕೋಟಿ ರೂಪಾಯಿ ಬೆಲೆ ಬಾಳುವ ಸರ್ಕಾರಿ ಆಸ್ತಿಯನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಳಿಸಬೇಕಾದವರು ಖಾತೆ ಮಾಡಿ ಮಾರಾಟ ಮಾಡಲು ಹೊರಟಿದ್ದಾರೆ. ಇಂದು ಕೂಡ ಅದು ಸರ್ಕಾರಿ ಬಂಜರು ಭೂಮಿ ಎಂದು ಇದೆ. ಆದ್ದರಿಂದ ಮಾನ್ಯ ಕಂದಾಯ ಸಚಿವರು ಬಂದ ನಂತರ ನಾನು ಇದರ ಬಗ್ಗೆ ಪ್ರಸ್ತಾಪ ಮಾಡಬಯಸುತ್ತೇನೆ. ತಾವು ನನ್ನ ಸಹಾಯಕ್ಕೆ ಬರಬೇಕು. ಸರ್ಕಾರಿ ಜಮೀನನ್ನು ಉಳಿಸಬೇಕಾದುದು ನಮ್ಮ-ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಇಂದು ಹಗಲು ದರೋಡೆ ನಡೆಯುತ್ತಿದೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಅದು ಸರ್ಕಾರಿ ಜಮೀನಾಗಿದ್ದರೆ, ಖಂಡಿತವಾಗಿಯೂ ಸರ್ಕಾರ ಅದಕ್ಕೆ ಒಪ್ಪಿಗೆಯನ್ನು ನೀಡುತ್ತಿತ್ತು. ನನಗೆ ಅದರ ಬಗ್ಗೆ ಎಲ್ಲಾ ಮಾಹಿತಿ ತಿಳಿದಿದೆ. ಏಕೆ ಈ ರೀತಿ ಮಾತನಾಡುತ್ತಿದ್ದಾರೆ? ಈ ಭಾಗದಲ್ಲಿ ಅವರು ಕುಳಿತಿದ್ದರಲ್ಲ, ಆಗ ಏಕೆ ಮಾತನಾಡಲಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನನಗೆ ಉತ್ತರವನ್ನು ಕೊಡಲು ಇವರು ಯಾರು? ಅವರ ಉತ್ತರವನ್ನು ನಾನು ಕೇಳುವುದಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಅವರು ಸರ್ಕಾರದ ಒಬ್ಬ ಸಚಿವರಾಗಿರುವುದರಿಂದ ಅವರು ಮಾತನಾಡುತ್ತಿದ್ದಾರೆ. ಅವರ ಉತ್ತರಕ್ಕೆ ತಮಗೆ ಸಮಾಧಾನವಾಗಲಿಲ್ಲವೆಂದರೆ ಆಗ ಪ್ರಶ್ನೆ ಮಾಡಿ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ತಾವು ಕೇಳಿದ ಪ್ರಶ್ನೆಗೆ ಕಂದಾಯ ಸಚಿವರಿಂದ ಉತ್ತರ ಬಂದಿದೆ. ಆ ಉತ್ತರವು ನಿಮಗೆ ಸಮಾಧಾನಕರವಾಗಿಲ್ಲವೆಂದರೆ ಆಗ ಪ್ರಶ್ನೆ ಮಾಡಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ಒಂದು ಮನವಿ. ಕಳೆದ ಬಾರಿ ದಿ.27.01.2021ರಂದು ಕೇಳಿದಾಗಲೂ ಕೂಡ ಬೇರೆ ಸಚಿವರು ಉತ್ತರವನ್ನು ಕೊಟ್ಟರು. ಆ ಉತ್ತರ ನನಗೆ ಸಮಾಧಾನಕರವಾಗಿಲ್ಲದ ಕಾರಣ ಇಂದು ಕೂಡ ಕೇಳಿದ್ದೇನೆ. ಇಂದು ನಾನು ಕೇಳಿರುವುದಕ್ಕೆ ಮಾನ್ಯ ಕಂದಾಯ ಸಚಿವರು ಉತ್ತರವನ್ನು ನೀಡಬೇಕಾಗಿತ್ತು. ಈಗಲೂ ಬೇರೆಯವರಿಂದಲೇ ಉತ್ತರವನ್ನು ಕೇಳಬೇಕೆನ್ನುವುದಾದರೆ ನಾನೇಕೆ ಪ್ರಶ್ನೆ ಕೇಳಬೇಕು. ಸುಮಾರು 70

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋಟಿ ಬೆಲೆಬಾಳುವ 4 ಎಕರೆ 18 ಗುಂಟೆ ಸರ್ಕಾರಿ ಆಸ್ತಿಯನ್ನು ಹಗಲು ದರೋಡೆ ಮಾಡುತ್ತಿದ್ದರೂ, ಯಾರಿಂದಲೋ ಉತ್ತರವನ್ನು ಕೇಳುವುದಕ್ಕೆ ನಾವು ಇಲ್ಲಿ ಕುಳಿತುಕೊಳ್ಳಬೇಕೆ?

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು.)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಸರ್ಕಾರಿ ಜಮೀನನ್ನು ಉಳಿಸುವಂತಹ ಜವಾಬ್ದಾರಿಯು ನಮ್ಮ ನಿಮ್ಮೆಲ್ಲರದ್ದಾಗಿದೆ. ಇಲ್ಲಿ ಹಗಲು ದರೋಡೆಯಾಗುತ್ತಿದ್ದು, ರಾತ್ರಿ-ಹಗಲು ರಾಜಾರೋಷವಾಗಿ ಕೆಲಸ ಮಾಡುತ್ತಿದ್ದಾರೆ. ಇದನ್ನು ತಡೆಯಬೇಕಾಗಿದೆ. ಅದಕ್ಕಾಗಿ ಸಂಬಂಧಪಟ್ಟಂತಹ ಕಂದಾಯ ಸಚಿವರೇ ಬಂದು ಉತ್ತರವನ್ನು ನೀಡಬೇಕು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಅವರು ಹೇಳುತ್ತಿರುವುದನ್ನು ತಾವು ಅರ್ಥ ಮಾಡಿಕೊಂಡಿದ್ದೀರೆಂದು ನಾನು ತಿಳಿದಿದ್ದೇನೆ. ಮಾನ್ಯ ಕಂದಾಯ ಸಚಿವರು ಬಂದು ಉತ್ತರವನ್ನು ಕೊಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಆಗಲಿ ಮಾನ್ಯ ಸಭಾಪತಿಯವರೇ.

## 07. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ

**ವಿಷಯ:- ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಮರುಪಾವತಿಸುವಲ್ಲಿ ವಿಳಂಬವಾಗಿರುವ ಬಗ್ಗೆ**

* * *

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರೌಢಶಾಲಾ ಶಿಕ್ಷಕರ ಸಂಬಂಧಿಯೋರ್ವರು ವಿಜಯಕುಮಾರ್ ಎನ್ನುವವರು ಮರಣ ಹೊಂದಿದ್ದು, 2018ರಲ್ಲಿಯೇ ಅವರು ಬಿಲ್‌ಗಳನ್ನು ಸಲ್ಲಿಸಿದ್ದಾರೆ. ಬಿಲ್‌ಗಳು ಸರಿಯಿಲ್ಲ, ಪುನಃ ತೆಗೆದುಕೊಂಡು ಬನ್ನಿ ಎಂದು intimation ಅನ್ನು ಕೊಟ್ಟ ನಂತರ ಎಲ್ಲಾ ಬಿಲ್‌ಗಳನ್ನು ಮರುಸಲ್ಲಿಕೆ ಮಾಡಿದ್ದಾರೆ. ರೂ.81,000/- ಗಳ ಬಿಲ್ ತಡೆಯಾಗಿದ್ದು, ಸುಮಾರು ಎರಡು ವರ್ಷಗಳಿಂದ ಆಗಿಲ್ಲ. ಕಳೆದ ಸಾಲಿನಲ್ಲಿ ಕೋವಿಡ್‌ನಿಂದಾಗಿ ಬಹಳಷ್ಟು ಕಷ್ಟ ಆಗಿದೆ. ಮಾನ್ಯ ಸಚಿವರು ತಕ್ಷಣ ಇದನ್ನು ಪರಿಗಣಿಸಿ, ಅವರಿಗೆ ಹಣ ಬಿಡುಗಡೆ ಮಾಡಲು ಸೂಚಿಸಬೇಕೆಂದು ನನ್ನ ಕಳಕಳಿಯ ಮನವಿ ಮತ್ತು ತಾವು ಮಾಡುತ್ತೀರೆಂದು ನಾನು ಸಂಪೂರ್ಣವಾಗಿ ನಂಬಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಸುರೇಶ್ ಕುಮಾರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ನನ್ನ ಗಮನಕ್ಕೆ ತಂದಿರುವ ವಿಷಯವನ್ನು ನಾನೇ ಖುದ್ದಾಗಿ ಪರಿಹರಿಸುತ್ತೇನೆ. ಅವರು ಎರಡು ವರ್ಷಗಳಾಗಿದೆ ಎಂದು ಹೇಳುತ್ತಿದ್ದು, ನಿಜಕ್ಕೂ ಅದು ದುಃಖಕರ. ಮತ್ತೆ ಇದಕ್ಕೆ ಸಂಬಂಧಪಟ್ಟ ಲಿಖಿತ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಧನ್ಯವಾದಗಳು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅದಕ್ಕೆ ಪೂರಕವಾಗಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಇಡೀ ರಾಜ್ಯದಲ್ಲಿ ವೈದ್ಯಕೀಯ ಬಿಲ್‌ಗಳು ಮಾರ್ಚ್ 31ರೊಳಗಾಗಿ ಆಗಬೇಕು. ಮದ್ದೂರಿನಿಂದ ಶಿಕ್ಷಕರು ದೂರವಾಣಿ ಕರೆಯನ್ನು ಮಾಡಿ "ಹಣವಿದೆ, ಬಿಲ್ ಕಳುಹಿಸಲಾಗಿದೆ. ಆದರೆ ಹೆಚ್.ಆರ್.ಎಂ.ಎಸ್. reopen ಆಗದ ಕಾರಣ ಆ ಹಣವನ್ನು claim ಮಾಡುವುದಕ್ಕೆ ಆಗುತ್ತಿಲ್ಲ. ಮಾರ್ಚ್ 31 ರ ಒಳಗಾಗಿ ತೆಗೆದುಕೊಳ್ಳದಿದ್ದಲ್ಲಿ ಅದು lapse ಆಗುತ್ತದೆ." ಎಂದು ಹೇಳುತ್ತಾರೆ. ಬಹಳ ಜಿಲ್ಲೆಗಳಲ್ಲಿ ಇವತ್ತಿನ ಪರಿಸ್ಥಿತಿ ಈ ರೀತಿಯಿದೆ. ಬಹಳ ಜನಕ್ಕೆ arrears ಹಣ ಹೊರಟುಹೋಗಿದೆ. ವೈದ್ಯಕೀಯ ಬಿಲ್, pay, timebound increment, increment, arrears ಗಳಿಗೂ ಹೋಗಿದೆ. ಹೆಚ್.ಆರ್.ಎಂ.ಎಸ್. ತೊಂದರೆಯಿಂದಾಗಿ ಬಹಳ ಜನಕ್ಕೆ ಈ ಬಿಲ್‌ಗಳು ಆಗುತ್ತಿಲ್ಲ. ಅದು ಇಂದು ಮತ್ತು ನಾಳೆಯಲ್ಲಿ ಆಗಬೇಕು. ಇಲ್ಲದಿದ್ದರೆ ಅದು ಒಂದು ವರ್ಷ ವಾಪಸ್ ಹೋಗುತ್ತದೆ. ದಯಮಾಡಿ ಮಾನ್ಯ ಸಚಿವರು ಅದನ್ನು set right ಮಾಡಿಸಬೇಕು.

**ಶ್ರೀ ಎಸ್.ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಇಂದು ಅಥವಾ ನಾಳೆಯೊಳಗಾಗಿ ಮಾಡಲು ಸೂಚನೆಯನ್ನು ಕೊಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಟಿ.ಶ್ರೀಕಂಠೇಗೌಡ, ಮಾನ್ಯ ಮರಿತಿಬ್ಬೇಗೌಡ, ಮಾನ್ಯ ಪುಟ್ಟಣ್ಣ ಮತ್ತು ಮಾನ್ಯ ಅರುಣ ಶಹಾಪುರ ಅವರು ನಿಯಮ 72ರಡಿಯಲ್ಲಿ ಪ್ರಸ್ತಾಪ ಮಾಡಿರುವ ವಿಷಯವನ್ನು ತೆಗೆದುಕೊಳ್ಳಬೇಕು.

**ಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರೇ, ತೆಗೆದುಕೊಳ್ಳೋಣವೇ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಮತ್ತು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಜವಾಬ್ದಾರಿಯನ್ನು ತೆಗೆದುಕೊಂಡು ಹಣಕಾಸು ಇಲಾಖೆಯವರು ಇಲ್ಲಿದ್ದಾರೆ ಎನ್ನುವುದಾದರೆ ನಾವು ಸರ್ಕಾರದ ಗಮನ ಸೆಳೆಯಲು ತಯಾರಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಉತ್ತರವನ್ನು ಮಾನ್ಯ ಉಪ ಮುಖ್ಯಮಂತ್ರಿಯವರಾಗಲೀ ಅಥವಾ ನಾನಾಗಲೀ ಕೊಡುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾನಾಯಕರೇ, ನಾವು ಪ್ರಸ್ತಾಪಿಸುವ ವಿಚಾರಕ್ಕೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಮತ್ತು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಇರಬೇಕು. ಈಗ ಇಬ್ಬರೂ ಇಲ್ಲಿಯೇ ಇದ್ದಾರೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮುಂದೂಡಿ ಪುನಃ ಸಮಾವೇಶಗೊಂಡ ನಂತರ ಉತ್ತರವನ್ನು ನೀಡುತ್ತೀರೋ ಅಥವಾ ನೀವು ಈಗ ಉತ್ತರ ಕೊಡುತ್ತೀರೋ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಮ್ಮ ಬಳಿ ಉತ್ತರ ಸಿದ್ಧವಿದೆ.

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೇ, ತಾವು ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 08. ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆಗಳು

**ವಿಷಯ:– ದಿನಾಂಕ 10.06.2020ರಂದು ಆರ್ಥಿಕ ಇಲಾಖೆಯವರು ಹೊರಡಿಸಿರುವ ಸುತ್ತೋಲೆ ಸಂಖ್ಯೆ:ಆಇ/157/ವೆಚ್ಚ–8/2020 ಅನ್ನು ಹಿಂಪಡೆದು ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಹಾಗೂ ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ**

* * *

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ದಿನಾಂಕ 10.06.2020ರಂದು ಆರ್ಥಿಕ ಇಲಾಖೆಯವರು ಹೊರಡಿಸಿರುವ ಸುತ್ತೋಲೆ ಸಂಖ್ಯೆ:ಆಇ/157/ವೆಚ್ಚ–8/2020 ಅನ್ನು ಹಿಂಪಡೆದು ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಹಾಗೂ ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

**ಡಾ:ಸಿ.ಎನ್. ಅಶ್ವಥನಾರಾಯಣ(ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಐ.ಟಿ. ಮತ್ತು ಬಿ.ಟಿ. ವಿಜ್ಞಾನ ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ ಇಲಾಖೆ)(ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ,

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಇಲಾಖೆಯಲ್ಲಿ ಸಹಜವಾಗಿ ತೆರವಾದಂತಹ ಹುದ್ದೆಗಳು ಅಂದರೆ ಸಾವಿನಿಂದ, ರಾಜೀನಾಮೆಯಿಂದ ಹಾಗೂ ಮತ್ತಿತರ ಕಾರಣಗಳಿಂದಾಗಿ ಖಾಲಿಯಿದ್ದು, ದಿ:31.12.2015ರವರೆಗೆ ಪ್ರಾಥಮಿಕ ಮತ್ತು ಪ್ರೌಢ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಅನುದಾನಿತ ಶಾಲಾ-ಕಾಲೇಜುಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಅನುಮತಿಯನ್ನು ಕೊಟ್ಟಿತ್ತು.

(ಮುಂದು)

**(324) 09.03.2021, 1.20. KG.RN**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು):-**

ಮಾನ್ಯ ಸಭಾಪತಿಯವರೇ, ನಾನು 2020-21ನೇ ಸಾಲಿನದ್ದನ್ನು ಪ್ರಸ್ತಾಪ ಮಾಡುತ್ತಿಲ್ಲ. ದಿನಾಂಕ 31-12-2015ರ ಪೂರ್ವದಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಆರ್ಥಿಕ ಇಲಾಖೆ ಅನುಮತಿ ಕೊಟ್ಟಿತ್ತು. ಅದರ ಮೇಲೆ ಎಲ್ಲಾ ಶಾಲೆ-ಕಾಲೇಜಿನವರು advertise ಮಾಡಿದ್ದಾರೆ. Interview ಮಾಡಿದ್ದಾರೆ. Interview ಗೆ ಸರ್ಕಾರದ ಪ್ರತಿನಿಧಿಗಳನ್ನು ಕಳುಹಿಸಿದ್ದಾರೆ. ಅದರಂತೆ, ಆಯ್ಕೆ ಸಮಿತಿ ರಚನೆಯಾಗಿ ಶಿಕ್ಷಕರನ್ನು ಆಯ್ಕೆ ಮಾಡಿದ್ದಾರೆ. ಅದು ಅನುಮೋದನೆಯಾಗಿ ವಿವಿಧ ಹಂತಗಳಲ್ಲಿವೆ. ಅದು BEO ಕಛೇರಿಯಲ್ಲಿ ಇರಬಹುದು, Joint Director, Higher Education ಕಛೇರಿಯಲ್ಲಿ ಇರಬಹುದು, Deputy Director ಕಛೇರಿಗಳಲ್ಲಿ ಇರಬಹುದು, Commissioner ರವರ ಕಛೇರಿಯಲ್ಲಿ ಇರಬಹುದು, Secretariat ಹಂತದಲ್ಲಿ ಇರಬಹುದು ಅಥವಾ ಆರ್ಥಿಕ ಇಲಾಖೆಯಲ್ಲಿ ಇರಬಹುದು. ದಿನಾಂಕ 10.06.2020 ರಂದು ಆರ್ಥಿಕ ಇಲಾಖೆಯವರು ಈ ನೇಮಕಾತಿಗಳನ್ನು ಅನುಮೋದನೆ ಮಾಡುವುದನ್ನು ತಡೆಹಿಡಿದಿದ್ದೇವೆಂದು ಸುತ್ತೋಲೆ ಸಂಖ್ಯೆ:ಆಇ/157/ವೆಚ್ಚ-8/2020 ಅನ್ನು ಹೊರಡಿಸಿದೆ. ಆ ಕಾರಣಕ್ಕಾಗಿ ಅನುಮೋದನೆ ಪ್ರಕ್ರಿಯೆ ನಿಂತುಹೋಯಿತು. ಒಂದು ಬಾರಿ ಸರ್ಕಾರ ನೇಮಕಾತಿಗೆ ಅನುಮತಿ ಕೊಟ್ಟ ಮೇಲೆ, ಅವರು ನೇಮಕಾತಿ ಮಾಡಿಕೊಳ್ಳುತ್ತಾರೆ. ಆನಂತರ Management ನವರು ಅವರಿಗೆ ವೇತನ ಕೊಡುವುದಿಲ್ಲ. ಏಕೆಂದರೆ, Management ನವರು ನೇಮಕಾತಿ ಮಾಡಿಕೊಂಡಿದ್ದೇವೆ, ಇನ್ನು ಮುಂದೆ ಸರ್ಕಾರ ಅವರಿಗೆ ವೇತನ ಕೊಡುತ್ತದೆ ಎಂದು ಹೇಳುತ್ತಾರೆ. ಸರ್ಕಾರ ಅದನ್ನು ತಡೆಹಿಡಿದಿದೆ. ನಾವೆಲ್ಲರೂ ಸ್ವಲ್ಪ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒತ್ತಾಯ ಮಾಡಿದ ಮೇಲೆ ದಿನಾಂಕ 23.02.2021 ರಂದು revise order ಬಂದಿದೆ. ದಿನಾಂಕ 31.12.2015 ರ ಅಂತ್ಯಕ್ಕೆ ನಿವೃತ್ತಿ, ಮರಣ ಮತ್ತು ರಾಜಿನಾಮೆ ಇತರ ಕಾರಣಗಳಿಂದ ಖಾಲಿ ಇರುವ ಹುದ್ದೆಗಳ ಪೈಕಿ ಈಗಾಗಲೇ ಸರ್ಕಾರದಿಂದ ಅನುಮೋದನೆಗೊಂಡು ನೇಮಕಾತಿ ಪ್ರಕ್ರಿಯೆ ಇಲಾಖೆ ಹಂತದಲ್ಲಿ ಬಾಕಿ ಇರುವ ಕೇವಲ 173 ಬೋಧಕರ ಹುದ್ದೆಗಳು ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತಹ 250 ಬೋಧಕ ಹುದ್ದೆಗಳ ಆದೇಶವನ್ನು ಜೂನ್/ಜುಲೈ ತಿಂಗಳಿನಲ್ಲಿ ಆರ್ಥಿಕ ಇಲಾಖೆ ನೇಮಕಾತಿ ಮಾಡಿಕೊಳ್ಳುವುದಕ್ಕೆ ಅನುಮತಿ ನೀಡಿದೆ ಎಂದು revise order ಇಲ್ಲದೆ. ಈಗಾಗಲೇ ಆರ್ಥಿಕ ಇಲಾಖೆಯಿಂದ ಆ ಕಡತ ಬಂದು clear ಆಗಿದ್ದರೆ ಆಯಿತು, ಆರ್ಥಿಕ ಇಲಾಖೆಗೆ ಬರದೆ, ಇನ್ನೂ Secretariat level ನಲ್ಲಿವೆ, Commissioner level ನಲ್ಲಿವೆ, Deputy Director office level ನಲ್ಲಿವೆ, BEO office ನಲ್ಲಿವೆ. ಕೆಲವು clarifications ಕೇಳಿ ಹೋಗಿರುತ್ತವೆ. ಇಂತಹ ಪ್ರಕರಣಗಳು ಇವೆ.

ಮಾನ್ಯ ಸಭಾಪತಿಯವರೇ, ಅದಕ್ಕೆ ನನ್ನ ಮನವಿ ಏನೆಂದರೆ, 2015ನೇ ಸಾಲಿನ ಪೂರ್ವದ ಖಾಲಿ ಹುದ್ದೆಗಳನ್ನು 2021 ಕ್ಕೆ ಕೊಡಬೇಕು. ಇವು ಆರು ವರ್ಷಗಳ ಹಿಂದಿನ ಅಂದರೆ, ದಿನಾಂಕ 31.12.2015 ರ ಪೂರ್ವದಲ್ಲಿ ಖಾಲಿ ಇದ್ದಂತಹ ಹುದ್ದೆಗಳು. ಮಾನ್ಯ ಸಭಾಪತಿಯವರು ಈ ಜಾಗದಲ್ಲಿ ಇದ್ದಂತಹ ಸಮಯದಲ್ಲಿ ಒಬ್ಬ ವ್ಯಕ್ತಿ ಕೆಲಸದಲ್ಲಿದ್ದು, ಆತ ನಿವೃತ್ತಿ ಹೊಂದುವಂತಹ ಸಮಯದಲ್ಲಿ ಸುಮಾರು ರೂ.70,000/- ರಿಂದ ರೂ.80,000/- ಗಳ ವೇತನವನ್ನು ಪಡೆಯುತ್ತಿರುತ್ತಾನೆ. ಆದರೆ, ಹೊಸದಾಗಿ ನೇಮಕಾತಿ ಹೊಂದಿದವರಿಗೆ ರೂ.25,000/- ರಿಂದ ರೂ.30,000/- ಗಳ ವೇತನ ಕೊಡುತ್ತಾರೆ. ಆ ವ್ಯಕ್ತಿ ನಿವೃತ್ತಿಯಾದ ಮಾರನೆ ದಿವಸವೆ ನೇಮಕಾತಿ ಮಾಡಿಕೊಳ್ಳುವಂತಹ ಅವಕಾಶ ಬೇರೆ ಬೇರೆ ರಾಜ್ಯಗಳಲ್ಲಿದೆ, ಅಂತಹ ಅವಕಾಶವನ್ನು ನಮ್ಮ ರಾಜ್ಯದಲ್ಲಿಯೂ ಕೊಡಬೇಕೆಂದು ಹೇಳುತ್ತಿದ್ದರು. 2015 ನೇ ಸಾಲಿನ ಪೂರ್ವದಲ್ಲಿ ಖಾಲಿ ಇದ್ದಂತಹ ಹುದ್ದೆಗಳಿಗೂ ಸಹ ಸರ್ಕಾರ ಈ ರೀತಿ ನಿರ್ಬಂಧ ಹೇರುವುದಾದರೆ ಮಕ್ಕಳಿಗೆ ಪಾಠ ಮಾಡುವವರು ಯಾರು? ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವವರು ಯಾರು? ಈಗಾಗಲೇ ಪಾಠ ಮಾಡುತ್ತಿರುವಂತಹ ಶಿಕ್ಷಕರಿಗೆ ಮತ್ತು ಉಪನ್ಯಾಸಕರಿಗೆ ಸಂಬಳ ಕೊಡುವವರು ಯಾರು? ಅದಕ್ಕೆ ಸರ್ಕಾರ ದಯವಿಟ್ಟು ಕೇವಲ 2015ರವರೆಗೆ ಅಲ್ಲ, 2020ರವರೆಗೂ ಖಾಲಿ ಇರುವಂತಹ ಹುದ್ದೆಗಳಿಗೂ ಅನುಮತಿಯನ್ನು ಕೊಡಬೇಕು. These are all aided school and colleges. ಸರ್ಕಾರ ಅನುದಾನ ಕೊಡುವುದಕ್ಕೆ ಬಹಳ ವರ್ಷಗಳನ್ನು ತೆಗೆದುಕೊಂಡಿರುತ್ತದೆ. ಹಾಗಾಗಿ, ಅನುದಾನವನ್ನು ಕೊಟ್ಟಿರುತ್ತದೆ. ಈ ನಡುವೆ ಖಾಲಿ ಬಿದ್ದಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಈ ರೀತಿ ಮೀನಾಮೇಷ ಏಕೆ? ಈ ರೀತಿ ಅಡೆತಡೆ ತೊಂದರೆಯಾಗುವುದಾದರೆ ಶಾಲಾ-ಕಾಲೇಜುಗಳನ್ನು ನಡೆಸುವುದು ಹೇಗೆ? ಮಕ್ಕಳಿಗೆ ಪಾಠ ಪ್ರವಚನಗಳನ್ನು ನಡೆಸುವುದು ಹೇಗೆ? ಅದರಲ್ಲೂ ಈಗ ಇರುವಂತಹ ನಾಲ್ಕೈದು ತಿಂಗಳುಗಳಲ್ಲಿ ಪಾಠಗಳನ್ನು ಮಾಡಬೇಕಾಗಿದೆ. ಮಕ್ಕಳಿಗೆ quality education ಅನ್ನು ನೀಡಬೇಕು. ಅದರಲ್ಲೂ ದ್ವಿತೀಯ ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳು NEET exam ಇರಲಿ, CET exam ಇರಲಿ, Medical and Engineering seats ತೆಗೆದುಕೊಳ್ಳಬೇಕೆಂದರೆ ರಾಷ್ಟ್ರ ಮಟ್ಟದಲ್ಲಿ ಪರೀಕ್ಷೆ ಬರೆಯಬೇಕಾಗುತ್ತದೆ. ಅಂತಹ ಮಕ್ಕಳಿಗೆ ಗಣಿತ ವಿಷಯದ ಪಾಠವನ್ನು ಮಾಡುವವರು ಯಾರು? ಅವರಿಗೆ ವಿಜ್ಞಾನದ ಪಾಠವನ್ನು ಮಾಡುವವರು ಯಾರು? Physics ಪಾಠ ಮಾಡುವವರು ಯಾರು?

ಮಾನ್ಯ ಸಭಾಪತಿಯವರೇ, ಪ್ರೈಮರಿ ಶಿಕ್ಷಣ ಇರಲಿ, ಪ್ರೌಢ ಶಿಕ್ಷಣ ಇರಲಿ, ಪಿಯು ಶಿಕ್ಷಣ ಇರಲಿ ಮತ್ತು ಪದವಿ ಶಿಕ್ಷಣ ಇರಲಿ, ದಿನಾಂಕ 31.12.2015 ರವರೆಗಿನ ಈ ಖಾಲಿ ಹುದ್ದೆಗಳನ್ನು ಯಾವುದೇ ಕಾರಣ ಇಲ್ಲದೇ ಭರ್ತಿ ಮಾಡಬೇಕು. ಏಕೆಂದರೆ, ಇವು ಆರು ವರ್ಷಗಳ ಹಿಂದಿನ ಹುದ್ದೆಗಳು. ಆ ಶಿಕ್ಷಕರು ಆರು ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆ. ಅವರಿಗೆ Management ನವರು ವೇತನ ಕೊಡುವುದಿಲ್ಲ. ಸರ್ಕಾರವು ವೇತನ ಕೊಡುವುದಿಲ್ಲ. ಈ ರೀತಿಯ ಶಿಕ್ಷಕರನ್ನು ಕೂಡಲೇ ಅನುಮೋದನೆ ಮಾಡುವ ಹಾಗೆ ಇರುವಂತಹ ಆರ್ಥಿಕ ದಿಗ್ಬಂದನವನ್ನು ಮಾನ್ಯ ಸಚಿವರುಗಳು ತೆರವುಗೊಳಿಸಬೇಕು.

ಮಾನ್ಯ ಸಭಾಪತಿಯವರೇ, ಇನ್ನು ಎರಡನೇ ಮಹತ್ವದ ವಿಚಾರ ಏನೆಂದರೆ, ಮಾನ್ಯ ಸಭಾಪತಿಯವರು ಶಿಕ್ಷಣ ಸಚಿವರಾಗಿದ್ದಂತಹ ಸಂದರ್ಭದಲ್ಲಿ, ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ಹಾಗೂ ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಸಮಿಶ್ರ ಸರ್ಕಾರ ಇದ್ದಾಗ 1985-86 ರಿಂದ 1995 ರವರೆಗೆ ಅನುದಾನ ಕೊಡುವಂತಹ ಒಂದು ಐತಿಹಾಸಿಕವಾದಂತಹ ನಿರ್ಣಯವನ್ನು ಮಾಡಿದ್ದರು. ಈ ಬಾರಿಯೂ ಅದು ಬಜೆಟ್‌ನಲ್ಲಿ ಇಲ್ಲ. ಆದರೂ ಸಹ, ಮಾನ್ಯ ಸಚಿವರು ಕೊಡುತ್ತಾರೆ ಎನ್ನುವಂತಹ ಭರವಸೆಯಲ್ಲಿ ಇದ್ದೇವೆ. ಅಲ್ಲಿ ಶಿಕ್ಷಕರು ಪರದಾಡುತ್ತಿದ್ದಾರೆ. 1995ನೇ ಸಾಲಿನ ಪೂರ್ವದಲ್ಲಿ ನೂರಾರು ಶಾಲಾ-ಕಾಲೇಜುಗಳಿಗೆ ಅನುದಾನವನ್ನು ಕೊಟ್ಟಿದೆ. ಆದರೆ, ಅದರಲ್ಲಿ ಕೇವಲ 33 ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಕೊಡದೇ ಬಾಕಿ ಉಳಿದುಕೊಂಡಿವೆ. ಈ ಶಿಕ್ಷಣ ಸಂಸ್ಥೆಗಳ ಜೊತೆಗಿದ್ದ ಎಲ್ಲಾ ಸಂಸ್ಥೆಗಳವರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗಾಗಲೇ ಕಳೆದ ನಾಲ್ಕೈದು ವರ್ಷಗಳಿಂದ ವೇತನವನ್ನು ಪಡೆಯುತ್ತಿದ್ದಾರೆ. ಈ 33 ಶಿಕ್ಷಣ ಸಂಸ್ಥೆಗಳ ಕಡತ ಮಾತ್ರ ಬಾಕಿ ಇದೆ. ಸರ್ಕಾರ economy measure ಅಡಿಯಲ್ಲಿ ಆರ್ಥಿಕ ದಿಗ್ಬಂದನದ ಮಿತವ್ಯಯದಡಿಯಲ್ಲಿ 33 ಶಿಕ್ಷಣ ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸದಿದ್ದರೆ, ಮತ್ತೆ ಅದೇ ಪರಿಸ್ಥಿತಿ ಇರುತ್ತದೆ. ಅವರು ಕೆಲಸಕ್ಕೆ ಸೇರುವುದಕ್ಕೆ ಲಕ್ಷಾಂತರ ರೂಪಾಯಿ ಹಣ ಕೊಟ್ಟಿರುತ್ತಾರೆ. ಅವರ ಮನೆಯಲ್ಲಿದ್ದಂತಹ ಬಂಗಾರದ ಆಭರಣಗಳನ್ನು ಗಿರವಿ ಇಟ್ಟಿರುತ್ತಾರೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ಅದಕ್ಕೆ ಬೇರೆ ಪ್ರಶ್ನೆಯನ್ನು ಹಾಕಿ ಉತ್ತರ ಕೇಳಬೇಕಾಗುತ್ತದೆ. ತಾವು ಈ ಪ್ರಶ್ನೆಗೆ ಸೀಮಿತವಾಗಿ ಮಾತ್ರ ಕೇಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಜೊತೆಗೆ ಅದೂ ಸಹ ಇದೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಅದು ಇದರ ಜೊತೆಯಲ್ಲಿ ಇಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಮತ್ತು ವೇತನಾನುದಾನಕ್ಕೆ ಒಳಪಡಿಸುವ ಕುರಿತು ಎಂದು ಇದೆ. ತಾವು ಇದನ್ನು ದಯವಿಟ್ಟು ಗಮನಿಸಬೇಕು. ಹಾಗಾಗಿ, ಬಾಕಿ ಇರುವ 33 ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಕೊಡುವಂತಹ ಕೆಲಸ ಆಗಬೇಕಾಗಿದೆ. ಅಲ್ಲದೇ, ನಾವು ಈಗಾಗಲೇ 1995 ರಿಂದ 2005ರವರೆಗೆ ಅನುದಾನ ಕೊಡಬೇಕೆಂದು ಕೋರಿಕೊಳ್ಳುತ್ತಿದ್ದೇವೆ. ಮಾನ್ಯ ಸಚಿವರು ಕೊಡುತ್ತೇವೆಂದು ಮಾತನ್ನು ಕೊಟ್ಟಿದ್ದಾರೆ. ಅದು ಬಜೆಟ್‌ನಲ್ಲಿ ಬಿಟ್ಟುಹೋಗಿದೆ, ಆದರೂ ಸಹ ಅದನ್ನು ಸೇರಿಸಿ ಕೊಡುತ್ತಾರೆ ಎನ್ನುವಂತಹ ಭರವಸೆ ಇದೆ. ಆದರೆ, ಈಗಾಗಲೇ ಬೇರೆಯವರು ಸುಮಾರು ಎಂಟತ್ತು ವರ್ಷಗಳಿಂದ ಅನುದಾನವನ್ನು ಪಡೆಯುತ್ತಿದ್ದಾರೆ. ಈ 33 ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಅನ್ಯಾಯವಾಗಿದೆ. ಹಾಗಾಗಿ, ಈ ಸಂಸ್ಥೆಗಳಿಗೆ ಅನುದಾನ ಕೊಡುವಂತಹ ಮತ್ತು ದಿನಾಂಕ 31.12.2015 ರ ಪೂರ್ವದಲ್ಲಿ ನೇಮಕಾತಿ ಆಗಿರುವಂತಹ ಹುದ್ದೆಗಳನ್ನು ಅನುಮೋದನೆ ಮಾಡಿ ಅವರಿಗೆ ವೇತನ ಬರುವಂತೆ ಮಾಡಬೇಕೆಂದು ಮಾನ್ಯ ಇಬ್ಬರು ಸಚಿವರಲ್ಲಿ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

**ಡಾ॥ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ಮಾನ್ಯ ಸದಸ್ಯರಾದ ಶ್ರೀಕಂಠೇಗೌಡರವರು ಮಾತನಾಡಿದ್ದನ್ನು ಬಿಟ್ಟು ಬೇರೆ ಮಾತನಾಡುತ್ತೇನೆ ಹಾಗೂ ಅವರು ಮಾತನಾಡಿದಂತಹ ಎಲ್ಲಾ ವಿಚಾರಗಳನ್ನು ಅನುಮೋದನೆ ಮಾಡುತ್ತೇನೆ. ಎರಡನೆಯದಾಗಿ, ದಿನಾಂಕ 31.12.2015 ರವರೆಗಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅನುಮೋದನೆ ಮಾಡಿದ್ದರು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ, ಈ ಪದ್ಧತಿ ಸರಿ ಇಲ್ಲವೆಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ. ಅನುಮತಿ ಕೊಟ್ಟ ಅವಧಿಯಿಂದ ಇಲ್ಲಿಗೆ ಆರು ವರ್ಷಗಳು ಆಗಿವೆ. ಈ ಆರು ವರ್ಷಗಳಿಂದ ಖಾಲಿ ಇರುವಂತಹ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ? 2012 ರಿಂದ 2015ರವರೆಗೆ ಮತ್ತು 2015 ರಿಂದ 21 ರವರೆಗೆ ಅಂದರೆ, ಸುಮಾರು 11 ವರ್ಷಗಳ ಅವಧಿಯಲ್ಲಿ ಖಾಲಿಯಾದಂತಹ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಆಗಿಲಿಲ್ಲವೆಂದರೆ, ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಅದುದರಿಂದ, ಯಾವುದೇ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ನಿಧನ, ರಾಜಿನಾಮೆ ಅಥವಾ ನಿವೃತ್ತಿಯಿಂದ ಖಾಲಿಯಾಗುವಂತಹ ಹುದ್ದೆಗಳನ್ನು ಭರ್ತಿಮಾಡಿಕೊಳ್ಳುವುದಕ್ಕೆ ಆರು ತಿಂಗಳ ಮೊದಲೇ ಸರ್ಕಾರ ಅನುಮತಿಯನ್ನು ಕೊಡಬೇಕು. ಆರು ತಿಂಗಳ ಮುಂಚೆಯೇ ಸರ್ಕಾರ ಅನುಮತಿಯನ್ನು ಕೊಟ್ಟು, ನಂತರ call for ಮಾಡಿ ನಿವೃತ್ತಿಯಾಗುವಂತಹ ಹುದ್ದೆಯ ಸಮಯಕ್ಕೆ ಆ ಜಾಗದಲ್ಲಿ ಇನ್ನೊಬ್ಬ ಶಿಕ್ಷಕ ನೇಮಕವಾಗಿರಬೇಕು. ಆ ರೀತಿ ಆದಾಗ ಮಾತ್ರ ಗುಣಾತ್ಮಕ ಶಿಕ್ಷಣ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿ ಮಾಡುವುದಕ್ಕೆ ನಮ್ಮ ಸರ್ಕಾರದಲ್ಲಿ ಚಾಲನೆ ಸಿಗಲಿ ಎಂದು ಸರ್ಕಾರವನ್ನು ಕೋರಿಕೊಳ್ಳುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ನೇಮಕಾತಿ ಕುರಿತು ಇಲ್ಲಿ ಮೂರು ವಿಧಗಳು ಇವೆ. ಅದರಲ್ಲಿ ಮೊದಲನೆಯದಾಗಿ, ಈಗಾಗಲೇ ಸರ್ಕಾರ 2015ರ ಪೂರ್ವದಲ್ಲಿ ನಿವೃತ್ತಿ, ನಿಧನ ಮತ್ತು ರಾಜಿನಾಮೆಯಿಂದ ಖಾಲಿಯಾಗಿರುವಂತಹ ಹುದ್ದೆಗಳನ್ನು ಭರ್ತಿಮಾಡಿಕೊಳ್ಳುವುದಕ್ಕೆ ಅನುಮತಿ ಕೊಡುತ್ತೇವೆಂದು Government Order ಮಾಡಿದೆ. ಇದರಡಿಯಲ್ಲಿ ಎಲ್ಲಾ ಶಿಕ್ಷಣ ಸಂಸ್ಥೆಯವರು permission ಕೇಳಿದ್ದಾರೆ. ಇದರಲ್ಲಿ ಕೆಲವು ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ಕೊಟ್ಟಿದ್ದಾರೆ. ಇನ್ನೂ ಕೆಲವು ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ಕೊಟ್ಟಿಲ್ಲ. ಸರ್ಕಾರ ಯಾವ ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ಕೊಟ್ಟಿತ್ತೋ, ಅವರು interview ಕರೆದು selection ಮಾಡಿದ್ದಾರೆ. selection ಮಾಡಿದ ಮೇಲೆ ಆದೇಶವನ್ನು ಕೊಡುವುದಕ್ಕೆ stay ಮಾಡಿದರು. ಮಾನ್ಯ ಉನ್ನತ ಶಿಕ್ಷಣ ಸಚಿವರು ಮತ್ತು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈಗಾಗಲೇ interview ಆಗಿರುವಂತಹವರಿಗೆ ಜುಲೈಗೆ ಆದೇಶ ಕೊಡಿ ಎಂದು ಹೇಳಿದ್ದಾರೆ. ಇದಕ್ಕೆ ನಾನು ಮಾನ್ಯ ಸಚಿವರುಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಲ್ಲಿಗೆ ಒಂದನೇ ವಿಧಾನ ಸರಿ ಇದೆ. ಆರ್ಥಿಕ ಇಲಾಖೆಯು 2015 ರವರೆಗೆ ಖಾಲಿಯಾಗಿರುವಂತಹ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಅನುಮತಿ ಏಕೆ ಕೊಡುವುದಿಲ್ಲ ಎಂಬುದು ಅವರ ಪ್ರಶ್ನೆ ಇದೆ. ನನಗೆ ಇರುವಂತಹ ಮಾಹಿತಿಯ ಪ್ರಕಾರ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉನ್ನತ ಶಿಕ್ಷಣ ಇಲಾಖೆಯಲ್ಲಿ ಸುಮಾರು 1,316 ಹುದ್ದೆಗಳು 2015ರವರೆಗೆ ಖಾಲಿಯಾಗಿವೆ. ಆದರೆ, ಅದರಲ್ಲಿ ಕೇವಲ 950 ಹುದ್ದೆಗಳಿಗೆ ಮಾತ್ರ ಅನುಮತಿ ಕೊಟ್ಟಿದ್ದಾರೆ. ಉಳಿದ ಹುದ್ದೆಗಳಿಗೆ ಅನುಮತಿ ಕೊಟ್ಟಿಲ್ಲ. ಏಕೆ permission ಕೊಡುವುದಿಲ್ಲ? ದಯವಿಟ್ಟು ಇದಕ್ಕೆ permission ಕೊಡಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ಇದರ ಜೊತೆಗೆ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವಂತಹ ಸಾವಿರಾರು ಹುದ್ದೆಗಳಿಗೆ ಅನುಮತಿ ಕೊಟ್ಟಿಲ್ಲ. ಈ ಹುದ್ದೆಗಳಿಗೂ ಅನುಮತಿ ಕೊಡಬೇಕು. ಮೂರನೆಯದಾಗಿ, ಹುದ್ದೆಗಳಿಗೆ ಅನುಮತಿ ಕೊಟ್ಟು interview ಆಗಿರುವಂತಹ ಹುದ್ದೆಗಳಿಗೆ approval process ಮಾಡುತ್ತಿಲ್ಲ. ದಯವಿಟ್ಟು ಯಾವ ಯಾವ ಹುದ್ದೆಗಳಿಗೆ permission ಕೊಟ್ಟಿಲ್ಲವೋ, ಅಂತಹ ಹುದ್ದೆಗಳಿಗೆ ಅನುಮತಿ ಕೊಡಬೇಕು. ಅನುಮತಿ ಕೊಟ್ಟು ಭರ್ತಿ ಮಾಡಿಕೊಂಡಿದ್ದರೆ, ಅದಕ್ಕೆ approval ಮಾಡಿಲ್ಲವೆಂದರೆ, approval ಕೊಡಬೇಕು. Approval ಮಾಡಿ ಆದೇಶವನ್ನು ಕೊಟ್ಟಿಲ್ಲವೆಂದರೆ, ಆದೇಶವನ್ನು ಕೊಡಬೇಕು. ಅಂದರೆ ಸಂಪೂರ್ಣವಾಗಿ ಆರ್ಥಿಕ ಮಿತವ್ಯಯವನ್ನು ವಾಪಸ್ ತೆಗೆದುಕೊಳ್ಳಬೇಕು. ಸ್ವಲ್ಪ percentage ಅನ್ನು ಮಾತ್ರ ವಾಪಸ್ಸ್ ತೆಗೆದುಕೊಂಡಿದ್ದಾರೆ. ಆದರೆ, ಇನ್ನೂ permission ಕೊಡುತ್ತಿಲ್ಲ? Approval ಮಾಡುತ್ತಿಲ್ಲ. ದಯವಿಟ್ಟು ಸಂಪೂರ್ಣವಾಗಿ ಆರ್ಥಿಕ ಮಿತವ್ಯಯವನ್ನು ವಾಪಸ್ಸ್ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ,

**(ಮುಂದು)**

**(325)09-03-2021(1-30)ಎಂವಿ-ಆರ್‌ಎನ್**

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಪ್ರಪ್ರಥಮವಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾದರೆ, 2021-22ನೇ ಸಾಲಿನ ಶೈಕ್ಷಣಿಕ ವರ್ಷ ಪ್ರಾರಂಭಗೊಂಡ ನಂತರ ಸಹಮತಿಸಲಾಗಿರುತ್ತದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಈಗಾಗಲೇ ಸರ್ಕಾರದಿಂದ ಅನುಮೋದನೆಗೊಂಡ ಪ್ರಕರಣಗಳಿಗೂ ಕೂಡ ಮತ್ತೆ 2021-22ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭ ಎನ್ನುವಂಥದ್ದು ಎಷ್ಟರಮಟ್ಟಿಗೆ ಸರಿಯಾಗುತ್ತದೆ. ಪ್ರಪ್ರಥಮವಾಗಿ ಪ್ರಕ್ರಿಯೆಯಲ್ಲಿ ಇರುವಂತಹವುಗಳಿಗೆ ಮತ್ತು ಅನುಮೋದನೆ ಕೊಟ್ಟಿರುವಂತಹ ಎಲ್ಲಾ ಪ್ರಕರಣಗಳಿಗೆ ಪ್ರಥಮ ವೇತನ ಪ್ರಮಾಣ ಪತ್ರ ಕೊಡುವಂತಹ ಕೆಲಸ ಮಾಡಬೇಕು ಎನ್ನುವಂತಹ ಆಗ್ರಹವನ್ನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎರಡನೆಯ ಸಂಗತಿ ಎಂದರೆ, '257, 173 ಮತ್ತು 340 ಬೋಧಕ ಹುದ್ದೆಗಳಿಗೆ ನೇಮಕಾತಿ ಆದೇಶವನ್ನು' ಎಂದು ಹೇಳುತ್ತಿದ್ದಾರೆ. ನನಗೆ ಈ ಸಂಖ್ಯೆಯ ಹಿನ್ನೆಲೆ ಏನೆಂದು ಗೊತ್ತಾಗಲಿಲ್ಲ. ನಾವು ಕೇಳಿರುವಂತಹ ಬೇಡಿಕೆ ಬಹಳ ಸ್ಪಷ್ಟವಾಗಿದೆ. ನಮ್ಮ ಬೇಡಿಕೆ ಏನೆಂದರೆ, ದಿನಾಂಕ: 10.06.2020ರಂದು ಆರ್ಥಿಕ ಇಲಾಖೆಯವರು ಹೊರಡಿಸಿರುವ ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳಿ ಎಂಬುದು. ಆದರೆ, ಅವರು ಹೇಳುತ್ತಿರುವುದು ಏನು? ಇಷ್ಟನ್ನು ಮಾತ್ರ ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಹಾಗಾದರೆ ಇದು ಎಷ್ಟರಮಟ್ಟಿಗೆ ಸರಿ. ಅದಕ್ಕೆ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗಾಗಲೇ ಅನುಮತಿಗಾಗಿ ಬಂದಿರುವ ಪ್ರಕರಣಗಳನ್ನೂ ಸೇರಿಸಿ, ಒಟ್ಟಾಗಿ ಏನು ಈ ಆರ್ಥಿಕ ಮಿತವ್ಯಯದ ಆದೇಶವಾಗಿದೆ ಅದನ್ನು ವಾಪಸ್ಸು ತೆಗೆದುಕೊಳ್ಳುವುದರ ಬಗ್ಗೆ, ಮಾನ್ಯ ಮುಖ್ಯಮಂತ್ರಿಗಳ ಕಡೆಯಿಂದ ಉತ್ತರವನ್ನು ನಿರೀಕ್ಷಿಸಿದ್ದೆವು. ಅದಕ್ಕೆ ಉತ್ತರ ನೀಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈ ಸಮಸ್ಯೆಗಳು...

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ನೋಟೀಸ್‌ಗೆ ನಾನೂ ಸಹ ಸಹಿ ಹಾಕಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರು ಸಹ ಸಹಿ ಹಾಕಿದ್ದಾರೆ.

**ಸಭಾಪತಿಯವರು:–** ಅಯಿತು, ಈಗ ಮಾನ್ಯ ಮರಿತಿಬ್ಬೇಗೌಡರು ಮಾತನಾಡಲಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ಮಾನ್ಯ ಸಭಾನಾಯಕರು ಉತ್ತರ ನೀಡುತ್ತಿರುವುದರಿಂದ ನಮಗೆ ಸ್ವಲ್ಪವೂ ಸಹ ಸಮಾಧಾನವಿಲ್ಲ.

**ಸಭಾಪತಿಯವರು:–** ಅದನ್ನು ನೀವು ಏಕೆ ಒಪ್ಪಿಕೊಳ್ಳಬೇಕು?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾವು ಮಾನ್ಯ ಮುಖ್ಯಮಂತ್ರಿಗಳಿಂದ ಬಹಳ ನಿರೀಕ್ಷೆ ಮಾಡಿದ್ದೆವು. ಆದರೆ, ಈ ಉತ್ತರದಿಂದ ನಮಗೆ ಸಮಾಧಾನವಾಗುತ್ತಿಲ್ಲ. ತಾವು ಸಭಾಪತಿಗಳಾಗಿ, ಇಂತಹ ಒಂದು ಸಮಸ್ಯೆಗೆ ಮಾನ್ಯ ಸಭಾನಾಯಕರು ಉತ್ತರ ನೀಡುತ್ತಾರೆ. ನಮಗೆ ಮಾನ್ಯ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಭಾನಾಯಕರನ್ನು ನೋಡಿದರೆ ಮಹಾತ್ಮಗಾಂಧಿಯವರನ್ನು ನೋಡಿದ ಹಾಗೆ ಆಗುತ್ತದೆ. ನಾವು ಅವರ ಹತ್ತಿರ ಏನನ್ನೂ ಸಹ ಕೇಳುವುದಕ್ಕೆ ಆಗುವುದಿಲ್ಲ. ನಮಗೆ ಪಾಪ ಅಯ್ಯೋ ಅನಿಸುತ್ತದೆ. ಆದರೆ, ಸದನದಲ್ಲಿ ಇಬ್ಬರು ಶಿಕ್ಷಣ ಸಚಿವರಿದ್ದಾರೆ. ಅವರನ್ನು ನೋಡಿದರೆ ನಾವು ಏನನ್ನೂ ಕೇಳುವಂತಿಲ್ಲ, ಆ ರೀತಿ ಇದೆ. ಅವರು ಕೇಳಿದ್ದನ್ನೆಲ್ಲಾ ಕೊಡುತ್ತಾರೆ. ಆದರೆ, ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಕಾಸು ಕೊಡುವಂತಹ ಅಧಿಕಾರವೇ ಇಲ್ಲ.

**ಸಭಾಪತಿಯವರು:–** ಈಗ ಏನು ಮಾಡಬೇಕೆಂದು ಹೇಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಈಗ ನನ್ನ ಸ್ನೇಹಿತರೆಲ್ಲರೂ ಸಹ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅದಕ್ಕೆ ನಾನು ಸಹ ಎರಡು ಮಾತುಗಳನ್ನು ಮಾತನಾಡುತ್ತೇನೆ.

**ಸಭಾಪತಿಯವರು:–** ಆಯಿತು, ಈಗ ತಾವು ಮಾತನಾಡಿ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಬಂದರೆ ಒಳ್ಳೆಯದಾಗುತಿತ್ತು.

**ಸಭಾಪತಿಯವರು:–** ಮಾನ್ಯ ಅರುಣ ಶಹಾಪುರರವರೆ, ತಾವು ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಆರ್ಥಿಕ ಇಲಾಖೆ ಅಧಿಕಾರಿಗಳಿದ್ದರೆ ಸ್ವಲ್ಪ ಸಮಾಧಾನವಾಗುತಿತ್ತು. ಆದರೆ, ಸದನದಲ್ಲಿ ಅವರೂ ಸಹ ಇಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಆರ್ಥಿಕ ಇಲಾಖೆಯ ಅಧಿಕಾರಿಗಳು ಇದ್ದಾರೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಯಾರ್‍ಯಾರು ಇರಬೇಕೆಂದು ಇದೆ.

**ಸಭಾಪತಿಯವರು:–** ಮಾನ್ಯ ಸಚಿವರು ಉತ್ತರ ನೀಡುತ್ತಾರೆ. ನಾನು ನೋಟ್ ಮಾಡಿಕೊಂಡು ಅವರಿಗೆ ತಿಳಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಈ ದಿನ ನನ್ನ ಗೆಳೆಯರು ಪ್ರಸ್ತಾಪ ಮಾಡಿದಂತಹ ವಿಷಯಕ್ಕೆ ನನ್ನ ಸಹಮತವಿದೆ. ಈ ನಾಡಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು, ಇಂದಿಗೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೂಡ ಗುಣಾತ್ಮಕ ಶಿಕ್ಷಣ ಕೊಡುವಲ್ಲಿ ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿವೆ. ಆ ಸಂಸ್ಥೆಗಳಲ್ಲಿ ಬಹಳ ದೀರ್ಘಕಾಲದಿಂದ ಖಾಲಿಯಾದಂತಹ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಸರ್ಕಾರವೇ ಅನುಮತಿ ನೀಡಿತ್ತು. ಸರ್ಕಾರ ಅನುಮತಿ ಕೊಟ್ಟು, ಆರ್ಥಿಕ ಇಲಾಖೆಯಿಂದ ಅನುಮೋದನೆಗೊಳ್ಳುವ ಸಂದರ್ಭದಲ್ಲಿ ಕೋವಿಡ್–19 ಎಂದು ಇವುಗಳನ್ನು ತಡೆಹಿಡಿದಿದ್ದಾರೆ. ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಹೇಳಿದ ಹಾಗೆ ಮತ್ತೊಂದು ಏನೆಂದರೆ, ಹೊಸದಾಗಿ ಅನುದಾನಕ್ಕೆ ಬಂದಿರುವಂತಹ ಕೆಲವು ಕಡತಗಳಿವೆ. ಈ ಎರಡಕ್ಕೂ ಕೂಡ ತಡೆ ಹಿಡಿದಿದ್ದಾರೆ. ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇಲ್ಲಿ ಯಾರು ಅನುದಾನಕ್ಕೆ ಒಳಪಡುವುದಕ್ಕೆ ಮತ್ತು ಖಾಲಿ ಇರುವಂತಹ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಮತ್ತೆ ಹೊಸದಾಗಿ ಅನುದಾನಕ್ಕೆ ಬಂದಿದ್ದಾರೆ, ಇವರೆಲ್ಲರಿಗೂ ಕೂಡ ಹದಿನೈದು ವರ್ಷದ ಸೇವಾವಧಿ ಇಲ್ಲ. ಇವರೆಲ್ಲರೂ ಕೂಡ ಅಂತಹ ಪರಿಸ್ಥಿತಿಗೆ ಹೋಗಿರುವಂತಹವರು. ಮತ್ತೆ ಕೆಲವರಿಗೆ ವಯೋಮಿತಿ ಮೀರುತ್ತಿದೆ. ಎಲ್ಲಾ ನಿಯಮಗಳನ್ನು ಪಾಲನೆ ಮಾಡಿದ ಮೇಲೆ ಸಂಸ್ಥೆಗಳಿಗೆ ಸರ್ಕಾರ ಅನುಮತಿ ಕೊಟ್ಟ ಮೇಲೆ, ಇವತ್ತು 2–3 ವರ್ಷಗಳಿಂದ ಆ ಕಡತಗಳು ಆರ್ಥಿಕ ಇಲಾಖೆ ಮತ್ತು ಶಿಕ್ಷಣ ಇಲಾಖೆಗಳಿಗೆ ಬಂದಿವೆ. ಈಗ ಇವರಿಗೆ ಆ ಶಿಕ್ಷಣ ಸಂಸ್ಥೆಗಳಲ್ಲಿ 2–3 ವರ್ಷಗಳಿಂದ ವೇತನ ಕೊಡುತ್ತಿಲ್ಲ. ಏಕೆಂದರೆ, ನಿಮಗೆಲ್ಲರಿಗೂ ಕೂಡ ಸರ್ಕಾರದಿಂದ ವೇತನ ಬರುತ್ತದೆ, ಅದಕ್ಕೆ ನಾವು ವೇತನ ಕೊಡುವುದಿಲ್ಲವೆಂದು ಹೇಳುತ್ತಾರೆ. ಆದುದರಿಂದ ಇವರು ಆ ಶಿಕ್ಷಣ ಸಂಸ್ಥೆಗಳಲ್ಲಿ ಪುಕ್ಕಟೆಯಾಗಿ ದುಡಿಯುತ್ತಿದ್ದಾರೆ. ಮತ್ತೆ ಇಂತಹ ಪರಿಸ್ಥಿತಿಯಲ್ಲಿ ಕೆಲವರಿಗೆ ವಯೋಮಿತಿ ಮೀರುತ್ತಿದೆ. ಇಂತಹ ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಕೊಡಬೇಕು ಎನ್ನುವುದಾದರೆ, ಈ ಹುದ್ದೆಗಳನ್ನು ತುಂಬದೆ ಹೋದರೆ ಮತ್ತು ಅಲ್ಲಿಗೆ ಖಾಯಂ ಶಿಕ್ಷಕರು ಮತ್ತು ಉಪನ್ಯಾಸಕರನ್ನು ನೀಡದೆ ಇದ್ದರೆ ಅಲ್ಲಿ ಬಹಳ ಸಂಕಷ್ಟ ಪರಿಸ್ಥಿತಿ ಎದುರಾಗುತ್ತದೆ. ನಾವು ಮತ್ತು ಮಂತ್ರಿಗಳೆಲ್ಲರೂ ಕೂಡ ಸರ್ಕಾರಿ ಶಾಲೆಗಳನ್ನು ಉನ್ನತಿಕರಣಗೊಳಿಸಬೇಕೆಂದು ಹೇಳಿ ಬಹಳಷ್ಟು ಶ್ರಮಪಡುತ್ತಿದ್ದೇವೆ. ಸರ್ಕಾರಿ ಸಂಸ್ಥೆಗಳನ್ನು ಕೂಡ ಉನ್ನತಿಕರಣಗೊಳಿಸುವಂಥದ್ದು ನಮ್ಮ ಜವಾಬ್ದಾರಿ. ಆದರೆ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಬಹಳ ದೀರ್ಘಕಾಲದಿಂದ ಸೇವೆ ಸಲ್ಲಿಸುತ್ತಿರುವಂತಹ ಇವರು 10–15 ವರ್ಷದಿಂದ ಅತ್ಯಂತ ಕಡಿಮೆ ವೇತನಕ್ಕೆ ಕೆಲಸ ಮಾಡಿಕೊಂಡು ಬಂದಿದ್ದಾರೆ. ಇಂದಲ್ಲ ನಾಳೆ, ಐದು ವರ್ಷದಲ್ಲಾದರೂ ಅಥವಾ ಹತ್ತು ವರ್ಷದಲ್ಲಾದರೂ ನಾವು ವೇತನಾನುದಾನಕ್ಕೆ ಒಳಪಡುತ್ತೇವೆ ಮತ್ತು ಈ ಖಾಲಿ ಹುದ್ದೆ ಭರ್ತಿಯಾಗುತ್ತದೆ ಎಂಬ ನಿರೀಕ್ಷೆಯಲ್ಲೇ ಕೆಲಸ ಮಾಡಿಕೊಂಡಿರುವಂತಹವರು ಮತ್ತು ಇವರು ಬಹಳ ತೊಂದರೆಯಲ್ಲಿದ್ದಾರೆ. ದಯಮಾಡಿ ಮಾನ್ಯ ಸಚಿವರು ನಿರ್ದಿಷ್ಟವಾಗಿ ಒಂದು ದಿನಾಂಕವೆಂದು ಹೇಳಲಿ. ಏಕೆಂದರೆ, ಈ ಕೋವಿಡ್–19 ಸಮಸ್ಯೆ ಪರಿಹಾರವಾದ ಕೂಡಲೇ ಕೆಲವು ಇಲಾಖೆಗಳಿಗೆ ರಿಯಾಯಿತಿಗಳನ್ನು ನೀಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಅನುಮತಿ ನೀಡಿದ್ದಾರೆ. ಶಿಕ್ಷಣ ಇಲಾಖೆಗೆ ಯಾವುದೇ ರೀತಿಯ ರಿಯಾಯಿತಿ ಕೊಟ್ಟಿಲ್ಲ. ಆದರೆ, ಇತರೆ ಇಲಾಖೆಗಳಲ್ಲಿ ಸುಮಾರು ಐವತ್ತು ನಿಗಮಗಳನ್ನು ಮಾಡಿದ್ದಾರೆ. ಈ ಸರ್ಕಾರಕ್ಕೆ ಶಿಕ್ಷಣಕ್ಕಿಂತ ನಿಗಮಗಳನ್ನು ಮಾಡುವುದು ಆದ್ಯತೆಯಾಗಿದೆ. ಶಿಕ್ಷಣ ಇಲಾಖೆಯಲ್ಲಿ ಇದಕ್ಕೆ ಅನುದಾನ ಕೊಡುವುದಕ್ಕಾಗುವುದಿಲ್ಲವೆಂದು ತಡೆಹಿಡಿದಿದ್ದಾರೆ. ಆದರೆ, ಇದು ತಪ್ಪು. ಕೋವಿಡ್-19 ಸಂದರ್ಭದಲ್ಲಿ ವೇತನವಿಲ್ಲದಿದ್ದರೂ ಕೂಡ ನಮ್ಮ ಶಿಕ್ಷಕ ಬಂಧುಗಳು ಕೊರೊನಾ ವಾರಿಯರ್ಸ್ ಆಗಿ ಕೆಲಸ ಮಾಡಿದ್ದಾರೆ. ಇವತ್ತು ಏಡೆಡ್ ಸಂಸ್ಥೆಗಳಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡುತ್ತಿರುವಂತಹವರು ವೇತನವಿಲ್ಲದಿದ್ದರೂ ಕೂಡ ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಮತ್ತು ಡಿಗ್ರಿ ಕಾಲೇಜುಗಳ ಪರೀಕ್ಷೆ ಮತ್ತು ಮೌಲ್ಯಮಾಪನಗಳಿಗೆ ಎಲ್ಲಾ ರೀತಿಯ ಸಹಕಾರ ನೀಡಿದ್ದಾರೆ. ಅಂತಹವರ ಹುದ್ದೆಗಳನ್ನು ಅನುಮೋದನೆಗೊಳಿಸುವುದಕ್ಕೆ ಮೀನಾಮೇಷ ಎಣಿಸುವುದು ಸರಿಯಲ್ಲ. ಶಿಕ್ಷಣ ಇಲಾಖೆಯನ್ನು ಮಲತಾಯಿಧೋರಣೆಯಿಂದ ನೋಡಲಾಗುತ್ತಿದೆ. ಇದು ಆಗಬಾರದು. ಮಾನ್ಯ ಸಭಾನಾಯಕರು ನಾನು ಹೇಳುತ್ತಿರುವುದನ್ನು ಏನು ಕೇಳಿಸಿಕೊಳ್ಳುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಬೇರೆ ಮಾನ್ಯ ಸದಸ್ಯರು ಮಾತನಾಡುವುದನ್ನು ಸ್ವಲ್ಪ ಕೇಳಿಸಿಕೊಳ್ಳುವುದಿಲ್ಲ. ಆದರೆ, ಮಾನ್ಯ ಮರಿತಿಬ್ಬೇಗೌಡರು ಹೇಳುವುದೆಲ್ಲಾ ಕೇಳಿಸಿಕೊಳ್ಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ದಯಮಾಡಿ ಮಂತ್ರಿಗಳು ನಿರ್ದಿಷ್ಟವಾಗಿ ಒಂದೆರಡು ವಾರದಲ್ಲಿಯಾದರೂ ಕೂಡ ವಿವಿಧ ಹಂತಗಳಲ್ಲಿರತಕ್ಕಂಥ ಮತ್ತು ಏನು ಸರ್ಕಾರ ಅನುಮತಿ ಕೊಟ್ಟು, ಆ ಅನುಮತಿ ಪ್ರಕಾರ ಯಾವ ಕಡತಗಳು ಸಿದ್ಧವಾಗಿ ಬಂದಿವೆ ಅಂತಹವುಗಳನ್ನು, ಶಿಕ್ಷಣ ಇಲಾಖೆಯವರು ನಿರ್ದೇಶನ ಕೊಟ್ಟು ಕೆಲವು ಕಡತಗಳನ್ನು ಡಿಡಿಪಿಐ ಕಚೇರಿಯಲ್ಲಿರಿಸಿದ್ದಾರೆ. ಕೆಲವು ಕಡತಗಳನ್ನು ಜಂಟಿ ನಿರ್ದೇಶಕರ ಕಚೇರಿಯಲ್ಲಿರಿಸಿದ್ದಾರೆ. ಉನ್ನತ ಶಿಕ್ಷಣ ಇಲಾಖೆಯವರು ಕೆಲವು ಕಡತಗಳನ್ನು ಆಯುಕ್ತರ ಕಚೇರಿಯಲ್ಲಿರಿಸಿದ್ದಾರೆ. ದಯಮಾಡಿ ಸರ್ಕಾರ ಯಾವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಅನುಮೋದನೆ ನೀಡಿ ಅನುಮತಿ ಕೊಟ್ಟಿದೆ, ಆ ಎಲ್ಲಾ ಕಡತಗಳನ್ನು ತರಿಸಿಕೊಂಡು, ಖಾಲಿ ಇರುವಂತಹ ಹುದ್ದೆಗಳನ್ನು ತುಂಬುವುದಕ್ಕೆ ಕೂಡಲೇ ಅನುಮತಿ ಕೊಡಬೇಕು ಮತ್ತು ಹೊಸದಾಗಿ ಅನುದಾನಕ್ಕೆ ಬಂದಿರತಕ್ಕಂತಹ ಒಟ್ಟಾರೆ ಸಂಸ್ಥೆಯ ವೇತನಾನುದಾನಕ್ಕೆ ಬಂದಿರತಕ್ಕಂಥ ಕಡತಗಳಿಗೂ ತಾವು ದಯವಿಟ್ಟು ಅನುದಾನವನ್ನು ಮಂಜೂರು ಮಾಡಿಸಬೇಕು. ಅಂದರೆ, ಒಂದೆರಡು ವಾರದ ಒಳಗಡೆ, ಈ ಎಲ್ಲಾ ಕಡತಗಳಿಗೂ ಕೂಡ ಅನುದಾನ ದೊರಕಿಸಿಕೊಡಬೇಕು, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಲಿಯುತ್ತಿರುವಂತಹ ಈ ನಾಡಿನ ಮಕ್ಕಳ ಗುಣಾತ್ಮಕ ಶಿಕ್ಷಣಕ್ಕೋಸ್ಕರ ಈ ಕೆಲಸವನ್ನು ಆದ್ಯತೆಯ ಮೇರೆಗೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಡಾ॥ಅಶ್ವಥ್ ನಾರಾಯಣ ಸಿ.ಎನ್ (ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಐ.ಟಿ. ಮತ್ತು ಬಿ.ಟಿ., ವಿಜ್ಞಾನ ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಇಲಾಖೆ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಗಮನ ಸೆಳೆಯುವ ಸೂಚನೆಯನ್ನು ತಂದಿದ್ದಾರೆ, ಅದು ಬಹಳ ಪ್ರಸ್ತುತವಾದಂತಹ ವಿಚಾರ. ಮಾನ್ಯ ಸಭಾಪತಿಯವರೇ, ಅನುಮತಿ ಕೊಟ್ಟಿರುವಂತಹ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುವಂಥದ್ದು ಆಗಬೇಕು. ಈಗ ಸಂದರ್ಶನವಾಗಿರುವಂತಹವರನ್ನು ಭರ್ತಿ ಮಾಡುವುದಕ್ಕೆ ಅಥವಾ ನೇಮಕಾತಿ ಆದೇಶ ಕೊಡುವುದಕ್ಕೆ ನಮ್ಮ ಆರ್ಥಿಕ ಇಲಾಖೆಯವರು ಅವಕಾಶ ಮಾಡಿಕೊಟ್ಟಿದ್ದಾರೆ.

**(ಮುಂದು)**

**(326) 01.40 09.03.2021 ಎಲ್‌ಎಲ್/ವಿಕೆ**

**ಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಹೇಳುವುದಕ್ಕೆ ಅವಕಾಶ ಮಾಡಿಕೊಡಿ. ಅವರು ಮಾತನಾಡುವಾಗ ಮಧ್ಯದಲ್ಲಿ ಏತಕ್ಕೆ ಎದ್ದು ನಿಂತು ಮಾತನಾಡುತ್ತೀರಿ?

**ಡಾ: ಅಶ್ವತ್ಥನಾರಾಯಣ ಸಿ.ಎನ್.(ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಐ.ಟಿ. ಮತ್ತು ಬಿ.ಟಿ., ವಿಜ್ಞಾನ ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಇಲಾಖೆ):–** ಮಾನ್ಯ ಸಭಾಪತಿಯವರೇ, ಇನ್ನುಳಿದಂತೆ ಯಾವ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಅನುಮತಿ ನೀಡಲಾಗಿದೆ, ಅದನ್ನು ಪರಿಶೀಲಿಸಿ ಆ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಸಭಾಪತಿಯವರು:–** ಈ ವಿಷಯದಲ್ಲಿ ನಿರ್ದಿಷ್ಟವಾದ ದಿನಾಂಕವನ್ನು ಹೇಳಬೇಕೆಂದು ಮಾನ್ಯ ಮರಿತಿಬ್ಬೇಗೌಡರು ಕೇಳಿದ್ದಕ್ಕೆ, ನಾನು ತಮಗೆ ಮಾತನಾಡಲು ಅವಕಾಶ ನೀಡಿರುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ಅಶ್ವತ್ಥನಾರಾಯಣ ಸಿ.ಎನ್.:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹಾಗೂ ಆರ್ಥಿಕ ಇಲಾಖೆಯವರ ಜೊತೆ ಮಾತನಾಡಿ ನಿರ್ದಿಷ್ಟವಾದ ದಿನಾಂಕವನ್ನು ಹೇಳುತ್ತೇನೆ.

**ಶ್ರೀ ಶಶೀಲ್ ಜಿ. ನಮೋಶಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿಯಮ 72ರಡಿ ಪ್ರಸ್ತಾಪಿಸಿದ ವಿಷಯಕ್ಕೆ ಸರ್ಕಾರದಿಂದ ನೀಡಿರುವ ಉತ್ತರದ ಬಗ್ಗೆ ನಾನು ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ. ಅದರಂತೆ, "ಸುತ್ತೋಲೆ ಸಂಖ್ಯೆ:ಆಇ 03 ಬಿಇಎಂ 2020, ದಿನಾಂಕ:06.07.2020ರನ್ವಯ 2020–21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳು ಮತ್ತು ಬ್ಯಾಕ್ ಲಾಗ್ ಹುದ್ದೆಗಳೂ ಸೇರಿದಂತೆ ರಾಜ್ಯ ಸಿವಿಲ್ ಸೇವೆಯಲ್ಲಿನ ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಸಹ ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿದೆ" ಎಂದು ಹೇಳಿರುತ್ತಾರೆ. ಆರ್ಟಿಕಲ್ 371(ಜೆ) ಈ ರೂಲ್ಸ್ ಬಗ್ಗೆ ಮತ್ತು ಈ ಆಕ್ಟ್ ಬಗ್ಗೆ ಎಲ್ಲರ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. ಆರ್ಟಿಕಲ್ 371(ಜೆ) ನ 10ನೇ ಕಲಂ ಏನು ಹೇಳುತ್ತದೆಯೆಂದರೆ, "**10. Order to have over-riding effect.-** *(2) Concurrence of Finance Department shall be presumed for the direct recruitments and promotions made under these orders."* ಅಂದರೆ, ಯಾವುದೇ ಆರ್ಥಿಕ ಪರಿಸ್ಥಿತಿಯಲ್ಲಿ ಈ ರೀತಿಯ ಆದೇಶಗಳು ಇದಕ್ಕೆ ಅನ್ವಯವಾಗುವುದಿಲ್ಲ. ಇದು ಬಹಳ ಸ್ಪಷ್ಟವಾಗಿದೆ. ಅದಲ್ಲದೇ, *"10(3) No economic measure shall apply for the reserved posts and as far as possible reserved post shall be filled by regular appointments and not by outsourcing."* ಯಾವಾಗ ಆರ್ಥಿಕ ಪರಿಸ್ಥಿತಿಗಳು ಇದಕ್ಕೆ ಅನ್ವಯವಾಗುವುದಿಲ್ಲ; ಪದೇ ಪದೇ ನಾವು ಈ ವಿಷಯಗಳನ್ನು ಸದನದ ಗಮನಕ್ಕೆ ಏತಕ್ಕೆ ತರಬೇಕು? ಈ ಆದೇಶ ಆಗಬೇಕೆಂದರೆ, ಯಾವುದೇ ಆದೇಶ ಹೊರಡಿಸಿದರೂ ಸಹ that will not be applicable for Kalyana Karnataka ಎಂದು ಸ್ಪಷ್ಟವಾಗಿ ಆದೇಶವಿದೆ. ಹಾಗಾಗಿ, ಈ ಮಾತನ್ನು ಪದೇ ಪದೇ ಏತಕ್ಕೆ ಹೇಳಬೇಕಾಗುತ್ತದೆಯೆಂದು ನಾನು ಮಾನ್ಯ ಮಂತ್ರಿಗಳನ್ನು ಪ್ರಶ್ನೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಮಾನ್ಯ ಶಶೀಲ್ ಜಿ. ನಮೋಶಿಯವರು 371(ಜೆ) ಬಗ್ಗೆ ಪ್ರಶ್ನೆ ಕೇಳಿದ್ದು, ಅದರಲ್ಲಿ ಯಾವುದೇ ಆರ್ಥಿಕ ಇಲಾಖೆಯ ಆದೇಶಗಳು ಅನ್ವಯವಾಗುವುದಿಲ್ಲವೆಂದು ಕೇಳಿರುವ ವಿಷಯ ಬಹಳ ಮುಖ್ಯವಾಗಿದೆ. ಅದಕ್ಕೆ ತಾವು ಉತ್ತರ ನೀಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಕಲ್ಯಾಣ ಕರ್ನಾಟಕದಲ್ಲಿರುವಂತಹ ಹುದ್ದೆಗಳಿಗೆ ಯಾವುದೇ ಆರ್ಥಿಕ ಇಲಾಖೆಯ ಆದೇಶಗಳು ಅನ್ವಯಿಸುವುದಿಲ್ಲ. ಅದಕ್ಕೆ ಸ್ಪಷ್ಟನೆ ನೀಡಬೇಕೆಂದು ಮಾನ್ಯ ಶಶೀಲ್ ಜಿ. ನಮೋಶಿಯವರು ಕೇಳಿರುತ್ತಾರೆ. ಆದರೆ, ಕೋವಿಡ್–19 ಕಾರಣಗಳಿಗೋಸ್ಕರ ಇಡೀ ರಾಷ್ಟ್ರದಲ್ಲಿ ಅಥವಾ ರಾಜ್ಯದಲ್ಲಿ ಬಂದಿರುವಂತಹ ಆರ್ಥಿಕ ಸ್ಥಿತಿಯ ಹಿನ್ನೆಲೆಯಲ್ಲಿ ಈ ನಿಬಂಧನೆಗಳಿಗೆ ಮಾತ್ರ ಅವಕಾಶ ಮಾಡಿಕೊಡಲಾಗಿದೆ.

**(ಗೊಂದಲ)**

**ಶ್ರೀ ಶಶೀಲ್ ಜಿ. ನಮೋಶಿ:–** ಮಾನ್ಯ ಸಭಾಪತಿಯವರೇ, ದಯಮಾಡಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಸರ್ಕಾರ ಈಗಾಗಲೇ ನೀಡಿರುವ ಉತ್ತರವನ್ನು ವಾಪಸ್ಸು ತೆಗೆದುಕೊಂಡು, ಅದನ್ನು ಸರಿಪಡಿಸಿ ಈ ವಿಷಯದಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ಮಾಡಬೇಕೆಂದು ಕೋರುತ್ತೇನೆ as that will not be applicable for Kalyana Karnataka.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಕೋವಿಡ್–19 ಅನ್ವಯವಾಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಈ ವಿಷಯದ ಬಗ್ಗೆ ತಾವು ಇನ್ನೊಂದು ಬಾರಿ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:–** ಈ ವಿಷಯಕ್ಕೆ ಮೊದಲು ಮಾನ್ಯ ಮುಖ್ಯಮಂತ್ರಿಯವರು ಉತ್ತರ ನೀಡಲಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಈ ಹಿಂದೆ 2ನೇ ಮಹಾಯುದ್ಧ ನಡೆದಂತಹ ಸಂದರ್ಭದಲ್ಲಿ, ಎಲ್ಲಾ ಆರ್ಥಿಕ ಮಿತವ್ಯಯಗಳನ್ನು ಹೊರತುಪಡಿಸಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಟ್ಟಿದ್ದರು. ಅದೇ ರೀತಿ ಈಗ ಬಂದಿರುವಂತಹ ಕೋವಿಡ್–19 ಕೂಡ ಒಂದು ಮಹಾಯುದ್ಧ. ಇಂತಹ ಸಂದರ್ಭದಲ್ಲಿ ಎಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಗಳ ಅನುದಾನವನ್ನು ಬದಿಗೊತ್ತಿ ಶಿಕ್ಷಣಕ್ಕೆ ಆದ್ಯತೆ ಕೊಡಬೇಕೆನ್ನುವುದು ನಮ್ಮ ಬೇಡಿಕೆಯಾಗಿರುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ, ಉತ್ತರವನ್ನು ಒದಗಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಹಾಜರಾಗಿ ಉತ್ತರ ನೀಡಲಿ. ಅದಕ್ಕಾಗಿ ಅವರು ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಲಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಸಭಾನಾಯಕರು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಉತ್ತರ ಒದಗಿಸುತ್ತೇನೆಂದು ಹೇಳುತ್ತಿದ್ದಾರೆ. ನಮ್ಮ ಪ್ರಶ್ನೆಗೆ ಮುಂದಿನ ವಾರವೇ ಉತ್ತರ ಕೊಡಿಸಿ. ಆದರೆ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಹಾಜರಾಗಿ ಉತ್ತರ ನೀಡಲಿ.

**ಸಭಾಪತಿಯವರು:–** ಆಯಿತು. ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಹಾಜರಾಗಿ ಉತ್ತರ ನೀಡಲಿ. ಈಗ ನಿಯಮ 330. ಮೊದಲನೇ ವಿಷಯ ಡಾ: ವೈ.ಎ. ನಾರಾಯಣಸ್ವಾಮಿಯವರದ್ದು.

**09. ನಿಯಮ 330 ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ**

**(ಅ) ವಿಷಯ:– ಕೋಲಾರ ಜಿಲ್ಲೆಯ ಕೆರೆಗಳಿಗೆ ಸಂಸ್ಕರಿಸಿದ ನೀರನ್ನು ತುಂಬಿಸಲು ರೂಪಿಸಿರುವ ಕೆ.ಸಿ. ವ್ಯಾಲಿ ಯೋಜನೆಯಡಿಯಲ್ಲಿ ನೂರಾರು ಕೋಟಿ ರೂಗಳನ್ನು ವೆಚ್ಚ ಮಾಡಿದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ಕೆರೆಗಳಿಗೆ ನೀರನ್ನು ತುಂಬಿಸಲು ಆಗದಿರುವ ವಿಷಯದ ಕುರಿತು**

– – –

**ಡಾ: ವೈ.ಎ. ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿಯಮ 330 ರಡಿಯಲ್ಲಿ ಕೋಲಾರ ಜಿಲ್ಲೆಯ ಕೆರೆಗಳಿಗೆ ಸಂಸ್ಕರಿಸಿದ ನೀರನ್ನು ತುಂಬಿಸಲು ರೂಪಿಸಿರುವ ಕೆ.ಸಿ. ವ್ಯಾಲಿ ಯೋಜನೆಯಡಿಯಲ್ಲಿ ನೂರಾರು ಕೋಟಿ ರೂಪಾಯಿಗಳ ಹಣ ವೆಚ್ಚ ಮಾಡಿದರೂ ಕೂಡ ಇದುವರೆವಿಗೂ ನಿರೀಕ್ಷಿತ ಪ್ರಮಾಣದಲ್ಲಿ ಕೆರೆಗಳಿಗೆ ನೀರನ್ನು ತುಂಬಿಸುವುದಕ್ಕೆ ಸಾಧ್ಯವಾಗಿರುವುದಿಲ್ಲವೆಂಬ ಬಗ್ಗೆ ಸರ್ಕಾರದಲ್ಲಿ ಚರ್ಚೆ ಮಾಡುವುದಕ್ಕಾಗಿ ಪ್ರಶ್ನೆ ಕೇಳಿರುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದರಂತೆ, ಬೆಂಗಳೂರಿಗೆ ಕೂಗಳತೆಯ ದೂರದಲ್ಲಿರುವಂತಹ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ನೀರಿನ ಅಭಾವದ ಬಗ್ಗೆ ಇದೇ ಸದನದಲ್ಲಿ ನಾವು ಬಹಳಷ್ಟು ಚರ್ಚೆ ಮಾಡಿರುತ್ತೇವೆ. ಈ ಜಿಲ್ಲೆಗಳಲ್ಲಿ ಯಾವುದೇ ನೀರಾವರಿ ಯೋಜನೆಗಳು ಇಲ್ಲದೇ ಇರುವುದರಿಂದ ಕೆರೆಗಳು ಬತ್ತಿ ಹೋಗಿರುತ್ತವೆ, ಅಂತರ್ಜಲ ಮಟ್ಟ ಕುಸಿದು ಹೋಗಿರುತ್ತದೆ ಹಾಗೂ ಜನರ ಬದುಕು ಬರಡಾಗಿರುತ್ತದೆ. ಕೊನೆಯದಾಗಿ, ಬೆಂಗಳೂರಿನಲ್ಲಿರುವ ತ್ಯಾಜ್ಯದ ನೀರನ್ನು, ಬೆಂಗಳೂರಿನಲ್ಲಿ ಹರಿಯುವ ಮಲಿನವಾದ ನೀರನ್ನು; ಬೆಂಗಳೂರು ನಗರಿಕರು ಉಪಯೋಗಿಸಿ ಬಿಡುಗಡೆಯಾದ ನೀರನ್ನು ಸಂಸ್ಕರಿಸಿ ನಮ್ಮ ಕೆರೆಗಳಿಗೆ ತುಂಬಿಸಿಕೊಳ್ಳುವಂತಹ ದಯನೀಯ ಸ್ಥಿತಿಗೆ ನಾವು ಇಂದು ತಲುಪಿರುತ್ತೇವೆ. ಆದರೆ, ಕೋಲಾರ ಜಿಲ್ಲೆಯಿಂದ ಪ್ರಪಂಚಕ್ಕೆ ಹಾಗೂ ಇಡೀ ದೇಶಕ್ಕೆ ಚಿನ್ನ ಕೊಟ್ಟಿದ್ದೇವೆ, ರೇಷ್ಮೆ ಕೊಟ್ಟಿದ್ದೇವೆ ಮತ್ತು ಈಗ ಹಾಲು ಕೊಡುತ್ತಿದ್ದೇವೆ. ಆದರೆ, ನಮ್ಮಲ್ಲಿ ನೀರು ಇಲ್ಲವೆಂದು, ಕೊನೆಯದಾಗಿ ನಮಗೆ ಯಾವುದಾದರೂ ನೀರು ಕೊಡಬೇಕೆಂದು ಸರ್ಕಾರವನ್ನು ದಯನೀಯವಾಗಿ ಕೋರಿರುತ್ತೇವೆ. ಅದಕ್ಕಾಗಿ, ಸಂಸ್ಕರಿಸಿದ ನೀರನ್ನು ಕೆರೆಗಳನ್ನು ತುಂಬಿಸುವ ಮುಖಾಂತರ ಅಂತರ್ಜಲ ಮಟ್ಟ ಹೆಚ್ಚಿಸುವ ವ್ಯವಸ್ಥೆಗೆ 2016ರಲ್ಲಿ ಸರ್ಕಾರ ಚಾಲನೆ ಕೊಟ್ಟಿರುತ್ತದೆ. ಇಡೀ ದೇಶದಲ್ಲಿಯೇ ಇದು ಮೊದಲನೆ ಪ್ರಾಜೆಕ್ಟ್ ಆಗಿರುತ್ತದೆ. ಅದರಂತೆ, 2016ರಲ್ಲಿ ಕಾಮಗಾರಿ ಚಾಲನೆಯಾಗಿ, 2018ರಲ್ಲಿ ಕೆರೆಗಳಿಗೆ ನೀರನ್ನು ಹರಿಸುವಂತಹ ಕೆಲಸಕ್ಕೆ ಬಂದಿರುತ್ತದೆ. ಕೆ.ಸಿ. ವ್ಯಾಲಿಯಿಂದ 400 ಎಂ.ಎಲ್.ಡಿ. ಕೋಲಾರ ಜಿಲ್ಲೆಯ 126 ಕೆರೆಗಳಿಗೆ ತುಂಬಿಸುತ್ತೇವೆಂದು ಈ ಯೋಜನೆ ಪ್ರಾರಂಭವಾಗಿರುತ್ತದೆ. ಇದು *MoU between the* Bangalore Water Supply and Sewerage Board and the Minor Irrigation Department.

**ಶ್ರೀ ಜೆ.ಸಿ. ಮಧುಸ್ವಾಮಿ(ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು ನಿಯಮ 330ರಡಿಯಲ್ಲಿ ಸರ್ಕಾರದ ಗಮನ ಸೆಳೆಯಬೇಕು. ಅದಕ್ಕೆ ನಾವು ಉತ್ತರ ನೀಡಬೇಕು.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಚಿವರೇ, ಇದು ಗಮನ ಸೆಳೆಯುವ ಸೂಚನೆಯಲ್ಲ. ಇದು ಚರ್ಚೆ ಮಾಡುವಂತಹ ವಿಷಯವಾಗಿದೆ. ಆದಾಗ್ಯೂ, 5 ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ.

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಈಗಾಗಲೇ ಉತ್ತರ ಕೊಟ್ಟಿದ್ದೇವೆ. ಅದರ ಬಗ್ಗೆ ಏನಾದರೂ ಸ್ಪಷ್ಟೀಕರಣ ಬೇಕಾದರೆ ನಾವು ಉತ್ತರ ನೀಡುತ್ತೇವೆ.

**(ಗೊಂದಲ)**

**ಸಭಾಪತಿಯವರು:–** ಇದು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸುವ ವಿಷಯವಾಗಿದೆ. ಹಾಗಾಗಿ, ಅವರು ಪ್ರಾಸ್ತಾವಿಕವಾಗಿ ಮಾತನಾಡಬೇಕಾಗುತ್ತದೆ. ಅದಕ್ಕೆ ತಾವು ನಂತರ ಉತ್ತರ ನೀಡಿ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, 126 ಕೆರೆಗಳಿಗೆ ನೀರು ಕೊಡುವಂತಹ ಯೋಜನೆ ಇದಾಗಿದೆ. ಅದಕ್ಕಾಗಿ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಇದರ ಜೊತೆಗೆ, ಪ್ರಸಕ್ತ ಆಯವ್ಯಯದಲ್ಲಿ ವೃಷಭಾವತಿ ವ್ಯಾಲಿಗೆ ಸಂಸ್ಕರಿಸಿದ ನೀರನ್ನು ತುಂಬಿಸಲು 500 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಮಾನ್ಯ ಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುತ್ತಿದ್ದೇನೆ. ಖ್ಖು ೧ ಣಜ ಜಿಢಿಣ ಣಿಡಿಂರಿಜಛಿಣ ು೧ಟಿ ಜಟಿಣುಡಿಜ ಖಟಿಜುಚಿ. ಇಂಡಿಯಾ ದೇಶದಲ್ಲಿ ಸಂಸ್ಕರಿಸಿದ ನೀರನ್ನು ಇದುವರೆವಿಗೂ ಯಾವುದೇ ಕೆರೆಗೆ ಎಲ್ಲಿಯೂ ತೆಗೆದುಕೊಂಡು ಹೋಗಿರುವುದಿಲ್ಲ. ಈ ಒಂದು ಯೋಜನೆ ನಮ್ಮ ರಾಜ್ಯದಲ್ಲಿ ಜಾರಿಗೆ ಬಂದಿದೆ. ಇದಕ್ಕೆ ಕಾರಣೀಭೂತರಾದ ಎಲ್ಲರಿಗೂ ನಾನು ಇವತ್ತಿನ ದಿವಸ ಅಭಿನಂದನೆ ಸಲ್ಲಿಸುತ್ತೇನೆ. ಆದರೆ, 126 ಕೆರೆಗಳಿಗೆ ಹರಿಸಬೇಕಾದಂತಹ ನೀರು ಕೇವಲ 82 ಕೆರೆಗಳಿಗೆ ನಿಂತು ಹೋಗಿರುತ್ತದೆ. ಇದುವರೆವಿಗೂ ಆ ಕೆರೆಗಳಿಗೆ ಹರಿಸಿದಂತಹ ನೀರಿನ ಪ್ರಮಾಣ ಕೇವಲ 7.12 ಟಿ.ಎಂ.ಸಿ. ಮಾತ್ರ. ನಮಗೆ ಇನ್ನು ಸುಮಾರು 46 ರಿಂದ 47 ಕೆರೆಗಳಿಗೆ ನೀರು ಹರಿಸಬೇಕಾಗಿರುತ್ತದೆ. ಈ ಬಗ್ಗೆ ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಅದೇನೆಂದರೆ, ಅಲ್ಲಿ ಎರಡು ಲಿಫ್ಟ್‌ಗಳಿಂದ ಅಂದರೆ, ಕೆ.ಸಿ. ವ್ಯಾಲಿ ಮತ್ತು ಬೆಳ್ಳಂದೂರು ಲಿಫ್ಟ್‌ನಿಂದ ಆ ಕೆರೆಗಳಿಗೆ ನೀರನ್ನು ಹರಿಸುತ್ತಾರೆ. ಅದರಂತೆ, 400 ಎಂ.ಎಲ್.ಡಿ. ನೀರು ಹರಿಸಬೇಕಾಗಿದ್ದು, 294 ಎಂ.ಎಲ್.ಡಿ. ನೀರು ಮಾತ್ರ ಬರುತ್ತಿದೆ. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:19.12.2019ರಲ್ಲಿ ಸಭೆ ನಡೆಸಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ(ಬಿ.ಡಬ್ಲ್ಯೂ.ಎಸ್.ಎಸ್.ಬಿ.)ಯವರಿಗೆ ತಾಕೀತು ಮಾಡಲಾಯಿತು. ಅದರಂತೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ನಾವು 2020ರ ಜುಲೈ ತಿಂಗಳ ಅಂತ್ಯಕ್ಕೆ ನೀರು ಹರಿಸುತ್ತೇವೆಂದು ಡೆಡ್‌ಲೈನ್ ಕೊಟ್ಟಿದ್ದರು. ಮಾನ್ಯ ಸಣ್ಣ ನೀರಾವರಿ ಮಂತ್ರಿಗಳು ಹಾಗೂ ಅಂದಿನ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾನೂನು ಸಚಿವರಾದ ಶ್ರೀ ಜೆ.ಸಿ. ಮಾಧುಸ್ವಾಮಿಯವರು ದಿನಾಂಕ:23.04.2020ರಂದು ಒಂದು ಸಭೆ ನಡೆಸಿ ಆದಷ್ಟು ಬೇಗ ನೀರು ಹರಿಸಬೇಕೆಂದು ನಿರ್ದೇಶನ ಸಹ ನೀಡಿದ್ದರು. ಆ ನಂತರ, ಮತ್ತೊಂದು ಬಾರಿ ಅಂದರೆ, ದಿನಾಂಕ:23.06.2020ರಂದು ಅಕ್ಟೋಬರ್ ತಿಂಗಳೊಳಗಾದರೂ ನೀರು ಹರಿಸಲೇಬೇಕೆಂದು ತಾಕೀತು ಮಾಡಿದ್ದರು. ಇಷ್ಟೆಲ್ಲಾ ಮಾಡಿದ್ದರೂ ಸಹ ಇದುವರೆವಿಗೂ ನಮಗೆ ಬರುತ್ತಿರುವ ನೀರು ಕೇವಲ 290 ರಿಂದ 300 ಎಂ.ಎಲ್.ಡಿ. ಮಾತ್ರ. ಅದಕ್ಕಿಂತಲೂ ಒಂದು ಹನಿ ಕೂಡ ಹೆಚ್ಚು ಆಗಿರುವುದಿಲ್ಲ. ಆದಾಗ್ಯೂ, ಇದರಲ್ಲಿ ನನ್ನ ನೋವು ಏನೆಂದರೆ, ಎಂ.ಐ.(ಸಣ್ಣ ನೀರಾವರಿ) ಇಲಾಖೆಯವರು ಈ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ, ನಮ್ಮ ಕೆರೆಗಳಿಗೆ ನೀರು ಕೊಡಬೇಕಾದ ಇಲಾಖೆಯಾದಂತಹ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಬಂಡತನಕ್ಕೆ ಬಿದ್ದುಹೋಗಿರುತ್ತಾರೆ. ಏಕೆಂದರೆ, ಬೆಳ್ಳಂದೂರಿನಲ್ಲಿ ನೀರು ಹರಿಯುವುದನ್ನು ಅಳತೆ ಮಾಡುವುದಕ್ಕಾಗಿ ಅಳವಡಿಸಿರುವ ಜಿಟಲಿ ಟಜಣಜಡಿ (ಅಳತೆ ಮಾಪನ) ಸರಿಯಾಗಿದೆ ಎಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಹೇಳುತ್ತಾರೆ. ಆ ಜಿಟಲಿ ಟಜಣಜಡಿ ಸರಿಯಾಗಿಲ್ಲವೆಂದು ಸಣ್ಣ ನೀರಾವರಿ ಇಲಾಖೆಯವರು ಹೇಳುತ್ತಿದ್ದಾರೆ. ಈ ತಿಕ್ಕಾಟದಲ್ಲಿ ನಮಗೆ ಸುಮಾರು 100 ಎಂ.ಎಲ್.ಡಿ. ನೀರು ಬರುತ್ತಿಲ್ಲ.

**(327) 09.03.2021 1.50 ವೈಎಲ್-ವಿಕೆ**

**ಡಾ॥ ವೈ.ಎ.ನಾರಾಯಣಸ್ವಾಮಿ (ಮುಂದು):-**

ಎಫ್.ಸಿ.ಆರ್.ಐ. ಎಂಬುದು ಅಸ್ತಿತ್ವದಲ್ಲಿದ್ದು, Fluid Control Research Institute which calibrates the flow meters. ಈ ಸಂಸ್ಥೆಯವರು ಸಹ 'ಯಾವ flow meters ಅಳವಡಿಸಲಾಗಿದೆಯೋ ಅದು ಸರಿಯಾಗಿದ್ದು, deviation ಕೇವಲ ಶೇ. 9.4 ರಷ್ಟಿದೆ ಎಂದು ಹೇಳಿದ್ದೆ. ಅಷ್ಟು ಹೇಳಿದರೂ ಸಹ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಇಲ್ಲಿಯವರೆಗೂ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ದಿನಾಂಕ: 02.02.2021 ರಂದು ಬೆಳಗ್ಗೆ 7.30ಕ್ಕೆ ನಾನೇ ಬೆಲಂದೂರಿನ Sewage Treatment Plant ಗೆ ಭೇಟಿ ನೀಡಿದ ಸಂದರ್ಭದಲ್ಲಿ ಕೇವಲ 199 MLD ರಷ್ಟು ನೀರು ಮಾತ್ರ ಹರಿಯುತ್ತಿದ್ದು, ಅಲ್ಲಿ ನೋಂದಣಿಯಾದ register ನ ಜೆರಾಕ್ಸ್ ಪ್ರತಿಯನ್ನು ಸಹ ನಾನು ತೆಗೆದುಕೊಂಡು ಬಂದಿದ್ದೇನೆ. ಈ ಸಂಬಂಧ ನಾನು ಹೋಗಿದ್ದಾಗ ದಿನ ಮುಖ್ಯ ಅಭಿಯಂತರರಿಗೆ ಕರೆ ಮಾಡಿ ಕೇಳಿದರೆ, ನಿನ್ನೆ ಇವತ್ತು ಸ್ವಲ್ಪ flow

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡಿಮೆಯಾಗಿದೆ ಎಂದು ಹೇಳಿದರು. ಅಂದರೆ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಯವರು ಏತಕ್ಕಾಗಿ ಇಷ್ಟು ಬಂಡತನಕ್ಕೆ ಒಳಗಾಗಿದ್ದಾರೆ ಎಂಬುದು ನನಗೆ ಇನ್ನೂ ಅರ್ಥವಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಸಣ್ಣ ನೀರಾವರಿ ಸಚಿವರು ಸಭೆ ನಡೆಸಿದರೂ ಸಹ 13 ತಿಂಗಳುಗಳಿಂದ ಒಂದು ಹನಿ ನೀರನ್ನು ಹೆಚ್ಚಾಗಿ ಹರಿಸುವುದಕ್ಕೆ ಪ್ರಯತ್ನ ಮಾಡಿಲ್ಲ ಎನ್ನುವಂಥ ಕೊರಗು ನನಗೆ ಕಾಡುತ್ತಿದೆ. ಅದಕ್ಕಾಗಿ ಮಾನ್ಯ ಸಚಿವರಲ್ಲಿ ನನ್ನ ನಿವೇದನೆ ಏನೆಂದರೆ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧ್ಯಕ್ಷರು ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯವರಿಗೆ ಪತ್ರವನ್ನು ಬರೆದಿದ್ದಾರೆ. ಹಾಗಾಗಿ ಎಂ.ಐ. ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಜೊತೆ ಸಭೆ ನಡೆಸಿ, ಯಾವ meter ಸರಿ ಇದೆ, ಯಾವ meter ಸರಿಯಿಲ್ಲ ಎನ್ನುವುದರ ಬಗ್ಗೆ ಒಂದು ನಿರ್ಧಾರ ತೆಗೆದುಕೊಂಡು, ಇದನ್ನು ಪರಿಹಾರ ಮಾಡಬೇಕು ಎನ್ನುವುದು ನನ್ನ ಮೊದಲ ಬೇಡಿಕೆಯಾಗಿದೆ. ಎರಡನೆಯದಾಗಿ, ಕೋರಮಂಗಲ ಚಲ್ಲಘಟ್ಟ ವ್ಯಾಲಿಯಲ್ಲಿರುವ 218 ಎಂ.ಎಲ್.ಡಿ. ಪ್ಲಾಂಟ್‌ನಲ್ಲಿ 4/27 ಅಂದರೆ 108 ಎಂ.ಎಲ್.ಡಿ. ಪ್ಲಾಂಟ್‌ಗೆ ಸಂಬಂಧಿಸಿದಂತೆ ದುರಸ್ತಿ ಕಾರ್ಯವನ್ನು ಯಾವಾಗ ಕೈಗೊಳ್ಳಲಾಗುವುದು? ಮೂರನೆಯದಾಗಿ, ಹೊಸದಾಗಿ ಕೈಗೊಂಡಿರುವ 150 ಎಂ.ಎಲ್.ಡಿ. ಪ್ಲಾಂಟನ್ನು ಯಾವಾಗ ಪ್ರಾರಂಭಿಸಲಾಗುವುದು? ನಾಲ್ಕನೆಯದಾಗಿ, ಹುಳಿಮಾವು, ಸಾರಕ್ಕಿ, ಅಗರ STP ಯಿಂದ ನೀರು ಒದಗಿಸುವ ಕಾಮಗಾರಿಗೆ ಯಾವ ದಿನಾಂಕದಿಂದ ಚಾಲನೆ ಕಲ್ಪಿಸಲಾಗುವುದು. ಇವೆಲ್ಲವನ್ನೂ ಮಾಡಿದರೆ ಮಾತ್ರ ಕೋಲಾರ ಜಿಲ್ಲೆಯ ಕೆರೆಗೆ ನೀರು ಬರುವುದಕ್ಕೆ ಸಾಧ್ಯ. ಈಗಾಗಲೇ ಮಾನ್ಯ ಸಚಿವರು ಸಹ ಕೋಲಾರ ಜಿಲ್ಲೆಗೆ ಭೇಟಿ ನೀಡಿದ್ದು, ಕೋಲಾರ ಸೊಂಬಂಬುಡಿ ಅಗ್ರಹಾರ ಕೆರೆಯಿಂದ ಜನಘಟ್ಟ ಕೆರೆಯವರೆಗೂ ಈ ನೀರಿನ ಚಾನಲ್ ಅಳವಡಿಸಿದರೆ, ಬಹಳ ಚೆನ್ನಾಗಿ ಕಣ್ಣಿನಲ್ಲಿ ನೋಡುವುದಕ್ಕೆ ಬಹಳ ಆನಂದವಾಗುತ್ತದೆ. ಅದನ್ನು ಈಗಾಗಲೇ ಮಾನ್ಯ ಸಚಿವರು ನೋಡಿಕೊಂಡು ಬಂದಿದ್ದು, ಅದರ ಬಗ್ಗೆ ಕಾಳಜಿ ಸಹ ಇದೆ. ಹಾಗಾಗಿ ಮನವಿ ಮಾಡುವುದೇನೆಂದರೆ, ಈ ಎಲ್ಲಾ ಕಾಮಗಾರಿಯನ್ನು ಯಾವಾಗ ಮುಕ್ತಾಯಗೊಳಿಸಲಾಗುವುದು, ಯಾವಾಗ 43 ಕೆರೆಗಳನ್ನು ತುಂಬಿಸಲಾಗುವುದು, ನಮಗೆ ಮಾತು ನೀಡಿದ ಹಾಗೆ ಯಾವಾಗ ನಡೆದುಕೊಳ್ಳುತ್ತಾರೆ ಎಂಬುದನ್ನು ಸರ್ಕಾರದಿಂದ ಕೇಳಲು ಇಚ್ಛಿಸುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸದಸ್ಯರು ಈಗಾಗಲೇ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಉತ್ತರ ಬರಬೇಕಾಗಿತ್ತು ಎನ್ನುವಂಥ ಮಾತನ್ನು ಹೇಳಿದ್ದಾರೆ. ಅವರೇ ಉತ್ತರ ಹೇಳಿದ್ದಾರೆ, ಅವರೇ ಯೋಜನೆ ಮತ್ತು constraints ಬಗ್ಗೆ ವಿವರಿಸಿ ತಿಳಿಸಿದ್ದಾರೆ, ನಾನು ಹೇಳುವುದಕ್ಕೆ ಏನು ಉಳಿದಿಲ್ಲ. ನಾವು ಆಶಾಭಾವನೆಯನ್ನಿಟ್ಟುಕೊಂಡು 400 ಎಂ.ಎಲ್.ಡಿ. Sewage Treatment Plant ನಿಂದ ನೀರನ್ನು ಒದಗಿಸಬಹುದೆಂದು 2016-17ನೇ ಸಾಲಿನಲ್ಲಿಯೇ ಕೈಗೊಂಡ ಯೋಜನೆಯಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅಂದಿನ ದಿವಸ ಬೆಂಗಳೂರಿನಲ್ಲಿ sewage develop ಆಗುತ್ತಿತ್ತು, ಅದನ್ನು treatment ಮಾಡಿ, ಈ ಭಾಗಕ್ಕೆ ನೀರನ್ನು ಹರಿಸಬೇಕು, HN Valley and KC Valley ಯ ಸುಮಾರು 124 ಕೆರೆಗಳಿಗೆ ನೀರನ್ನು ಒದಗಿಸಬೇಕೆಂದು ತೀರ್ಮಾನ ಮಾಡಿರುವುದು ನಿಜ. ದುರದೃಷ್ಟವಶಾತ್ STP ನಲ್ಲಿ ಬರುವ ಕೊಳಚೆ ನೀರನ್ನು ನಾವು ನಿರೀಕ್ಷೆ ಮಾಡಿದ ಮಟ್ಟದಲ್ಲಿ ಪೂರ್ಣವಾಗಿ ನಾವು treatment ಮಾಡುತ್ತಿಲ್ಲ. ಜೊತೆಗೆ ಬೆಂಗಳೂರಿನಲ್ಲಿಯೇ ಸುಮಾರು ಕೊಳಚೆ ನೀರನ್ನು ಒಳಚರಂಡಿ ವ್ಯಾಪ್ತಿಗೆ ತರಲು ಸಾಧ್ಯವಾಗದೇ, ಮಾಮೂಲಿ drainage ನಲ್ಲಿಯೇ ನೀರು ಹರಿಯುತ್ತಿದೆ. As a Minister I must accept. ಇದಕ್ಕೆ ಸಂಬಂಧಿಸಿದಂತೆ meeting ಮಾಡಿ, ಅದನ್ನು divert ಮಾಡಿಕೊಂಡು, treatment plant ಗೆ ತೆಗೆದುಕೊಂಡು ಹೋಗಿ, ಅದನ್ನು treat ಮಾಡಿ ನಮಗೆ ನೀಡಿ ಎಂದು ಮೂರ್ನಾಲ್ಕು ಸಲ ಸಭೆ ಸಹ ನಡೆಸಿ ತಿಳಿಸಿದ್ದೇವೆ. 250, 260 ಎಂ.ಎಲ್.ಡಿ. ನೀರನ್ನು ಮಾತ್ರ ಒಂದು ದಿವಸಕ್ಕೆ ನೀಡುತ್ತಿದ್ದರು. Against assured 400 MLD of water. ಅದರ ಸಲುವಾಗಿಯೇ ಚರ್ಚೆ ಮಾಡಿ, ಕೊನೆಗೆ 30, 40 ಎಂ.ಎಲ್.ಡಿ. ನೀರು ಜಾಸ್ತಿ ಮಾಡಿದ್ದಾರೆ. ಬಿ.ಡಬ್ಲ್ಯೂ.ಎಸ್.ಎಸ್.ಬಿ. ಯವರು 380 ಎಂ.ಎಲ್.ಡಿ. ನೀರನ್ನು ನೀಡುತ್ತಿದ್ದೇವೆ, as assured by us. 20 ಎಂ.ಎಲ್.ಡಿ. ನೀರು ಕಡಿಮೆ ಇದೆ ಎಂದು ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯವರು ಹೇಳುತ್ತಿದ್ದಾರೆ. ಆದರೆ, ನಾವು receive ಮಾಡಿಕೊಳ್ಳುತ್ತಿರುವುದು 300 ಎಂ.ಎಲ್.ಡಿ. ನೀರು ಮಾತ್ರ ಇದೆ, precisely 294 ಎಂ.ಎಲ್.ಡಿ. ನೀರು ಅಷ್ಟೇ ಇದ್ದು, ಅದನ್ನು ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್‌ರವರು measure ಮಾಡಿದ್ದಾರೆ. ಅದರ ಜೊತೆಗೆ ಬೇರೆ-ಬೇರೆ ಏಜೆನ್ಸಿಯವರು ಸಹ measure ಮಾಡಿದ್ದಾರೆ. ಈಗಾಗಲೇ 380 ಎಂ.ಎಲ್.ಡಿ. ನೀರಿಗೆ ಸಂಬಂಧಿಸಿದಂತೆ ಗೊಂದಲ ಇರುವುದರ ಬಗ್ಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಯವರನ್ನು ಸಭೆಗೆ ಕರೆಸಿ ಚರ್ಚೆ ಮಾಡಿದ್ದೇವೆ. ಎಲ್ಲಿಯೋ ಒಂದು ಕಡೆ ನೋಡಿದಾಗ ನಮಗೆ sewage movement

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಲ್ಲಿಯೇ ತೊಂದರೆಯಾಗಿದೆ. ವ್ಯಾಪಕವಾಗಿ ಬೆಂಗಳೂರಿನ ಸಿಟಿಯಲ್ಲಿ waste ನೀರನ್ನು ಬಳಕೆ ಮಾಡುವ ಸ್ಥಿತಿ ಇರುವುದರಿಂದ ಸಮಯ ತೆಗೆದುಕೊಳ್ಳುತ್ತದೆ, ಅಷ್ಟು ಸುಲಭವಾಗಿ ನಾವು ಮಾಡುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಎಸ್.ಟಿ.ಪಿ. ಗಳೇನಿವೆ, ಅದೆಲ್ಲವನ್ನೂ ನಿರ್ವಹಣೆ ಮಾಡಬೇಕು, ಹೊಸದಾಗಿ ಎಸ್.ಟಿ.ಪಿ. ಗಳನ್ನು ಅಳವಡಿಸಬೇಕು, sewage treatment ಮಾಡಿ, ನೀಡಬೇಕೆಂದು ಆಲೋಚನೆ ಮಾಡಿದ್ದೇನೆ. ಈ ಮಧ್ಯೆ ನಮ್ಮ ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಹೇಳಿದ ಹಾಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಭೆ ನಡೆಸಿ, ಇದರಲ್ಲಿ ಎಲ್ಲಿಯೋ ಒಂದು ಕಡೆ ದೋಷವಾಗಿರುವುದನ್ನು ಸರಿಪಡಿಸೋಣ. ಅದರಿಂದಾಗಿ, ಸುಮಾರು 80 ರಿಂದ 90 ಎಂ.ಎಲ್.ಡಿ. ನೀರು ಹರಿಯುವುದನ್ನು ಸರಿದೂಗಿಸುವುದಕ್ಕೆ ಯಾರಿಂದಲೂ ಸಾಧ್ಯವಾಗಿರುವುದಿಲ್ಲ. ಇದರ ಜೊತೆಯಲ್ಲಿ ನಮಗೆ ಎದುರಾಗಿರುವ ಮತ್ತೊಂದು ತೊಂದರೆ ಏನೆಂದರೆ, ಜೊತೆಗೆ ಕೆರೆಗಳಿಗೆ ನೀರು ತುಂಬಿಸಬೇಕಾದರೆ, ನಾವು full tank capacity ನೀರು ಒದಗಿಸುತ್ತೇವೆ ಎನ್ನುವ ಮಾತನ್ನು ಹೇಳಿಲ್ಲ. Let us be honest. ಯಾವ ರೈತರು ನೀರು ತುಂಬದೇ ಮುಂದೆ ನೀರು ಹರಿಯುವುದಕ್ಕೆ ಬಿಡುತ್ತಿಲ್ಲ. ಜೊತೆಗೆ ನೀರು ಹರಿಯುವಾಗ ದಾರಿಯಲ್ಲಿಯೇ ಸುಮಾರು ಬ್ಯಾರೇಜ್‌ಗಳನ್ನು ನಿರ್ಮಿಸಿಕೊಂಡಿದ್ದಾರೆ. ಇದರಿಂದಾಗಿ ಆ ಬ್ಯಾರೇಜ್‌ಗಳೆಲ್ಲಾ ತುಂಬಿ ಮುಂದಕ್ಕೆ ನೀರು ಹರಿಯಬೇಕು. ಮೂರನೆಯದಾಗಿ, ನೀರು ಹರಿಯುವ ಜಾಗದ ಪಕ್ಕದಲ್ಲಿ ನೆಲೆಸುವಂಥ ಜನರು ಪಂಪ್‌ಸೆಟ್‌ಗಳನ್ನು ಹಾಕಿಕೊಂಡು, ಪಕ್ಕದಲ್ಲಿಯೇ ಬಾವಿಯನ್ನು ತೋಡಿಕೊಂಡಿರುವುದರಿಂದ ಆ ಹರಿಯುವ ನೀರನ್ನು ಬಳಸುತ್ತಿದ್ದಾರೆ. ಈಗಾಗಲೇ ಹರಿಯುವ ನೀರನ್ನು ಬಳಸಬಾರದೆಂದು ಸರ್ಕಾರದಿಂದ ಆದೇಶ ಹೊರಡಿಸಲಾಗಿದೆ. ಆದರೂ ಆ ರೈತರು ಅಲ್ಲಿಯೇ ನೀರು ಹರಿಯುವುದರಿಂದ, ಆ ನೀರನ್ನು ಬಿಡುತ್ತಿಲ್ಲ. ಈಗ ಇರುವಂಥ ನೀರಿಗೆ ಸಂಬಂಧಿಸಿದಂತೆ Detailed Project Report ಮಾಡಿ, ನೀರನ್ನು ಹರಿಸುವ ಸ್ಥಿತಿಯಲ್ಲಿಲ್ಲ. ಏಕೆಂದರೆ, ರೈತರ ಒತ್ತಡ ಇರುವುದರಿಂದ ಬ್ಯಾರೇಜ್ ತುಂಬದೇ ನೀರನ್ನು ಮುಂದಕ್ಕೆ ಹರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಸಾಮಾನ್ಯವಾಗಿ ಶೇ.50 ರಷ್ಟು ನೀರನ್ನು ಹರಿಸುವಂತೆ DPR ಮಾಡಲಾಗಿತ್ತು. ಶೇ. 70, 80, 100 ರಷ್ಟು ನೀರನ್ನು ಒದಗಿಸಿದರೂ, ಮುಂದಕ್ಕೆ ನೀರು ಒದಗಿಸಲು ಸಾಧ್ಯವಾಗುತ್ತಿಲ್ಲ. ಈಗಾಗಲೇ ಕಾನೂನು ಮಾಡಿ, ಸರ್ಕಾರದಿಂದ ಆದೇಶ ಹೊರಡಿಸಲಾಗಿದ್ದರೂ, ಅಷ್ಟೊಂದು ಯಶಸ್ಸು ಸಾಧಿಸಲು ಸಾಧ್ಯವಾಗದೆಯೇ, tail end ನಲ್ಲಿ ಸುಮಾರು 8 ರಿಂದ 10 ಕೆರೆಗಳಿಗೆ ನೀರನ್ನು ಒದಗಿಸಲು ಸಾಧ್ಯವಾಗಿಲ್ಲ. ಹಾಗಾಗಿ ಇನ್ನು ಸ್ವಲ್ಪ ನೀರು ಸಿಕ್ಕಿದರೆ ಆ ಕೆರೆಗಳಲ್ಲಿಯು ನೀರು ತುಂಬಿಸಬಹುದೆಂಬ ಆಸೆಯನ್ನಿಟ್ಟುಕೊಂಡಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ವಿಚಾರದಲ್ಲಿ ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ತಜ್ಞರಾಗಿದ್ದು, ಅದರಲ್ಲಿ ಎರಡನೇ ಮಾತಿಲ್ಲ. ಏಕೆಂದರೆ, ಅವರು ಎಂ.ಎಸ್.ರಾಮಯ್ಯ ಕಾಲೇಜಿನಲ್ಲಿ ಪ್ರೊಫೆಸರಾಗಿ ಕರ್ತವ್ಯ ನಿರ್ವಹಿಸಿದವರಾಗಿದ್ದಾರೆ. ಹಾಗಾಗಿ ಮಾನ್ಯ ವೈ.ಎ.ನಾರಾಯಣಸ್ವಾಮಿಯವರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಯವರು, ನಮ್ಮ ಇಲಾಖೆಯವರನ್ನು ಕರೆಸಿ, ಇದಕ್ಕೆ ಏನಾದರೂ ಪರಿಹಾರ ಕಂಡು ಹಿಡಿಯಬಹುದೇ ಎಂಬುದರ ಬಗ್ಗೆ ಈ ವಾರದೊಳಗೆ ಸಭೆ ಏರ್ಪಡಿಸಿ, ಮತ್ತೊಮ್ಮೆ ಪ್ರಯತ್ನ ಮಾಡುತ್ತೇನೆ.

**ಸಭಾಪತಿಯವರು:-** ನಾನು ಬೆಳಗ್ಗೆಯೇ ಹೇಳಬೇಕೆಂದು ಭಾವಿಸಿದ್ದೆನು. ಇವತ್ತು ಸದನದಲ್ಲಿ ಕಡ್ಡಾಯವಾಗಿರಬೇಕಾದ ಮಾನ್ಯ ಸಚಿವರುಗಳ ಹೆಸರನ್ನು ಹೇಳುವುದಕ್ಕೆ ಬಯಸುತ್ತೇನೆ. ಡಾ॥ ಸಿ.ಎನ್.ಅಶ್ವಥ್ ನಾರಾಯಣ್, ಉಪ ಮುಖ್ಯಮಂತ್ರಿಗಳು, ಮಾನ್ಯ ಕೋಟ ಶ್ರೀನಿವಾಸ ಪೂಜಾರಿ, ಸಭಾನಾಯಕರು, ಮಾನ್ಯ ಬಾಳಾ ಸಾಹೇಬ್ ಪಾಟೀಲ್, ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿ, ಮಾನ್ಯ ಆರ್.ಶಂಕರ್, ಮಾನ್ಯ ಪಿ.ಸಿ.ಯೋಗೇಶ್ವರ್. ಮಾನ್ಯ ಸಭಾನಾಯಕರೇ, ನಾನು ಪದೇ-ಪದೇ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಚಿವರೆಲ್ಲರೂ ಕಡ್ಡಾಯವಾಗಿ ಸದನದಲ್ಲಿ ಇರಬೇಕು. ಈಗಾಗಲೇ ಬಹಳ ಸಲ ಹೇಳಿದ್ದು, ಮತ್ತೊಮ್ಮೆ ಹೇಳುತ್ತಿದ್ದೇನೆ. ಮುಂದಿನ ಸಲ ತೀಕ್ಷ್ಣವಾಗಿ ಹೇಳುವಂಥ ಪರಿಸ್ಥಿತಿ ನಿರ್ಮಾಣವಾಗುವುದಕ್ಕೆ ಅವಕಾಶ ನೀಡಬೇಡಿ. ದಯವಿಟ್ಟು ಸಂಬಂಧಪಟ್ಟ ಸಚಿವರು ಕಡ್ಡಾಯವಾಗಿ ಸದನದಲ್ಲಿ ಇರಬೇಕು. ಪ್ರತಿ ದಿವಸ ಹೇಳಿದರೂ ಕೇಳಲಿಲ್ಲವೆಂದರೆ ಹೇಗೆ?

ಹಾಗೆಯೇ ಸಂಬಂಧಪಟ್ಟ ಇಲಾಖಾಧಿಕಾರಿಗಳಾದ ಶ್ರೀಮತಿ ಪ್ರಿಯಾಂಕ ಮೇರಿ ಫ್ರಾನ್ಸಿಸ್, ಆಯುಕ್ತರು, ಪಂಚಾಯತ್ ರಾಜ್ ಇಲಾಖೆ. ಶ್ರೀ ರಿಚರ್ಡ್ ವಿನ್ಸಂಟ್ ಡಿ'ಸೋಜಾ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಉಗ್ರಾಣ ನಿಗಮ. ಶ್ರೀಮತಿ ಸುಮಾ, ಉಪ ಕಾರ್ಯದರ್ಶಿಗಳು, ಶ್ರೀ ವೆಂಕಟಸ್ವಾಮಿ, ಸರ್ಕಾರದ ಸೇವಾ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ ಅಧಿವೇಶನ ಪ್ರಾರಂಭದಿಂದ ಮಧ್ಯಾಹ್ನದವರೆಗೂ ಸದನದಲ್ಲಿ ಇರಬೇಕು. ಮಧ್ಯಾಹ್ನದಿಂದ ಅಧಿವೇಶನ ಮುಕ್ತಾಯವಾಗುವವರೆಗೆ ಶ್ರೀಮತಿ ಸುಷಮಾ ಗೋಡಬೋಲೆ, ನಿರ್ದೇಶಕರು, ಲೋಕ ಶಿಕ್ಷಣ ನಿರ್ದೇಶನಾಲಯ, ಶ್ರೀ ಉಪೇಂದ್ರ ಪ್ರತಾಪ್ ಸಿಂಗ್, ಕೈಮಗ್ಗ ಮತ್ತು ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು. ಶ್ರೀ ಅನ್ವರ್ ಪಾಷ, ಸರ್ಕಾರದ ಉಪ ಕಾರ್ಯದರ್ಶಿ. ಆಹಾರ ನಾಗರಿಕ ಸರಬರಾಜು ಇಲಾಖೆ. ಸರ್ಕಾರದ ಉಪ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಮಗ್ಗ ಇಲಾಖೆ. ಭೋಜನ ವಿರಾಮದ ನಂತರ ಸಂಬಂಧಪಟ್ಟ ಇಲಾಖಾಧಿಕಾರಿಗಳು ಕಡ್ಡಾಯವಾಗಿ ಸದನದಲ್ಲಿ ಹಾಜರಿರಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 10. ಪ್ರಕಟಣೆ

**ಸಭಾಪತಿಯವರು:–** ವಿಧಾನ ಪರಿಷತ್ತಿನ ಅಧಿವೇಶನದ ಸಮಯದಲ್ಲಿ ವಿಧಾನ ಪರಿಷತ್ತಿನ ಸಭಾಂಗಣದ ಮೊಗಸಾಲೆಗಳಲ್ಲಿ ಅಳವಡಿಸಿರುವ ಕಪಾಟುಗಳಲ್ಲಿ (ಪಿಜನ್ ಬಾಕ್ಸ್) ಮಾನ್ಯ ಶಾಸಕರುಗಳ ಮೊಬೈಲ್‌ಗಳನ್ನು ಸಂರಕ್ಷಿಸಲು ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಸದನಕ್ಕೆ ಆಗಮಿಸುವ ಶಾಸಕರುಗಳು ಕಡ್ಡಾಯವಾಗಿ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಹಾಗೂ ಮೊಬೈಲನ್ನು ಸದನದ ಒಳಗೆ ತರಬಾರದೆಂದು ಈ ಮೂಲಕ ಸದನದ ಗಮನಕ್ಕೆ ತರಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ದಿನಾಂಕ 10.03.2021ರ ಬುಧವಾರ ದಿಂದ ದಿನಾಂಕ 17.03.2021 ರ ಬುಧವಾರದ ತನಕ ಬೆಳಗ್ಗೆ 09:00 ಗಂಟೆಯಿಂದ ಸಂಜೆ 06:00 ರವರೆಗೆ 60 ವರ್ಷ ಮೇಲ್ಪಟ್ಟ ಹಾಗೂ 45 ವರ್ಷ ಮೇಲ್ಪಟ್ಟ comorbidities ಇರುವಂತಹ ವಿಧಾನ ಪರಿಷತ್ತು ಸದಸ್ಯರಿಗೆ ಕೋವಿಡ್ ನಿಯಂತ್ರಣ ಲಸಿಕೆಯನ್ನು ನೀಡಲು ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ಪಿ.ಎಂ.ಎಸ್.ಎಸ್.ವೈ ಘಟಕದಲ್ಲಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಈ ಸಂಬಂಧ ಶಾಸಕರ ಭವನದಿಂದ ಬಸ್ಸು ವ್ಯವಸ್ಥೆಯನ್ನು ಸಹ ಮಾಡಿದ್ದು ಇಚ್ಛೆಯುಳ್ಳ ಸದಸ್ಯರುಗಳು ಕೋವಿಡ್ ನಿಯಂತ್ರಣ ಲಸಿಕೆಯನ್ನು ಪಡೆಯುವಂತೆ ವಿಧಾನ ಪರಿಷತ್ತಿನಲ್ಲಿ ಈ ಮೂಲಕ ಕೋರಲಾಗಿದೆ. ಸದನವನ್ನು 3.00 ಗಂಟೆಯವರೆಗೆ ಮುಂದೂಡಲಾಗಿದೆ.

**(328) 09.03.2021, 3.10, ಟಿಸಿಹೆಚ್–ಬಿ.ಎನ್.ಎಸ್.**

**(ಮಧ್ಯಾಹ್ನ 2 ಗಂಟೆಗೆ ಭೋಜನ ವಿರಾಮಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 18 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು)**

**ಸಭಾಪತಿಯವರು:–** ಈಗ ನಿಯಮ–68ರಡಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 11. ನಿಯಮ–68ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ

ವಿಷಯ:– ತಮಿಳುನಾಡು ಸರ್ಕಾರವು ಕಾವೇರಿ ನದಿ ಪಾತ್ರದಲ್ಲಿನ ಮಾಯನೂರು ಜಲಾಶಯವನ್ನು ಅಕ್ರಮವಾಗಿ ಬಳಸಿಕೊಂಡಿರುವ ಕುರಿತು.

----

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ನಾಡಿನ ಜಲದ ವಿಚಾರದಲ್ಲಿ, ನೀರಾವರಿ ವಿಚಾರದಲ್ಲಿ ನಮ್ಮ ಎರಡು ಕಣ್ಣು ಒಂದು ಕೃಷ್ಣಾ ನದಿ; ಎರಡನೆಯದು ಕಾವೇರಿ ನದಿ. ಕೃಷ್ಣಾ ನದಿಯ ಸಮಸ್ಯೆಗಳು ಒಂದು ತಹಬದಿಗೆ ಬಂದಿದೆ; ಒಂದು ಹಂತಕ್ಕೆ ಬಂದಿದ್ದೆ, ಇವತ್ತಿನ ದಿವಸ 519 ಮೀಟರ್‌ನಿಂದ 5 ಮೀಟರ್ ಅನ್ನು ಹೆಚ್ಚಿಸಿಕೊಳ್ಳತಕ್ಕಂಥ ಒಂದು ತೀರ್ಮಾನವನ್ನು ನ್ಯಾಯ ಮಂಡಳಿ ಕೊಟ್ಟಿದೆ. ಅದರ ಬಳಕೆಯಲ್ಲಿ ನಾವು ಮುಂದಾಗಬೇಕಾಗಿದೆ. ಆದರೆ, ಕಾವೇರಿ ನದಿಯದ್ದು ಅತ್ಯಂತ ಭಿನ್ನವಾದ ವಿಚಾರವಾಗಿದೆ. ನಾನು ಕಳೆದ ವಾರ ಈ ನಾಡಿನ ಪ್ರಜಾವಾಣಿ ಮತ್ತು ವಿಶೇಷವಾಗಿ ವಿಜಯವಾಣಿ ಪತ್ರಿಕೆಗಳಲ್ಲಿ ಪ್ರಕಟವಾದಂತಹ ಸುದ್ದಿಯನ್ನು ಮೊದಲು ಸರ್ಕಾರದ ಗಮನಕ್ಕೆ ಹಾಗೂ ಈ ಸದನದ ಗಮನಕ್ಕೆ ತರಬಯಸುತ್ತೇನೆ. ಆ ಪತ್ರಿಕೆಗಳಲ್ಲಿ "ನದಿಗಳ ಜೋಡಣೆಗೆ ಕೇಂದ್ರ ಸರ್ಕಾರದ ನೆರವು, ಕಾವೇರಿ ವಿಚಾರದಲ್ಲಿ ತಮಿಳುನಾಡು ವಿರುದ್ಧ ಚಕಾರವೆತ್ತದ ರಾಜ್ಯ; ತಮಿಳುನಾಡು ರೂಪಿಸಿರುವಂಥ ಯೋಜನೆ ಫೆಬ್ರವರಿ 21ಕ್ಕೆ ಉದ್ಘಾಟನೆ." ಹಾಗೆಯೇ ವಿಜಯವಾಣಿ ದಿನಪತ್ರಿಕೆಯಲ್ಲಿ "ಕಾವೇರಿ ಯೋಜನೆಯಿಂದ ರಾಜ್ಯಕ್ಕೆ ಅಪಾಯ, ಹೆಚ್ಚುವರಿ ನೀರು ಬಳಕೆಗೆ ಮುಂದಾದ ತಮಿಳುನಾಡು ಸರ್ಕಾರ." ಎಂದು ವರದಿಯಾಗಿದೆ.

**(ಮುಂದು..)**

**(329)9.3.2021/3.20/ಎಂ.ಎಂ–ಜಿ.ಆರ್**

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಮುಂದು):–**

ಕರ್ನಾಟಕ ಮತ್ತು ತಮಿಳುನಾಡಿನ ಕಾವೇರಿ ವಿವಾದ ಇವತ್ತು ನಿನ್ನೆಯದಲ್ಲ. ಇದಕ್ಕೆ ಎರಡು ಶತಮಾನಗಳ ಇತಿಹಾಸವಿದೆ. ಬ್ರಿಟಿಷರು ನಮ್ಮನ್ನು ಆಳುವ ಸಂದರ್ಭದಿಂದ ಈ ಸಮಸ್ಯೆ ಪ್ರಾರಂಭವಾಗಿದೆ. ಬ್ರಿಟಿಷರು ಆಳುವ ಸಂದರ್ಭದಲ್ಲಿ ದಕ್ಷಿಣ ಭಾರತದಲ್ಲಿ ಮದ್ರಾಸ್ ಅನ್ನು ಕೇಂದ್ರ ಮಾಡಿಕೊಳ್ಳುತ್ತಾರೆ. ಒಂದು Presidency ಯನ್ನು ರಾಜ್ಯವನ್ನಾಗಿ ಮಾಡಿಕೊಂಡು ಅದನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಿಕೊಳ್ಳುತ್ತಾರೆ. ಅವತ್ತು ಮೈಸೂರು ಪ್ರಾಂತ್ಯ ಅದರ ಅಧೀನದಲ್ಲಿ ಬರುತ್ತದೆ. ಹಾಗಾಗಿ ಕಾವೇರಿ ನದಿ ಹುಟ್ಟುವುದು ಕರ್ನಾಟಕದಲ್ಲಿ ಪಶ್ಚಿಮಘಟ್ಟದಲ್ಲಿ ತಲಕಾವೇರಿಯಲ್ಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾವೇರಿ ನದಿಯ ಬಹುಭಾಗ ಹರಿಯುವುದು ಕರ್ನಾಟಕದಲ್ಲಿ ಮತ್ತು ಹೆಚ್ಚು ನೀರನ್ನು ಉತ್ಪತ್ತಿ ಮಾಡುವುದು ಕೂಡ ಕರ್ನಾಟಕ ಎನ್ನುವಂತಹ ವಿಚಾರವನ್ನು ಅತ್ಯಂತ ಹೆಮ್ಮೆಯಿಂದ ಹೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಚಾರದಲ್ಲಿ ತಮಗೆ ಮಾಹಿತಿಯನ್ನು ಕೊಡುವುದಾದರೆ, ನಮ್ಮ ರಾಜ್ಯದಲ್ಲಿ ವಾರ್ಷಿಕವಾಗಿ 15,715 ಮಿ.ಮೀ., ಮಳೆ ಕರ್ನಾಟಕದಲ್ಲಿ ಕಾವೇರಿ ಜಲಾನಯನ ಭಾಗದಲ್ಲಿ ಸುರಿಯುತ್ತದೆ. ಅದು ಹತ್ತಿರತ್ತಿರ 1,571 ಸೆಂಟಿ ಮೀಟರ್ ಆಗುತ್ತದೆ. ಅದೇ ತಮಿಳುನಾಡಿನ ಜಲಾನಯನ ಭಾಗದಲ್ಲಿ 11,472 ಮಿ.ಮೀ. ಮಳೆ ಸುರಿಯುತ್ತದೆ. ಅದು 1,147 ಸೆಂಟಿ ಮೀಟರ್ ಆಗುತ್ತದೆ. ಅರ್ಥಾತ್ 424 ಸೆಂಟಿ ಮೀಟರ್ ಮಳೆ ಹೆಚ್ಚುವರಿಯಾಗಿ ಕರ್ನಾಟಕದ ಜಲಾನಯನ ಭಾಗದಲ್ಲಿ ಬೀಳುತ್ತದೆ ಮತ್ತು ನೀರಿನ ಉತ್ಪತ್ತಿಯಾಗುತ್ತದೆ. ನೀರಿನ ಉತ್ಪತ್ತಿಯ ಶೇಕಡಾವಾರು ನೋಡುವುದಾದರೆ ನಮ್ಮಲ್ಲಿ ಉತ್ಪತ್ತಿಯಾಗುವುದು ಶೇ.53.8. ತಮಿಳುನಾಡಿನಲ್ಲಿ ಉತ್ಪತ್ತಿಯಾಗುವುದು ಕೇವಲ ಶೇ.31.9. ನಮ್ಮಲ್ಲಿ 425 ಟಿ.ಎಂ.ಸಿ., ತಮಿಳುನಾಡಿನಲ್ಲಿ 252 ಟಿ.ಎಂ.ಸಿ., ಮತ್ತು ಕೇರಳದಲ್ಲಿ ಕೇವಲ ಶೇ. 14.3, 113 ಟಿ.ಎಂ.ಸಿ., ಆಗಿದೆ. ಇನ್ನು ಈ ವಿಚಾರದಲ್ಲಿ ಒಂದು ದೊಡ್ಡ ಹೋರಾಟ ಹಿಂದಿನಿಂದಲೂ ಕರ್ನಾಟಕ ಮತ್ತು ತಮಿಳುನಾಡಿನ ನಡುವೆ ನಡೆದುಕೊಂಡು ಬಂದಿದೆ. ಅದಕ್ಕಾಗಿ 1892ರಲ್ಲಿ ಮತ್ತು 2014ರಲ್ಲಿ ಎರಡು ಒಪ್ಪಂದಗಳಾಯಿತು. ಆ ಎರಡು ಒಪ್ಪಂದಗಳು ಒಂದು ರೀತಿಯ ಯಜಮಾನ ಮತ್ತು ಅಧೀನನ ನಡುವೆ ಆದ ಒಂದು ಒಪ್ಪಂದದ ರೀತಿ ಇದೆ. ಏಕೆಂದರೆ ಬ್ರಿಟಿಷರು ಮದ್ರಾಸ್ ಅನ್ನು Presidency Capital City ಯನ್ನಾಗಿ ಮಾಡಿಕೊಂಡು ಕರ್ನಾಟಕವನ್ನು ಅಧೀನ ರಾಜ್ಯವನ್ನಾಗಿ ಮಾಡಿಕೊಂಡ ಕಾರಣಕ್ಕಾಗಿ ಈ ಸಮಸ್ಯೆ ಪ್ರಾರಂಭವಾಯಿತು. ಹಾಗಾಗಿ ನಾವು ಯಾವುದೇ ಅಣೆಕಟ್ಟುಗಳನ್ನು ಮಾಡುವುದಕ್ಕೆ ಹೋದಾಗ ಅವರು ಅಡ್ಡಿ ಮಾಡುವಂತಹ ಒಂದು ಪರಂಪರೆಯನ್ನು ಹುಟ್ಟುಹಾಕಿಕೊಂಡು ಬಂದರು. ಎಲ್ಲಿಯವರೆಗೆ ನಮ್ಮ ಮತ್ತು ಅವರ ಇತ್ಯರ್ಥ ಹೋಯಿತು ಆಗ ಅವರ ಅಭಿಪ್ರಾಯ ಅವತ್ತಿನ ಬ್ರಿಟಿಷ್ ಅಧಿಕಾರಿಗಳು ಹೇಳುತ್ತಾರೆ. ಒಬ್ಬ ಅಂತರಾಷ್ಟ್ರೀಯ ಆಂಗ್ಲ ನೀರಾವರಿ ತಜ್ಞ ಬರ್ಬರ್ 'ಈ ಕಾವೇರಿ ವಿವಾದವನ್ನು ಕಾನೂನು ಪ್ರಕಾರ ಇತ್ಯರ್ಥಪಡಿಸದೇ ಸಾರ್ವಭೌಮತ್ವ ಹೊಂದಿದ ಆಂಗ್ಲ ಸರ್ಕಾರದ ಅಧಿಕಾರಯುತ ನಿರ್ಧಾರದಂತೆಯೇ ಬಗೆಹರಿಸಲಾಗಿದೆ' ಎನ್ನುವಂಥ ಮಾತನ್ನು ಹೇಳುತ್ತಾನೆ. ಬಳಿಯಲ್ಲಿಯೇ ಇರುವ ಪಾರ್ಕ್‌ಗೆ ಕಬ್ಬನ್‌ರವರ ಹೆಸರನ್ನಿಟ್ಟಿದ್ದೇವಲ್ಲಾ, ಆ ಕಬ್ಬನ್ 'ಮದ್ರಾಸ್ ತೋಳವಾಗಿತ್ತು, ಮೈಸೂರು ಕುರಿಮರಿಯಾಗಿತ್ತು. ಇಂತಹವರ ನಡುವೆ ಆದ ಒಪ್ಪಂದ' ಎಂದು ವ್ಯಂಗ್ಯವಾಡುತ್ತಾನೆ. ಹಾಗಾಗಿ ತಮಿಳುನಾಡಿನವರನ್ನು ಕೇಳದೇ ಕರ್ನಾಟಕದವರು ಯಾವುದೇ ಯೋಜನೆಗಳನ್ನು ಕೈಗೆತ್ತಿಕೊಳ್ಳಬಾರದು ಎನ್ನುವಂಥ ಹಠ ಹಿಡಿಯುತ್ತಾರೆ. ಅವತ್ತು ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಸರ್. ಎಂ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶ್ವೇಶ್ವರಯ್ಯನವರು ದೊಡ್ಡ ಹೋರಾಟವನ್ನು ಮಾಡಿ 'ಕನ್ನಂಬಾಡಿ ಕಟ್ಟೆ' ಕೆಲಸವನ್ನು ಮಾಡುತ್ತಾರೆ. ಅದು 1911ರಲ್ಲಿ ಪ್ರಾರಂಭವಾಗುತ್ತದೆ. ಕನ್ನಂಬಾಡಿ ಕಟ್ಟೆ ಕಟ್ಟುವಾಗ ಒಪ್ಪಿಗೆ ಪಡೆಯುವಂತಹ ದಿಸೆಯಲ್ಲಿ 1924ರಲ್ಲಿ ಒಪ್ಪಂದವಾಗುತ್ತದೆ. ಅದರ ಮೇಲೆ ನಾವು ಸುಪ್ರೀಂ ಕೋರ್ಟ್‌ವರೆಗೂ ಹೋಗುತ್ತೇವೆ, ಪ್ರಾಧಿಕಾರದ ರಚನೆಯಾಗುತ್ತದೆ, ಪ್ರಾಧಿಕಾರದ ರಚನೆಯಲ್ಲಿ ನೀರಿನ ಹಂಚಿಕೆಯನ್ನು ಪ್ರಾಧಿಕಾರ ಮಾಡುತ್ತದೆ, ಅಂತಿಮವಾಗಿ ಸುಪ್ರೀಂ ಕೋರ್ಟ್ ಕೂಡ ಕಳೆದ 2018ರ ಫೆಬ್ರವರಿಯಲ್ಲಿ ಒಂದು ತೀರ್ಪನ್ನು ಕೊಡುತ್ತದೆ. ಕರ್ನಾಟಕಕ್ಕೆ 270 ಇತ್ತು 14 ಟಿ.ಎಂ.ಸಿ., ಯನ್ನು ಹೆಚ್ಚು ಮಾಡಿ 284.75 ಟಿ.ಎಂ.ಸಿ., allocation ಕೊಡುತ್ತದೆ. ತಮಿಳುನಾಡಿಗೆ 404.25 ಟಿ.ಎಂ.ಸಿ.ಯನ್ನು allocation ಕೊಡುತ್ತದೆ, ಕೇರಳಕ್ಕೆ 30 ಟಿ.ಎಂ.ಸಿ.ಯನ್ನು ಕೊಡುತ್ತದೆ. ಪಾಂಡಿಚೇರಿಗೆ 07 ಟಿ.ಎಂ.ಸಿ.ಯನ್ನು ಕೊಡುತ್ತದೆ. ಇದನ್ನು fifty percent availability ಅಂದರೆ, 50 ಭಾಗ ನೀರಾವರಿ ಲಭ್ಯತೆಯ ಆಧಾರದ ಮೇಲೆ ಅವರು ಹಂಚಿಕೆಯನ್ನು ಮಾಡುತ್ತಾರೆ. ಉಳಿದಂತೆ ಹೆಚ್ಚುವರಿ ನೀರಿನ ವಿಚಾರವನ್ನು ಅವರವರ ಬಳಕೆಗೆ ಬಿಟ್ಟುಬಿಡುತ್ತಾರೆ. ಈಗ ಸಮಸ್ಯೆ ಎದುರಾಗಿರುವುದು ಏನೆಂದರೆ, ಇಡೀ ಕಾವೇರಿ ಜಲಾನಯನದ ಉಸ್ತುವಾರಿಯನ್ನು ಕಾವೇರಿ ನಿರ್ವಹಣಾ ಮಂಡಳಿಗೆ ಕೊಟ್ಟಿದ್ದಾರೆ. ಅದು ಕರ್ನಾಟಕ ಇರಲಿ, ತಮಿಳುನಾಡು ಇರಲಿ ನೀರಿನ ಹಂಚಿಕೆ ವಿಚಾರದಲ್ಲಿ ಮೇಲುಸ್ತುವಾರಿಯನ್ನು ಆ ನಿರ್ವಹಣಾ ಮಂಡಳಿ ಮಾಡುವುದು ಮತ್ತು ಇಲ್ಲಿ ಏನೇ ಕಾಮಗಾರಿಗಳು ಅಥವಾ ನೀರಿನ ಬಿಡುಗಡೆ ಇತ್ಯಾದಿ ವಿಚಾರಗಳಿಗೆ ನಿರ್ವಹಣಾ ಮಂಡಳಿ ತೀರ್ಮಾನವನ್ನು ಕೊಡಬೇಕು ಮತ್ತು ಅದರ ಒಪ್ಪಿಗೆಯನ್ನು ಪಡೆಯಬೇಕು. ಈ ಮೂರು ರಾಜ್ಯಗಳ, ಪಾಂಡಿಚೇರಿ ಸೇರಿ ನಾಲ್ಕು ರಾಜ್ಯಗಳ ಪ್ರತಿನಿಧಿಗಳು ಅಲ್ಲಿರಬೇಕು. ನೀರಾವರಿ ಕಾರ್ಯದರ್ಶಿಗಳು ಸೇರಿದ ಹಾಗೆ ಮತ್ತು ಕೇಂದ್ರ ಒಬ್ಬ ಅಧಿಕಾರಿಯನ್ನು ನೇಮಕ ಮಾಡುವುದು, ಆ ರೀತಿ ಮಂಡಳಿ ಕೆಲಸ ಮಾಡುತ್ತಿದೆ. ಈ ನಡುವೆ ಕಳೆದ ಫೆಬ್ರವರಿ 21ರಂದು ತಮಿಳುನಾಡು ಕೇಂದ್ರ ಸರ್ಕಾರದ ಅನುಮತಿಯಿಲ್ಲದೇ ಮತ್ತು ಈ ರಾಜ್ಯದ ಎನ್.ಓ.ಸಿ., ಇಲ್ಲದೇ ಮತ್ತು ಕೇಂದ್ರ ಜಲ ಆಯೋಗದ ಅನುಮತಿ ಇಲ್ಲದೇ ಮತ್ತು ಕಾವೇರಿ ನಿರ್ವಹಣಾ ಮಂಡಳಿ ಏನಿದೆ ಆ ಮಂಡಳಿಯ ಅನುಮತಿಯನ್ನು ಪಡೆಯದೇ ಒಂದು ದೊಡ್ಡ ಕಾಮಗಾರಿಗೆ ಕೈ ಹಚ್ಚಿದೆ. ಅದರ ಶಂಕುಸ್ಥಾಪನೆ ಮತ್ತು ಉದ್ಘಾಟನಾ ಕಾರ್ಯಕ್ರಮವನ್ನು ಮಾಡಿದೆ. ಅದು ನಾನು ಈಗಾಗಲೇ ಹೇಳಿದ ಹಾಗೆ 'ಪ್ರಜಾವಾಣಿ', 'ವಿಜಯವಾಣಿ' ಸೇರಿದಂತೆ ನಾಡಿನ ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟವಾಗಿದೆ. ಅದು ನಮ್ಮ ರಾಜ್ಯದ ಗಮನಕ್ಕೆ ತಡವಾಗಿ ಬಂದಿದೆ. ನಾವೇನಾದರೂ ಒಂದು ಸಣ್ಣ ಕಾಮಗಾರಿ 'ಮೇಕೆದಾಟು' ಅಂಥಹದ್ದನ್ನೇನಾದರೂ ಇಟ್ಟುಕೊಂಡರೆ ತಮಿಳುನಾಡಿನವರು ಕ್ಯಾತೆ ತೆಗೆಯುವಂತಹ ದೊಡ್ಡ objection ಹಾಕುವಂತಹ ಮತ್ತು ಕೋರ್ಟ್‌ಗೆ ಹೋಗುವಂತಹದ್ದು ಮತ್ತು ಯಾವುದೇ ಕಾರಣಕ್ಕೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದೇ ಕಾಮಗಾರಿಯನ್ನು ಮಾಡದ ಹಾಗೆ ನೋಡಿಕೊಳ್ಳುವಂತಹ ಒಂದು ವ್ಯವಸ್ಥಿತವಾದಂತಹ ಕೆಲಸವನ್ನು ತಮಿಳುನಾಡಿನವರು ಸದಾ ಮಾಡಿಕೊಂಡು ಬರುತ್ತಿದ್ದಾರೆ. ಆದರೆ ಈಗ ತಮಿಳುನಾಡಿನ ಇವತ್ತಿನ ಮುಖ್ಯಮಂತ್ರಿಗಳು ಚುನಾವಣೆಯ ಇಂದಿನ ದಿನಗಳಲ್ಲಿ ಫೆಬ್ರವರಿ 20ನೇ ತಾರೀಖು 14,400 ಕೋಟಿ ವೆಚ್ಚದ 262 ಕಿ.ಮೀ., ಉದ್ದದ ನದೀ ಜೋಡಣೆ ಯೋಜನೆಯನ್ನು ಕೈಗೆತ್ತಿಕೊಂಡಿದ್ದಾರೆ. ಅದಕ್ಕೆ ಶಂಕುಸ್ಥಾಪನೆ ಮಾಡಿಸಿದ್ದಾರೆ. ಆ ಯೋಜನೆ ಏನು? ಕಾವೇರಿ ನದಿಗೆ ವೈಗೈ, ವೆಲ್ಲಾರು, ಗುಂಡಾರ್ ಎನ್ನುವಂತಹ ಮೂರು ನದಿಗಳನ್ನು ಜೋಡಣೆ ಮಾಡುವಂತಹ ಕೆಲಸ ಅದಾಗಿದೆ. ಇದರ ಒಟ್ಟು ಅಂದಾಜು ವೆಚ್ಚ 14,400 ಕೋಟಿ ರೂಪಾಯಿಗಳು. ಅವರು ಮೊದಲನೇ ಹಂತದಲ್ಲಿ 6,941 ಕೋಟಿಗೆ ಈ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದಾರೆ. ಇಡೀ ಯೋಜನೆಯ ಒಟ್ಟು ಉದ್ದೇಶ 45 ಟಿ.ಎಂ.ಸಿ., ನೀರನ್ನು ಬಳಸಿಕೊಳ್ಳುವುದಾಗಿದೆ. ಕೇಂದ್ರ ಸರ್ಕಾರದ ಗಮನಕ್ಕೆ ಬರದ ಹಾಗೆ, ಕೇಂದ್ರ ಜಲ ಆಯೋಗದ ಗಮನಕ್ಕೆ ಬರದ ಹಾಗೆ, ನಮ್ಮ ಎನ್.ಓ.ಸಿ., ಪಡೆಯದೇ, ನಿರ್ವಹಣಾ ಮಂಡಳಿಯ ಗಮನಕ್ಕೆ ತರದೇ 45 ಟಿ.ಎಂ.ಸಿ., ನೀರನ್ನು ಬಳಸಿಕೊಳ್ಳುವುದಕ್ಕೆ ತಮಿಳುನಾಡು ಸರ್ಕಾರ ಶಂಕುಸ್ಥಾಪನೆ ಹಾಕಿದೆ, ಅದರ ಜೊತೆಗೆ 3,300 ಕೋಟಿಯ ಹೊಸ ಕಾಲುವೆಗಳನ್ನು ಮಾಡಿ ಹೊಸ ನೀರಾವರಿಗೆ ಭೂಮಿಯನ್ನು ಒಳಪಡಿಸುವಂತಹ ಒಂದು ಕಾಮಗಾರಿಯನ್ನು ಉದ್ಘಾಟನೆ ಮಾಡಿದ್ದಾರೆ. ಸದ್ದಿಲ್ಲದೇ, ಯಾರ ಅನುಮತಿಯನ್ನೂ ಕೇಳದೆ 3,300 ಕೋಟಿಯ ಹೊಸ ಕಾಲುವೆಗಳನ್ನು ನಿರ್ಮಾಣ ಮಾಡಿ ನೂರಾರು ಎಕರೆಗೆ ಹೊಸದಾಗಿ ಜಮೀನನ್ನು ನೀರಾವರಿಗೆ ಒಳಪಡಿಸುವಂತಹ ಕೆಲಸಗಳನ್ನು ಕಳೆದ ಫೆಬ್ರವರಿ 21ನೇ ತಾರೀಖಿನಂದು ಅವರು ಮಾಡಿದ್ದಾರೆ. ಮೊದಲನೆಯ ಹಂತದ ಯೋಜನೆಯ ವಿವರ ಅವರು ಏನು ಹೇಳುತ್ತಾರೆ ಮಳೆಗಾಲದಲ್ಲಿ ಮಾನ್ಸೂನ್ ಕಾಲದಲ್ಲಿ ಫ್ಲಡ್ ಬಂದಾಗ 6,300 ಕ್ಯುಬಿಕ್ ಅಡಿ ಹೆಚ್ಚು ನೀರಾವರಿಯನ್ನು ದಕ್ಷಿಣ ತಮಿಳುನಾಡಿನ ಜಿಲ್ಲೆಗಳಿಗೆ ಹರಿಸುವಂತಹ ಯೋಜನೆಯಿದು. ಅಂದರೆ ಸುಮಾರು 45 ಟಿ.ಎಂ.ಸಿ., ನೀರನ್ನು 6,941 ಕೋಟಿ ವೆಚ್ಚದಲ್ಲಿ ವೈಗೈ, ವೆಲ್ಲಾರ್, ಗುಂಡಾರ್ ನದಿಗಳನ್ನು ಕಾವೇರಿಯೊಂದಿಗೆ ಜೋಡಿಸುವಂತಹ ಮೊದಲನೇ ಹಂತದ ಯೋಜನೆಗೆ ಶಂಕುಸ್ಥಾಪನೆಯಾಗಿದೆ. ಇದರಿಂದ ಈ ಯೋಜನೆಯಿಂದ ಅವರು ಮಾಡುವಂತಹ ಕೆಲಸ ಏನೆಂದರೆ, 118.45 ಕಿ.ಮೀ., ಉದ್ದದ ಕಾಲುವೆಯನ್ನು ತೋಡುತ್ತಾರೆ. 342 ಕೆರೆಗಳಿಗೆ ನೀರುಣಿಸುವಂತಹ ಕೆಲಸವನ್ನು ಇಟ್ಟುಕೊಂಡಿದ್ದಾರೆ. ಮತ್ತೊಂದು ದೊಡ್ಡ ಉದ್ದೇಶ 42,170 ಹೆಚ್ಚುವರಿ ಎಕರೆ ಖುಷ್ಕಿ ಭೂಮಿಗೆ ನೀರನ್ನು ಕೊಡುವಂತಹ ಕೆಲಸ ಮೊದಲನೇ ಹಂತದ ಯೋಜನೆಯಲ್ಲಿದೆ. ಒಟ್ಟು ಅವರು ಮೂರು ಹಂತದ ಯೋಜನೆಗಳನ್ನು ರೂಪಿಸಿದ್ದಾರೆ. ಎರಡನೇ ಹಂತದಲ್ಲಿ 109 ಕಿ.ಮೀ ಉದ್ದದ ಕಾಲುವೆ 270 ಕೆರೆಗಳಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀರುಣಿಸುವಂತಹದ್ದು, ಮೂರನೇ ಹಂತದಲ್ಲಿ 34 ಕಿ.ಮೀ., ಕಾಲುವೆ 492 ಕೆರೆಗಳಿಗೆ ನೀರುಣಿಸುವಂತಹದ್ದು.

**(ಮುಂದು)**

**(330) 09-03-2021/ 03-30/ ಕೆಹೆಚ್-ಜಿಆರ್**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು):-**

ಎರಡನೇ ಹಂತದಲ್ಲಿ 23,245 ಎಕರೆಗೆ ನೀರಾವರಿ ಮಾಡುವಂತಹದ್ದು ಆಗಿದೆ. ಮೂರನೇ ಹಂತದಲ್ಲಿ 44,547 ಎಕರೆಗೆ ನೀರಾವರಿ ಮಾಡುವಂತಹದ್ದು ಆಗಿದೆ. ಒಟ್ಟಾರೆ 1,09,962 ಎಕರೆಗೆ ಹೊಸದಾಗಿ ನೀರಾವರಿ ಮಾಡಿರುವಂತಹ ಮತ್ತು 1054 ಕೆರೆಗಳಿಗೆ ನೀರು ತುಂಬಿಸುವಂತಹ ಮತ್ತು ಅಂತರ್ಜಲವನ್ನು ಹೆಚ್ಚುವರಿ ಮಾಡುವಂತಹ ಒಟ್ಟು ಯೋಜನೆಯ ಕಾಮಗಾರಿ ಸ್ವರೂಪ ಇದಾಗಿದೆ.

**(ಈ ಹಂತದಲ್ಲಿ ಮಾನ್ಯ ಉಪಸಭಾಪತಿಯವರಾದ ಶ್ರೀ ಎಂ.ಕೆ. ಪ್ರಾಣೇಶ್ ರವರು ಸಭಾಪೀಠವನ್ನು ಅಲಂಕರಿಸಿದರು.)**

ಮಾನ್ಯ ಸಭಾಪತಿಯವರೇ, 14,400 ಕೋಟಿ ರೂಪಾಯಿಗಳಲ್ಲಿ 6,941 ಕೋಟಿ ರೂಪಾಯಿಗಳನ್ನು ಮೊದಲನೇ ಹಂತದ ಯೋಜನೆಗೆ ಕೊಟ್ಟಿದ್ದಾರೆ. ಇನ್ನು ಹಂತ ಹಂತವಾಗಿ ಎರಡನೇ ಮತ್ತು ಮೂರನೇ ಹಂತದ ಯೋಜನೆಗಳಿಗೆ ಹಣಕಾಸನ್ನು ಹಂಚಿಕೆ ಮಾಡಿಕೊಂಡು ಇವತ್ತು ಕಾಮಗಾರಿಯನ್ನು ಪ್ರಾರಂಭ ಮಾಡಿದ್ದಾರೆ. ನನ್ನ ಪ್ರಶ್ನೆಯೇನೆಂದರೆ, ಇದರ ಬಗ್ಗೆ ನಮ್ಮ ಸರ್ಕಾರ ಏನು ಮಾಡುತ್ತಿದೆ? ನಾವು ಸಣ್ಣ ಮೇಕೆದಾಟು ಯೋಜನೆಯೊಂದನ್ನು ಕೈಗೆತ್ತಿಕೊಳ್ಳಬೇಕೆಂದು ಹೊರಟಾಗ ತಮಿಳುನಾಡು ದೊಡ್ಡ ವಿರೋಧವನ್ನು ಮಾಡಿತ್ತು. ಹಾಗಾದರೆ ಆ ಯೋಜನೆ ಏನು? ನಮ್ಮ ಭಾಗದಲ್ಲಿ ಪ್ರವಾಹ ಬಂದಂತಹ ಸಂದರ್ಭಗಳಲ್ಲಿ ಹೆಚ್ಚುವರಿ ನೀರು ಸಮುದ್ರವನ್ನು ಸೇರುವಂತಹದ್ದಾಗುತ್ತದೆ. ಕಳೆದ 3 ನೀರಾವರಿ ವರ್ಷಗಳಲ್ಲಿ ಸುಮಾರು 100 ಕ್ಕೂ ಹೆಚ್ಚು ಟಿ.ಎಂ.ಸಿ., ನೀರು ಸಮುದ್ರವನ್ನು ಸೇರಿದೆ. ಈ ನೀರನ್ನು ನಾವು ಬಳಸಿಕೊಳ್ಳುವುದಕ್ಕೂ ಆಗಲಿಲ್ಲ ಮತ್ತು ಅವರು ಬಳಸಿಕೊಳ್ಳುವುದಕ್ಕೂ ಸಹ ಆಗಲಿಲ್ಲ. ನಮಗೆ ಕೊಟ್ಟಿರುವಂತಹ ನೀರಿನ ಪ್ರಮಾಣದಲ್ಲಿ ಮತ್ತು ತಮಿಳುನಾಡಿಗೆ ಹಂಚಿಕೆ ಮಾಡಿರುವಂತಹ ನೀರಿನ ಪ್ರಮಾಣದಲ್ಲಿ 4 ಟಿ.ಎಂ.ಸಿ., ನೀರನ್ನು ನಾವು ತಿಂಗಳುವಾರು ಬಿಡುಗಡೆ ಮಾಡಬೇಕಾಗಿದೆ. ನಮ್ಮಲ್ಲಿ ನೀರು ಇರಲಿ ಅಥವಾ ಇಲ್ಲದೇ ಇರಲಿ, ನಾವು ತಿಂಗಳಿಗೆ ಇಷ್ಟು ಕಂತು ಎಂದು ಹಂಚಿಕೆ ಮಾಡಿಬಿಟ್ಟಿದ್ದೇವೆ. ಹಾಗಾಗಿ, ಬೆಂಗಳೂರು ಕುಡಿಯುವ ನೀರಿನ ವಿಚಾರದಲ್ಲಿ ಬೆಂಗಳೂರು ಗ್ರಾಮಾಂತರ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಮನಗರ, ಈ ಎಲ್ಲಾ ವಿಚಾರಗಳು ಸೇರಿದ ಹಾಗೆ ಕುಡಿಯುವ ನೀರು ಯೋಜನೆಯನ್ನು ಮೇಕೆದಾಟು ಯೋಜನೆಯಲ್ಲಿ ಮಾಡಿಕೊಳ್ಳುವಂತಹದ್ದು ಆಗಿದೆ. ಅಲ್ಲಿ ಸುಮಾರು 40 ರಿಂದ 45 ಟಿ.ಎಂ.ಸಿ., ನೀರನ್ನು ಸಂಗ್ರಹ ಮಾಡಿಕೊಳ್ಳುವಂತಹದ್ದು ಆಗಿದೆ. Balancing Reservoir ಎಂದು ಕರೆಯುತ್ತಾರೆ. ನಾವು ಆ ನೀರನ್ನು ನೀರಾವರಿಗೆ ಬಳಸಿಕೊಳ್ಳುವುದಕ್ಕೆ ಆಗುವುದಿಲ್ಲ. 400 ಮೆಗಾವ್ಯಾಟ್ ವಿದ್ಯುತ್ ಅನ್ನು ಉತ್ಪತ್ತಿ ಮಾಡುವಂತಹದ್ದು, ತಮಿಳುನಾಡು ರಾಜ್ಯದವರಿಗೆ ಅಗತ್ಯ ಬಿದ್ದಾಗ ಕುಡಿಯುವ ನೀರನ್ನು ಬಿಡುಗಡೆ ಮಾಡುವಂತಹದ್ದು ಆಗಿದೆ. ಈ ಕಾರಣಕ್ಕಾಗಿ ಕೇಂದ್ರ ಸರ್ಕಾರದ ಅನುಮತಿ ಪಡೆದು 9,000 ಕೋಟಿ ರೂಪಾಯಿ ವೆಚ್ಚದ ಡಿ.ಪಿ.ಆರ್., ಕೂಡ ಮಾಡಿದ್ದಾರೆ. ಆದರೆ, ನಾವು ಕಾಮಗಾರಿಯನ್ನು ಪ್ರಾರಂಭ ಮಾಡುವುದಕ್ಕೆ ಅಡ್ಡಿ ಮಾಡಿದ್ದರಿಂದ, ಅವರು ಸುಪ್ರೀಂ ಕೋರ್ಟ್‌ಗೆ ಹೋಗಿದ್ದಾರೆ. ಇವತ್ತು ಸುಮಾರು 11,400 ಕೋಟಿ ರೂಪಾಯಿಗಳ ಮೂರು ಹಂತದ ದೊಡ್ಡ ಯೋಜನೆಗಳನ್ನು ಒಂದು ಲಕ್ಷ ಒಂಭತ್ತು ಸಾವಿರ ಎಕರೆಗೆ ನೀರುಣಿಸುವಂತಹ 1097 ಕೆರೆಗಳಿಗೆ ನೀರು ಕೊಡುವಂತಹ ಮತ್ತು ಇಡೀ ಜಲಾನಯನ ಭಾಗದ ಪ್ರದೇಶಗಳಿಗೆ ಅಂತರ್ಜಲವನ್ನು ಹೆಚ್ಚು ಮಾಡುವಂತಹ ಒಂದು ದೊಡ್ಡ ಯೋಜನೆಯನ್ನು ಇವತ್ತು ಅವರು ಸದ್ದಿಲ್ಲದೆ ಪ್ರಾರಂಭ ಮಾಡಿದ್ದಾರೆ. ಈಗಾಗಲೇ 3300 ಕೋಟಿ ರೂಪಾಯಿಗಳ ಕಾಲುವೆಗಳನ್ನು ಉದ್ಘಾಟನೆ ಕೂಡ ಮಾಡಿದ್ದಾರೆ.

ನನ್ನ ಪ್ರಶ್ನೆಯೇನೆಂದರೆ, ತಾವು ಈ ಯೋಜನೆಯನ್ನೆಲ್ಲಾ ಪೂರ್ಣ ಮಾಡುವುದಕ್ಕೆ ಬಿಡುವುದಾದರೆ, ಇನ್ನು ಕರ್ನಾಟಕಕ್ಕೆ ಏನು ಉಳಿಯುತ್ತದೆ? ಈಗಾಗಲೇ ಅವರು 4 ಟಿ.ಎಂ.ಸಿ., ನೀರನ್ನು ಬಳಸಿಕೊಳ್ಳುತ್ತಿದ್ದಾರೆ. ಇನ್ನು 45 ಟಿ.ಎಂ.ಸಿ., ನೀರು ಹೋದರೆ 450 ಆಗುತ್ತದೆ. ನಾವು ಈಗ 284 ಟಿ.ಎಂ.ಸಿ.,ಗೆ ಬಂದು ನಿಂತಿದ್ದೇವೆ. ನಮ್ಮದು ಶೇಕಡಾ 53 ರಷ್ಟು ಭಾಗ ಜಲದ ಉತ್ಪತ್ತಿಗಾಗಿ ಜಲಾನಯನ ಭಾಗ ಇದೆ. ನಮ್ಮಲ್ಲಿ ಜಲಾನಯನ ಭಾಗ ಏಕೆ ಹೆಚ್ಚು ಇದೆ ಎಂದರೆ, ಪಶ್ಚಿಮ ಘಟ್ಟದಲ್ಲಿ ಕಾವೇರಿ ನದಿ ಹುಟ್ಟುತ್ತದೆ. ನಮ್ಮಲ್ಲಿ ಮಡಿಕೇರಿ, ಚಿಕ್ಕಮಗಳೂರು, ಶಿವಮೊಗ್ಗ ಇವೆಲ್ಲಾ ಸೇರಿರುವ ಹಾಗೆ ನಮ್ಮಲ್ಲಿ ಘಟ್ಟ ಪ್ರದೇಶ ಇದೆ. ಕೃಷ್ಣಾ ನದಿ ಇರಲಿ, ಗೋದಾವರಿ ನದಿ ಇರಲಿ, ಕಾವೇರಿ ನದಿ ಇರಲಿ, ಈ ನದಿಗಳೆಲ್ಲಾ ಪಶ್ಚಿಮ ಘಟ್ಟದಲ್ಲಿಯೇ ಹುಟ್ಟುತ್ತವೆ. ಅದಕ್ಕೆ ಪರಿಸರವಾದಿಗಳು ಪಶ್ಚಿಮ ಘಟ್ಟಕ್ಕೆ ಧಕ್ಕೆಯಾಗಬಾರದೆಂದು ದೊಡ್ಡ ಹೋರಾಟಗಳನ್ನು ಮಾಡುತ್ತಾರೆ. ಕಾಡುಗಳನ್ನು ಹಾಳು ಮಾಡಬಾರದು, ಅಲ್ಲಿ ಯಾವುದೇ ಯೋಜನೆಗಳನ್ನು ಕೈಗೆತ್ತಿಕೊಳ್ಳಬಾರದು, ಅಲ್ಲಿ ಯಾವುದೇ ರೈಲ್ವೆ ಯೋಜನೆಗಳನ್ನು ಮಾಡಬಾರದು, ಅಲ್ಲಿ ಯಾವುದೇ ವಿದ್ಯುತ್ ಕಂಬಗಳನ್ನು ನಿರ್ಮಾಣ ಮಾಡಬಾರದು, ಅಲ್ಲಿನ ಪರಿಸರವನ್ನು ಕಾಪಾಡಬೇಕು ಎಂದು ಹೇಳುತ್ತಾರೆ. ಪಶ್ಚಿಮ ಘಟ್ಟವನ್ನು ನಾವು ಎಷ್ಟರಮಟ್ಟಿಗೆ ಉಳಿಸಿಕೊಳ್ಳುತ್ತೇವೆಯೋ, ಅಷ್ಟರಮಟ್ಟಿಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ನಾಡಿಗೆ, ವಿಶೇಷವಾಗಿ ದಕ್ಷಿಣ ಭಾರತಕ್ಕೆ ಜಲದ ಶಕ್ತಿ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಪರಿಸರವಾದಿಗಳು ಪದೇ ಪದೇ ಹೇಳುತ್ತಿರುತ್ತಾರೆ. ಹಾಗಾಗಿ, ಕರ್ನಾಟಕದಲ್ಲಿ ಕಾವೇರಿ ನದಿ ಹುಟ್ಟುತ್ತದೆ. ಕರ್ನಾಟಕದವರು ಶೇಕಡಾ 53 ರಷ್ಟು ಪಾಲನ್ನು ಕೊಡುವಂತಹದ್ದು ಆಗಿದೆ. ತಮಿಳುನಾಡಿಗೆ ಶೇಕಡಾ 31 ರಷ್ಟು ಪಾಲನ್ನು ಕೊಡುವಂತಹದ್ದು. ಕೇರಳಾ ರಾಜ್ಯ ಶೇಕಡಾ 14 ರಷ್ಟು ಭಾಗ ಕೊಡುತ್ತದೆ. ಈ ರೀತಿ ಇರುವಾಗ 45 ಟಿ.ಎಂ.ಸಿ., ನೀರಾವರಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದಾರೆ ಎಂದರೆ ನಮ್ಮ ಸರ್ಕಾರ ಏನು ಮಾಡುತ್ತಿದೆ? ಈ ವಿಚಾರದಲ್ಲಿ ಕೇಂದ್ರ ಸರ್ಕಾರದ್ದು ಜಾಣ ನಡೆ, ಜಾಣ ಮೌನ ಎಂದು ಪತ್ರಿಕೆಗಳಲ್ಲಿ ಬಂದಿದೆ. ಈ ಒಂದು ಹಂತದಲ್ಲಿ ಕೇಂದ್ರ ಸರ್ಕಾರದಿಂದ ಅನುದಾನ ಪಡೆದಿದ್ದಾರೆ ಎಂದು ಪತ್ರಿಕೆಗಳಲ್ಲಿ ಬಂದಿದೆ. I do not know, how far it is true. ಇದರ ಬಗ್ಗೆ ನೀರಾವರಿ ಅಧಿಕಾರಿಗಳ ಹತ್ತಿರ ಮಾತನಾಡಿದರೆ ಅವರು ನಮ್ಮ ಹತ್ತಿರ ಯಾವುದೇ ಅನುಮತಿ ಪಡೆದಿಲ್ಲ. ನಮ್ಮ ಕಡೆಯಿಂದ ಎನ್.ಓ.ಸಿ., ತೆಗೆದುಕೊಂಡಿಲ್ಲ. ಕೇಂದ್ರ ಸರ್ಕಾರದಿಂದಲೂ ಅನುಮತಿ ತೆಗೆದುಕೊಂಡಿಲ್ಲ ಎಂದು ಹೇಳುತ್ತಾರೆ. ಇವತ್ತು ಯಾರದೇ ಅನುಮತಿ ಪಡೆಯದೇ ನಿರ್ವಹಣಾ ಮಂಡಳಿ ಇದ್ದಾಗಲೂ ಕೂಡ ಒಂದು ಕಡೆ ನಮ್ಮನ್ನು ವಿರೋಧ ಮಾಡುತ್ತಾರೆ. ಇನ್ನೊಂದು ಕಡೆ ಅವರು ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತಾರೆ. ಇದು ದೊಡ್ಡ ವಿಪರ್ಯಾಸವಾಗಿದೆ. ಬಹುಶಃ ಈ ಕಾವೇರಿ, ವೈಗೈ, ವೆಲ್ಲಾರ್, ಗುಂಡಾರು ನದಿ ಜೋಡಣೆ ಕಾರ್ಯಕ್ರಮಕ್ಕೆ ಅಥವಾ ವಿಸ್ತರಣೆಯ ಕಾವೇರಿ ಕಾಮಗಾರಿಗಳಿಗೆ ನಾವು ಅನುಮತಿ ಕೊಡುವುದಾದರೆ, ನಾವು ಸುಮ್ಮನೆ ಇರುವುದಾದರೆ ತಮಿಳುನಾಡು ಆನಂದವಾಗಿ ಇಡೀ ಕಾವೇರಿ ನೀರನ್ನು ಬಳಸಿಕೊಳ್ಳುವಂತಹದ್ದರಲ್ಲಿ ಮೇಲೆ ಹೋಗುತ್ತದೆ. ಮುಂದಿನ ದಿನಗಳಲ್ಲಿ ತಾವೇನಾದರೂ ಅಡ್ಡಿ ಮಾಡಿದರೆ, ನಾವು ಈಗಾಗಲೇ enjoyment ನಲ್ಲಿ ಇದ್ದೇವೆ. 'Possession is ten points of the law' ಎಂದು ಹೇಳುತ್ತಾರೆ. ಇದು ನಮ್ಮ ಉಪ ಮುಖ್ಯಮಂತ್ರಿಯವರಿಗೆ ಅರ್ಥವಾಗುತ್ತದೆ. ಯಾವುದಾದರೂ ವಿಚಾರದಲ್ಲಿ ಅನುಭವಿಸುತ್ತಿದ್ದರೆ ಮತ್ತು ಮಾಡುತ್ತಿದ್ದರೆ ಅದು ನಮ್ಮ ಹಕ್ಕು ಎಂದು ಹೇಳುತ್ತಾರೆ. They will claim. ಈ ಹಿಂದೆ ತಮಿಳುನಾಡು ಇದನ್ನೇ ಮಾಡಿದೆ. ನಮ್ಮ ವಿರುದ್ಧ ಅಡ್ಡಿ ಹಾಕುತ್ತಾ ಬಂದರು. ರಾಜ-ಮಹಾರಾಜರುಗಳ ಕಾಲದಲ್ಲಿ ಟಿಪ್ಪುಸುಲ್ತಾನರ ಕಾರಣಕ್ಕಾಗಿ ಬ್ರಿಟಿಷರು ನಮಗೆ ಅನ್ಯಾಯ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಬ್ರಿಟಿಷರು ತಮಿಳುನಾಡು ಮತ್ತು ಮದ್ರಾಸ್‌ರವರ ಪರ ನಿಂತರು. ಟಿಪ್ಪುಸುಲ್ತಾನ್ ಅವರ ವಿರುದ್ಧ ಯಾವಾಗ ಹೋರಾಟ ಮಾಡಿದನೋ, ಆಗ ಇವರು ತಮಿಳುನಾಡು ಪರ ವಕಾಲತ್ತು ಅನ್ನು ವಹಿಸುತ್ತಾ ಬಂದರು. ವಿಜಯನಗರದ ಅರಸರು ಕೂಡ ತಂಜಾವೂರು ಮತ್ತು ತಮಿಳುನಾಡು ಭಾಗಕ್ಕೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಲಾನಯನ ಕಾಮಗಾರಿಗಳನ್ನು ಮಾಡಿಕೊಡುತ್ತಾ ಹೋದರು. ಕರ್ನಾಟಕಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್.ಎಂ.ವಿಶ್ವೇಶ್ವರಯ್ಯನವರು ಇಲ್ಲದೆ ಹೋಗಿದ್ದರೆ ನಾವು ಇನ್ನೂ ಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳುತ್ತಿದ್ದೆವು. ಆದಾಗ್ಯೂ ಕೃಷ್ಣದೇವರಾಯರಂತಹ ಮಹಾರಾಜರು ಸಣ್ಣಪುಟ್ಟ ಕಾಮಗಾರಿಗಳನ್ನು ಮಾಡಿಕೊಳ್ಳುತ್ತಾ ಬಂದರು. ತಮಿಳುನಾಡಿಗೆ ಪರ್ಯಾಯವಾದರೆ ಈಗ ನಮ್ಮ ಎದುರು ಮೂರು ಯೋಜನೆಗಳು ಇವೆ. ಒಂದು ನಾನು ಈಗಾಗಲೇ ಹೇಳಿದಂತಹ ಮೇಕೆದಾಟು ಯೋಜನೆ almost ಕರ್ನಾಟಕ ಮತ್ತು ತಮಿಳುನಾಡು ಗಡಿಯಲ್ಲಿ ಆಗುವಂತಹ ಒಂದು ದೊಡ್ಡ ಯೋಜನೆಯಾಗಿದೆ. ಇದು ಸುಮಾರು 9 ಸಾವಿರ ಕೋಟಿ ರೂಪಾಯಿಗಳ ಯೋಜನೆಯಾಗಿದೆ.

ಇವತ್ತು ಒಂದು ಸಮಾಧಾನ ಏನೆಂದರೆ, ಇದರ ಬಗ್ಗೆ ಆಯವ್ಯಯದಲ್ಲಿ ಪ್ರಸ್ತಾಪವಾಗಿದೆ. ಆ ಯೋಜನಾ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದೇವೆ ಎಂದಷ್ಟೇ ಹೇಳಿದ್ದಾರೆ. ಇದು ನಮಗೆ ಸಮಾಧಾನ ತರುವುದಿಲ್ಲ. ಈಗ 9 ಸಾವಿರ ಕೋಟಿ ರೂಪಾಯಿಗಳ 400 ಮೆಗಾವ್ಯಾಟ್ ವಿದ್ಯುಚ್ಛಕ್ತಿಯ 45 ಟಿ.ಎಂ.ಸಿ., ನೀರನ್ನು ಇಟ್ಟುಕೊಳ್ಳುವಂತಹ ಈ Balancing Reservoir ನಲ್ಲಿ ವಿಶೇಷವಾಗಿ ಬೆಂಗಳೂರು ಮತ್ತು ಈ ಭಾಗಕ್ಕೆ ಕುಡಿಯುವ ನೀರನ್ನು ಕೊಡುವಂತಹದ್ದು ಇದೆಯಲ್ಲವೇ, ಈ ಯೋಜನೆಯನ್ನು ಕೈಗೆತ್ತಿಕೊಳ್ಳುವಂತಹ ನಿರ್ಧಾರವನ್ನು ಪ್ರಕಟ ಮಾಡಬೇಕು. ಇದಕ್ಕೆ ಕೇಂದ್ರ ಸರ್ಕಾರ ಅನುಮತಿ ಕೊಡುತ್ತದೋ, ಬಿಡುತ್ತದೋ, ನ್ಯಾಯಾಧೀಕರಣ ಅನುಮತಿ ಕೊಡುತ್ತದೋ, ಬಿಡುತ್ತದೋ, ಜಲ ಆಯೋಗ ಅನುಮತಿ ಕೊಡುತ್ತದೋ, ಬಿಡುತ್ತದೋ ಗೊತ್ತಿಲ್ಲ. ಈಗ ಯಾವುದೇ ಯೋಜನೆಗಳಿಗೆ ಅವರಿಗೆ ಅನುಮತಿ ಸಿಕ್ಕಿಲ್ಲ ಅಲ್ಲವೇ? ಅವರು ಅನುಮತಿಯನ್ನು ತೆಗೆದುಕೊಂಡಿಲ್ಲ ಅಲ್ಲವೇ? ಮತ್ತೇ ನಾವು ಏಕೆ ಅನುಮತಿಯನ್ನು ತೆಗೆದುಕೊಳ್ಳಬೇಕು. ಸುಪ್ರೀಂ ಕೋರ್ಟ್ ಮತ್ತು ಪ್ರಾಧಿಕಾರದವರು ನಮಗೆ ಹೆಚ್ಚುವರಿ ನೀರನ್ನು ಬಳಸಿಕೊಳ್ಳುವಂತಹ ಪ್ರಯತ್ನವನ್ನು ಮಾಡಿ ಎಂದು ಹೇಳಿದೆ. ಹಾಗಾಗಿ ಮೇಕೆದಾಟು ಯೋಜನೆಯಲ್ಲಿ ಕರ್ನಾಟಕ ತಮ್ಮ ಹಕ್ಕನ್ನು ಉಳಿಸಿಕೊಳ್ಳುವುದಕ್ಕೆ ಇರುವಂತಹ ಅತ್ಯಂತ ಮೊದಲನೆಯ ಅವಕಾಶವಾಗಿದೆ.

ಎರಡನೆಯದಾಗಿ, ಒಂದು ಕೃಷ್ಣರಾಜಸಾಗರಕ್ಕೆ ಸಂಬಂಧಪಟ್ಟ ಹಾಗೆ High Level Canal Project ನಮ್ಮ ಎದುರು ಇದೆ. ಕಳೆದ 15-20 ವರ್ಷಗಳಿಂದ ನೀರಾವರಿ ಇಲಾಖೆಯಲ್ಲಿ ಕಡತ ಕೊಳೆಯುತ್ತಿದೆ. ಇನ್ನೊಂದು ಕಬಿನಿಯ ಹಿನ್ನೀರಿನಲ್ಲಿ Lift Irrigation ಮಾಡುವಂತಹ ಒಂದು ಯೋಜನೆ. ಇದು ಕೂಡ 15-20 ವರ್ಷಗಳಿಂದ ಕಡತ ಕೊಳೆಯುತ್ತಿದೆ. ತಮಗೆ ಗೊತ್ತಿರುವ ಹಾಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೃಷ್ಣರಾಜಸಾಗರದಲ್ಲಿ ಸುಮಾರು 40–45 ದಿನಗಳ ಕಾಲ ಪ್ರವಾಹ ಬಂದಾಗ ಒಂದು–ಒಂದೂವರೆ ಲಕ್ಷ ಕ್ಯೂಸೆಕ್ಸ್‌ನಿಂದ, ಎರಡು–ಎರಡೂವರೆ ಲಕ್ಷ ಕ್ಯೂಸೆಕ್ಸ್‌ವರೆಗೆ ನೀರು ಹರಿದು ಹೋಗುತ್ತದೆ. ನಮ್ಮ ಜನರಿಗೆ ಪ್ರವಾಹ ಬಂದಿದೆ. ನದಿ ದಂಡೆಯಿಂದ ದೂರ ಹೋಗಿ, ಹಳ್ಳಿಗಳಿಂದ ಸ್ಥಳಾಂತರ ಮಾಡಿ, ಜನ–ಜಾನುವಾರುಗಳನ್ನು ದೂರ ಕರೆದುಕೊಂಡು ಹೋಗಿ ಎಂದು ಎಲ್ಲಾ ಜಿಲ್ಲಾಧಿಕಾರಿಗಳು ಡಂಗೂರ ಹೊಡೆಸುತ್ತಾರೆ, ಸಾರುತ್ತಾರೆ, ಪತ್ರಿಕೆಗಳಿಗೆ ಹೇಳಿಕೆಯನ್ನು ಕೊಡುತ್ತಾರೆ. ಇದಕ್ಕೆ ನೀರಾವರಿ ಅಧಿಕಾರಿಗಳು ಈ ಪ್ರವಾಹವನ್ನು ತಡೆಯಬೇಕು. ನದಿ ಗಾತ್ರವನ್ನು ಹೆಚ್ಚಿಸಿ, ಶಕ್ತಿ ಮೀರಿ ಹರಿಯುವಂತಹ ನೀರಿನಲ್ಲಿ ಕನಿಷ್ಠ 10 ಸಾವಿರ ಕ್ಯೂಸೆಕ್ಸ್ ನೀರನ್ನು 25–30 ದಿನಗಳ ಕಾಲ ಬಳಸಿಕೊಳ್ಳುವಂತಹದ್ದು. ಅದು ಕೃಷ್ಣರಾಜಸಾಗರಕ್ಕೆ 115 ಅಡಿ ಎತ್ತರದಲ್ಲಿ High Level Canal ಮಾಡಿ ಅದರ ಮೂಲಕ ನೀರನ್ನು ಹರಿಸುವುದರಿಂದ, ಮಾರ್ಕೋನಹಳ್ಳಿ ಜಲಾಶಯಕ್ಕೆ ನೀರನ್ನು ಹರಿಸಬಹುದು ಮತ್ತು ಮದ್ದೂರು ಬಳಿ ಸಿಂಸಾ ನದಿ ಇದ್ದು, ಒಂದು ಕಾಲದಲ್ಲಿ ಈ ನದಿ ಉಕ್ಕಿ ಹರಿಯುತ್ತಿತ್ತು. ಈಗ ಬತ್ತಿ ಹೋಗುತ್ತಿದೆ. ಆ ನದಿ ಅವಸಾನದ ಅಂಚಿನಲ್ಲಿ ಇದೆ. ಅದೇ ರೀತಿ ಅರ್ಕಾವತಿ ನದಿ ಕೂಡ ಇದೇ ಸ್ಥಿತಿಯಲ್ಲಿ ಇದೆ. ಶ್ರೀರಂಗಪಟ್ಟಣವನ್ನು ಬಿಟ್ಟರೆ ಲೋಕಪಾವನಿ ನದಿ ಮಧ್ಯದಲ್ಲಿ ಹರಿದು ಹೋಗುವಂತಹ ಒಂದು ನದಿಯಾಗಿದೆ. ಈ 3 ನದಿಗಳಿಗೆ ಜೋಡಣೆ ಮಾಡುವುದರ ಜೊತೆ ಜೊತೆಗೆ ನಮ್ಮ ಕೃಷ್ಣಾವರಪೇಟೆಯ ಕುಷ್ಕಿ ಭೂಮಿಗೆ ನೀರಾವರಿ ಕೊಡುವಂತಹದ್ದು, ಪಾಂಡವಪುರ ಭಾಗದ ಕುಷ್ಕಿ ಭೂಮಿಗೆ ನೀರಾವರಿ ಕೊಡುವಂತಹದ್ದು. ಮದ್ದೂರು ತಾಲ್ಲೂಕಿನ tail end ನ ಮೇಲ್ಭಾಗಕ್ಕೆ ನೀರನ್ನು ಕೊಡುವಂತಹದ್ದು. ಮಳವಳ್ಳಿಯಲ್ಲಿ ಕೆಳಭಾಗಕ್ಕೆ ನೀರನ್ನು ಕೊಡುವಂತಹದ್ದು. ಕುಣಿಗಲ್, ಮಾಗಡಿ, ಚನ್ನಪಟ್ಟಣ ಮತ್ತು ರಾಮನಗರಕ್ಕೆ ಕುಡಿಯುವ ನೀರು ಕೊಡುವಂತಹದ್ದು. ಇಷ್ಟೆಲ್ಲಾ 30–40 ದಿನಗಳಲ್ಲಿ ಸಂಗ್ರಹಿಸುವಂತಹ ನೀರಿನಿಂದ, ಈ ನದಿಗಳ ಜೋಡಣೆಯಿಂದ ನಾವು ಆ 3 ನದಿಗಳನ್ನು ಜೀವಂತವಾಗಿ ಇಟ್ಟುಕೊಳ್ಳಬಹುದು. ಕುಡಿಯುವ ನೀರಿನ ವಿಚಾರವನ್ನು ಇತ್ಯರ್ಥ ಮಾಡಬಹುದು. ಹೊಸದಾಗಿ ಒಂದಿಷ್ಟು ಕುಷ್ಕಿ ಭೂಮಿಯನ್ನು ನೀರಾವರಿ ಭೂಮಿಯನ್ನಾಗಿ ಪರಿವರ್ತನೆ ಮಾಡಬಹುದು.

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(331) 09/03/2021/ಎಸ್‌ಪಿಆರ್/ಎಂಡಿ/3:40 (ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು):-**

ಇದಕ್ಕೆ ತಗಲುವ ವೆಚ್ಚ ಕೇವಲ 3,200 ಕೋಟಿ ರೂಪಾಯಿಗಳು ಮಾತ್ರವೇ ಆಗಿದೆ. ಕಳೆದ ಎರಡು ದಶಕಗಳಿಂದ ನಮ್ಮ ನೀರಾವರಿ ಇಲಾಖಾಧಿಕಾರಿಗಳು ಉನ್ನತ ಮಟ್ಟದ ಕಾಲುವೆಯ ಯೋಜನೆಯನ್ನು ಹಾಕಿಕೊಂಡು ಇಟ್ಟುಕೊಂಡಿದ್ದಾರೆ. ಇಲಾಖೆಯಲ್ಲಿ ಅಧಿಕಾರಿಗಳು ಬರುತ್ತಾರೆ, ಹೋಗುತ್ತಾರೆ. ಇವತ್ತಿನ ದಿವಸ ಯಾವುದೇ ಸರ್ಕಾರಗಳಿಗೆ ಇಂತಹ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಇಚ್ಛಾಶಕ್ತಿ ಇಲ್ಲ. ಇಂತಹ ಯೋಜನೆಗಳಿಗೆ ಯಾರ ಅಡ್ಡಿ, ವಿರೋಧಗಳಿಲ್ಲ, ಹಾಗೆಯೇ ಯಾರ ಅನುಮತಿಯೂ ಸಹ ಅವಶ್ಯಕವಾಗಿಲ್ಲ. ನೀರಿನ ಹರಿವು ಹೆಚ್ಚಾದಾಗ ಅಂದರೆ, ಒಂದೂವರೆ – ಎರಡೂವರೆ ಲಕ್ಷ ಕ್ಯೂಸೆಕ್ಸ್‌ನಷ್ಟು ನೀರು ಕಾವೇರಿ ನದಿಯಲ್ಲಿ ಉಕ್ಕಿಬಂದಾಗ, 35–40 ದಿನಗಳ ಕಾಲ 10,000 ಕ್ಯೂಸೆಕ್ಸ್‌ನ ಪ್ರಮಾಣದಷ್ಟೇ ನೀರಿನ ಬಳಕೆಯಾಗುತ್ತದೆ. ಇನ್ನುಳಿದ 2 ಲಕ್ಷದ 10 ಸಾವಿರ ಕ್ಯೂಸೆಕ್ಸ್ ನೀರಿಗೆ ಯಾವ ಅಡ್ಡಿಯಾಗುವುದಿಲ್ಲ. ಅದನ್ನು ನದಿಗಳಿಗೆ ಹರಿಸಿ, ಮಾರ್ಕೋನಹಳ್ಳಿ ಜಲಾಶಯಕ್ಕೆ ಕೊಟ್ಟರೆ, ಈ ಮೂಲಕ ಹೆಚ್ಚುವರಿ ಖುಷ್ಕಿಯಾಗುತ್ತದೆ; ಅಲ್ಲಿನ ಕೆರೆಗಳು ತುಂಬುತ್ತವೆ ಮತ್ತು ನದಿಗಳು ಜೀವಂತವಾಗುತ್ತವೆ. ಇದು ಕಳೆದ ಎರಡು ದಶಕಗಳಿಂದ ನಮ್ಮ ನೀರಾವರಿ ಇಲಾಖೆಯಲ್ಲಿ ನೆನೆಗುದಿಗೆ ಬಿದ್ದಿದೆ. ಇಂತಹ 3,200 ಕೋಟಿ ರೂಪಾಯಿಗಳ ಯೋಜನೆಯನ್ನು ಕೈಗೆತ್ತಿಕೊಳ್ಳುವುದಾದರೆ ಆ ಭಾಗದ ಜನರ ಜಲಭಾದೆಯು ತೀರುತ್ತದೆ.

ರಾಜ್ಯದ ಚಾಮರಾಜನಗರ ಜಿಲ್ಲೆಯನ್ನು 'ಬರಡು ಜಿಲ್ಲೆ' ಎಂಬುದಾಗಿ ನಾವುಗಳೆಲ್ಲರೂ ಮಾತನಾಡುತ್ತೇವೆ. ಆ ಭಾಗದಲ್ಲಿ ಕಬಿನಿ ಜಲಾಶಯವಿದ್ದು, ಕೇರಳ ರಾಜ್ಯದಿಂದ ನೀರು ಹರಿದು ಬರುತ್ತದೆ. ಇಲ್ಲಿಯೂ ಸಹ 1–2 ಸಾವಿರ ಕ್ಯೂಸೆಕ್ಸ್‌ನಷ್ಟು ನೀರು ಹೆಚ್ಚುವರಿಯಾಗಿ ಬರುತ್ತದೆ. ಇದರಿಂದಾಗಿ ತಮಿಳುನಾಡು ರಾಜ್ಯದ ನೀರಿನ ಸಮಸ್ಯೆಯನ್ನು ಬಹುಪಾಲು ಇತ್ಯರ್ಥಪಡಿಸಬಹುದಾಗಿದೆ. ಇಲ್ಲಿ ಕೇರಳ ರಾಜ್ಯದ ಪ್ರವಾಹದ ಪರಿಣಾಮವಿದೆ. ಇದಕ್ಕೂ ಸಹ ಯೋಜನೆಯೊಂದನ್ನು ಕಳೆದೆರೆಡು ದಶಕಗಳಿಂದ ಮರುಸಿದ್ಧ ಮಾಡಿಸಿದ್ದಾರೆ. ಕಬಿನಿ ಹಿನ್ನೀರಿನಲ್ಲಿ ಏತ ನೀರಾವರಿ ಯೋಜನೆಯೊಂದನ್ನು ಮಾಡಿ, ಸುಮಾರು ಒಂದೂವರೆ ಲಕ್ಷ ಎಕರೆಗೆ ಒಂದು ಬೆಳೆಗೆ ನೀರು ಕೊಡುವ ಯೋಜನೆಯು ನಮ್ಮೆದುರು ಇದೆ. ಇದು 3,400 ಕೋಟಿ ರೂಪಾಯಿಗಳ ಯೋಜನೆಯಾಗಿದ್ದು, ಇದು ಯಾರಿಗೂ ಅಡ್ಡಿಯಾಗುವುದಿಲ್ಲ. ಇವತ್ತಿನ ದಿವಸ ಹೆಚ್ಚುವರಿ ಪ್ರವಾಹದಿಂದಾಗಿ ಒಂದು ನೂರು ಟಿ.ಎಂ.ಸಿ.ಯಷ್ಟು ನೀರು ಸಮುದ್ರವನ್ನು ಸೇರುತ್ತಿದೆ. ಕಳೆದ ಮೂರು ನೀರಾವರಿ ವರ್ಷಗಳಲ್ಲಿ ಈ ರೀತಿಯಾಗಿ ನೀರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮುದ್ರ ಸೇರಿದೆ. ಈಗ ತಮಿಳುನಾಡು ರಾಜ್ಯವು ಸದ್ದಿಲ್ಲದೇ 3,300 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹೊಸ ನಾಲೆಗಳನ್ನು ಮಾಡಿದೆ. ಇದಕ್ಕೆ ಯಾರ ಅನುಮತಿಯನ್ನು ಪಡೆಯಲಾಗಿದೆ? ನಮ್ಮಿಂದ ನಿರಪೇಕ್ಷಣಾವನ್ನು ಪಡೆಯಲಾಗಿದೆಯೇ?

ನೆರೆಯ ತಮಿಳುನಾಡು ರಾಜ್ಯದವರು ಕಾವೇರಿ, ವೈಗೈ (Vaigai), ವೆಲ್ಲಾರ್ ಮತ್ತು ಗುಂಡಾರ್ ನದಿಗಳ ಜೋಡಣೆಯ ಹೊಸ ಯೋಜನೆಗೆ ಒಂದು ಕಡೆ ಶಂಕುಸ್ಥಾಪನೆಯನ್ನು ಮತ್ತು ಈಗಾಗಲೇ ಮಾಡಿರುವ ಹೊಸ ಕಾಮಗಾರಿಯ ಕಾಲುವೆಗಳ ಮತ್ತು ಹೊಸ ನೀರಾವರಿ ಯೋಜನೆಯ ಉದ್ಘಾಟನೆಯನ್ನು ಮತ್ತೊಂದು ಕಡೆ ಮಾಡಿದರು. ಆದರೆ, ನಾವಿನ್ನೂ ತೂಕಡಿಸಿಕೊಂಡು ಕುಳಿತಿದ್ದೇವೆ. ಕಾವೇರಿ ಉನ್ನತ ಮಟ್ಟದ ಕಾಲುವೆಯ 3,200 ಕೋಟಿ ರೂಪಾಯಿಗಳ ಯೋಜನೆಯನ್ನು ಕೈಗೆತ್ತಿಕೊಳ್ಳುವುದು ಮತ್ತು ಕಬಿನಿ ಹಿನ್ನೀರಿನ ಏತ ನೀರಾವರಿ ಯೋಜನೆಯ ಮೂಲಕ ಒಂದೂವರೆ ಲಕ್ಷ ಎಕರೆಯ ಒಂದು ಬೆಳೆಗೆ ನೀರನ್ನು ಒದಗಿಸುವ ಮತ್ತು ಪ್ರವಾಹದ ಸಂದರ್ಭದಲ್ಲಿನ ಯೋಜನೆ ಈ ಎರಡೂ ಯೋಜನೆಗಳನ್ನು ದಯಮಾಡಿ ಸರ್ಕಾರವು ಕೈಗೆತ್ತಿಕೊಳ್ಳಬೇಕು.

ನಾವು ಪ್ರತಿವರ್ಷವೂ ನೀರಾವರಿ ಯೋಜನೆಗಾಗಿ ಅನುದಾನವನ್ನು ಕೇಳುತ್ತೇವೆ, ಆಯವ್ಯಯದಲ್ಲಿ ಅವಕಾಶ ಮಾಡುವುದಾದರೆ ನಮ್ಮ ಭಾಗದ ನೀರಾವರಿ ಸಮಸ್ಯೆಗಳು ಇತ್ಯರ್ಥವಾಗುತ್ತವೆ ಮತ್ತು ಆ ಭಾಗದ ಕೆರೆಗಳೆಲ್ಲಾ ತುಂಬುತ್ತವೆ ಎಂಬುದಾಗಿ ಇಲಾಖೆಯಲ್ಲಿನ ಎಲ್ಲಾ ಅಧಿಕಾರಿಗಳು ಹೇಳುತ್ತಾರೆ. ಆಶ್ಚರ್ಯವಾಗುವ ಮತ್ತೊಂದು ವಿಚಾರವೆಂದರೆ, ತಮಿಳುನಾಡಿನಲ್ಲಿ ಕೇವಲ 8-10 ಅಡಿ ಭೂಮಿಯನ್ನು ತೋಡಿದರೆ, ನೀರು ದೊರೆಯುತ್ತದೆ. ಇದರರ್ಥ ಅಲ್ಲಿನ ಅಂತರ್ಜಲ ಮಟ್ಟ ಬಹಳ ಸಮೃದ್ಧವಾಗಿದೆ. ನಮ್ಮಲ್ಲಿ ಅಂತರ್ಜಲದ ಮಟ್ಟ ಕಡಿಮೆಯಾಗಿ ಸ್ವಲ್ಪ ಹೆಚ್ಚು-ಕಡಿಮೆ ನಾವು ಕೋಲಾರದಂತಹ ಸ್ಥಿತಿಗೆ ಹೋಗಿದ್ದೇವೆ. ಕಾವೇರಿ ಜಲಾನಯನ ಭಾಗದಲ್ಲಿ 300 ರಿಂದ 1,200 ಅಡಿ ಆಳದವರೆಗೆ ತೋಡಿದರೆ ಮಾತ್ರವೇ ನೀರು ಸಿಗುತ್ತದೆ. ಇಲ್ಲದೇ ಹೋದರೆ ಇಲ್ಲ. ಕಾವೇರಿ ಜಲಾನಯನ ಭಾಗದಲ್ಲಿ ರಾಜ್ಯದ ಸುಮಾರು 12-14 ಜಿಲ್ಲೆಗಳು ಕುಡಿಯುವ ನೀರು ಸೇರಿಕೊಂಡು ಅವಲಂಬಿತವಾಗಿವೆ. ಆ ಪೈಕಿ ತುಮಕೂರು, ಭಾಗಶಃ ಚಿತ್ರದುರ್ಗ, ಬೆಂಗಳೂರು ನಗರ ಮತ್ತು ಗ್ರಾಮಾಂತರ, ಕುಣಿಗಲ್, ಮಂಡ್ಯ, ಚಿಕ್ಕಮಗಳೂರು, ಹಾಸನ, ಚಾಮರಾಜನಗರ ಇಂತಹ ಪ್ರದೇಶಗಳು ಕಾವೇರಿ ನದಿಯನ್ನು ನಂಬಿಕೊಂಡಿವೆ. ಕಾವೇರಿ ನದಿಯು ನಮ್ಮೆಲ್ಲರ ಜೀವ ಜಲ ಮತ್ತು ಬದುಕು ಆಗಿದೆ. ಸರ್ಕಾರದ ಇಚ್ಛಾಶಕ್ತಿಯ ಬಗ್ಗೆ ನನ್ನ ಪ್ರಶ್ನೆ ಇದೆ. ಸರ್ಕಾರವು ಮೇಲ್ಕಂಡ ಮೂರು ಯೋಜನೆಗಳನ್ನು ಕೈಗೆತ್ತಿಕೊಳ್ಳದೇ ಹೋದರೆ, ನಮ್ಮ ಎಲ್ಲಾ ಹಕ್ಕುಗಳನ್ನು ನಾವು ಕಳೆದುಕೊಳ್ಳುತ್ತೇವೆ. ಶೇಕಡಾ 31 ರಷ್ಟು ಮಳೆಯಾಗುವ ತಮಿಳುನಾಡಿನವರು ಶೇಕಡಾ 54-55 ರಷ್ಟು ಕಾವೇರಿ ನದಿಯ ನೀರನ್ನು ಈಗಾಗಲೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಭವಿಸುತ್ತಿದ್ದಾರೆ. ಶೇಕಡಾ 53 ರಷ್ಟು ಮಳೆಯಾಗುವ ಮತ್ತು ನೆರೆಯ ತಮಿಳುನಾಡಿಗೆ ನೀರನ್ನು ನೀಡುವ ಕರ್ನಾಟಕದವರು ಕಾವೇರಿ ನದಿ ನೀರಿನ ಬಳಕೆಯಲ್ಲಿ ಕೇವಲ ಶೇಕಡಾ 30 ರಷ್ಟಕ್ಕೆ ಮಾತ್ರವೇ ನಿಂತಿದ್ದೇವೆ.

ನಾವುಗಳೆಲ್ಲರೂ ನಮ್ಮೆಲ್ಲಾ ಯೋಜನೆಗಳ ಬಗ್ಗೆ ಕೇವಲ ಪ್ರಸ್ತಾಪ ಮತ್ತು ಉದ್ದುದ್ದ ಭಾಷಣ ಮಾಡುವುದೇ ಆಗಿದೆ. ಇವತ್ತಿನ ದಿವಸ 28 ಲೋಕಸಭಾ ಕ್ಷೇತ್ರಗಳ ಪೈಕಿ 25–26 ಕ್ಷೇತ್ರಗಳಲ್ಲಿ ಬಿ.ಜೆ.ಪಿ. ಪಕ್ಷದ ಸಂಸದರಿದ್ದಾರೆ. ಕರ್ನಾಟಕದಲ್ಲಿ ಮತ್ತು ಕೇಂದ್ರದಲ್ಲಿ ಬಿ.ಜೆ.ಪಿ. ಪಕ್ಷದ ಸರ್ಕಾರವು ಅಸ್ತಿತ್ವದಲ್ಲಿವೆ. ತಮಿಳುನಾಡಿನಲ್ಲಿ ಈ ರೀತಿಯಾಗಿ ಯಾವುದೂ ಇಲ್ಲ. ತಮಿಳುನಾಡಿನ ಯೋಜನೆಗಳಿಗೆ ಕೇಂದ್ರದ್ದು ಜಾಣಮೌನವಾಗಿದೆ. ಆದರೆ ಕರ್ನಾಟಕದ ಯೋಜನೆಗಳಿಗೆ ಕೇಂದ್ರದ ಒಪ್ಪಿಗೆ ಏಕೆ ಇಲ್ಲ? ಇದು ಕಾವೇರಿ ಜಲಾನಯನ ಭಾಗದ ಜನರೆಲ್ಲರ ಪ್ರಶ್ನೆಯಾಗಿದೆಯೇ ಹೊರತು ಕೇವಲ ನನ್ನೊಬ್ಬನ ಪ್ರಶ್ನೆಯಲ್ಲ. ಇಂತಹ ಸಂದರ್ಭದಲ್ಲಿ ಮೇಕೆದಾಟು ಯೋಜನೆಯನ್ನು, ಕೆ.ಆರ್.ಎಸ್.ನ ಉನ್ನತ ಮಟ್ಟದ ಕಾಲುವೆಗಳನ್ನು, ಕಬಿನಿಯ ಹಿನ್ನೀರಿನ ಏತ ನೀರಾವರಿ ಯೋಜನೆಗಳನ್ನು ಮಾಡುವುದಕ್ಕಾಗಲಿಲ್ಲವೆಂದರೆ ಇನ್ನು ಯಾವಾಗ ಇವುಗಳನ್ನು ಮಾಡಲಾಗುವುದು? ಇವತ್ತಿನ ದಿವಸ 3,200 ಕೋಟಿ ರೂಪಾಯಿಗಳನ್ನು ಉನ್ನತ ಮಟ್ಟದ ಕಾಲುವೆಗಳ ಯೋಜನೆಗೆ ನೀಡುವುದು ದೊಡ್ಡ ವಿಚಾರವೇ? ಅಥವಾ 3,400 ಕೋಟಿ ರೂಪಾಯಿಗಳನ್ನು ಚಾಮರಾಜನಗರದ ಕಬಿನಿ ಹಿನ್ನೀರಿನ ಏತ ನೀರಾವರಿ ಯೋಜನೆಗೆ ನೀಡುವುದು ದೊಡ್ಡ ವಿಚಾರವೇ? ಅಥವಾ ಮೇಕೆದಾಟು ಯೋಜನೆಗೆ 9,000 ಕೋಟಿ ರೂಪಾಯಿಗಳನ್ನು ನೀಡುವುದು ದೊಡ್ಡ ವಿಚಾರವೇ? ಇವತ್ತಿನ ದಿವಸ ಸುಮಾರು 11,940 ಕೋಟಿ ರೂಪಾಯಿಗಳ ಯೋಜನೆಯನ್ನು ತಮಿಳುನಾಡು ಕೈಗೆತ್ತಿಕೊಂಡಿದೆ ಎಂದರೆ, why not for Karnataka? ಕಾವೇರಿ ನದಿಯ ಎಲ್ಲಾ ಹಕ್ಕುಗಳನ್ನು ನಾವು ಕಳೆದುಕೊಂಡು, ನದಿಯ ಇಡೀ ನೀರನ್ನು ತಮಿಳುನಾಡಿಗೆ ಬಿಟ್ಟುಬಿಡುವುದೇ? ಈ ವಿಚಾರಗಳು ಇವತ್ತಿಗೆ ಇತ್ಯರ್ಥವಾಗಬೇಕು.

ಇವತ್ತಿನ ದಿವಸ ನಾವುಗಳೇನಾದರೂ war footing ನಲ್ಲಿ ಮೇಲ್ಕಂಡ ಮೂರು ಯೋಜನೆಗಳಿಗೆ ಶಂಕುಸ್ಥಾಪನೆ ಮಾಡದಿದ್ದರೆ, ಅಥವಾ ಯೋಜನೆಗಳನ್ನು ಕೈಗೆತ್ತಿಕೊಳ್ಳದಿದ್ದರೆ, ಇಡೀ ಕಾವೇರಿ ನದಿಯು ನಮ್ಮಿಂದ ತಮಿಳುನಾಡಿಗೆ ವರ್ಗಾವಣೆಯಾಗುವುದರಲ್ಲಿ ಯಾವ ಅನುಮಾನವೂ ಇಲ್ಲ. ಬ್ರಿಟೀಷರ ಕಾಲದಲ್ಲಿ ತಮಿಳುನಾಡಿನ ಪ್ರೆಸಿಡೆನ್ಸಿ ನಮ್ಮನ್ನು ಭಾಗಮಾಡಿಕೊಂಡು, ಅಧೀನ ಪ್ರಾಂತ್ಯವನ್ನಾಗಿ ಮಾಡಿಕೊಂಡು ಏನೆಲ್ಲಾ ಮಾಡಿದರೋ ಅದೇ ಪರಿಸ್ಥಿತಿಯು ಇವತ್ತಿನ ದಿವಸ ಪುನರಾವರ್ತನೆಯಾಗುತ್ತಿದೆ. ಹೀಗಾಗಿ ಕಾವೇರಿಯನ್ನು ರಕ್ಷಣೆ ಮಾಡುವುದಕ್ಕೋಸ್ಕರ ನಾವು ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. ಮೇಕೆದಾಟು ಯೋಜನೆಯು ನಮಗಾಗಿ ಅಲ್ಲ. ಈ ಅಂಶವನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಂದ್ರದ ಮೂಲಕ ತಮಿಳುನಾಡು ರಾಜ್ಯದವರಿಗೆ ಅರ್ಥಮಾಡಿಸಿಕೊಡಬೇಕು. ಅದಕ್ಕೂ ಮೊದಲು ಈ ಬಗ್ಗೆ ಕೇಂದ್ರಕ್ಕೆ ಅರ್ಥಮಾಡಿಸಿಕೊಡಬೇಕು.

ನಾವು ಮಾಡುವ balancing reservoir ಮೇಕೆದಾಟು ಯೋಜನೆ, it is in the interest of the Tamil Nadu state. ಪ್ರತಿವರ್ಷವೂ ನಮಗೆ ಮತ್ತು ಅವರಿಗೆ 25–30 ಟಿ.ಎಂ.ಸಿ. ನೀರಿನ ವಿಚಾರದಲ್ಲಿ ಜಗಳಗಳಾಗುತ್ತವೆ. Peak time ನಲ್ಲಿ ನಾವು ಹೊಳೆ ಬತ್ತಬೇಕು ಮತ್ತು ಕಬ್ಬು ಕಟಾವು ಮಾಡುವಂತಹ ಗರಿಷ್ಠ ಸಮಯದಲ್ಲಿ 10–20 ಟಿ.ಎಂ.ಸಿ.ಗಳಷ್ಟು ನೀರನ್ನು ಬಿಡಿ ಎಂದು ತಮಿಳುನಾಡಿನವರು ಕೇಳುತ್ತಾರೆ. ಅವರಿಗೆ ನೀಡುವ ನೀರನ್ನು ಮತ್ತು ಸಮುದ್ರಕ್ಕೆ ಹೋಗುವ ಆ ನೀರನ್ನು ನಾವು ಮೇಕೆದಾಟಿನಲ್ಲಿಟ್ಟುಕೊಳ್ಳೋಣ. ಬೆಂಗಳೂರಿಗೆ ಕುಡಿಯುವ ನೀರು ಮತ್ತು ವಿದ್ಯುಚ್ಛಕ್ತಿಗಾಗಿ ನೀರಿನ ಅವಶ್ಯಕತೆ ಇದೆ. ಇನ್ನುಳಿದ ನೀರನ್ನು ತಮಿಳುನಾಡಿನವರಿಗೆ ಕೊಡೋಣ. ಅವರನ್ನು ಕರೆದು ನಾವು ಅವರಿಗೆ ಅರ್ಥಮಾಡಿಸಿಕೊಡಬೇಕು. ಇಲ್ಲವಾದಾದರೆ ನಮ್ಮಲ್ಲಿಯೂ ಸಹ ಯೋಜನೆಗಳನ್ನು ಪ್ರಾರಂಭಿಸಿ. ತಮಿಳುನಾಡಿನವರು ನಮ್ಮನ್ನು ಕೇಳದೇ ಯೋಜನೆಗಳನ್ನು ಪ್ರಾರಂಭಿಸಿದ್ದಾರೆ. ಇಲ್ಲಿನ ಎರಡು ಯೋಜನೆಗಳಿಗೆ ಯಾರ ಅನುಮತಿಯೂ ಸಹ ಬೇಕಾಗಿಲ್ಲ. ಆದರೆ ನಮ್ಮವರು ಸುಮ್ಮನೆ ಅಂತರ್ ರಾಜ್ಯ ನದಿ ನೀರಿನ ಪ್ರಾಧಿಕಾರದವರು ಆ ರೀತಿಯಾಗಿ ಹೇಳುತ್ತಾರೆ ಎಂದು ಅಂದುಕೊಳ್ಳುತ್ತಾರೆ. ಯಾರೂ ಏನನ್ನೂ ಹೇಳುವುದಿಲ್ಲ. ಇದಕ್ಕೆ ಇಚ್ಛಾಶಕ್ತಿ ಮಾತ್ರವೇ ಅವಶ್ಯಕವಾಗಿದೆ. ಕೆ.ಆರ್.ಎಸ್.ನ ಉನ್ನತ ಮಟ್ಟದ ಕಾಲುವೆಯ ಕಾಮಗಾರಿಗಳನ್ನು ಮತ್ತು ಕಬಿನಿ ಹಿನ್ನೀರಿನ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ಯಾರ ಅಡ್ಡಿಯೂ ಇಲ್ಲ, ಅವಶ್ಯಕತೆಯೂ ಸಹ ಬೇಕಾಗಿಲ್ಲ.

ಇವತ್ತಿನ ದಿವಸ, ತಮಿಳುನಾಡಿನವರು ಸುಮಾರು 11,940 ಕೋಟಿ ರೂಪಾಯಿಗಳನ್ನು ಯಾರ ಅನುಮತಿ ಇಲ್ಲದೆಯೇ ಕೈಗೆತ್ತಿಕೊಂಡಿದ್ದಾರೆ ಎಂದ ಮೇಲೆ ನಾವು ಮೇಕೆದಾಟು ಯೋಜನೆಗೆ ಅವರ ಅನುಮತಿಯನ್ನು ಏಕೆ ಕೇಳಬೇಕು? ಹೆಚ್ಚು ಜಲಾನಯನ ಭಾಗವು ನಮ್ಮದಾಗಿದೆ; ಮಳೆ ಮತ್ತು ನದಿ ನೀರಿನ ಹೆಚ್ಚು ಉತ್ಪತ್ತಿಯು ನಮ್ಮಲ್ಲಿಯೇ ಆಗುತ್ತದೆ, ಆದರೆ ಅದರಲ್ಲಿ ಹೆಚ್ಚಿನ ಪ್ರಮಾಣವನ್ನು ಅವರು ಅನುಭವಿಸುತ್ತಿದ್ದಾರೆ. ಇದು ಯಾವ ರೀತಿಯ ವಿಪರ್ಯಾಸ ಮತ್ತು ಕರ್ನಾಟಕ ರಾಜ್ಯಕ್ಕೆ ಈ ರೀತಿಯ ಅನ್ಯಾಯವೇಕೆ? ತಮ್ಮ ಮೂಲಕ ನಾನು ಸರ್ಕಾರವನ್ನು ಆಗ್ರಹಿಸುವುದೇನೆಂದರೆ, ಈ ಕೂಡಲೇ ಸರ್ಕಾರವು ಮೇಲ್ಕಂಡ ಮೂರು ಕಾಮಗಾರಿಗಳಿಗೆ ಚಾಲನೆಯನ್ನು ನೀಡಬೇಕು. ಇದರ ಮೂಲಕ 45–50 ಟಿ.ಎಂ.ಸಿ. ನಷ್ಟು ನೀರಿನ ಬಳಕೆ ಮತ್ತು ನಮ್ಮ ನಾಡಿನ ಜನರ ನೀರಾವರಿ ಸಮಸ್ಯೆಗಳನ್ನು ಪರಿಹಾರ ಮಾಡುವ ದಿಸೆಯಲ್ಲಿ ಐತಿಹಾಸಿಕ ತೀರ್ಮಾನಕ್ಕೆ ಸರ್ಕಾರವು ಸಾಕ್ಷಿಯಾಗಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತಿನ ದಿವಸ ಅಂತಹ ಸಂದರ್ಭ ಮತ್ತು ವಾತಾವರಣಗಳು ಕೂಡಿಬಂದಿವೆ. ಕೇಂದ್ರ ಮತ್ತು ರಾಜ್ಯದಲ್ಲಿ ಬಿ.ಜೆ.ಪಿ. ಪಕ್ಷದ ಸರ್ಕಾರವು ಅಧಿಕಾರದಲ್ಲಿದೆ. ಇವತ್ತಿನ ದಿವಸ ಸಂಸತ್ತು ತುಂಬಿಕೊಳ್ಳುವಷ್ಟು ಸದಸ್ಯರು ಕರ್ನಾಟಕದಿಂದ ಆಯ್ಕೆಯಾಗಿದ್ದಾರೆ. ಈಗಲೂ ನಮ್ಮ ರಾಜ್ಯಕ್ಕೆ ನ್ಯಾಯವನ್ನು ಕೊಡಿಸಿಲ್ಲವೆಂದಾದರೆ, ಜನರು ಸರ್ಕಾರವನ್ನು ಕ್ಷಮಿಸುವುದಿಲ್ಲ; ಶಪಿಸುತ್ತಾರೆ. ಇವತ್ತಿನ ದಿವಸ ತಮಿಳುನಾಡಿನವರು ಕೇಂದ್ರದ ಮನಸ್ಸನ್ನು ಗೆದ್ದುಕೊಂಡು ಸದ್ದಿಲ್ಲದೇ 11,940 ಕೋಟಿ ರೂಪಾಯಿಗಳ ಯೋಜನೆಯನ್ನು ಕೈಗೆತ್ತಿಕೊಂಡಿದ್ದಾರೆ ಎಂದರೆ, why not for Karnataka Government? ಮೇಲ್ಕಂಡ ನಮ್ಮ ಯೋಜನೆಗಳ ವೆಚ್ಚಗಳನ್ನು ಲೆಕ್ಕ ಹಾಕಿದ್ದಾಗ 12–13 ಸಾವಿರ ಕೋಟಿ ರೂಪಾಯಿಗಳಾಗುತ್ತವೆ. ಆಗ ಈ ಭಾಗದ ಬೆಂಗಳೂರು ಒಳಗೊಂಡಂತೆ 14 ಜಿಲ್ಲೆಗಳ ಕಾವೇರಿ ನೀರಿನ, ಕುಡಿಯುವ ನೀರಿನ ಮತ್ತು ವಿದ್ಯುಚ್ಛಕ್ತಿಯ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ. ಇವತ್ತಿನ ದಿವಸ ಜನರು ಬೀದಿಗೆ ಬಿದ್ದಿದ್ದಾರೆ. ಈ ಕುರಿತಾದ ದೊಡ್ಡ ಮಟ್ಟದ ಚರ್ಚೆಗಳು ಎಲ್ಲೆಡೆಯಾಗುತ್ತಿವೆ. ದಯಮಾಡಿ ಸರ್ಕಾರವು ಈ ಮೂರು ಯೋಜನೆಗಳನ್ನು ಯಾರ ಅನುಮತಿಯಿಲ್ಲದೇ ಪ್ರಾರಂಭಿಸುವ ಕೆಲಸಗಳನ್ನು ಮಾಡಿದರೆ, ನಾವು ನಿಮ್ಮನ್ನು ಮೆಚ್ಚುತ್ತೇವೆ ಮತ್ತು ಅಭಿನಂದಿಸುತ್ತೇವೆ. ಸರ್ಕಾರವು ಈ ದಿಸೆಯಲ್ಲಿ ಮುಂದಾಗಬೇಕೆಂದು ಆಗ್ರಹಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಮ್ಮ ಹಿರಿಯ ಸದಸ್ಯರದ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಈಗಾಗಲೇ ಸವಿಸ್ತಾರವಾಗಿ ನದಿ ನೀರಿನ ವಿವಾದದ ಬಗ್ಗೆ ಚರ್ಚೆ ಮಾಡಿದ್ದಾರೆ. ಈ ವಿಚಾರದಲ್ಲಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಎರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ನಮ್ಮ ಕರ್ನಾಟಕ ರಾಜ್ಯವು ಪದೇ ಪದೇ ಜಲ ಪರೀಕ್ಷೆಗೆ ಶತಮಾನಗಳಿಂದಲೂ ಒಳಗಾಗುತ್ತಿದೆ. ಅದು ಕಾವೇರಿ, ಕೃಷ್ಣ, ಮಹದಾಯಿ ಜಲ ವಿವಾದಗಳಿರಬಹುದು. ನಮ್ಮ ನೆರೆಯ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ ಮತ್ತು ಗೋವಾ ರಾಜ್ಯಗಳು ನಮ್ಮ ರಾಜ್ಯಕ್ಕೆ ನ್ಯಾಯ ಮಂಡಳಿಯಿಂದ ಹಂಚಿಕೆಯಾಗಿರುವ ನೀರನ್ನು ಬಳಕೆ ಮಾಡುವ ನಮ್ಮ ಎಲ್ಲಾ ಭಗೀರಥ ಪ್ರಯತ್ನಗಳಿಗೆ ಕಲ್ಲು ಹಾಕಲು ಕೇಂದ್ರ ಸರ್ಕಾರದಲ್ಲಿ ತಕರಾರನ್ನು ಸಲ್ಲಿಸಿ ಪದೇ ಪದೇ ಸರ್ವೋಚ್ಚ ನ್ಯಾಯಾಲಯದಲ್ಲಿ ವ್ಯಾಜ್ಯವನ್ನು ಹೂಡಿ, ನಮ್ಮ ಜನರ ಬದುಕನ್ನು ಅಲ್ಲೋಲ–ಕಲ್ಲೋಲ ಮಾಡಿವೆ. ಸರ್ವೋಚ್ಚ ನ್ಯಾಯಾಲಯದಲ್ಲಿ ಕಾವೇರಿ ಜಲ ವಿವಾದದ ವಿಚಾರದ ಸಮಯದಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ರಾಜ್ಯದ ಅಂದಿನ ಮುಖ್ಯಮಂತ್ರಿಯವರನ್ನು ನ್ಯಾಯಾಲಯದಲ್ಲಿ ಹಾಜರಾಗುವಂತೆ ಸರ್ವೋಚ್ಚ ನ್ಯಾಯಾಲಯವು ನಿರ್ದೇಶನವನ್ನು ನೀಡುವುದಲ್ಲದೇ ಅದು ಮುಂದಿನ ಹಂತಕ್ಕೆ ಹೋಗಿತ್ತು.

**(ಮುಂದು)**

**(332)/9-3-2021/3-50/ಎಲ್ಎಂ/ಎಂಡಿ**

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ಮುಂದು):-**

ಕರ್ನಾಟಕ ರಾಜ್ಯ ತನ್ನ ನೆರೆ ರಾಜ್ಯಗಳೊಂದಿಗೆ ಯಾವಾಗಲೂ ವಿವಾದ ಹೊಂದಿದ್ದೆ ಎಂದು ಹೇಳುವಂತಹ ಹಂತಕ್ಕೆ ಹೋಯಿತು. ಇದು ತುಂಬಾ ದುರ್ದೈವದ ಸಂಗತಿ. ಪ್ರಸಕ್ತದಲ್ಲಿ ಇಂತಹ ಎರಡು ಸನ್ನಿವೇಶಗಳು ರಾಜ್ಯ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವುದಲ್ಲದೆ, ರಾಜಕೀಯ ಹಿನ್ನೆಲೆಯಲ್ಲಿ ದುರ್ಲಭ ಪಡೆಯಲು ಮತ್ತು ನ್ಯಾರ್ಯಾಂಗದಿಂದ ತಡೆ ಆಜ್ಞೆ ಪಡೆದು ತಾವುಗಳು ನದಿ ತೀರದ ರಾಜ್ಯಗಳು lower riparian states ನಾವುಗಳು ಯಾವುದೇ ಯೋಜನೆಯನ್ನು ಆದರೂ ಕೈಗೆತ್ತಿಕೊಂಡು water right in equitable apportionment theory ಎಂಬ ಆಧಾರದಲ್ಲಿ ಅನುಷ್ಠಾನಗೊಳಿಸ ಬಹುದು ಎನ್ನುವ ಗುಂಗಿನಲ್ಲಿ ಇತ್ತ ಮಹಾದಾಯಿ ಜಲವಿವಾದದಲ್ಲಿ ಗೋವಾ ಸರ್ಕಾರ ಮಹಾದಾಯಿ ನ್ಯಾಯಾಧೀಕರಣ ನಮ್ಮ ರಾಜ್ಯದ ನೀರಿನ ಪಾಲು ಎಂದು ತೀರ್ಪು ನೀಡಿದ್ದರೂ ಸುಪ್ರಿಂ ಕೋರ್ಟ್‌ನಲ್ಲಿ ತಕರಾರು ಹೂಡಿದ್ದು, ಕರ್ನಾಟಕ ಈಗಾಗಲೇ ತಮ್ಮ ಪಾಲಿನ ನೀರನ್ನು ಬಳಸಿಕೊಂಡಿದೆ ಎಂದು ಆರೋಪಿಸಿದೆ. ಇದನ್ನು ಪರಿಸೀಲಿಸಲು ಸುಪ್ರೀಂ ಕೋರ್ಟ್ ತಜ್ಞರ ಸಮಿತಿಯನ್ನು ನೇಮಿಸಿದೆ. ಕೇಂದ್ರದಲ್ಲಿ ಮತ್ತು ಕರ್ನಾಟಕ-ಗೋವಾ ರಾಜ್ಯಗಳಲ್ಲಿ ಬಿಜೆಪಿ ಸರ್ಕಾರಗಳು ಇದ್ದರೂ ಅದನ್ನು ಹೈಕಮಾಂಡ್ ಗಮನಕ್ಕೆ ತಂದು, ಪರಿಹರಿಸಿಕೊಳ್ಳುವ ಪ್ರಬಲವಾದ ರಾಜಕೀಯ ಇಚ್ಛಾಶಕ್ತಿ ನಮ್ಮ ರಾಜ್ಯದ ಬಿಜೆಪಿ ಪಕ್ಷದ ನಾಯಕರಲ್ಲಿ ಕಂಡು ಬರುತ್ತಿಲ್ಲ. ಇದು ಕೂಡಾ ದುರ್ದೈವದ ಸಂಗತಿ. ಇದರ ಬೆನ್ನ ಹಿಧದೆಯೇ ತಮಿಳುನಾಡು ಸರ್ಕಾರ ಕಾವೇರಿ ಜಲಾನಯನ ಪ್ರದೇಶದಲ್ಲಿನ ಪ್ರವಾಹದ ಹೆಚ್ಚುವರಿ ನೀರನ್ನು ಅಂದರೆ flood surplus water ಬಳಸಿಕೊಂಡು ವೈಗೈ-ಕಾವೇರಿ-ಗುಂಡಾರು ನದಿಗಳ ಮೂಲಕ 262 ಕಿ.ಮೀ ಕಾಲುವೆ ನಿರ್ಮಿಸಿ ನೀರು ಹರಿಸಲು ಒಂದು ಯೋಜನೆಯನ್ನು ನಿರೂಪಿಸಿದೆ. ಈ ಯೋಜನೆಯ ರೂಪುರೇಷೆಗಳು ಈ ರೀತಿ ಇವೆ.

1) ಯೋಜನೆಯ ಹೆಸರು -ಕಾವೇರಿ-ವೈಗೈ- ಗುಂಡಾರು ನದಿಗಳ ಜೋಡಣೆ (Cauvery-Vaigai-Gundar River Link Project)
2) ಲಿಂಕ್ ಕಾಲುವೆಯ ಉದ್ದ 161,45 ಕಿ.ಮೀ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

3) ಯೋಜನೆಯ ಒಟ್ಟು ವೆಚ್ಚ 14,400 ಕೋಟಿ ರೂ..ಗಳು

4) ಈ ಯೋಜನೆಯಡಿ ಬರುವ ಅಚ್ಚುಕಟ್ಟು ಪ್ರದೇಶ ಮತ್ತು ಕೆರೆಗಳು

ತಿರುಚಿನಾಪಳ್ಳಿ, ಪುದುಕೋಟೆ, ಶಿವಗಂಗೆ, ವಿರುಧುನಗರ, ಕರೂರು ಜಿಲ್ಲೆಗಳು. ಇದರಲ್ಲಿ 1.09,962 ಎಕರೆ ಅಚ್ಚುಕಟ್ಟು ಪ್ರದೇಶ ಬರುತ್ತದೆ. ಅದೇ ರೀತಿ, 1054 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಇದಾಗಿದೆ. ಈ ಯೋಜನೆಯನ್ನು ಕಾವೇರಿ ನದಿಯಿಂದ 45 ಟಿಎಂಸಿ ಯಷ್ಟು ನೀರನ್ನು ವೈಗೈ ನದಿಗೆ ತಿರುಗಿಸುವ ಹುನ್ನಾರ ನಡೆದಿದೆ. ಕಾವೇರಿ ಕಣವೆ surplus water ಇರುವಂತಹ ಕಣಿವೆಯಲ್ಲ. ಕಾವೇರಿ ಜಲವಿವಾದ ನ್ಯಾಯಾಧೀಕರಣವು ಇದನ್ನು ಒಪ್ಪಿಕೊಂಡಿದೆ. 100 ವರ್ಷಗಳ ಮಳೆಯ ಅಂಕಿ-ಅಂಶಗಳ ಆಧಾರದ ಮೇಲೆ ಮತ್ತು 50 ವರ್ಷಗಳ dependability ಆಧಾರ ಇಟ್ಟುಕೊಂಡು ಯಾರಿಗೆ ಎಷ್ಟು ನೀರು ಕೊಡಬೇಕೆಂದು ತೀರ್ಮಾನಿಸಿ ಹಂಚಿಕೆ ಮಾಡಿದೆ. ಈ ಯೋಜನೆಯ ಮೂರು ಹಂತಗಳ ಬಗ್ಗೆ ಮಾನ್ಯ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡರು ಹೇಳಿದ್ದಾರೆ. ಮತ್ತೆ ಅದನ್ನೆ ನಾನು ಹೇಳಲು ಹೋಗುವುದಿಲ್ಲ. 45 ಟಿಎಂಸಿ surplus water ನ್ನು ಬಳಸಿಕೊಂಡು ಈ ಯೋಜನೆಯನ್ನು ತರುತ್ತಿದ್ದಾರೆ. ಈ ಯೋಜನೆಯನ್ನು ಕಾರ್ಯಗತಗೊಳಿಸಿದರೆ ಹೋದರೆ ಮುಂದಿನ ದಿನಗಳಲ್ಲಿ ತುಂಬಾ ತೊಂದರೆಗೆ ಒಳಪಡುತ್ತೇವೆ. ಇದಕ್ಕೆ ಕಾರಣ ಎಂದರೆ ಕಾವೇರಿ ಕಣಿವೆ ಹೆಚ್ಚುವರಿ ನೀರಿನಿಂದ ಅಥವಾ ಪ್ರವಾಹದಿಂದ ತುಂಬಿ ತುಳುಕುವಂತಹ ಕಣಿವೆಯಲ್ಲ. ಕಾವೇರಿ ಜಲವಿವಾದ ನ್ಯಾಯಾಧೀಕರಣದ ತೀರ್ಪನ್ನು ಕೇಂದ್ರ ಸರ್ಕಾರ ದಿನಾಂಕ:15.2.2013ರಂದು ಗೆಜೆಟ್‌ನಲ್ಲಿ ಹೊರಡಿಸಿರುತ್ತದೆ. ಕಾವೇರಿ ಜಲವಿವಾದ ನ್ಯಾಯಾಧೀಕರಣದ ತೀರ್ಪಿನ ಪ್ರಮುಖ ಅಂಶಗಳು ಈ ರೀತಿ ಇದೆ.

1) ನ್ಯಾಯಾಧೀಕರಣ ರಚನೆ ದಿನಾಂಕ: 02–6–1990

2) ಮಧ್ಯಂತರ ತೀರ್ಪಿನ ದಿನಾಂಕ: 25–6–1991

3) ಅಂತಿಮ ವರದಿ ದಿನಾಂಕ:: 05–2–2007

• ನ್ಯಾಯಾಧೀಕರಣ ದೊರೆಯಬಹುದಾದ ನೀರಿನ ಇಳುವರಿಯನ್ನು 50% ರಷ್ಟು, ಅವಲಂಬನೆ 50% of dependability ಆಧಾರದ ಮೇಲೆ 740 ಟಿಎಂಸಿ ಎಂದು ನಿರ್ಧರಿಸಿದೆ- ನ್ಯಾಯಾಧೀಕರಣ ಹಿಂದಿನ 100 ವರ್ಷಗಳ ಮಳೆ ಮಾಪನ ಅಂಕಿ-ಅಂಶಗಳು ಅಂದರೆ, rainfall statistics ನ್ನು ಆಧರಿಸಿ ಸರಾಸರಿ 50 ವರ್ಷಗಳ ಕಾಲ ಸುರಿದ ಮಳೆ ಆಧಾರದ ಮತ್ತು ಅವಲಂಬನೆ ಆಧಾರದ ಮೇಲೆ 50%

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಷ್ಟು ನೀರಿನ ಪ್ರಮಾಣದ ಇಳುವರಿ ದೊರೆಯಬಹುದೆಂದು ತೀರ್ಮಾನಿಸಿದೆ. ಇದರಲ್ಲಿ ಹಂಚಿಕೆಯಾಗಿರುವುದು ಈ ರೀತಿ ಇದೆ.

1) ಕೇರಳ ಬೇಡಿಕೆ ಇಟ್ಟಿದು 99.80 ಹಂಚಿಕೆಯಾಗಿರುವುದು 30 ಟಿಎಂಸಿ

2) ಕರ್ನಾಟಕ ಬೇಡಿಕೆ 465.00 ಹಂಚಿಕೆಯಾಗಿರುವುದು 270 ಟಿಎಂಸಿ 55 ರಿಂದ 60% ಮಾತ್ರ

3) ತಮಿಳುನಾಡು ಬೇಡಿಕೆ 573.50 ಹಂಚಿಕೆಯಾಗಿರುವುದು 419 ಟಿಎಂಸಿ 75 ರಿಂದ 80% ಆಗುತ್ತದೆ.

4) ಪುದುಚೇರಿ ಬೇಡಿಕೆ 9.30 ಹಂಚಿಕೆಯಾಗಿರುವುದು 07 ಟಿಎಂಸಿ

ಒಟ್ಟು 726 ಟಿಎಂಸಿ ಹಂಚಿಕೆಯಾಗಿದೆ.

ಮೆಟ್ಟೂರು ಜಲಾಶಯದ ಕೆಳಗಿನ ಭಾಗದ ಪರಿಸರ ಸಂರಕ್ಷಣೆಗೆ 10 ಟಿಎಂಸಿ ನೀರು ಮತ್ತು ಸಮುದ್ರಕ್ಕೆ ಅನಿವಾರ್ಯ ಹರಿವು 04 ಟಿಎಂಸಿ ನೀರು. ಒಟ್ಟು 740 ಟಿಎಂಸಿ ನೀರನ್ನು ಹಂಚಿಕೆ ಮಾಡಿದ್ದಾರೆ. ಕಾವೇರಿ ಅಚ್ಚುಕಟ್ಟಿನಲ್ಲಿ ಅದು ಕರ್ನಾಟಕ ಇರಬಹುದು, ತಮಿಳುನಾಡು ಇರಬಹುದು ಎಷ್ಟು ಬೆಳೆಯನ್ನು ಬೆಳೆಯಬಹುದು ಎನ್ನುವುದನ್ನು ಅವಾರ್ಡ್‌ನಲ್ಲಿ ತಿಳಿಸಿದೆ.

ಕರ್ನಾಟಕಕ್ಕೆ ನ್ಯಾಯ ಮಂಡಳಿಯಿಂದ ಅನುಮತಿಸಲಾಗಿರುವ ಋತುವಿನ ಬೆಳೆ ಮಾದರಿ ಈ ರೀತಿ ಇದೆ.

| | |
|---|---|
| 1) ಭತ್ತ | : 7.674 ಲಕ್ಷ ಎಕರೆ |
| 2) ದೀರ್ಘಕಾಲಿಕ | : 0.400 ಲಕ್ಷ ಎಕರೆ |
| 3) ಬರೀ ಅರೆ ಖುಷ್ಕಿ | : 7.156 ಲಕ್ಷ ಎಕರೆ |
| 4) ರಬಿ ಅರೆ ಖುಷ್ಕಿ | : 3.024 ಲಕ್ಷ ಎಕರೆ |
| ಒಟ್ಟು | 18.085 ಲಕ್ಷ ಎಕರೆ. |

ತಮಿಳುನಾಡಿಗೆ ನ್ಯಾಯ ಮಂಡಳಿಯಿಂದ ಅನುಮತಿಸಲಾಗಿರುವ ಬೆಳೆಗಳ ಮಾದರಿ ಈ ರೀತಿ ಇದೆ.

| | |
|---|---|
| 1) ಮೊದಲನೆ ಬೆಳೆ | : 22.293 ಲಕ್ಷ ಎಕರೆ |
| 2) ಎರಡನೆ ಬೆಳೆ | : 2.419 ಲಕ್ಷ ಎಕರೆ |
| ಒಟ್ಟು | : 24.712 ಲಕ್ಷ ಎಕರೆ. |

ಇದರಲ್ಲಿ ಆಗಿರುವ ಅನ್ಯಾಯ ಎಂದರೆ, ತಮಿಳುನಾಡಿಗೆ ಎರಡು ಬೆಳೆಗಳಿಗೆ ಅನುಮತಿ ನೀಡಿದೆ. ಕರ್ನಾಟಕಕ್ಕೆ 18.85 ಲಕ್ಷ ಎಕರೆ ಅಚ್ಚುಕಟ್ಟು ಪ್ರದೇಶದಲ್ಲಿ ಏಕಮಾತ್ರ ಬೆಳೆಗೆ ಅನುಮತಿಸಿರುವುದನ್ನು ಗಮನಿಸಬಹುದಾಗಿದೆ. ಇಲ್ಲಿ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗಿದೆ. ಅದಕ್ಕೆ ನಮ್ಮ ಸರ್ಕಾರವು ವಕೀಲರನ್ನು ನೇಮಿಸಿ ವಾದಮಾಡಿದೆ. ಆದರೆ ಕೋರ್ಟ್ ಈ ವಾದವನ್ನು ಒಪ್ಪಿಲಿಲ್ಲ. Rich command area ಎಂದು ಒಂದು ಅವಾರ್ಡ್‌ನಲ್ಲಿ ಹೇಳಿದ್ದಾರೆ. ಮಾನ್ಯ ಶ್ರೀಕಂಠೇಗೌಡರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದ ಹಾಗೆ, ಬಿಳಿಗುಂಡ್ಲುವಿನ ಬಳಿ ತಮಿಳುನಾಡಿಗೆ ಬಿಡುಗಡೆಗೊಳಿಸಬೇಕಾದ 192 ಟಿಎಂಸಿ ನೀರನ್ನು ಜೂನ್‌ನಿಂದ ಮೇ ತಿಂಗಳವರೆಗೆ ಬಿಡಬೇಕಾಗಿದೆ. Financial year is April to March, Cooperative year is June to May and Water year is June to May. ಕಾವೇರಿ ಜಲವಿವಾದ ನ್ಯಾಯಾಧೀಕರಣ ತನ್ನ ತೀರ್ಪಿನಲ್ಲಿ ಕಾವೇರಿ ಕಣಿವೆ ಹೆಚ್ಚುವರಿ ನೀರಿಲ್ಲದೆ ಕೊರೆ ಕಣಿವೆ (Deficit Basin) ಎಂದು ತೀರ್ಮಾನಿಸಿದೆ. ಅಲ್ಲದೆ, ತನ್ನ ತೀರ್ಪಿನಲ್ಲಿ ಈ ಅವಾರ್ಡ್‌ನ್ನು ಮುಂಬರುವ ವರ್ಷಗಳಲ್ಲಿ ವಿಮರ್ಶೆ ಮಾಡುವ clause ಅನ್ನೂ ಸಹ ಅಳವಡಿಕೆ ಮಾಡಿಲ್ಲ. ಯಾವುದೆ ಒಂದು ಜಲವಿವಾದ ನ್ಯಾಯಾಧೀಕರಣದಲ್ಲಿ ಅದು International Law ಅಥವಾ best practice ಎಂದು ಏನು ಹೇಳುತ್ತೇವೆ, ಈ ನ್ಯಾಯಾಧಿಕರಣದ ಅವಾರ್ಡ್‌ಗಳನ್ನು 20ವರ್ಷ ಅಥವಾ 50 ವರ್ಷಗಳಿಗೆ ಒಮ್ಮೆ review ಮಾಡಬೇಕು ಎಂದು ಹೇಳತ್ತಾರೆ. ಆದರೆ ಕಾವೇರಿ ಜಲವಿವಾದ ನ್ಯಾಯಾಧೀಕರಣ ಆ ರೀತಿ ಮಾಡಿರುವುದಿಲ್ಲ. ಏಕೆ ಮಾಡಲಿಲ್ಲ ಎಂದರೆ, ಕೊರತೆ ಇರುವಂತಹ ಕಣಿವೆ ಇಲ್ಲ ಹೆಚ್ಚುವರಿ ನೀರು ಇಲ್ಲ Flood water or surplus water ಇಲ್ಲ ಎಂದು ಮಾಡಿರುವುದಿಲ್ಲ. ಆದರೆ ಕೃಷ್ಣಾ ನ್ಯಾಯಾಧೀಕರಣದ ತೀರ್ಪಿನಲ್ಲಿ 50 ವರ್ಷಗಳ ನಂತರ, ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶಗಳಿಗೆ ಹಂಚಿಕೆಯಾಗಿರುವ ಕೆಳಕಂಡ ನೀರಿನ ಪ್ರಮಾಣವನ್ನು ರಾಜ್ಯಗಳ ಬಳಕೆ ಆಧಾರದ ಮೇಲೆ ಪುನರ್ವಿಮರ್ಶಿಸಲು clause ಅನ್ನು ಅಳವಡಿಸಲಾಗಿದೆ. ಜಸ್ಟಿಸ್ ಬ್ರಿಜೇಶ್ ಕುಮಾರ್ ನೇತೃತ್ವದ ನ್ಯಾಯಾಧೀಕರಣ average dependability ಮೇಲೆ 2020ರಲ್ಲಿ ನೀಡಿದ ತನ್ನ KWDT-II (Krishna Water Dispute Tribunal Award) ಎಂದು ಏನು ಕರೆಯುತ್ತೇವೆ. ಅದು ಈ ಕೆಳಕಂಡಂತೆ ನೀರಿನ ಹಂಚಿಕೆ ಮಾಡಿರುತ್ತಾರೆ.

<u>ಒಟ್ಟು ನೀರಿನ ಪ್ರಮಾಣದ ಇಳುವರಿ:</u>

1) ಮಹಾರಾಷ್ಟ್ರ : 666 ಟಿಎಂಸಿ
2) ಕರ್ನಾಟಕ : 907 ಟಿಎಂಸಿ
3) ಆಂಧ್ರಪ್ರದೇಶ : 1001 ಟಿಎಂಸಿ

ಇದರಲ್ಲಿ ಇನ್ನೊಂದು clause ಇದೆ. Liberty to lower riparian states to utilize surplus water without any right. ಒಂದು ವೇಳೆ ಹೆಚ್ಚು ನೀರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಲಭ್ಯವಾದರೆ ಅದನ್ನು lower riparian state, ನದಿ ತೀರದಲ್ಲಿ ಇರುವಂತಹ ರಾಜ್ಯಗಳು ಬಳಸಿಕೊಳ್ಳಬಹುದು. ಅದಕ್ಕೆ ಯಾವುದೆ ತಕರಾರು ಇಲ್ಲ. 2050ನೇ ಸಾಲಿನಲ್ಲಿ ಈ ಅವಾರ್ಡ್‌ನ್ನು review ಮಾಡುತ್ತಾರೆ. ಕಾವೇರಿ ನ್ಯಾಯಾಧೀಕರಣದಲ್ಲಿ ಈ ರೀತಿ review ಮಾಡುವಂತಹ clause ಇಲ್ಲ. ಏಕೆಂದರೆ ಕಾವೇರಿಯಲ್ಲಿ surplus water ಇಲ್ಲ ಅಥವಾ flood water ಇಲ್ಲ.

**(ಮುಂದು)**

**(333)09-03-2021(04-00)ಬಿಎಸ್‌ಡಿ-ಎಕೆ**

**ಶ್ರೀ ತಿಪ್ಪೇಸ್ವಾಮಿ (ಮುಂದು):**

ಹತ್ತು ವರ್ಷಗಳಲ್ಲಿ ಕೊಡಗು ಅಥವಾ ಮೈಸೂರಿನಲ್ಲಿ flood ಬರಬಹುದು. ಈ Krishna Water Disputes Tribunal Award ಮೇಲೆ ಅಂದಿನ ಆಂಧ್ರ ಪ್ರದೇಶವನ್ನು ಆಂಧ್ರ ಪ್ರದೇಶ ಮತ್ತು ತೆಲಂಗಾಣ ಎಂದು ವಿಭಜನೆ ಮಾಡಿದಾಗ, ಈ ಎರಡೂ ರಾಜ್ಯಗಳು ಕೃಷ್ಣಾ ಜಲವಿವಾದ ನ್ಯಾಯಾಧೀಕರಣದ ತೀರ್ಪನ್ನು ಮತ್ತೊಮ್ಮೆ ಪುನರ್‌ವಿಮರ್ಶಿಸುವಂತೆ ಕೋರಿದವು. ಎರಡು ರಾಜ್ಯಗಳು ವಿಂಗಡಣೆ ಆದಾಗ, ಎರಡೂ ರಾಜ್ಯಗಳು ಕೃಷ್ಣಾ ಜಲವಿವಾದ ನ್ಯಾಯಾಧೀಕರಣದ ಮುಂದೆ " ದಯಮಾಡಿ ಈ Krishna Water Disputes Tribunal Award ಅನ್ನು ಮತ್ತೊಮ್ಮೆ review ಮಾಡಿ, ಏಕೆಂದರೆ ಈಗ ಆಂಧ್ರ ಪ್ರದೇಶ ವಿಭಜನೆ ಆಗಿದೆ" ಎಂದು ಅರ್ಜಿ ಹಾಕಿದವು. ಆದರೆ ಕೃಷ್ಣಾ ಜಲವಿವಾದ ನ್ಯಾಯಾಧೀಕರಣ ತನ್ನ ತೀರ್ಪಿನಲ್ಲಿ "Andhra Pradesh Reorganization Act, 2014 was not for all the riparian states but is meant only for Telangana and Andhra Pradesh. Hence, water allocation to the undivided Andhra Pradesh should be reallocated between Telangana and Andhra Pradesh". ಅಂದರೆ Andhra Pradesh Reorganization Act ನಲ್ಲಿ ನಾವ್ಯಾರೂ ಭಾಗಿಗಳಲ್ಲ, ಅದರಲ್ಲಿ ಕರ್ನಾಟಕ ಅಥವಾ ಮಹಾರಾಷ್ಟ್ರ ರಾಜ್ಯಗಳು ಭಾಗಿಯಾಗಿಲ್ಲ. ಆದ್ದರಿಂದ ಅವರು ಹಾಕಿದ ಅರ್ಜಿಗೆ ಅನ್ವಯವಾಗುವುದಿಲ್ಲ. ಆಂಧ್ರ ಪ್ರದೇಶಕ್ಕೆ allocation ಆಗಿರುವ ನೀರಿನಲ್ಲೇ share ಮಾಡಿಕೊಳ್ಳಬೇಕು ಎಂದು ಆದೇಶವನ್ನು ಕೊಟ್ಟಿದ್ದು, ಇದೊಂದು ಉತ್ತಮವಾದ ಆದೇಶವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಇನ್ನು ಕಾವೇರಿ ಜಲವಿವಾದದ ಹಿನ್ನಲೆಯಲ್ಲಿ ನ್ಯಾಯ ಮಂಡಳಿಯಿಂದ ಕರ್ನಾಟಕ ರಾಜ್ಯಕ್ಕೆ ಅನೇಕ ಅನ್ಯಾಯಗಳು ಆಗಿವೆ. ಅದರಲ್ಲಿ ಒಂದೆರಡು ಉಲ್ಲೇಖ ಮಾಡುತ್ತೇನೆ. ಕರ್ನಾಟಕದ ಕಾವೇರಿ, ಲಕ್ಷ್ಮಣ ತೀರ್ಥ, ಹೇಮಾವತಿ ಮತ್ತು ಕಬಿನಿ ಉಪ ಕೊಳ್ಳಗಳ ವ್ಯಾಪ್ತಿಯಲ್ಲಿ ಹಳೆ ಕಾಲದ ಸಣ್ಣ ನೀರಾವರಿ ಮತ್ತು ಅಣೆಕಟ್ಟುಗಳ ನೀರಿನಿಂದ ಎರಡು ಬೆಳೆ ಬೆಳೆಯುತ್ತಿದ್ದರೂ, ಕಾವೇರಿ ಜಲವಿವಾದ ನ್ಯಾಯ ಮಂಡಳಿ 5.26 ಲಕ್ಷ ನೀರಾವರಿ ಪ್ರದೇಶಕ್ಕೆ ಒಂದು ಬೆಳೆಗೆ ಮಾತ್ರ ನೀರಾವರಿ ಒದಗಿಸಲು ನಿಯಂತ್ರಿಸಿದೆ. ಅಲ್ಲಿ ಎರಡು ಬೆಳೆ ತೆಗೆಯುವಂತಿಲ್ಲ. ಕಾವೇರಿ, ಲಕ್ಷ್ಮಣ ತೀರ್ಥ, ಹೇಮಾವತಿ ಮತ್ತು ಕಬಿನಿ ಕೊಳ್ಳಗಳಲ್ಲಿ ಎರಡು ಬೆಳೆ ತೆಗೆಯುವಂತಿಲ್ಲ. ಈ ರೀತಿ ಆದೇಶ ಮಾಡಿದ ಮೇಲೆ ಕರ್ನಾಟಕದ ಕೆಲವು ಭಾಗಗಳಲ್ಲಿ ಸ್ಥಾಪಿಸಿರುವ ಏತ ನೀರಾವರಿ ಅಥವಾ ಯಾವ works ಅನ್ನು execute ಮಾಡುತ್ತಿದ್ದೇವೆ, ಅವುಗಳನ್ನು ಕಾವೇರಿ ಜಲವಿವಾದದಲ್ಲಿ ಗುರುತಿಸಿಲ್ಲ. Recognize ಮಾಡಿಲ್ಲ. 8 ಸಾವಿರ ಎಕರೆಯ ಕಾಮಸಂದ್ರ ನೀರಾವರಿ ಯೋಜನೆ, 6 ಸಾವಿರ ಎಕರೆಯ ಉಚ್ಚನಕೊಪ್ಪಲು ನೀರಾವರಿ ಯೋಜನೆ, 3.14 ಲಕ್ಷ ಎಕರೆಯ ಕಬಿನಿ ಏತ ನೀರಾವರಿ ಯೋಜನೆ, 31,500 ಎಕರೆಯ ಹಾರಂಗಿ ಏತ ನೀರಾವರಿ ಯೋಜನೆ, 7,900 ಎಕರೆಯ ಅರ್ಕಾವತಿ ಏತನೀರಾವರಿ ಯೋಜನೆ, 6,350 ಎಕರೆಯ ಇಗ್ಗಲೂರು ಏತ ನೀರಾವರಿ ಯೋಜನೆ ಹಾಗೂ 45 ಸಾವಿರ ಎಕರೆಯ ಹೇಮಾವತಿ ಏತ ನೀರಾವರಿ ಯೋಜನೆ ಸೇರಿದಂತೆ ಒಟ್ಟಾರೆ 4.20 ಲಕ್ಷ ಎಕರೆ ಏತ ನೀರಾವರಿ ಯೋಜನೆಯ ಪ್ರದೇಶಗಳನ್ನು ಹಜಭಿಠಂಟುದಜ ಮಾಡಿಲ್ಲ. ಅಂದರೆ ಮುಂದಿನ ದಿನಗಳಲ್ಲಿ ತುಂಬಾ ಕಷ್ಟದ ಪರಿಸ್ಥಿತಿಯಲ್ಲಿ ಈ ಯೋಜನೆಗಳನ್ನು ಅನುಷ್ಠಾನ ಮಾಡಬೇಕಾಗುತ್ತದೆ. ಕರ್ನಾಟಕಕ್ಕೆ ಕುಡಿಯುವ ನೀರು ಮತ್ತು ಕೈಗಾರಿಕಾ ಉದ್ದೇಶಕ್ಕೆ ಅತ್ಯಲ್ಪ ಪ್ರಮಾಣದ ನೀರನ್ನು ಅಂದರೆ 1.95 tmc ನೀರು ಎಂದು ನ್ಯಾಯಾಧೀಕರಣ ತೀರ್ಪು ನೀಡಿರುತ್ತದೆ. ರಾಷ್ಟ್ರೀಯ ಜಲ ನೀತಿಯಲ್ಲಿ ಕುಡಿಯುವ ನೀರಿಗೆ ಪ್ರಥಮ ಆದ್ಯತೆಯನ್ನು ನೀಡಬೇಕಾಗಿರುತ್ತದೆ. ಬೆಂಗಳೂರು ನಗರ ಜಾಗತಿಕವಾಗಿ ಸ್ಥಾನಮಾನವನ್ನು ಪಡೆದಿರುವ ನಗರವಾಗಿದೆ. ಬೆಂಗಳೂರು ನಗರಕ್ಕೆ ಯಾವುದೇ ಭೌಗೋಳಿಕ ಅಥವಾ ಪ್ರಾದೇಶಿಕ ಇತಿಮಿತಿ ಇರುವುದಿಲ್ಲ. ಕಾವೇರಿ ನ್ಯಾಯಾಧೀಕರಣ ಬೆಂಗಳೂರು ಮತ್ತು ಕೈಗಾರಿಕಾ ಉದ್ದೇಶಕ್ಕಾಗಿ 1.95 tmc ನೀರನ್ನು allocation ಮಾಡಿದೆ. ಇದು ಸಾಕಾಗುವುದಿಲ್ಲ ಎಂದು ಪ್ರಶ್ನೆ ಮಾಡಿ Supreme Court ಗೆ ಹೋದಾಗ, Cauvery Water Disputes Tribunal Award ಅನ್ನು ಪುನರ್ ವಿಮರ್ಶೆ ಮಾಡಿ, ಬೆಂಗಳೂರು ನಗರಕ್ಕೆ ಯಾವುದೇ ರೀತಿಯ ಪ್ರಾದೇಶಿಕ ಅಥವಾ ಭೌಗೋಳಿಕ ಪರಿಮಿತಿ ಇರಕೂಡದು ಎಂದು ಎತ್ತಿ ಹಿಡಿಯಿತಲ್ಲದೇ, ಬೆಂಗಳೂರು ನಗರಕ್ಕೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೆಚ್ಚುವರಿಯಾಗಿ 4.75 tmc ಕುಡಿಯುವ ನೀರಿನ ಸಲುವಾಗಿ ಕೊಟ್ಟಿತು. ಇಷ್ಟು ಕುಡಿಯುವ ನೀರು ಮುಂಬರುವ ದಿನಗಳಲ್ಲಿ ಬೆಂಗಳೂರು ನಗರಕ್ಕೆ ಸಾಕಾಗುವುದಿಲ್ಲ. ಇದನ್ನು 2011ರ ಜನಗಣತಿ ಆಧಾರವನ್ನು ತೆಗೆದುಕೊಂಡು ಮಾಡಿದ್ದು, ಮುಂಬರುವ ಮೂರ್‍ನಾಲ್ಕು ಜನಗಣತಿಯ ಆಧಾರವನ್ನು ಲೆಕ್ಕ ಹಾಕಿ, ಅದರಲ್ಲಿ ಬೆಂಗಳೂರಿನ ಅಭಿವೃದ್ಧಿ ಹಾಗೂ ಜನಸಂಖ್ಯೆ ಆಧಾರದಲ್ಲಿ ಮಾಡಬೇಕಾಗಿತ್ತು. 2050ನೇ ಇಸವಿಯ ಜನಗಣತಿ ಆಧಾರವನ್ನು ತೆಗೆದುಕೊಂಡರೆ ಬೆಂಗಳೂರು ನಗರಕ್ಕೆ 70 tmc ಕುಡಿಯುವ ನೀರಿನ ಅವಶ್ಯಕತೆ ಇದೆ. ಒಂದು ಮಟ್ಟಿಗೆ Supreme Court additional ಆಗಿ 4.75 tmc ನೀರನ್ನು ಕೊಟ್ಟಿರುವುದು ಸಮಾಧಾನಕರವಾಗಿದ್ದರೂ, ಮುಂಬರುವ ದಿನಗಳಲ್ಲಿ ಬಹುಶಃ ಬೆಂಗಳೂರು ನಗರಕ್ಕೆ ಕುಡಿಯುವ ನೀರು ಬೇಕಾದ ಸಂದರ್ಭದಲ್ಲಿ ತಮಿಳು ನಾಡು ರಾಜ್ಯ ಖ್ಯಾತೆ ಅಥವಾ ತಕರಾರನ್ನು ತೆಗೆದರೆ ಬಹಳ ಕಷ್ಟವಾಗಬಹುದು. ಇದರ ಬಗ್ಗೆ ಸರ್ಕಾರವು ಎಚ್ಚೆತ್ತುಕೊಂಡು ಬೇರೆ ಮಾರ್ಗೋಪಾಯಗಳನ್ನು ಕಂಡು ಹಿಡಿದುಕೊಂಡು ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಳ್ಳಬೇಕು.

ಇನ್ನು ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಮೇಕೆದಾಟು ಯೋಜನೆಯಿಂದ ಬೆಂಗಳೂರಿಗೆ ಕುಡಿಯುವ ನೀರಿನ ಪೂರೈಕೆ ಮತ್ತು ತಮಿಳುನಾಡಿಗೆ ಬಿಳಿಗುಂಡ್ಲು ಎಂಬಲ್ಲಿ ನೀರಿನ ಪಾಲು ಬಿಡುಗಡೆ ಮಾಡಲು ಸಮತೋಲನ ಜಲಾಶಯ, ಅಂದರೆ Balancing Reservoir ಆಗಿ ಕಾರ್ಯನಿರ್ವಹಿಸಲು ಹಾಗೂ ಪ್ರಾಸಂಗಿಕವಾಗಿ ಅಂದರೆ incidental ಆಗಿ Hydro Power Project ನಿರ್ಮಿಸಲು Feasibility Report ಅನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಕೇಂದ್ರ ಸರ್ಕಾರದ Central Water Commission ನಿಂದ permission ಸಹ ಸಿಕ್ಕಿದೆ. ಅದರಲ್ಲಿ ಒಂದು condition ಅನ್ನು ಹಾಕಿದ್ದಾರೆ. Feasibility Report ಗೆ ಅನುಮತಿ ಕೊಡಬೇಕೆಂದರೆ Central Water Commission ನಿಂದ ತಮಿಳುನಾಡಿಗೆ ನೀರು ಬಿಡುಗಡೆ ಮಾಡಲು ಯಾವುದೇ ಅಡಚಣೆ ಆಗಬಾರದು ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಇಲಾಖೆಗೆ ಸಂಬಂಧಪಟ್ಟಂತೆ ಇರುವ ಎಲ್ಲಾ ಪ್ರಾಧಿಕಾರಗಳು ಹಾಗೂ ಮಂತ್ರಾಲಯಗಳಿಂದ clearance ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಮೇಕೆದಾಟು ಯೋಜನೆ ಬಗ್ಗೆ ಮಾನ್ಯ ಶ್ರೀಕಂಠೇಗೌಡರು ಬಹಳ ಚೆನ್ನಾಗಿ ಹೇಳಿದ್ದಾರೆ. ಮೇಕೆದಾಟು ಯೋಜನೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏಕೆ ಕಟ್ಟಬೇಕು? ನಾವು ತಮಿಳುನಾಡಿಗೆ ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ನೀರು ಬಿಡುವುದಕ್ಕೆ ಶುರು ಮಾಡಿದೆವು. ಪ್ರತಿ ತಿಂಗಳು 2.5 tmc ನೀರು ಬಿಡಬೇಕು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಮ್ಮ ಸಂಕಷ್ಟ ಹೇಗಿದೆ ಎಂದರೆ ನದಿ ನಮ್ಮದು, ನೀರು ನಮ್ಮದು, ಆದರೂ ನಾವು ತಿಂಗಳು ತಿಂಗಳು ನೀರು ಬಿಡಬೇಕಾದ ಕತೆ ಹೇಳುತ್ತೇನೆ, ಕೇಳಿ. ಜೂನ್ ತಿಂಗಳು ಮಳೆ ಬರಲಿ ಅಥವಾ ಬರದಿದ್ದರೂ 10 tmc ನೀರು ಬಿಡಬೇಕು. ಜುಲೈ ತಿಂಗಳಲ್ಲಿ 34 tmc ನೀರು ಬಿಡಬೇಕು, ಆಗಸ್ಟ್ ತಿಂಗಳಲ್ಲಿ 50 tmc ನೀರು ಬಿಡಬೇಕು. Biligundlu Water Measuring Station ನಲ್ಲಿ ಅಳತೆ ಮಾಡಿಕೊಳ್ಳುತ್ತಾರೆ. ಕೇಂದ್ರ, ಕರ್ನಾಟಕ ಮತ್ತು ತಮಿಳು ನಾಡು ರಾಜ್ಯಗಳ ಅಧಿಕಾರಿಗಳು ಇರುತ್ತಾರೆ. ಸೆಪ್ಟಂಬರ್ 40 tmc, ಅಕ್ಟೋಬರ್ 20 tmc, ನವೆಂಬರ್ 15 tmc, ಡಿಸೆಂಬರ್ 8 tmc, ಜನವರಿ 3 tmc, ಫೆಬ್ರವರಿ 2.5 tmc. ಈಗ ನಮ್ಮಲ್ಲಿ ಕುಡಿಯುವುದಕ್ಕೆ ನೀರು ಇಲ್ಲ, ಕುಡಿಯುವುದಕ್ಕೆ ನೀರು ಇಲ್ಲದೇ ಬಿಳಿಗಂಡ್ಲುಗೆ ನೀರು ಹರಿಸಬೇಡಿ ಎಂದು KRS ನಲ್ಲಿ ತೀರ್ಮಾನವಾಗಿದೆ. ಈಗ ಮಾರ್ಚ್‌ನಲ್ಲಿ 2.5 tmc, ಏಪ್ರಿಲ್ 2.5 tmc ಮತ್ತು ಮೇ ತಿಂಗಳಲ್ಲಿ 2.5 tmc ನೀರನ್ನು ಕೊಡಬೇಕು. ಮಳೆ ಬರಲಿ ಅಥವಾ ಬಾರದಿದ್ದರೂ ಇಷ್ಟು ನೀರನ್ನು ಕೊಡಬೇಕು. Supreme Court ತೀರ್ಮಾನದಂತೆ, ಕರ್ನಾಟಕದ ಪ್ರಯತ್ನ ಹಾಗೂ ಮಾನ್ಯ ದೇವೇಗೌಡರ ಪ್ರಯತ್ನದಿಂದ 15 tmc ನೀರನ್ನು ಕಡಿಮೆ ಮಾಡಿದ್ದಾರೆ. 192 tmc ಬದಲು 177 tmc ಬಿಡಿ ಎಂದು ಹೇಳಿದ್ದಾರೆ. ಇಷ್ಟು ನೀರನ್ನು ಆಯಾ ತಿಂಗಳುಗಳಲ್ಲಿ ಹರಿಸಬೇಕಲ್ಲವೇ? ಎಲ್ಲಿಂದ ತಂದು ಹರಿಸುವುದು? ನೀರು ಬಿಟ್ಟರೆ ಕನ್ನಂಬಾಡಿ ಕಟ್ಟೆಯಲ್ಲಿ ಜನರು ನೀರಿಗೆ ಇಳಿಯುತ್ತಾರೆ. ಶ್ರೀರಂಗಪಟ್ಟಣದ ಹತ್ತಿರ ಇಳಿಯುತ್ತಾರೆ. ಕಬಿನಿಯಲ್ಲಿ ಚಾಮರಾಜ ನಗರದ ಜನರು ನದಿಗೆ ಬಿದ್ದು ಸತ್ತೇ ಹೋದರು. ತಮಿಳು ನಾಡಿಗೆ ಕೊಡಲು ನಾವು ನೀರನ್ನು ಇಲ್ಲಿ ಇಟ್ಟುಕೊಳ್ಳಬೇಕು. ಮಾನ್ಯ ಉಪ ಮುಖ್ಯಮಂತ್ರಿಯವರೇ, ಅದಕ್ಕಾಗಿ Balancing Reservoir ಎನ್ನುವುದು. 48 tmc ನೀರನ್ನು ಕುಡಿಯುವುದಕ್ಕೆ ಮತ್ತು ತಮಿಳು ನಾಡಿಗೆ ಕೊಡುವುದಕ್ಕಾಗಿ ಇಟ್ಟುಕೊಂಡಿದ್ದಾರೆ. ಸಮುದ್ರಕ್ಕೆ ಹೋಗುವ ನೀರನ್ನು ಇಟ್ಟುಕೊಳ್ಳುತ್ತೇವೆ ಎಂದರೆ ಅವರು ಏಕೆ ಅಡ್ಡಿ ಮಾಡುತ್ತಾರೆ? ಹೊಳೆ ನೀರಿಗೆ ದೊಣ್ಣೆ ನಾಯಕನ ಅಪ್ಪಣೆ ಏನು!, ನಮ್ಮವರು ಮುಂದುವರಿಯಬೇಕಷ್ಟೇ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಎ. ತಿಪ್ಪೇಸ್ವಾಮಿಃ–** ಮಾನ್ಯ ಸಭಾಪತಿಯವರೇ, ನಾವು ಯಾವಾಗ ಬೇಕಾದರೂ ನೀರು ಬಿಡಬಹುದು. ಜೂನ್, ಜುಲೈ ತಿಂಗಳಲ್ಲಿ ಕೊಡಗಿನಲ್ಲಿ ಸ್ವಲ್ಪ ಮಳೆ ಶುರುವಾದರೆ ನೀರು ಬಿಡಬಹುದು. ಆದರೆ ಮಾರ್ಚ್, ಏಪ್ರಿಲ್, ಮೇ ತಿಂಗಳಲ್ಲಿ ನೀರು ಬಿಡುವುದು ತುಂಬಾ ಕಷ್ಟ. ಅವರಿಗೆ ನೀರು ಕೊಡದಿದ್ದರೆ Cauvery Water Management Authority ಇದೆ. ಅವರು ಪ್ರತಿ ತಿಂಗಳು ನೋಡುತ್ತಾರೆ. ನಾವು ನೀರನ್ನು ಶೇಖರಣೆ ಮಾಡಿ ಇಡಬೇಕು. ನಾವು ಕನ್ನಂಬಾಡಿ ಕಟ್ಟೆಯಲ್ಲಿ ನೀರು ಶೇಖರಣೆ ಮಾಡಿ ಮೈಸೂರಿಗೆ ಕುಡಿಯುವ ನೀರನ್ನು ಕೊಡಬೇಕು. ಬೇರೆ ಬೇರೆ ಜಲಾಶಯಗಳು ಹಾಗೂ ಅಚ್ಚುಕಟ್ಟು ಪ್ರದೇಶಗಳಿಗೆ ನೀರು ಕೊಡಬೇಕು. ಇದು ಸಾಧ್ಯವಾಗುವುದಿಲ್ಲ, ಏಕೆಂದರೆ ರೈತರು ಬಿಡುವುದಿಲ್ಲ. ಅದಕ್ಕಾಗಿಯೇ Balancing Reservoir ಅನ್ನು ತುಂಬಾ ವೈಜ್ಞಾನಿಕವಾಗಿ ತಯಾರು ಮಾಡಿದ್ದು, ಇದರಲ್ಲಿ 8–10 ಸಾವಿರ forest land submerge ಆಗುತ್ತದೆ. ಇದಕ್ಕೆ ಬೇರೆ ರೀತಿ ಮಾರ್ಗೋಪಾಯ ಕಂಡು ಹಿಡಿದುಕೊಳ್ಳಬೇಕು. ಇದರ ಅವಶ್ಯಕತೆ ಇದೆ. ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಪ್ರತಿ ತಿಂಗಳು 2.5 tmc ನೀರನ್ನು ಬಿಡಲೇಬೇಕು. ಯಾವುದೇ ಕಾರಣಕ್ಕೂ ನಿಲ್ಲಿಸಲು ಸಾಧ್ಯವಿಲ್ಲ. ನಮ್ಮಲ್ಲಿ ಮೈಸೂರಿಗೆ ಕುಡಿಯುವುದಕ್ಕೆ ನೀರು ಇರಲಿ ಅಥವಾ ಇಲ್ಲದಿರಲಿ ಅಥವಾ ಬೇರೆ ಕಡೆ ಕುಡಿಯುವುದಕ್ಕೆ ನೀರು ಇರಲಿ, ಇಲ್ಲದಿರಲಿ ಅಥವ ಬೆಂಗಳೂರಿಗೆ ನೀರು ಇಲ್ಲದಿರಲಿ, ಅವರಿಗೆ ನೀರು ಬಿಡಲು ಕಟಿಬದ್ಧರಾಗಿದ್ದೇವೆ. ಈ Feasibility Report ಗೆ Central Water Commission ನಿಂದ clearance ತೆಗೆದುಕೊಂಡು, ಅಲ್ಲಿಂದ Ministry of Environment and Forests ಗೆ ಕಳುಹಿಸಲಾಗಿದೆ.

**(ಮುಂದು)**

**(334)/09.03.2021/4.10/ಹೆಚ್‌ವಿಃಎಕೆ**

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ಮುಂದು):–**

ಸ್ವಾಮ್ಯ ಸಭಾಪತಿಯವರೇ, ಅಲ್ಲಿಗೆ ಹೋದ ಕೂಡಲೇ ತಮಿಳುನಾಡು ಕ್ಯಾತೆ ತೆಗೆದಿತ್ತು ಮತ್ತು ‘ಇದನ್ನು ಕ್ಲಿಯರ್ ಮಾಡಬಾರದು’ ಎಂದು ಕೇಂದ್ರ ಸರ್ಕಾರಕ್ಕೆ ಅರ್ಜಿ ಕೊಟ್ಟಿತ್ತು. ‘ನೀರನ್ನು ನಮಗೆ ಬಿಡದೇ ಸತಾಯಿಸುವುದಕ್ಕೋಸ್ಕರವಾಗಿ ಅಥವಾ ನಮ್ಮ ಪಾಲಿನ ನೀರನ್ನು ಇವರು ತೆಗೆದುಕೊಳ್ಳುತ್ತಿದ್ದಾರೆ ಎನ್ನುವ ದೃಷ್ಟಿಯಿಂದ ಈ ರೀತಿ ಮಾಡುತ್ತಿದ್ದಾರೆ’ ಎಂದು ತಕರಾರು ತೆಗೆದಿತ್ತು. ಇದಲ್ಲದೇ ಸುಪ್ರೀಂ ಕೋರ್ಟ್‌ಗೆ ಹೋಗಿ ದಾವೆಯನ್ನು ಸಹ ಹೂಡಿದರು. ಸದರಿ ಪ್ರಕರಣ ಸುಪ್ರೀಂ ಕೋರ್ಟ್‌ನ ಮುಂದಿದೆ. ಈ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಯೋಜನೆಯ ಅನುಷ್ಠಾನದಲ್ಲಿ ಮುಂದುವರೆಯುವಂತಾಗಿದೆ. ಆದ್ದರಿಂದ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಎರಡೂ ಕಡೆಗಳಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರ ಅಧಿಕಾರದಲ್ಲಿರುವುದರಿಂದ ಕಾನೂನುಬದ್ಧವಾಗಿ ಯಾವುದಾದರೊಂದು ರೀತಿಯಲ್ಲಿ ರಾಜ್ಯ ಸರ್ಕಾರ ಪ್ರತಿಯೊಂದು ಹಂತದಲ್ಲಿ ಅಂದರೆ, ಕೇಂದ್ರ ಸರ್ಕಾರದ ಸಂಸ್ಥೆಗಳಿಂದ ಅಥವಾ ರಾಜ್ಯ ಸರ್ಕಾರದ ಸಂಸ್ಥೆಗಳಿಂದ ಯಾವ್ಯಾವ ರೀತಿಯಲ್ಲಿ ಕ್ಲಿಯರೆನ್ಸ್ ತೆಗೆದುಕೊಳ್ಳಬಹುದು, ಆ ಎಲ್ಲ ಕ್ಲಿಯರೆನ್ಸ್‌ಗಳನ್ನು ತೆಗೆದುಕೊಳ್ಳಬೇಕಾಗಿದೆ. ಈಗಾಗಲೇ ನಮ್ಮ ರಾಜ್ಯ ಸರ್ಕಾರ ಅರಣ್ಯ ಇಲಾಖೆ ಮತ್ತು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ಕ್ಲಿಯರೆನ್ಸ್ ತೆಗೆದುಕೊಂಡಿದೆ. ಈಗಾಗಲೇ ವಿಸ್ತೃತ ಯೋಜನಾ ವರದಿಯನ್ನು ಸಹ ತಯಾರು ಮಾಡಿ, ಕಳುಹಿಸಿದ್ದಾರೆ. ಆದ್ದರಿಂದ ಈ ಯೋಜನೆಯ ಅನುಷ್ಠಾನಕ್ಕೆ ಅಗತ್ಯ ಇರುವಂತಹ ಕ್ಲಿಯರೆನ್ಸ್‌ನ್ನು ಕೇಂದ್ರ ಸರ್ಕಾರದಿಂದ ತೆಗೆದುಕೊಳ್ಳಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಗೋದಾವರಿ, ಕಾವೇರಿ ನದಿಗಳ ಜೋಡಣೆಯ ಯೋಜನೆಯಲ್ಲಿ ತಮಿಳುನಾಡು ಆಡಿರುವಂತಹ ರಹಸ್ಯ, ವಂಚನೆ ಮತ್ತು ಮೋಸದ ಆಟ, covert and deceit play ಇದರಲ್ಲಿ ಸಾಕಷ್ಟು ಅಡಗಿದೆ. ಮಾನ್ಯ ಶ್ರೀಕಂಠೇಗೌಡರು ಹೇಳಿದಂತೆ ಇದನ್ನು ನಾವು ಅರ್ಥ ಮಾಡಿಕೊಳ್ಳದೇ ಹೋದರೆ, 1924ನೇ ಇಸವಿಯಲ್ಲಿ ಯಾವ ಪರಿಸ್ಥಿತಿ ಇತ್ತು ಆ ಪರಿಸ್ಥಿತಿಗೆ ಹಿಂದಿರುಗುವಂತಹ ಭಯವಿದೆ.

ಸನ್ಮಾನ್ಯ ಸಭಾಪತಿಯವರೇ, 'Inter-Linking of Rivers' ಎನ್ನುವುದು ಕೇಂದ್ರ ಸರ್ಕಾರದ ಮಹಾತ್ವಾಕಾಂಕ್ಷಿ ಯೋಜನೆಯಾಗಿದೆ. ಹಿಮಾಲಯ ಪ್ರಾಂತ್ಯದಲ್ಲಿರುವ ನದಿಗಳ ಜೋಡಣೆ ಇರಬಹುದು ಅಥವಾ peninsular ನಲ್ಲಿ ಇರುವಂತಹ ನದಿಗಳ ಜೋಡಣೆ ಕಾರ್ಯಕ್ರಮವಾಗಿರಬಹುದು ಇದರಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಿರುವುದು ಮಹಾನದಿ ಮತ್ತು ಗೋದಾವರಿ ನದಿಗಳ ಜೋಡಣೆ. ಇಲ್ಲಿ ಹೆಚ್ಚುವರಿಯಾಗಿ ಬರುವಂತಹ ನೀರನ್ನು ಗೋದಾವರಿ–ಕೃಷ್ಣಾ–ಕಾವೇರಿ–ಪೆನ್ನಾರ್‌ಗೆ ಡೈವರ್ಟ್ ಮಾಡುವಂತಹ ಮಹಾತ್ವಾಕಾಂಕ್ಷಿ ಯೋಜನೆಯಾಗಿದೆ. ಇದರಡಿಯಲ್ಲಿ ಈಗಾಗಲೇ ಕೇಂದ್ರ ಸರ್ಕಾರ ಒಂದು Feasibility Report ಅನ್ನು ತಯಾರು ಮಾಡಿ, ಸುಮಾರು 207 ಟಿ.ಎಂ.ಸಿ. ನೀರನ್ನು ಮಹಾನದಿಯಿಂದ ಗೋದಾವರಿ ನದಿಗೆ ಡೈವರ್ಟ್ ಮಾಡುವಂತಹ ಯೋಜನೆಯಿತ್ತು. ಈ ಮಹಾನದಿ–ಗೋದಾವರಿ ನದಿಗಳ ಜೋಡಣೆ ಯೋಜನೆಯನ್ನು ಹೊರತುಪಡಿಸಿ ಕೇಂದ್ರ ಸರ್ಕಾರ, ಗೋದಾವರಿ ಕೊಳ್ಳದ ಇಂದ್ರಾವತಿ ಜಲಾನಯನದಲ್ಲಿ ಛತ್ತೀಸ್‌ಘಡ್ ರಾಜ್ಯದಿಂದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಳಕೆಯಾಗದ ನೀರಿನ ಪ್ರಮಾಣ, unutilized water ಉಪಯೋಗಿಸಿಕೊಂಡು ಕಾವೇರಿ ಕೊಳ್ಳಕ್ಕೆ ನೀರು ಹರಿಸುವ ಯೋಜನೆಯ ಕಾರ್ಯಸಾಧು ವರದಿಯನ್ನು ದಿನಾಂಕಃ18.12.2017ರಲ್ಲಿ ತಯಾರಿಸಲಾಗಿದೆ. ಇದರ ಆಧಾರದ ಮೇಲೆ ವಿಸ್ತೃತ ಯೋಜನಾ ವರದಿಯನ್ನು ಸಹ ಕೇಂದ್ರ ಸರ್ಕಾರ ರಾಷ್ಟ್ರೀಯ ಜಲಾಭಿವೃದ್ಧಿ ಸಂಸ್ಥೆ ವತಿಯಿಂದ ಮಾರ್ಚ್, 2019ರಲ್ಲಿ ತಯಾರಿಸಿದೆ. ಈ ಯೋಜನೆಯಲ್ಲಿ ಮೂರು ಜೋಡಣೆಗಳು ಬರುತ್ತವೆ. ಅವುಗಳು ಯಾವುವೆಂದರೆ;

1. ಗೋದಾವರಿಯ ಇಂಚಮಪಲ್ಲಿಯಿಂದ ಕೃಷ್ಣಾ ನದಿಗೆ ಲಿಂಕ್ ಮಾಡುವುದು. ಇದು ನಾಗಾರ್ಜುನ ಸಾಗರಕ್ಕೆ ನೀರನ್ನು ಒದಗಿಸುತ್ತದೆ.
2. ಆಂಧ್ರಪ್ರದೇಶದಲ್ಲಿರುವ ಕೃಷ್ಣಾ ನದಿಗೆ ಕಟ್ಟಲಾಗಿರುವ ನಾಗಾರ್ಜುನ ಸಾಗರ ಅಣೆಕಟ್ಟೆ ಪೆನ್ನಾರ್ ನದಿಗೆ ಲಿಂಕ್ ಮಾಡುವುದು. ಅಂದರೆ, ತಮಿಳುನಾಡಿನಲ್ಲಿರುವ ಸೋಮಶೀಲ ನದಿಗೆ ಜೋಡಣೆ ಮಾಡುವುದು.
3. ಪೆನ್ನಾರ್ ಯೋಜನೆ ಅಂದರೆ, ತಮಿಳುನಾಡಿನಲ್ಲಿರುವ ಸೋಮಶೀಲ ನದಿಯಿಂದ ಕಾವೇರಿ ಗ್ರ್ಯಾಂಡ್ ಅಣೆಕಟ್ಟೆಗೆ ಲಿಂಕ್ ಮಾಡುವುದು.

ಈ ಯೋಜನೆ ವರದಿ ಪ್ರಕಾರ 247 ಟಿ.ಎಂ.ಸಿ. ನೀರನ್ನು ಲಿಫ್ಟ್ ಮುಖಾಂತರ ಹರಿಸಬಹುದಾಗಿದೆ. ವೈಗೈ-ಗುಂಡಾರು ನದಿಗಳು ಕಾವೇರಿ ಕಣಿವೆಯಲ್ಲಿ ಬರುವುದಿಲ್ಲ. ಇವು ಕಾವೇರಿ ಜಲಾನಯನ ಪ್ರದೇಶದಿಂದ ಹೊರಗೆ ಇರುವಂತಹವು. ಇವು ಕಾವೇರಿ ಜಲಾನಯನ ಪ್ರದೇಶದಲ್ಲಿ ಬರುವಂತಹ ನದಿಗಳ ಪ್ರಪಾತವಲ್ಲ. ಇತರೆ ಜಲಾನಯನ ಪ್ರದೇಶದಲ್ಲಿ ಇರುವ ಕಾವೇರಿ ಜಲವಿವಾದ ನ್ಯಾಯಾಧೀಕರಣದ ಅಂತಿಮ ತೀರ್ಪಿನ ಅನ್ವಯ ಒಂದು ಜಲಾನಯನದಿಂದ ಮತ್ತೊಂದು ಜಲಾನಯನಕ್ಕೆ ನೀರನ್ನು ವರ್ಗಾವಣೆ ಮಾಡುವಂತಿಲ್ಲ. ಕಾವೇರಿ ನದಿಯಲ್ಲಿರುವ ನೀರನ್ನು ತೆಗೆದುಕೊಂಡು ಹೋಗಿ ವೈಗೈ ಅಥವಾ ಗುಂಡಾರು ನದಿಗಳಿಗೆ ವರ್ಗಾವಣೆ ಮಾಡುವಂತಿಲ್ಲ. ಆ ರೀತಿ ಮಾಡಿರುವುದು ನ್ಯಾಯಾಧೀಕರಣದ ತೀರ್ಪಿನ ವಿರುದ್ಧವಾಗಿದೆ. ಗೋದಾವರಿ-ಕೃಷ್ಣಾ-ಕಾವೇರಿ-ಪೆನ್ನಾರ್-ವೈಗೈ-ಗುಂಡಾರು ನದಿ ಜೋಡಣೆಗಳ ಯೋಜನೆ ಕಾರ್ಯ ಪೂರ್ಣಗೊಂಡು ಈ ಯೋಜನೆಯಿಂದ ಲಭ್ಯವಾಗುವ 247 ಟಿ.ಎಂ.ಸಿ. ನೀರಿನಲ್ಲಿ ಆಂಧ್ರಪ್ರದೇಶಕ್ಕೆ 111 ಟಿ.ಎಂ.ಸಿ. ಮತ್ತು ತಮಿಳುನಾಡಿಗೆ 136 ಟಿ.ಎಂ.ಸಿ. ಲಭ್ಯವಾಗುತ್ತದೆ. ಕಾವೇರಿ ಜಲಾನಯನಕ್ಕೆ ಬೇರೆ ನದಿಗಳ ಜೋಡಣೆಯಿಂದ ಬರುವಂತಹ ನೀರಿನಲ್ಲಿ ನಮ್ಮ ರಾಜ್ಯಕ್ಕೂ ಕೂಡ ಪಾಲು ಕೊಡಬೇಕಾಗುತ್ತದೆ. ನಮಗೆ ಸುಮಾರು 40 ರಿಂದ 45 ಟಿ.ಎಂ.ಸಿ. ನೀರು ಲಭ್ಯವಾಗಬೇಕಾಗುತ್ತದೆ. ಅಂದರೆ, ಕಾವೇರಿ ಜಲ ವಿವಾದದಡಿಯಲ್ಲಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹಂಚಿಕೆಯಾಗಿರುವ ನೀರಿನಲ್ಲಿ ತಮಿಳುನಾಡಿಗೆ ಕಡಿಮೆ ಹಂಚಿಕೆ ಮಾಡಿ ನಮಗೆ ಹೆಚ್ಚು ಹಂಚಿಕೆ ಮಾಡಬೇಕಾಗುತ್ತದೆ. ವೈಗೈ–ಗುಂಡಾರ್ ನದಿಗಳ ಜೋಡಣೆಯಿಂದ ಅವರಿಗೆ 136 ಟಿ.ಎಂ.ಸಿ. ನೀರು ಲಭ್ಯವಾದರೆ, ನಮಗೆ ಅಷ್ಟೇ ಪ್ರಮಾಣದಲ್ಲಿ ನೀರನ್ನು ಕೊಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಮತ್ತೊಮ್ಮೆ ಕಾವೇರಿ ಜಲ ವಿವಾದದ ದಾವೆಯನ್ನು ರೀ–ಓಪನ್ ಮಾಡಿ ಇದರ ಬಗ್ಗೆಯೂ ತಕರಾರು ಹೂಡಬೇಕಾಗುತ್ತದೆ. ಎಲ್ಲಿಯವರೆವಿಗೂ ನಾವು ಈ ರೀತಿಯಾದ ತಕರಾರುಗಳನ್ನು ತೆಗೆಯುವುದಿಲ್ಲವೋ ಅಲ್ಲಿಯವರೆಗೆ ಅವರು ತಕರಾರು ಮಾಡುತ್ತಾರೆ, ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡುತ್ತಾರೆ ಮತ್ತು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತಾರೆ. ನಾವು ಸಹ ಇದೇ ಮಾರ್ಗಗಳನ್ನು ಅನುಸರಿಸಬೇಕಾಗಿದೆ. ಇಲ್ಲದಿದ್ದರೆ, ನಮ್ಮ ರಾಜ್ಯಕ್ಕೆ ನ್ಯಾಯ ದೊರೆಯುವುದಿಲ್ಲ. ಸರ್ಕಾರ ಸುಮ್ಮನೆ ಕುಳಿತರೆ ಏನೂ ಆಗುವುದಿಲ್ಲ. ಸರ್ಕಾರ ಈ ನಿಟ್ಟಿನಲ್ಲಿ ಉದಾಸೀನತೆಯನ್ನು ತಾಳಿದರೆ ರಾಜ್ಯಕ್ಕೆ ಮತ್ತೊಮ್ಮೆ ಎಂದಿಗೂ ಸರಿಪಡಿಸಲಾಗದಂತಹ ಅನ್ಯಾಯವಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಕೂಡಲೇ ಸರ್ವಪಕ್ಷಗಳ ಮತ್ತು ರಾಜ್ಯದ ಎಲ್ಲ ಸಂಸದರ, ನೀರಾವರಿ ತಜ್ಞರ, ಹಿರಿಯ ವಕೀಲರ ಸಭೆಯನ್ನು ಕರೆಯಬೇಕಾಗುತ್ತದೆ. ಅವರೊಡನೆ ಈ ವಿಚಾರವಾಗಿ ಚರ್ಚೆ ಮಾಡಬೇಕಾಗಿದೆ. ಈ ಸಭೆಗೆ ಮಾಜಿ ಪ್ರಧಾನಿಗಳು ಹಾಗೂ ಹಾಲಿ ರಾಜ್ಯಸಭಾ ಸದಸ್ಯರು ಮತ್ತು ಈ ರಾಜ್ಯದ ನೀರಾವರಿ ಯೋಜನೆಗಳ ರೂವಾರಿ ಶ್ರೀ ಹೆಚ್.ಡಿ.ದೇವೇಗೌಡರನ್ನು ಆಹ್ವಾನಿಸಬೇಕು. ಅವರಿಂದಲೂ ಸಲಹೆಗಳನ್ನು ಪಡೆದುಕೊಳ್ಳಬೇಕಾಗಿದೆ. ಏಕೆಂದರೆ, ಅವರು ನೀರಾವರಿ ಮಂತ್ರಿಗಳಾಗಿ, ಮುಖ್ಯಮಂತ್ರಿಗಳಾಗಿ, ಪ್ರಧಾನಮಂತ್ರಿಗಳಾಗಿ Accelerated Irrigation Benefit Programme ನಲ್ಲಿ ಸುಮಾರು 20 ರಿಂದ 30 ಸಾವಿರ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ವೆಚ್ಚ ಮಾಡಿದ್ದಾರೆ. ಆದ್ದರಿಂದ ಮಾನ್ಯ ಹೆಚ್.ಡಿ.ದೇವೇಗೌಡರ ಸಲಹೆಯನ್ನು ತೆಗೆದುಕೊಳ್ಳಬೇಕಾಗಿದೆ. ರಾಜಕೀಯವಾಗಿ ಒತ್ತಡ ತರುವುದು ಸರಿಯಾದ ಕ್ರಮವೆಂದು ಅವರು ಈಗಾಗಲೇ ಹೇಳಿದ್ದಾರೆ. ಮತ್ತೊಂದು ಕ್ರಮವೆಂದರೆ, ಸುಪ್ರೀಂ ಕೋರ್ಟ್‌ನಲ್ಲಿ ಕೂಡಲೇ ವ್ಯಾಜ್ಯ ಹೂಡಬೇಕಾಗಿದೆ.

ಇದಲ್ಲದೇ, ಮಾನ್ಯ ಮುಖ್ಯಮಂತ್ರಿಗಳು ಸರ್ವಪಕ್ಷಗಳ ನಿಯೋಗವನ್ನು ದೆಹಲಿಗೆ ಕೊಂಡೊಯ್ದು ನಮ್ಮ ಎಲ್ಲಾ ಸಂಸದರನ್ನು ಒಳಗೊಂಡಂತೆ ಮಾನ್ಯ ಪ್ರಧಾನ ಮಂತ್ರಿಗಳನ್ನು ಮತ್ತು ಕೇಂದ್ರದ ಜಲಸಂಪನ್ಮೂಲ ಸಚಿವರನ್ನು ಮತ್ತು ಇತರೆ ಹಿರಿಯ ಸಚಿವರನ್ನು ಭೇಟಿ ಮಾಡಿ ರಾಜ್ಯಕ್ಕೆ ಉಂಟಾಗುವ ಅನ್ಯಾಯದ ಬಗ್ಗೆ ಮತ್ತು ಈ ವಿಷಯದಲ್ಲಿ ರಾಜ್ಯದ ನ್ಯಾಯಯುತವಾದ ನಿಲುವಿನ ಬಗ್ಗೆ ಮನವರಿಕೆ ಮಾಡಿಕೊಡಬೇಕು. ಒತ್ತಡ ಹಾಕಿ, ಅನ್ಯಾಯ ಆಗುತ್ತಿದೆ ಎನ್ನುವುದನ್ನು ಹೇಳಬೇಕಾಗಿದೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಮತ್ತೊಂದು ಆಘಾತಕಾರಿ ಸಂಗತಿಯೆಂದರೆ, ಸುಪ್ರೀಂ ಕೋರ್ಟ್ ಸಹ ನದಿ ಜೋಡಣೆ ಮಾಡಬೇಕೆಂದು ಹೇಳಿದೆ ಮತ್ತು ಇದು ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯೂ ಆಗಿದೆ. ಈ ವಿಚಾರ 2008ನೇ ಇಸವಿಯಿಂದ ನಡೆದುಕೊಂಡು ಬಂದಿದೆ ಇದರಲ್ಲಿ ಯಾವುದೇ ರೀತಿಯ ರಾಜಕೀಯ ಮಿಶ್ರಣವಿಲ್ಲ. ಈಗಿನ ಪ್ರಧಾನ ಮಂತ್ರಿಗಳು ಸಹ ಇದಕ್ಕೆ ಮಹತ್ವವನ್ನು ನೀಡಿದ್ದಾರೆ. ಕೇಂದ್ರ ಸರ್ಕಾರದವರು DPR (Detailed Project Report) ಮಾಡಿ ನದಿಗಳ ಜೋಡಣೆ ಮಾಡುವುದಕ್ಕೂ ಮೊದಲೇ ತಮಿಳುನಾಡಿನವರು ತಾವೇ ಮಾಡುತ್ತಿದ್ದಾರೆ. ಗೋದಾವರಿಯಿಂದ ಕೃಷ್ಣಾ, ಕೃಷ್ಣಾದಿಂದ ಕಾವೇರಿ ನದಿಗೆ ನೀರು ಬರುವುದು ತಡವಾಗಬಹುದು ಆ ನೀರು ಬರುವವರೆಗೂ ನಾವು ಕಾವೇರಿ ನದಿಯ ಹೆಚ್ಚುವರಿ ನೀರನ್ನು ಮಾತ್ರ ತೆಗೆದುಕೊಳ್ಳುತ್ತೇವೆಂದು ಅವರು ಹೇಳುತ್ತಿದ್ದಾರೆ. ಇದು rightನ್ನು establish ಮಾಡುವಂತಹ ಒಂದು ಹುನ್ನಾರವಾಗಿದೆ. ಮೋಸ, ವಂಚನೆಯ ಪ್ರಕರಣವಾಗಿದೆ. ಇಂತಹ ವಿವಾದಿತ ಜೋಡಣೆಗಳ ವಿಚಾರವಾಗಿ ಕೇಂದ್ರ ಸರ್ಕಾರದಲ್ಲಿ 'ರಾಷ್ಟ್ರೀಯ ಯೋಜನೆ' ಎಂದು ಘೋಷಣೆ ಮಾಡುವುದಕ್ಕೆ ಒಂದು ಯೋಜನೆ ಇದೆ. ರಾಷ್ಟ್ರೀಯ ಯೋಜನೆ ಎಂದು ಘೋಷಣೆಯಾದರೆ, ಯೋಜನೆಯ ಅಂದಾಜು ಮೊತ್ತದ ಶೇಕಡಾ 90ರಷ್ಟು ಭಾಗವನ್ನು ಕೇಂದ್ರ ಸರ್ಕಾರ ಅನುದಾನದ ರೂಪದಲ್ಲಿ ನೀಡುತ್ತದೆ. ಗೋದಾವರಿ ನದಿಯ ನೀರನ್ನು ಕೃಷ್ಣಾ ನದಿಗೆ ಡೈವರ್ಟ್ ಮಾಡಿ, ಅದರಿಂದ ಬರುವಂತಹ ನೀರನ್ನು ಬಳಸಿಕೊಳ್ಳಲು 'ಪೋಲಾವರಂ' ಯೋಜನೆಯನ್ನು ಮಾಡಿ, 'ರಾಷ್ಟ್ರೀಯ ಯೋಜನೆ' ಎಂದು ಘೋಷಣೆ ಮಾಡಿದ್ದಾರೆ. ಇದಕ್ಕೆ ತಗಲುವ ವೆಚ್ಚದಲ್ಲಿ ನೂರಕ್ಕೆ ತೊಂಭತ್ತರಷ್ಟು ಭಾಗವನ್ನು ಕೇಂದ್ರ ಸರ್ಕಾರ ಕೊಡುತ್ತಿದೆ.

**(ಮುಂದು)**

(335) 9.3.2021 4.20 ಪಿಕೆ:ಆರ್‌ಎನ್

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ಮುಂದು):-**

ಅವರು ಇದನ್ನು ಅದೇರೀತಿ ಮಾಡುವುದಕ್ಕೆ ಹೊರಟ್ಟಿದ್ದಾರೆ. ತಾವು ರಾಜಕೀಯ ಒತ್ತಡ ಹಾಕಬೇಕು, ಸುಪ್ರೀಂ ಕೋರ್ಟ್‌ಗೆ ಹೋಗಬೇಕು. ಯಾವುದೇ ಕಾರಣಕ್ಕೂ ಇದು ರಾಷ್ಟೀಯ ಯೋಜನೆ ಎಂದು ಮಾನ್ಯತೆ ಸಿಗುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಈ ವಿವಾದಿತ ಯೋಜನೆಗೆ ನಾವು ತಕರಾರು ಹಾಕಬೇಕು. ಕೇಂದ್ರ ಸಚಿವರಾಗಲಿ, ಪ್ರಧಾನ ಮಂತ್ರಿಗಳಾಗಲಿ ಈ ಯೋಜನೆಯ ಅನುಷ್ಠಾನದ ಯಾವುದೇ ಕಾರ್ಯಕ್ರಮಗಳಲ್ಲಿ ಭಾಗವಹಿಸಬಾರದು. ಅವರು ಭಾಗವಹಿಸಿದರೆ ಪರೋಕ್ಷವಾಗಿ ಆ ಯೋಜನೆಗೆ ಬೆಂಬಲ ಕೊಟ್ಟ ಹಾಗೆ ಆಗುತ್ತದೆ. ಇದರಿಂದ ರಾಜ್ಯದ ಹಿತಕ್ಕೆ ಧಕ್ಕೆ ಆಗುತ್ತದೆ. ಪ್ರಧಾನ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂತ್ರಿಗಳು ನಮಗೂ ಪ್ರಧಾನ ಮಂತ್ರಿಗಳಾಗಿದ್ದಾರೆ. ಆದರೆ ಅವರು ನಿಮ್ಮ ಪಕ್ಷದ ಪ್ರಧಾನ ಮಂತ್ರಿಗಳಾಗಿರುವುದರಿಂದ ನೀವು ಅವರಿಗೆ ಹತ್ತಿರದಲ್ಲಿರುತ್ತೀರಿ. ಈ ರೀತಿಯೂ ನೀವು ದಯಮಾಡಿ ಯೋಚನೆ ಮಾಡಿ. ಇದು ನನ್ನ ಅನಿಸಿಕೆಯಾಗಿದೆ. ದಯಮಾಡಿ ಅವರ ಮೇಲೆ ಒತ್ತಡ ಹಾಕಿ. ಇದು ನಮ್ಮ ರಾಜ್ಯದ ಹಿತಾಸಕ್ತಿಗೆ ಒಳ್ಳೆಯದಲ್ಲ. ಈ ವಿವಾದ ಬಗೆಹರಿಯಬೇಕು. ಅವರು, ನಾವು ಕಾವೇರಿ ನೀರನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಲಿ. ಹಾಗೇನಾದರೂ ಅವರು ಬಯಸಿದರೆ ನಮಗೂ ಕೂಡ ಮಹಾನದಿ ಗೋದಾವರಿ, ಕೃಷ್ಣಾ-ಕಾವೇರಿ ಲಿಂಕ್‌ನಲ್ಲಿ ನಮ್ಮ ಪಾಲಿಗೆ ಬರುವ ಹೆಚ್ಚು ನೀರನ್ನು ನಮಗೆ ಅಲಾಟ್ ಮಾಡಲಿ. ನಂತರ ಅವರು ಆ ಯೋಜನೆಯನ್ನು ಅನುಷ್ಠಾನ ಮಾಡಲಿ.

ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಸಮಯೋಚಿತ ಮಾರ್ಗಗಳನ್ನು ಅನುಸರಿಸದಿದ್ದರೆ ತಮಿಳುನಾಡು ಅಣೆಕಟ್ಟನ್ನು ಕಟ್ಟಿ ಕಾಲುವೆ ನಿರ್ಮಾಣ ಮಾಡುತ್ತದೆ. ನೀರಾವರಿ ಅಚ್ಚುಕಟ್ಟು ಪ್ರದೇಶವನ್ನು ಅಭಿವೃದ್ಧಿ ಮಾಡುತ್ತದೆ. ಅದು ಯಾವರೀತಿಯ ಸನ್ನಿವೇಶ ಸೃಷ್ಟಿ ಮಾಡುತ್ತದೆ ಎಂದರೆ, ನಾವೆಲ್ಲವನ್ನೂ ಅಭಿವೃದ್ಧಿ ಮಾಡಿದ್ದೇವೆ, ಒಂದು ವೇಳೆ ಗೋದಾವರಿ-ಕೃಷ್ಣಾ-ಕಾವೇರಿ ಲಿಂಕ್ ಫೇಲ್ ಆಗಿದೆ, ನೀರು ಬರುತ್ತಿಲ್ಲ; ನೀರು ಬಿಡುತ್ತಿಲ್ಲ ಎಂದು ಹೇಳಿದರೆ ಆಗ, ಅವರ ಅಚ್ಚುಕಟ್ಟಿಗೆ ಕಾವೇರಿಯಿಂದಲೇ ನೀರು ಕೊಡಿ ಎನ್ನುವ ವಾದವನ್ನು ಅಥವಾ ಒಂದು ಸಂದರ್ಭವನ್ನು ಸೃಷ್ಟಿ ಮಾಡುತ್ತಾರೆ. ಮಾನ್ಯ ಶ್ರೀಕಂಠೇಗೌಡರು ಹೇಳಿದ ಹಾಗೆ ಮತ್ತೆ ನಾವು 1974ರ ಸನ್ನಿವೇಶಕ್ಕೆ ವಾಪಸ್ಸು ಹೋಗುತ್ತೇವೆ. 1892ರಲ್ಲಿ ಪ್ರಾರಂಭವಾಗಿ 1974ರಲ್ಲಿ ಅಗ್ರಿಮೆಂಟ್ ಆಗಿತ್ತು. 50 ವರ್ಷ ಕಳೆದರೂ ನಾವೇನೂ ಮಾಡುವುದಕ್ಕಾಗುವುದಿಲ್ಲ. Suffering ಅಚ್ಚುಕಟ್ಟು ಏನಿದೆ, ಅದಕ್ಕೆ stabilize ಆಗುವಷ್ಟು ನೀರು ಕೊಡಬೇಕಾಗುತ್ತದೆ. Upstream and riparian ಇರುವಂತಹ ರಾಜ್ಯಗಳು ಯಾವುದೇ ಯೋಜನೆಗಳನ್ನು ತೆಗೆದುಕೊಳ್ಳುವ ಹಾಗೆ ಇರುವುದಿಲ್ಲ. ಆದ್ದರಿಂದ ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಎಚ್ಚರಿಕೆಯ ಹೆಜ್ಜೆಯನ್ನು ಇಡಬೇಕಿದೆ. ಅದು ರಾಜಕೀಯ ಹೆಜ್ಜೆ ಆಗಬಹುದು ಅಥವಾ ನ್ಯಾಯಾಂಗದ ಮುಖಾಂತರ ಬಗೆಹರಿಸುವ ಹೆಜ್ಜೆಯೂ ಆಗಬಹುದು. ಯಾವುದಾದರೂ ಒಂದು ರೀತಿಯಲ್ಲಿ ಇದಕ್ಕೆ ಪರಿಹಾರ ಮಾರ್ಗ ಕಂಡುಹಿಡಿಯಬೇಕು. ನಿಮ್ಮೊಟ್ಟಿಗೆ ನಾವೆಲ್ಲರೂ ಇದ್ದೇವೆ, ಯಾವುದೇ ರೀತಿಯ ರಾಜಕೀಯ ಮಿಶ್ರಣ ಇರುವುದಿಲ್ಲ. ನಮಗೆ ಕೃಷ್ಣಾ ಕೂಡ ಬೇಕು, ಕಾವೇರಿ ಕೂಡ ಬೇಕು. ಜಲ-ನೆಲ-ನುಡಿ ವಿಷಯಗಳಲ್ಲಿ ಅನ್ಯಾಯವಾಗಬಾರದು. ಈ ದಿಸೆಯಲ್ಲಿ ಸರಿಯಾದ ಕ್ರಮ ಕೈಗೊಳ್ಳಿ ಎಂದು ಹೇಳುತ್ತಾ ಅವಕಾಶಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ನಿಯಮ 68ರ ಮೇರೆಗೆ ಸಾರ್ವಜನಿಕ ವಿಷಯದ ಮಹತ್ವದ ವಿಚಾರವನ್ನೇನು ತಂದಿದ್ದಾರೋ ಅದು ಬಹಳ ಗಂಭೀರವಾದುದು. ನಾವು ಈ ಕುರಿತು ಬಹಳ ಗಂಭೀರವಾಗಿ ಮಾತನಾಡುತ್ತಿದ್ದೇವೆ. ನಾವು ಇಲ್ಲಿ ಕಾಟಾಚಾರಕ್ಕೆ ಮಾತನಾಡಲು ಬರುವುದಿಲ್ಲ. ಆದರೆ ಸದನದಲ್ಲಿ ಮಾನ್ಯ ಜಲಸಂಪನ್ಮೂಲ ಸಚಿವರಿಲ್ಲ, ಮಾನ್ಯ ಸಭಾನಾಯಕರೂ ಇಲ್ಲ. ಅಧಿಕಾರಿಗಳು ಇದ್ದಾರೋ ಇಲ್ಲವೋ ಗೊತ್ತಿಲ್ಲ.

**ಶ್ರೀ ಗೋವಿಂದ್ ಎಂ.ಕಾರಜೋಳ(ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಇಲಾಖೆ):–** ಮಾನ್ಯ ಸಭಾಪತಿಯವರೇ, ನಾನು ಇವತ್ತು ಕೆಳಮನೆಯಲ್ಲಿ ಇರಬೇಕಾಗಿದ್ದರೂ ಕೂಡ ಇಲ್ಲಿ ಈ ಚರ್ಚೆ ಬರುತ್ತಿದೆ ಎನ್ನುವ ದೃಷ್ಟಿಯಿಂದ 3.00 ಗಂಟೆಯಿಂದ ಇಲ್ಲೇ ಕುಳಿತುಕೊಂಡಿದ್ದೇನೆ. ಮಾನ್ಯ ಸದಸ್ಯರು ದಯವಿಟ್ಟು ಮಾತನಾಡಬೇಕು. ಇದು ಸಾರ್ವಜನಿಕ ಮಹತ್ವದ ವಿಷಯವಾಗಿದೆ, ಇದರಲ್ಲಿ ರಾಜಕೀಯ ಬೆರಸಬಾರದು, ಮಧ್ಯದಲ್ಲಿ ಎದ್ದು ನಿಂತು ಮಾತನಾಡಬಾರದು ಎಂದು ನಾನು ಶಾಂತ ರೀತಿಯಿಂದ ಕುಳಿತು ಕೇಳುತ್ತಿದ್ದೇನೆ. ತಾವು ರಾಜ್ಯದ ಹಿತದೃಷ್ಟಿಯಿಂದ ಚೆನ್ನಾಗಿ ಮಾತನಾಡುತ್ತಿದ್ದೀರಿ; ದಯವಿಟ್ಟು ಮಾತನಾಡಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಯಾರ ಮೇಲೋ ಆಪಾದನೆ ಮಾಡಬೇಕು ಎನ್ನುವ ದೃಷ್ಟಿಯಿಂದ ನಾನು ಮಾತನಾಡುತ್ತಿಲ್ಲ. ಇದು ಕರ್ನಾಟಕ ರಾಜ್ಯದ ಒಂದು ಜ್ವಲಂತ ಸಮಸ್ಯೆ. ಅದೂ ಅಲ್ಲದೇ, ದಕ್ಷಿಣ ಕರ್ನಾಟಕದ ಭಾಗದ ಜೀವನದಿ ಆಗಿರುವ ಕಾವೇರಿಯ ವಿಚಾರದಲ್ಲಿ ಮಾತನಾಡುತ್ತಿದ್ದೇವೆ. ಉತ್ತರ ಕರ್ನಾಟಕದಲ್ಲಿ ಬೇಕಾದಷ್ಟು ನೀರಾವರಿ ಯೋಜನೆಗಳು . .

**ಶ್ರೀ ಗೋವಿಂದ ಎಂ.ಕಾರಜೋಳ:–** ಮತ್ತೆ ಉತ್ತರ ಕರ್ನಾಟಕ–ದಕ್ಷಿಣ ಕರ್ನಾಟಕ ಎಂಬ ವಿಚಾರವನ್ನು ತರಬೇಡಿ. ನಾನು ಶಾಂತ ರೀತಿಯಿಂದ ತಮ್ಮ ವಿಚಾರಗಳನ್ನು ಕೇಳುತ್ತಿದ್ದೇನೆ. ಒಬ್ಬ ಮನುಷ್ಯನಿಗೆ ಎರಡು ಕಣ್ಣುಗಳಿರುತ್ತವೆ; ಯಾವ ಕಣ್ಣು ಮಹತ್ವದ್ದು ಎಂದು ಕೇಳಿದರೆ ಅದಕ್ಕೆ ಉತ್ತರ ಕೊಡುವುದಕ್ಕೆ ಆಗುತ್ತದೆಯೇ? ಉತ್ತರ–ದಕ್ಷಿಣ ಎನ್ನುವುದನ್ನು ತರಬೇಡಿ.

**ಶ್ರೀ ಎಂ.ನಾರಾಯಣಸ್ವಾಮಿ:–** ನಾನು ಏಕೆ ಹೇಳುತ್ತಿದ್ದೇನೆ ಎಂದು ತಾವು ಅರ್ಥ ಮಾಡಿಕೊಳ್ಳಿ.

**ಉಪ ಸಭಾಪತಿಯವರು:–** ನಾವು ಮಾತನಾಡಬೇಕಾದರೆ ಕೆಲವು ವಿಚಾರಗಳನ್ನು ತಿಳಿದುಕೊಂಡೇ ಮಾತನಾಡಬೇಕಾಗುತ್ತದೆ. ಸದನದಲ್ಲಿ ಇಂತಹ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾದರೆ ನಿರ್ದಿಷ್ಟವಾದ

ಮಂತ್ರಿಗಳೇ ಇರಬೇಕು ಎಂದು ಹೇಳುವ ಹಾಗಿಲ್ಲ; ಒತ್ತಾಯಿಸಬಾರದು. ಯಾರು ಮಂತ್ರಿಗಳು ಇರುತ್ತಾರೋ ಅವರು ಅದಕ್ಕೆ ಉತ್ತರ ಕೊಡುತ್ತಾರೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):-**ಮಾನ್ಯ ಸಭಾಪತಿಯವರೇ, ಮಾನ್ಯ ಉಪಮುಖ್ಯಂತ್ರಿಗಳು ಎಲ್ಲವನ್ನೂ ನೋಟ್ ಮಾಡಿಕೊಳ್ಳುತ್ತಿದ್ದಾರೆ. Don't make sarcastic statements. ಮಾನ್ಯ ತಿಪ್ಪೇಸ್ವಾಮಿಯವರು ಮತ್ತು ಮಾನ್ಯ ಶ್ರೀಕಂಠೇಗೌಡರು ಮಾತನಾಡುತ್ತಿದ್ದಾಗ ಪ್ರತಿಯೊಂದನ್ನು ನೋಟ್ ಮಾಡಿಕೊಂಡು ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತಿದ್ದಾರೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ರಾಜ್ಯದ ಹಿತದೃಷ್ಟಿಯಿಂದ ಚರ್ಚೆ ಬಹಳ ಚೆನ್ನಾಗಿ ನಡೆಯುತ್ತಿದೆ. ನಾವು ಶಾಂತ ರೀತಿಯಿಂದ ಕೇಳುತ್ತಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳು, ಜಲಸಂಪನ್ಮೂಲ ಇಲಾಖೆಗೆ ಸಂಬಂಧಪಟ್ಟಂತೆ ಎರಡೂ ಸದನಗಳಲ್ಲೂ ನೋಡಿಕೊಳ್ಳಬೇಕು ಎಂದು ನನಗೆ ಹೇಳಿದ್ದಾರೆ. ಇವತ್ತು ಬೆಳಿಗ್ಗೆ ಪ್ರಶ್ನೋತ್ತರದಲ್ಲೂ ನಾನು ಭಾಗವಹಿಸಿದ್ದೆ. ಇಲ್ಲೂ ಕೂಡ ನಾನೇ ಬಂದಿದ್ದೇನೆ. ಸಚಿವ ಸಂಪುಟ ಒಂದೇ ಆಗಿರುತ್ತದೆ. ಯಾರು ನೋಡಿದರೂ ಒಂದೇ ಮತ್ತು ಯಾರು ಮಾಡಿದರೂ ಒಂದೇ ಆಗಿರುತ್ತದೆ. ಆ ನಿಟ್ಟಿನಲ್ಲಿ ನಾನು ತಯಾರಾಗಿ ಬಂದು ಕುಳಿತಿದ್ದೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಯಾವುದನ್ನೂ ಬೇರ್ಪಡಿಸಿ ಮಾತನಾಡುವುದಕ್ಕೆ ಹೋಗಲಿಲ್ಲ. ಸುಪ್ರೀಂ ಕೋರ್ಟ್‌ನ ಆದೇಶದ ಹಿನ್ನೆಲೆಯಲ್ಲಿ ಕಾವೇರಿ ನಿರ್ವಹಣಾ ಮಂಡಳಿಯನ್ನೇನು ಮಾಡಿದರೋ, ಅದು ಆದಮೇಲೆ ಯಾವುದೇ ಸರ್ಕಾರಗಳು ಕಾವೇರಿ ನದಿ ವ್ಯಾಪ್ತಿಗೆ ಸಂಬಂಧಪಟ್ಟಂತೆ ಅಭಿವೃದ್ಧಿ ಮಾಡುವುದಕ್ಕೆ ತಮ್ಮ ಬಜೆಟ್‌ನಲ್ಲಿ ಹಣವನ್ನು ಇಡಲಿಲ್ಲ, ಬಿಡುಗಡೆ ಮಾಡಲಿಲ್ಲ.

**ಶ್ರೀ ಗೋವಿಂದ ಎಂ.ಕಾರಜೋಳ:-** ನೀವು ರಾಜಕೀಯವನ್ನು ಕೆಣಕುವುದಕ್ಕೆ ಹೋಗುತ್ತಿದ್ದೀರಿ. ಕಾವೇರಿಗೆ ಹೆಚ್ಚು ಹಣವನ್ನು ಏಕೆ ಬಿಡುಗಡೆ ಮಾಡಲಿಲ್ಲ ಎಂದರೆ, ಕಾವೇರಿಯ ಪಾತ್ರದಲ್ಲಿ ನಮಗೆ ಅಲೋಕೇಷನ್ ಆದಂತಹ ನೀರನ್ನು ಉಪಯೋಗ ಮಾಡಲಿಕ್ಕೆ ಪ್ರಾಜೆಕ್ಟ್‌ಗಳು ಮುಗಿದು ಹೋಗಿದ್ದವು. ಹೀಗಾಗಿ ಕೃಷ್ಣಾದಲ್ಲಿ 1964ರಲ್ಲಿ ಅಡಿಗಲ್ಲು ಹಾಕಿದ್ದರೂ, 50 ವರ್ಷ ದಾಟಿದರೂ ಕೂಡ ಅಲ್ಲಿ ಮೊದಲ ಹಂತ ಪ್ರಾಜೆಕ್ಟ್ ಮುಗಿದಿಲ್ಲ. 2ನೇ ಮತ್ತು 3ನೇ ಹಂತದ ಕಾಮಗಾರಿಗಳು ಆಗಬೇಕಾಗಿದೆ. 3ನೇ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಂತದ ಕಾಮಗಾರಿಗಳಿಗೆ ನಾವು ಇನ್ನೂ ಕೈ ಹಚ್ಚಿಲ್ಲ. ಅದು ಈಗ ಶುರು ಆಗಬೇಕಿದೆ. ಹಾಗಾಗಿ ಮಾನ್ಯ ಸದಸ್ಯರು ಎರಡನ್ನೂ ಮಿಕ್ಸ್‌ಅಪ್ ಮಾಡುವುದಕ್ಕೆ ಹೋಗಬಾರದು. ಪ್ರಸ್ತುತ ವಿಷಯಕ್ಕೆ ಸೀಮಿತವಾಗಿ ಮಾತನಾಡಿ. ತಮಿಳುನಾಡಿನವರು ಏನು ಅಕ್ರಮವಾಗಿ ನೀರನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಹುನ್ನಾರ ಮಾಡುತ್ತಿದ್ದಾರೋ ಅದರ ಬಗ್ಗೆ ಚರ್ಚೆ ಮಾಡಿ. ನಂತರ ನಾನು ಉತ್ತರ ಕೊಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಆ ವಿಷಯಕ್ಕೆ ಬರುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಎದ್ದು ನಿಂತಿದ್ದಾರೆ. ನಂತರ ತಾವು ಉತ್ತರ ಕೊಡಿ. ಮಧ್ಯದಲ್ಲಿ ಬೇರೆಯವರು ಮಾತನಾಡಿದರೆ flow of thought ತಪ್ಪಿ ಹೋಗುತ್ತದೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಪ್ರತಿಪಕ್ಷ ನಾಯಕರೇ ತಾವೇ ಆಗಿನಿಂದ ನೋಡುತ್ತಿದ್ದೀರಿ; ನಾನು ಒಂದು ಶಬ್ದವನ್ನೂ ಮಾತನಾಡಲಿಲ್ಲ. ಮಾನ್ಯ ನಾರಾಯಣಸ್ವಾಮಿಯವರು ಮಾತನಾಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಏಕೆ ಇಂತಹ ವಿಷಯಗಳು ಬರುತ್ತವೆ?

**ಶ್ರೀ ಮರಿತಿಬ್ಬೇಗೌಡ:–** ಸದನದಲ್ಲಿ ಇರಬೇಕಾದ ಅಧಿಕಾರಿಗಳು ಇದ್ದಾರೆಯೇ?

**ಶ್ರೀ ಗೋವಿಂದ್ ಎಂ. ಕಾರಜೋಳ:–**ಮಾನ್ಯ ಶ್ರೀಕಂಠೇಗೌಡರು ಮತ್ತು ಮಾನ್ಯ ತಿಪ್ಪೇಸ್ವಾಮಿಯವರು ಅದ್ಭುತವಾಗಿ ಮಾತನಾಡಿದರು, ಅದನ್ನು ಕೇಳುತ್ತಿದ್ದೆ. ಆದರೆ ಈಗ ಎಲ್ಲೋ ಒಂದು ಕಡೆ ಮೈಪರಚುವ ಕೆಲಸ ಆಗುತ್ತಿದೆ; ಅದು ಆಗಬಾರದು.

**ಶ್ರೀ ಮರಿತಿಬ್ಬೇಗೌಡ:–** ಅದು ಮೈಪರಚಿಕೊಳ್ಳುವುದು ಹೇಗಾಗಸುತ್ತದೆ? ಮಲಗಿರುವವರನ್ನು ಎಬ್ಬಿಸುವ ಕೆಲಸ ಮಾಡಬೇಕೋ ಬೇಡವೋ? ನೀವು ಪೂರ್ಣವಾಗಿ ಮಲಗಿಬಿಟ್ಟಿದ್ದೀರಿ. ಈ ಕಡೆಯಿಂದ ಎಬ್ಬಿಸುವ ಕೆಲಸ ಮಾಡುತ್ತಿದ್ದಾರೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಸರ್ಕಾರ ಮಲಗಿಲ್ಲ. ಇಲ್ಲಿ ಮತ್ತೆ ರಾಜಕೀಯ ಬೆರೆಸಬೇಕಾಗುತ್ತದೆ. 2010 ರಿಂದ ಇದು ನಡೆದುಕೊಂಡು ಬಂದಿದೆ. ಹಾಗಾದರೆ ಆಡಳಿತ ಮಾಡುತ್ತಿದ್ದ ನೀವುಗಳು ಇಷ್ಟು ದಿವಸ ಮಲಗಿದ್ದಿರಾ? ಹಿಂದಿನ ಆರೂವರೆ ವರ್ಷಗಳಿಂದ ನೀವು ಮಲಗಿದ್ದೀರಿ

**ಶ್ರೀ ಮರಿತಿಬ್ಬೇಗೌಡ:–** ನಾವು ಮಲಗಿಲ್ಲ. ಹೋರಾಟ ಮಾಡಿಕೊಂಡು ಬಂದಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(336) 09–03–2021 4.30 ಡಿಎಸ್–ಆರ್‌ಎನ್**

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ತಾವು ಮಾತನಾಡಿ. ಯಾರು ಮಧ್ಯೆ ಎದ್ದು ನಿಂತು ಮಾತನಾಡಬೇಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಗೋವಿಂದ ಕಾರಜೋಳರವರೇ, ಯಾರು ಏನು ಮಾತನಾಡಿದರೂ ತಾವು ಎಲ್ಲಾ ಸಲಹೆಗಳನ್ನು ತೆಗೆದುಕೊಳ್ಳಬೇಕು. ದಯಮಾಡಿ ತಾವು sensitive ಆಗಬೇಡಿ. ಸರ್ಕಾರ sensitive ಆಗುವುದು ಬೇಡ. ಈ ವಿಷಯದಲ್ಲಿ ಯಾರು ಏನು ಬೇಕಾದರೂ ಮಾತನಾಡಲಿ. ಹಂಚಿಕೆ ಮಾಡಿರುವುದರಲ್ಲಿ ಕೊರತೆಯಾಗಿದೆ. ಅದನ್ನು ಅವರು ಹೇಳಲಿ. ತಾವು ದಯಮಾಡಿ ಜಟ್ಟಣುತಜ ಆಗಬೇಡಿ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಕಾವೇರಿ ನದಿ ನಮ್ಮ ಜೀವನದಿ. ಈ ನದಿಯಿಂದ ಬರತಕ್ಕಂಥ ನೀರು ವ್ಯವಸಾಯಕ್ಕಾಗಿ ಉಪಯೋಗಿಸುತ್ತೇವೆ. ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದಕ್ಕೆ ಉಪಯೋಗಿಸುತ್ತೇವೆ. ಬೆಂಗಳೂರು ಮಹಾನಗರಕ್ಕೆ ಇದೊಂದು ದಾರಿಯನ್ನು ಬಿಟ್ಟರೆ ಬೆಂಗಳೂರು ನಗರಕ್ಕೆ ಕುಡಿಯುವ ನೀರಿಗೆ ಇನ್ನು ಬೇರೆ ಯಾವುದೇ ಸೋರ್ಸ್ ಇಲ್ಲ. ಕಾವೇರಿ ನದಿಯಿಂದ ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಯಾವ ರೀತಿಯಾಗುತ್ತಿದೆ, ಮತ್ತು ಯಾವ ರೀತಿ ಕಡಿಮೆಯಾಗಿ ಬೇಸಿಗೆ ಕಾಲದಲ್ಲಿ ಎಷ್ಟು ಪರಿತಪಿಸಬೇಕು ಎನ್ನುವ ಅರಿವು ಕೂಡ ನಮಗಿದೆ. ಆದರೆ ಇವತ್ತು ಕಾವೇರಿ ನಿರ್ವಹಣಾ ಮಂಡಳಿಯನ್ನು ಸುಪ್ರೀಂ ಕೋರ್ಟ್ ನೇಮಕ ಮಾಡಿದ ಮೇಲೆ ಅದರಲ್ಲಿ ಎಲ್ಲಾ ರಾಜ್ಯದ ಅಧಿಕಾರಿಗಳು ಕೂಡ ಇದ್ದಾರೆ. ಇಂತಿಷ್ಟು ನೀರು ಎಂದು ಪ್ರತಿಯೊಂದು ರಾಜ್ಯಕ್ಕೂ ಹಂಚಿಕೆ ಮಾಡಿದ್ದಾರೆ. ಅದರ ಪ್ರಕಾರವಾಗಿ ಹಂಚಿಕೆಯನ್ನು ಮೀರಿ ಇವತ್ತು ತಮಿಳುನಾಡು ಸರ್ಕಾರ ಒಂದು ಹೊಸ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಅದು ಸುಮಾರು ಹದಿನಾಲ್ಕುವರೆ ಸಾವಿರ ಕೋಟಿ ರೂಪಾಯಿಗಳ ಯೋಜನೆಯಾಗಿದೆ. ವೆಲ್ಲಾರ್, ವೈಗೈ ಮತ್ತು ಗುಂಡಾರ್ ಎನ್ನತಕ್ಕಂಥ ಮೂರು ನದಿಗಳನ್ನು ಜೋಡಣೆ ಮಾಡತಕ್ಕಂಥ ಯೋಜನೆಯಾಗಿದ್ದು, ಸುಮಾರು 118.45 ಕಿ.ಮೀ ನಷ್ಟು ಬೃಹತ್ ಕಾಲುವೆಯನ್ನು ಮಾಡಿ ತಮಿಳುನಾಡಿನ ಸುಮಾರು 342 ಕೆರೆಗಳಿಗೆ ನೀರನ್ನು ಭರ್ತಿ ಮಾಡುವ ಮುಖಾಂತರ ಅಂತರ್ಜಲವನ್ನು ಹೆಚ್ಚಿಸುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯದಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂಲಕ ಸುಮಾರು 42,170 ಎಕರೆ ಜಮೀನಿಗೆ ನೀರಾವರಿ ಮಾಡುವುದಕ್ಕೆ ಹೊರಟಿದ್ದಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ ಒಂದು ಎಕರೆ ಹೆಚ್ಚುವರಿ ಜಮೀನಿಗೆ ನೀರಾವರಿ ಮಾಡುವುದಕ್ಕೆ ಕೇಂದ್ರ ಸರ್ಕಾರ ಇರಬಹುದು, ಕಾವೇರಿ ನಿರ್ವಹಣಾ ಮಂಡಳಿ ಇರಬಹುದು, ಯಾರು ಸಹ ಅನುಮತಿ ಕೊಡಲಿಲ್ಲ. ಆದರೆ ಯಾವ ಧೈರ್ಯದಿಂದ ತಮಿಳುನಾಡು ಸರ್ಕಾರ ನಿರ್ವಹಣಾ ಮಂಡಳಿ ಆದ ನಂತರ.... ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾನೂನು ಎಲ್ಲರಿಗೂ ಒಂದೇ. ಒಕ್ಕೂಟದ ವ್ಯವಸ್ಥೆಯಲ್ಲಿ ಈ ರಾಷ್ಟ್ರದ ಕಾನೂನು ಪ್ರತಿಯೊಂದು ರಾಜ್ಯಕ್ಕೂ ಅನ್ವಯಿಸುತ್ತದೆ. ಕರ್ನಾಟಕ ರಾಜ್ಯಕ್ಕೆ ಒಂದು ತರಹ, ತಮಿಳುನಾಡಿಗೆ ಒಂದು ತರಹ, ಪುದುಚೇರಿಗೆ ಒಂದು ತರಹ, ಕೇರಳಕ್ಕೆ ಒಂದು ತರಹ ನೀರನ್ನು ಹಂಚಿಕೆ ಮಾಡುತ್ತಿದ್ದಾರೆ. ಆ ನಿರ್ವಹಣಾ ಮಂಡಳಿಯಿಂದ ಎಷ್ಟೆಷ್ಟು ನೀರನ್ನು ಉಪಯೋಗ ಮಾಡಬೇಕೆಂದು ತೀರ್ಮಾನ ಆಗಿದೆಯೋ ಆ ನೀರನ್ನು ಉಪಯೋಗಿಸತಕ್ಕಂಥದ್ದು ನಮ್ಮ ಕರ್ತವ್ಯ. ಹೆಚ್ಚುವರಿ ನೀರನ್ನು ಯಾರು ಉಪಯೋಗಿಸಬೇಕೆಂದು ಇವತ್ತಿನವರೆವಿಗೂ ಎಲ್ಲೂ ಪ್ರಸ್ತಾವನೆ ಆಗಲಿಲ್ಲ. ಆದರೆ, ಇವತ್ತು ಸುಮಾರು 45 ಟಿ.ಎಂ.ಸಿ. ಹೆಚ್ಚುವರಿ ನೀರನ್ನು ಯಾರದೂ ಅನುಮತಿ ಇಲ್ಲದೆ, ಯಾರನ್ನು ಕೇಳದೆ ತಮಿಳುನಾಡು ಸರ್ಕಾರ ಏಕಾಏಕಿ ಯೋಜನೆಯನ್ನು ಘೋಷಣೆ ಮಾಡುವುದರ ಜೊತೆಗೆ ಶಂಕುಸ್ಥಾಪನೆ ಕೂಡ ಮಾಡಿದ್ದಾರೆ; ಕೆಲಸ ಪ್ರಾರಂಭವಾಗಿದೆ. ಕೇಂದ್ರ ಸರ್ಕಾರವೂ ಕೂಡ ಇದಕ್ಕೆ ಉತ್ತೇಜನ ಕೊಟ್ಟಿರುವಂಥದ್ದು. ಆ ಯೋಜನೆಗೆ ಹಣಕಾಸಿನ ಸಹಾಯವನ್ನು ಮಾಡುತ್ತೇವೆ ಎನ್ನತಕ್ಕಂಥದ್ದು. ಈ ರೀತಿಯಾದಾಗ ಇದು ನಮಗೆ ಮಲತಾಯಿ ಧೋರಣೆಯಲ್ಲವೇ?

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಏನು ಉತ್ತೇಜನ ಕೊಟ್ಟಿದೆ, ಹಣಕಾಸಿನ ನೆರವು ಯಾರು ಕೊಡುತ್ತೇವೆಂದು ಹೇಳಿದ್ದಾರೆ, ಸುಮ್ಮನೆ ವಿನಾಕಾರಣ ಅವರು ತಚಿರಣಜ ಆಗಿ ಮಾತನಾಡಬಾರದು.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಪತ್ರಿಕೆಯನ್ನು ನೋಡಬಾರದು.

**ಶ್ರೀ ಎಂ.ನಾರಾಯಣಸ್ವಾಮಿ:-** ಇನ್ನು ಯಾವುದನ್ನು ನೋಡಬೇಕು?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಪತ್ರಿಕೆಯನ್ನು ನೋಡದೆ ಇನ್ನು ಏನು ನೋಡಿ ಮಾತನಾಡಬೇಕು ಎಂಬುದನ್ನು ಹೇಳಿ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ.ಕಾರಜೋಳ:–** ಕೇಂದ್ರ ಸರ್ಕಾರ ಕೊಟ್ಟಿರುವುದರ ಬಗ್ಗೆ ನಿಮ್ಮ ಹತ್ತಿರ ಪುರಾವೆ ಇದ್ದರೆ ಹೇಳಿ? ಕೇಂದ್ರ ಸರ್ಕಾರ ಹಣಕಾಸು ನೆರವು ಕೊಟ್ಟಿದ್ದರೆ ಅಥವಾ ನೀರನ್ನು ಹಂಚಿಕೆ ಮಾಡಿದ್ದರೆ, ನಿಮ್ಮ ಪರವಾಗಿ ನಾವು ಇರುತ್ತೇವೆ ಎಂದು ಹೇಳಿದ್ದರೆ ಪುರಾವೆಗಳನ್ನು ಕೊಡಿ. Baseless allegation ಮಾಡಬೇಡಿ. ಸುಮ್ಮನೆ ಆರೋಪ ಮಾಡುವುದರಲ್ಲಿ ಅರ್ಥವಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಪ್ರಜಾವಾಣಿ ಪತ್ರಿಕೆ ಜವಾಬ್ದಾರಿ ಇರುವಂತಹ ಪತ್ರಿಕೆಯಾಗಿದೆ. ಅದರದ್ದೇ ಆದ ಇತಿಹಾಸವಿದೆ.

**ಶ್ರೀ ಗೋವಿಂದ ಎಂ.ಕಾರಜೋಳ:–** ಪತ್ರಿಕೆಯ ಪೇಪರ್ ಕಟಿಂಗ್ ತೆಗೆದುಕೊಂಡು ನೀವು ಆದೇಶ ಕೇಳುತ್ತೀರಾ?

**ಶ್ರೀ ಎಸ್.ಆರ್.ಪಾಟೀಲ್:–** ನಮಗೆ ಲಭ್ಯವಿರುವಂತಹ ಮಾಹಿತಿ ಪ್ರಕಾರ ನಾವು ಹೇಳುತ್ತಿದ್ದೇವೆ. ಸರಿಯಿಲ್ಲ ಎಂದರೆ ನಂತರ ತಮ್ಮ ಉತ್ತರದಲ್ಲಿ ಹೇಳಿ.

**ಶ್ರೀ ಗೋವಿಂದ ಎಂ.ಕಾರಜೋಳ:–** ನಿಮ್ಮ ಹತ್ತಿರ ಮಾಹಿತಿ ಇದ್ದರೆ ಸದನದ ಟೇಬಲ್ ಮೇಲೆ ಇಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಅದರ ಬಗ್ಗೆ ಮಾತನಾಡುವುದೇ ಬೇಡ ಎಂದು ಹೇಳಿಬಿಡಿ, ನಾವು ಮಾತನಾಡುವುದಿಲ್ಲ. ತಮಿಳುನಾಡಿನವರು ಏನು ಬೇಕಾದರೂ ಮಾಡಿಕೊಳ್ಳಲಿ ಎಂದು ಹೇಳಿಬಿಡಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಮಾನ್ಯ ಶ್ರೀಕಂಠೇಗೌಡರು, ಮಾನ್ಯ ತಿಪ್ಪೇಸ್ವಾಮಿಯವರು ಮಾತನಾಡಿದರು, ಅವರು ಯಾರು ಈ ರೀತಿ ಮಾತನಾಡಲಿಲ್ಲ. ಜಲ, ನೆಲ, ಭಾಷೆ ಬಂದಾಗ ನಾವೆಲ್ಲರೂ ಒಂದು ಎಂದು ಹೇಳಿದರು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ.ಕಾರಜೋಳ:–** ಯಾವ ಸರ್ಕಾರ ಕೂಡ ಅಳತೆ ಮಾಡುವುದಕ್ಕೆ ಸಾಧ್ಯವಿಲ್ಲ. ಯಾವ ಸರ್ಕಾರವೂ ಬಿಟ್ಟಿಲ್ಲ. ನಮ್ಮ ರಾಜ್ಯದ ಹಿತ ಕಾಯುವುದಕ್ಕೆ ಸ್ವಾತಂತ್ರ್ಯ ಬಂದ ನಂತರ ಎಲ್ಲಾ ಸರ್ಕಾರಗಳು ಪ್ರಯತ್ನ ಮಾಡಿವೆ.

**ಉಪ ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ತಾವು ಮಾತನಾಡಿ. ನಂತರ ಉಪ ಮುಖ್ಯಮಂತ್ರಿಗಳು ಅದಕ್ಕೆ ಉತ್ತರ ಕೊಡುತ್ತಾರೆ.

**ಶ್ರೀ ಎಸ್.ರವಿ:–** ತಮಿಳುನಾಡಿನವರು ಮಾಡುತ್ತಿರುವಂತಹ ಕಾಮಗಾರಿಗಳ ಬಗ್ಗೆ ಕೇಂದ್ರ ಸರ್ಕಾರ ಏಕೆ ಇಲ್ಲಿಯವರೆಗೆ ಆಕ್ಷೇಪ ವ್ಯಕ್ತಪಡಿಸಿಲ್ಲ. ಏಕೆ ಜಾಣ ಮೌನವನ್ನು ವಹಿಸಿದೆ? ಅದಕ್ಕೆ ಉತ್ತರ ಹೇಳಲಿ. ಕೇಂದ್ರ ಸರ್ಕಾರ ಪಕ್ಷಪಾತ ಧೋರಣೆ ಮಾಡುತ್ತಿದೆ. ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಅನ್ಯಾಯ ಮಾಡುತ್ತಿದೆ. ತಕ್ಷಣ ಕೇಂದ್ರ ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕು.

**ಉಪ ಸಭಾಪತಿಯವರು:–** ಮಾನ್ಯ ರವಿಯವರೇ, ಇದು ಎಲ್ಲರಿಗೂ ಸಂಬಂಧಪಟ್ಟಿರುವ ವಿಚಾರ. ಒಳ್ಳೆಯ ಚರ್ಚೆಯಾಗುತ್ತಿದೆ. ಇಲ್ಲಿ ಯಾರದೋ ಮೇಲೆ ಆರೋಪ ಪ್ರತ್ಯಾರೋಪಗಳನ್ನು ಮಾಡಿದರೆ ಇವತ್ತು ನಡೆಯುತ್ತಿರುವ ಚರ್ಚೆ ದಿಕ್ಕು ತಪ್ಪುತ್ತದೆ. ಅವಕಾಶ ಸಿಕ್ಕಂಥವರು ಮಾತನಾಡುತ್ತಾರೆ. ಮಧ್ಯೆದಲ್ಲಿ ನೀವು ಏಕೆ ಮಾತನಾಡುತ್ತೀರಿ? ಇದೇ ರೀತಿ ಮಧ್ಯೆ–ಮಧ್ಯೆ ಎದ್ದು ನಿಂತು ಮಾತನಾಡಿದರೆ ಚರ್ಚೆ ದಿಕ್ಕು ತಪ್ಪುತ್ತದೆ.

**ಶ್ರೀ ಎಸ್.ರವಿ:–** ಉಪ ಮುಖ್ಯಮಂತ್ರಿಗಳು ಮಧ್ಯೆ–ಮಧ್ಯೆ ಮಾತನಾಡಿದಾಗ ನಾವು ಮಾತನಾಡಬೇಕಾಗುತ್ತದೆ.

**ಉಪ ಸಭಾಪತಿಯವರು:–** ಈಗ ಅವರು ಮಾತನಾಡಲಿ, ನಾನು ಕೇಳುತ್ತೇನೆ ನಂತರ ಉತ್ತರ ಕೊಡುತ್ತೇನೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ. ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ನಾರಾಯಣಸ್ವಾಮಿಯವರೇ, ತಾವು ಮಾತನಾಡಿ.

(ಗೊಂದಲ)

**ಉಪ ಸಭಾಪತಿಯವರು:–** ಇಂತಹ ಗಂಭೀರವಾದ ವಿಚಾರ ಇರಬೇಕಾದರೆ ಒಬ್ಬರಿಗೊಬ್ಬರು provoking ಮಾಡುವಂತಹ ಕೆಲಸಗಳನ್ನು ಮಾಡಬೇಡಿ. ಏಕೆಂದರೆ, ಈ ರೀತಿ ಮಾಡಿದರೆ ಚರ್ಚೆಯ ಹಳಿ ತಪ್ಪುತ್ತದೆ. ಇದನ್ನು ಮಾಡುತ್ತಿರುವ ಉದ್ದೇಶವೇ ಈಡೇರುವುದಿಲ್ಲ. ದಯವಿಟ್ಟು provoking

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಡಿ. ನೀವು ಪ್ರತಿ ಸಂದರ್ಭದಲ್ಲಿ ಮಾತನಾಡಬೇಕಾದರೆ ಇನ್ನೊಬ್ಬರಿಗೆ ಚುಚ್ಚುವಂತಹ ಕೆಲಸ ಮಾಡಬೇಡಿ. ಏನು ಸಮಸ್ಯೆ ಇದೆ ಅದನ್ನು ಉಲ್ಲೇಖ ಮಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, provoking ಎಂದು ಏಕೆ ಹೇಳುತ್ತೀರಿ? ನಾವು ವಿಚಾರಗಳನ್ನು ಹೇಳಲೇ ಬೇಕಾಗುತ್ತದೆ. ಸತ್ಯಾಂಶ ಇದ್ದರೆ ಅವರು ಹೇಳಲಿ.

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ಸದನದಲ್ಲಿ ಹಾಜರಿರುವ ಯಾವುದೇ ಮಂತ್ರಿಗಳಾಗಲಿ ವಿಚಾರಗಳ ಮೇಲೆ ಮಾತನಾಡಬಹುದು ಎಂದು ನಾನು ಮೊದಲೇ ಓದಿ ಹೇಳಿದ್ದೇನೆ. ಯಾವುದೇ ಮಂತ್ರಿಗಳು ಸದನದಲ್ಲಿ ಇದ್ದಂತಹ ಸಂದರ್ಭದಲ್ಲಿ ಮಾತನಾಡಬಹುದು. ಈ ಬಗ್ಗೆ ಕಾಯ್ದೆಯಲ್ಲಿ ಹೇಳಲಾಗಿದೆ, ಕಾನೂನು ಸಹ ಹೇಳುತ್ತದೆ. ಮಂತ್ರಿಗಳು ಮಾತನಾಡುವುದಕ್ಕೆಲ್ಲ ವಿರೋಧಿಸಿ ಮಾತನಾಡುವುದು ಸರಿಯಲ್ಲ. ಮಾತಿಗೆ ಮಾತು ಬೇಡ, ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಲಿ ಎಂದಷ್ಟೆ ನಾನು ಆ ಸಂದರ್ಭಕ್ಕೆ ಮಾತ್ರ provoking ಎಂದು ಹೇಳಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾವು ಸರ್ಕಾರದ ಲೋಪ-ದೋಷಗಳನ್ನು ಹೇಳಬೇಕಾಗುತ್ತದೆ. ಈಗ ಅವರು ಏನು ಹೇಳುತ್ತಾರೋ ಹೇಳಲಿ, ಆಮೇಲೆ ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಕೊಡಲಿ.

**ಉಪ ಸಭಾಪತಿಯವರು:-** ನಾನು ಹೇಳಿದ್ದು ಈ ವಿಚಾರಕ್ಕಲ್ಲ, ಮೊದಲು ಮಾತನಾಡಿರುವ ವಿಚಾರಕ್ಕೆ ಹೇಳಿದ್ದೇನೆ. ಮಾನ್ಯ ನಾರಾಯಣಸ್ವಾಮಿಯವರೇ, ತಾವು ಮುಂದುವರೆಸಿ. ನೀವು ಇದೇ ರೀತಿ ಮಾಡಿದರೆ ನಿಮ್ಮ ಸಮಯ ವ್ಯರ್ಥವಾಗುತ್ತದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತಿರುವಂತಹ ವಿಷಯ ನನ್ನ ಸ್ವಂತ ಮನಸ್ಸಿನಿಂದ ಮಾತನಾಡುತ್ತಿರುವಂಥದ್ದಲ್ಲ. ನಾನು evidence ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ಸರ್ಕಾರದ ಪರವಾಗಿ ಮಾತನಾಡಿಬಿಟ್ಟರೆ 'ಭೇಷ್!' ಎಂದು ಹೇಳುತ್ತಾರೆ. ಆದರೆ ನಾವು ಸತ್ಯ ಮಾತನಾಡಿದರೆ ಅವರಿಗೆ ಆಗುವುದಿಲ್ಲ. ಮಾನ್ಯ ಶ್ರೀಕಂಠೇಗೌಡರು ತಯಾರಿಸಿರುವ ನೋಟ್ಸ್‌ನಲ್ಲಿ ಅದು ಇತ್ತು. ಅವರು ಏಕೆ ಹೇಳಲಿಲ್ಲವೋ ಗೊತ್ತಿಲ್ಲ. ಅದನ್ನು ಓದುತ್ತೇನೆ, ಕೇಳಿಸಿಕೊಳ್ಳಿ. "ತಮಿಳುನಾಡು ಸರ್ಕಾರ ತೆಗೆದುಕೊಂಡಿರುವ ದಿಟ್ಟ ನಿರ್ಧಾರಕ್ಕೆ ಬಿಜೆಪಿಯ ಕೇಂದ್ರ ಸರ್ಕಾರದ ಕುಮ್ಮಕ್ಕು ಇರುತ್ತದೆ. ಪ್ರಸ್ತುತ ವಿಧಾನಸಭೆ ಚುನಾವಣೆಯ ಗುರಿಯಾಗಿತ್ತು."

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಮಾತನಾಡಿ ಮುಗಿಸಿದ್ದಾರೆ. ಅವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ನಾನು ಶಾಂತ ರೀತಿಯಲ್ಲಿ ಕುಳಿತು ಕೇಳಿದ್ದೇನೆ.

**(ಮುಂದು)**

**(337)09–03–2021/4–40/ಬಿಕೆಪಿ–ವಿಕೆ**

**(ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸಭಾಪೀಠವನ್ನು ಅಲಂಕರಿಸಿದರು)**

**ಶ್ರೀ ಗೋವಿಂದ ಎಂ. ಕಾರಜೋಳ(ಮುಂದು):–**

ಮಾನ್ಯ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರವರು, ಶ್ರೀ ಕೆ.ಎ.ತಿಪ್ಪೇಸ್ವಾಮಿಯವರು ಈ ವಿಚಾರವಾಗಿ ಬಹಳ ಚೆನ್ನಾಗಿ ಮಾತನಾಡಿದ್ದಾರೆ, ನಾನು ಅವರುಗಳು ಹೇಳಿರುವುದನ್ನು ಶಾಂತ ರೀತಿಯಿಂದ ಕುಳಿತು ಕೇಳಿದ್ದೇನೆ. ಮಾನ್ಯ ಸದಸ್ಯರು ಸುಮ್ಮನೆ ಏನೇನೋ ಮಾತನಾಡಲಿಕ್ಕೆ ಹೋಗುವುದು ಬೇಡ. ಇದರಲ್ಲಿ ರಾಜಕಾರಣ ಬೆರೆಸುವುದು ಬೇಡ. ನೀವು ಈ ವಿಚಾರವಾಗಿ ಏನು ಹೇಳಬೇಕೆಂದಿದ್ದೀರಿ, ಅದನ್ನು ನೇರವಾಗಿ ಹೇಳಿ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಸಮಾಧಾನವಾಗುವ ರೀತಿಯಲ್ಲಿ ಮಾತನಾಡಬೇಕೇ?

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯಸಭಾಪತಿಯವರೇ, ಮಾನ್ಯ ಸದಸ್ಯರು ಏನು ಮಾತನಾಡುತ್ತಿದ್ದಾರೆಂದು ಗಮನಿಸಬೇಕು. ಮಾನ್ಯ ಶ್ರೀಕಂಠೇಗೌಡರ ವಿಚಾರವನ್ನು ಇವರು ಏತಕ್ಕೆ ಹೇಳುತ್ತಿದ್ದಾರೆ? ಅವರ ವಿಚಾರವನ್ನು ಅವರು ಹೇಳುತ್ತಾರೆ. ಇವರ ವಿಚಾರವನ್ನು ಇವರು ಮಾತನಾಡಬೇಕು.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಶ್ರೀ ಮರಿತಿಬ್ಬೇಗೌಡರವರೆ, ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸದಸ್ಯರಾದಶ್ರೀ ಎಂ. ನಾರಾಯಣಸ್ವಾಮಿಯವರಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಂ. ನಾರಾಯಣಸ್ವಾಮಿ:** ಮಾನ್ಯ ಸಭಾಪತಿಯವರೇ, ನಾವು ಏನು ಮಾತನಾಡುತ್ತೇವೆಯೋ, ಅದನ್ನು ದಯಮಾಡಿ ನೋಟ್ ಮಾಡಿಕೊಂಡು ಅದಕ್ಕೆ ಸರ್ಕಾರ ಉತ್ತರ ಕೊಟ್ಟರೆ ಸಾಕು. ನಾವು ಅದನ್ನು ಬೇಡವೆಂದು ಹೇಳುವುದಿಲ್ಲ. ಅದನ್ನು ಬಿಟ್ಟು, ಪದೇ ಪದೇ ಎದ್ದು ನಿಂತುಕೊಂಡು ಪ್ರತಿಯೊಂದು ವಾಕ್ಯಕ್ಕೂ ಉತ್ತರ ಕೊಡುತ್ತಾ ಹೋದರೆ ನಾನು ಏನು ಮಾತನಾಡಲಿಕ್ಕೆ ಸಾಧ್ಯ?

**ಸಭಾಪತಿಯವರು:** ಆಯಿತು, ತಾವು ಮಾತನಾಡಿ, ನಾನೂ ಅವರಿಗೆ ಹೇಳುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು, ಹಾಗೂ ಸರ್ಕಾರಿ ಮುಖ್ಯ ಸಚೇತಕರು ಅವರಿಬ್ಬರು ಬಹಳ ಚೆನ್ನಾಗಿ, ಗಂಭೀರವಾಗಿ ಮಾತನಾಡಿದರು ಎಂದು ಹೇಳಿದರು. ನಾನು ಸಹ ಅದನ್ನು ಒಪ್ಪುತ್ತೇನೆ. ಆದರೆ, ಅವರು ತಯಾರಿಸಿರುವಂತಹ ನೋಟ್ಸ್‌ನಲ್ಲಿ ಆ ಒಂದು ಪಾಯಿಂಟ್ ಇದೆ, ಅದನ್ನು ಶ್ರೀಕಂಠೇಗೌಡರವರು ಏತಕ್ಕೆ ಹೇಳಲಿಲ್ಲವೆಂದು ಗೊತ್ತಿಲ್ಲ. ಇದರಲ್ಲಿ ಬಿಜೆಪಿಯವರ ಕುಮ್ಮಕ್ಕು ಇದೆಯೆಂದು ಸ್ಪಷ್ಟವಾಗಿ ತಿಳಿದುಕೊಂಡಿದ್ದಾರೆ.

**ಸಭಾಪತಿಯವರು:** ಅವರು ಮಾತನಾಡುವುದನ್ನು ಬಿಟ್ಟಿದ್ದರೆ ನೀವು ಅದನ್ನು ಮಾತನಾಡಿದರೆ ತಪ್ಪೇನಿಲ್ಲ. ಮಾತನಾಡಿ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:** ಮಾನ್ಯ ಸಭಾಪತಿಯವರೇ, ಇದು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಬಂದಿದೆ. "ಇದು ಪ್ರಧಾನಿಯವರಿಂದ ಚಾಲನೆ. ಕೇಂದ್ರ ಸರ್ಕಾರದ ಆರ್ಥಿಕ ನೆರವಿನ ಈ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿಯವರು, ಮಾರ್ಚ್ ಮೊದಲನೇ ವಾರದಲ್ಲಿ ಮತ್ತೊಮ್ಮೆ ಚಾಲನೆ ನೀಡಲಿದ್ದಾರೆ. ಪ್ರಧಾನಿಯವರು ಇತ್ತೀಚೆಗೆ ತಮಿಳುನಾಡಿಗೆ ಭೇಟಿ ನೀಡಿದ ಸಂದರ್ಭದಲ್ಲಿಯೇ ಈ ಯೋಜನೆಗೆ ಅಧಿಕೃತವಾಗಿ ಚಾಲನೆ ನೀಡಬೇಕಾಗಿತ್ತು. ಆದರೆ, ಅನಿವಾರ್ಯ ಕಾರಣಗಳಿಂದ ಕಾರ್ಯಕ್ರಮ ರದ್ದಾಗಿದೆ. ರಾಜ್ಯಕ್ಕೆ ಮಾರಕವಾಗದಿರುವ ಈ ಯೋಜನೆ ಬಗ್ಗೆ ರಾಜ್ಯ ಸರ್ಕಾರಕ್ಕೆ ಮಾಹಿತಿ ಇದ್ದರೂ ಆಕ್ಷೇಪಣೆ ಸಲ್ಲಿಸಲು ಹಾಗೂ ಕಾನೂನು ಹೋರಾಟ ರೂಪಿಸುವ ನಿಟ್ಟಿನಲ್ಲಿ ಕ್ರಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೈಗೊಂಡಿಲ್ಲವೆಂದು ಆರೋಪ ಕೇಳಿಬಂದಿರುತ್ತದೆ." ನಾನು ಹೇಳಿದ್ದಲ್ಲ. ಇದು ಪತ್ರಿಕೆಯಲ್ಲಿ ಬಂದಿರುವಂತಹದ್ದು.

**ಶ್ರೀ ಎಸ್.ರವಿ:** ಮಾನ್ಯ ಸಭಾಪತಿಯವರೆ . . . .

**(ಗೊಂದಲ)**

**ಸಭಾಪತಿಯವರು:** ನೀವು ಸುಮ್ಮನೆ ಕುಳಿತುಕೊಳ್ಳಿ. ನೀವು ಏಕೆ ಮಾತನಾಡುತ್ತೀರಿ? ಅವರು ಮಾತನಾಡುತ್ತಾರೆ. ಮಾತನಾಡಲಿ. ನೀವು ಆರಾಮಾಗಿ ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಎಂ. ನಾರಾಯಣಸ್ವಾಮಿ:** ಸಭಾಪತಿಯವರೇ, ಇಷ್ಟೊಂದು ಗಂಭೀರವಾದಂತಹ ಚರ್ಚೆಗಳು ಆಗುತ್ತಿರಬೇಕಾದರೆ ಎಲ್ಲೋ ಒಂದು ಕಡೆಗೆ ಇಡೀ ಅಖಂಡ ಕರ್ನಾಟಕ ಎಲ್ಲರ ಕೋಟಾ ಒಂದೇ ಇದೆ. ನಮಗೆ ಆಗುತ್ತಿರುವಂತಹ ಅನ್ಯಾಯವನ್ನು ಬೇರೆ ರಾಜ್ಯದವರು . . . ತೆಗೆದುಕೊಂಡು ನಮ್ಮರಾಜ್ಯ ಸರ್ಕಾರದ . . . ಯನ್ನೂ ಪಡೆಯದೇ ಈ ಯೋಜನೆಗಳ ಅನುಷ್ಠಾನಕ್ಕೆ ತರುವುದಕ್ಕೆ ಹೋದಂತಹ ಸಂದರ್ಭದಲ್ಲಿ ನಾವು ಇದಕ್ಕೆ ಖಂಡಿಸಬೇಕೇ ಬೇಡವೇ? ಅದಕ್ಕೆ ಕಾನೂನಿನ ಹೋರಾಟ ಮಾಡಬೇಕೋ ಅಥವಾ ಬೇಡವೋ?

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೆ. . .

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಉತ್ತರ ಕೊಡಬೇಕಾದರೆ ನೀವು ಒಂದೊಂದಕ್ಕೂ ಎದ್ದು ನಿಂತುಕೊಂಡರೆ ಹೇಗೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:** ಮಾನ್ಯ ಸಭಾಪತಿಯವರೆ, ಉಪ ಮುಖ್ಯಮಂತ್ರಿಗಳು ಎದ್ದು ನಿಂತು ಮಾತನಾಡುತ್ತಿದ್ದಾರೆ. ಅವರಿಗೆ ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:** ನಾನು ಹೇಳುತ್ತೇನೆ ಕುಳಿತುಕೊಳ್ಳಿ ಸಭಾನಾಯಕರೆ. ಒಂದು ನಿಮಿಷ ಕೇಳಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:** ನಾವು ಹೇಗೆ ಮಾತನಾಡಬೇಕು ಎಂದು direction ಕೊಟ್ಟುಬಿಡಿ. how to speak, what to speak ಎಂದು ಒಂದು direction ಕೊಟ್ಟುಬಿಡಿ. ಇನ್ನು ಮೇಲೆ ಅದರ ಮೇಲೆ ಮಾತನಾಡುತ್ತೇನೆ.

**ಸಭಾಪತಿಯವರು:** ಒಂದು ನಿಮಿಷ ಕೇಳಿ, ನೀವು ವಿರೋಧ ಪಕ್ಷದ ನಾಯಕರಾಗಿದ್ದು ನಿಮಗೆ ಮಾತನಾಡಲು ಒಂದು convention ಪ್ರಕಾರ ಅಧಿಕಾರವಿದೆ. ಅದೇ ರೀತಿ Deputy Chief Minister ರವರಿಗೆ ಮಾತನಾಡುವುದಕ್ಕೆ ಹೇಳಿ ತಪ್ಪೇನಿದೆ? ನಿಮಗೆ interfere ಆಗಿ ಮಾತನಾಡಲು ಅವರಿಗೆ ಅವಕಾಶವಿದೆ. ಅವರೂ DCM ಆಗಿದ್ದಾರೆ. ಅವರು ಮಾತನಾಡಲಿ.

**ಶ್ರೀ ಎಸ್.ಆರ್.ಪಾಟೀಲ್:** ಅವರು ಹಿರಿಯ ಸಚಿವರು ಹಾಗೂ ಉಪ ಮುಖ್ಯಮಂತ್ರಿಯಾಗಿದ್ದಾರೆ. Sentence ಮಧ್ಯದಲ್ಲಿ ಪ್ರತಿಯೊಂದು ಬಾರಿಗೂ ಒಮ್ಮೊಮ್ಮೆ ಮಾತನಾಡಿದರೆ ನಮ್ಮದು flow of thoughts ಏನಾಗುತ್ತದೆ? Interruption ಆಗುತ್ತದೆ, ಸ್ವಲ್ಪ ಅದರ ಮೇಲೆ ಪ್ರಭಾವ ಬೀರುತ್ತದೆ.

**ಸಭಾಪತಿಯವರು:** ವಿರೋಧ ಪಕ್ಷದ ನಾಯಕರಾಗಿ ತಾವು ಸಹ ಎಲ್ಲರಂತೆ ಮಾತನಾಡುತ್ತೀರಿ. ಒಂದು ನಿಮಿಷ ಕೇಳಿ. ಮಧ್ಯದಲ್ಲಿ ಸಣ್ಣ ಪುಟ್ಟ ಮಾತನಾಡುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:** ಇವತ್ತು ತಾವು ತಾಳ್ಮೆಯನ್ನು ಕಳೆದುಕೊಂಡದ್ದನ್ನು ಬಹಳ ನೋಡುತ್ತಿದ್ದೇನೆ. ಶಾಂತ ರೀತಿಯಿಂದ ತಾವು ಕೇಳುತ್ತಿದ್ದಿರಿ.

MR.CHAIRMAN:- DCM ರವರೆ, ತಾವು ಮಾತನಾಡಿ.

**ಶ್ರೀ ಗೋವಿಂದ ಎಂ.ಕಾರಜೋಳ:** ನಾನು ಹೇಳುವುದು ಏನೂ ಇಲ್ಲ. ಮಾನ್ಯ ನಾರಾಯಣಸ್ವಾಮಿಯವರು ಮಾತನಾಡುವಂತಹ ಸಂದರ್ಭದಲ್ಲಿ ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕ ವಿಷಯ ಬಂದಕೂಡಲೇ ನನಗೆ ಸ್ವಲ್ಪ ಏಕೋ irritation ಆಯಿತು.. ಅದಕ್ಕೆ ನಾನು interfere ಆದೆ. ಮಾನ್ಯ ಶ್ರೀಕಂಠೇಗೌಡರು, ಮಾನ್ಯ ತಿಪ್ಪೇಸ್ವಾಮಿಯವರು ಆ ವಿಷಯದಲ್ಲಿ ಬಹಳ ಅದ್ಭುತವಾದಂತಹ ಬೆಳಕು ಚೆಲ್ಲಿದರು, ಬಹಳ ಶಾಂತ ರೀತಿಯಿಂದ ನಾನು ಕುಳಿತುಕೊಂಡು ಕೇಳಿದೆ. ಅಷ್ಟು ಬಿಟ್ಟು ಬೇರೆ ಏನೂ ನಾನು ಹೇಳಲಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:** ಮತ್ತೆ ತಾವು ಬಹಳ ಶಾಂತ ರೀತಿಯಿಂದ ಕುಳಿತು ಕೇಳಿದರೆ ಸಭೆ ಹೇಗೆ ನಡೆಯಬೇಕು? ಅವರೂ ಸಹ ಮಾತನಾಡಲಿ.

**ಶ್ರೀ ಗೋವಿಂದ ಎಂ.ಕಾರಜೋಳ:** ಅವರು ಮಾತನಾಡಲಿ, ಬೇಡವೆಂದು ನಾನು ಹೇಳಲಿಲ್ಲ. ಉತ್ತರ ಕರ್ನಾಟಕ-ದಕ್ಷಿಣ ಕರ್ನಾಟಕದ ಬಗ್ಗೆ ಮತ್ತೆ ಇಲ್ಲಿ ತಾರತಮ್ಯ ಬೇಡ.

**ಸಭಾಪತಿಯವರು:** ಸಭಾನಾಯಕರೆ, ನೀವು ಕುಳಿತುಕೊಳ್ಳಿ. ನೀವು ಆರಾಮಾಗಿ ಕುಳಿತುಕೊಳ್ಳಿ. ನೀವು ಇಲ್ಲಿಯೇ ಕುಳಿತು ಮಾತನಾಡುತ್ತಿದ್ದೀರಿ. ನಾನು ಹೇಳಿದ್ದು ತಾವು ಕೇಳುವುದೇ ಇಲ್ಲವಲ್ಲಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):** ಮಾನ್ಯ ಸಭಾಪತಿಯವರೆ, ನಾವು ತಯಾರಿದ್ದೇವೆ. ಅವರು ಮಾತನಾಡಲಿ, ಮಾನ್ಯ ನಾರಾಯಣಸ್ವಾಮಿಯವರು ಮಾತನಾಡುವಾಗ ಇಂತಹ ಗುಡುಗು-ಸಿಡಿಲುಗಳು ಬರುತ್ತವೆ. ನಮಗೆ ಅದನ್ನು ಕೇಳುವುದಕ್ಕೆ ಬಹಳ ಖುಷಿಯಾಗುತ್ತದೆ, ಕೇಳುತ್ತೇವೆ. ತಾವು ಮಾತನಾಡಿ. ತಮ್ಮ ಮಾತನ್ನು ಕೇಳುತ್ತೇವೆ.

**ಸಭಾಪತಿಯವರು:** ಸಭಾನಾಯಕರೆ, ದಯಮಾಡಿ ಕುಳಿತುಕೊಳ್ಳಿ. ಮತ್ತೆ ಅಲ್ಲಿಗೆ ಹೋಗಬೇಡಿ.

**ಶ್ರೀ ಎಂ.ನಾರಾಯಣಸ್ವಾಮಿ:** ಪೂರ್ತಿ ಕೇಳಲಿಲ್ಲವೆಂದರೆ ನಾವು ಮತ್ತೆ ಇನ್ನು ಏನು ಮಾತನಾಡುವುದು? ಉಪ ಮುಖ್ಯಮಂತ್ರಿಗಳು ಹೇಳುತ್ತಾರೆ, ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ ಎಂದು ಹೇಳುತ್ತಾರೆ. ನಾನು ಏನು ಭಾಷಣ ಮಾಡುವುದಕ್ಕೆ ಕೊಟ್ಟಿದ್ದೇನಾ? ಇದು . . . . .

**(ಗೊಂದಲ)**

**ಸಭಾಪತಿಯವರು:** ನೀವು ವಿಷಯದ ಬಗ್ಗೆ ಮಾತನಾಡಿ.

**ಶ್ರೀ ಎಂ.ನಾರಾಯಣಸ್ವಾಮಿ:** ಕಾವೇರಿ ನೀರು ನಿರ್ವಹಣಾ ಮಂಡಳಿ ಪ್ರಾರಂಭವಾದಾಗ ಯಾವ್ಯಾವ ರಾಜ್ಯಗಳಿಗೆ ಎಷ್ಟೆಷ್ಟು ನೀರನ್ನು allocation ಮಾಡಲಾಗಿತ್ತು ಎಂದರೆ ಒಟ್ಟು 740 ಟಿ.ಎಂ.ಸಿ. ನೀರು ಶೇಖರಣೆಯಾಗುತ್ತದೆ ಎಂಬ ಅಂದಾಜನ್ನು ಇಟ್ಟುಕೊಂಡು ಅದರಲ್ಲಿ ಪಾಂಡಿಚೆರಿಗೆ 7 ಟಿ.ಎಂ.ಸಿ. ನೀರನ್ನು, ಕೇರಳ ರಾಜ್ಯಕ್ಕೆ 30 ಟಿ.ಎಂ.ಸಿ. ನೀರನ್ನು ಹಾಗೂ ಕರ್ನಾಟಕಕ್ಕೆ 284 ಟಿ.ಎಂ.ಸಿ. ಅಂದರೆ 285 ಟಿ.ಎಂ.ಸಿ. ನೀರನ್ನು, ತಮಿಳುನಾಡಿಗೆ 405 ಟಿ.ಎಂ.ಸಿ. ನೀರನ್ನು allocation ಮಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:** ಅದೇ ರೀತಿಯಾಗಿ ಇವತ್ತಿನವರೆಗೂ ನೀವು ನಡೆದುಕೊಳ್ಳುತ್ತಿದ್ದೀರಿ.

(ಗೊಂದಲ)

**ಸಭಾಪತಿಯವರು:** ನಡುವೆ ಮಾತನಾಡಿ ಅವರಿಗೆ disturb ಮಾಡಬೇಡಿ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):** ಈ allocation ಅನ್ನು ಸುಪ್ರೀಂ ಕೋರ್ಟ್ ತೀರ್ಮಾನ ಮಾಡಿ ತೀರ್ಪು ಕೊಟ್ಟಂತಹ ಸಂದರ್ಭದಲ್ಲಿ ಈ ನಿರ್ವಹಣಾ ಮಂಡಳಿಯವರು ಇದೇ ರೀತಿಯಾಗಿ ನಡೆದುಕೊಂಡು ಹೋಗುತ್ತಿದ್ದಾರೆ. ಅದರಲ್ಲಿಯೂ ಕೂಡ ಎಷ್ಟು ಅವೈಜ್ಞಾನಿಕವಾಗಿದೆ ಎಂದರೆ ನಾವು ಬೇಸಿಗೆ ಕಾಲದಲ್ಲಿ ಕುಡಿಯುವುದಕ್ಕೆ ನೀರು ಇಲ್ಲದೇ ಇದ್ದಂತಹ ಸಂದರ್ಭದಲ್ಲಿಯೂ ಕೂಡ ತಮಿಳುನಾಡಿಗೆ ವ್ಯವಸಾಯಕ್ಕಾಗಿ ಇಂತಿಷ್ಟು ಟಿ.ಎಂ.ಸಿ. ನೀರನ್ನು ಬಿಡಬೇಕೆಂದು ತೀರ್ಪನ್ನು ಕೊಟ್ಟಿದ್ದಾರೆ. ಆದರೆ, ಮಳೆಗಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಏನು ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಸರ್ ಎಂ.ವಿಶ್ವೇಶ್ವರಯ್ಯನವರು ದೊಡ್ಡ ಮನಸ್ಸು ಮಾಡಿ ಈ ಅಣೆಕಟ್ಟನ್ನು ಕಟ್ಟಿ ಈ ನೀರನ್ನು ಶೇಖರಣೆ ಮಾಡಿಕೊಂಡಿದ್ದರು, ಈ ಮಳೆಯಾಗುವಂತಹದ್ದು ಮತ್ತು ನೀರು ಶೇಖರಣೆ ಆಗುವಂತಹದ್ದು ಕರ್ನಾಟಕ ರಾಜ್ಯದಲ್ಲಿ ಸುಮಾರು 55% ಜಲಾನಯನ ಪ್ರದೇಶವಿದ್ದು, ತಮಿಳುನಾಡಿನಿಂದ ಸುಮಾರು 31%, ಕೇರಳದಿಂದ 14% ನೀರು ಶೇಖರಣೆಯಾಗುತ್ತದೆ. ಅತೀ ಹೆಚ್ಚು ಜಲಾನಯನ ಪ್ರದೇಶ ನಮ್ಮಲ್ಲಿದ್ದು, ಹೆಚ್ಚು ಮಳೆಯಾಗಿ ಆ ನೀರನ್ನು ಶೇಖರಣೆ ಮಾಡಿ ಇಟ್ಟುಕೊಂಡಿದ್ದರೂ ಸಹಿತ ಅದನ್ನು ಅನುಭವಿಸುವಂತಹದ್ದರಿಂದ ವಂಚಿತರಾಗಿ ಕಾನೂನಿನ ಒಡಕಿನಿಂದ ಕಡಿಮೆ ಅನುಭವಿಸುವಂತಹ ಪರಿಸ್ಥಿತಿ ಬಂದಿದೆ. ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟ ಮೇಲೆ ನಾವು ಏನನ್ನೂ ಕೂಡ ಮಾಡುವುದಕ್ಕೆ ಆಗುವುದಿಲ್ಲ, ಅದರ ಪ್ರಕಾರವೇ ನಡೆದುಕೊಳ್ಳಬೇಕಾಗುತ್ತದೆ. ಆದರೆ, ಮಳೆ ಹೆಚ್ಚಾಗಿ ಸುಮಾರು ಒಂದು ಲಕ್ಷದಿಂದ ಒಂದೂಕಾಲು ಲಕ್ಷ ಕ್ಯುಸೆಕ್ಸ್ ನೀರು ಏನು ತಮಿಳುನಾಡಿಗೆ ಹರಿದು ಸಮುದ್ರವನ್ನು ಸೇರುತ್ತಿದೆಯೋ ಅದನ್ನು ತಡೆದು ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆ, ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡುವುದಕ್ಕೆ ಮೇಕೆದಾಟು ಯೋಜನೆಯನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದಾಗ ಇಡೀ ತಮಿಳುನಾಡು ಹೋರಾಟ ಮಾಡಿತು. ಯಾವುದೇ ಕಾರಣಕ್ಕೂ ಕೂಡ ಕರ್ನಾಟಕ ರಾಜ್ಯ ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಹೊಸ ಯೋಜನೆಗಳನ್ನು ತರಬಾರದು ಎಂದು ಬಹಳಷ್ಟು ಹೋರಾಟಗಳನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದರು. ಕೊನೆಗೆ ಆ ಯೋಜನೆಯನ್ನು ಪ್ರಾರಂಭ ಮಾಡುವುದಕ್ಕೆ ನಮ್ಮ ಕೈಯಲ್ಲಿ ಆಗಲಿಲ್ಲ. ಆದರೆ, ಇವತ್ತು ಅದೇ ತಮಿಳುನಾಡು ಯಾರ ಹಂಗೂ ಸಹ ಇಲ್ಲದೇ, ಕೇಂದ್ರ ಸರ್ಕಾರದ permission ಇಲ್ಲವೆಂದು ನಮ್ಮ ನಾಯಕರುಗಳು ಹೇಳುತ್ತಿದ್ದಾರೆ. ಈ ನಾಲ್ಕು ರಾಜ್ಯಗಳಿಂದ ಯಾರ ಹತ್ತಿರವೂ NOC (No Objection Certificate) ತೆಗೆದುಕೊಳ್ಳಲಿಲ್ಲ. ಕರ್ನಾಟಕ ರಾಜ್ಯವನ್ನು ಕೇಳಲೂ ಇಲ್ಲ. ಆದರೆ, ಇಂತಹ ಒಂದು ದೊಡ್ಡ 14,500 ಸಾವಿರ ಕೋಟಿ ರೂಪಾಯಿಗಳ ಯೋಜನೆಯನ್ನು ಪ್ರಾರಂಭ ಮಾಡುತ್ತಿದೆ. ಮೊದಲನೇ ಹಂತದಲ್ಲಿ ಸುಮಾರು 6,941 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ ನದಿ ಜೋಡಣೆ ಮಾಡುವುದಕ್ಕೆ ಹೊರಟಿದ್ದಾರೆ. ಪಕ್ಷಾತೀತವಾಗಿ ನಾವೆಲ್ಲರೂ ಕೂಡ ಈ ಬಗ್ಗೆ ಹೋರಾಟ ಮಾಡಬೇಕಾಗಿದೆ. ಇದನ್ನು ನಿಲ್ಲಿಸಬೇಕಲ್ಲವೇ? ಇದಕ್ಕೆ ನಾವು ಏನು ಮಾಡಿದ್ದೇವೆ? ಎಷ್ಟು ಧೈರ್ಯದಿಂದ ಈ ಕೆಲಸವನ್ನು ಮಾಡುವುದಕ್ಕೆ ಅವರು ಹೊರಟಿದ್ದಾರೆ? ನಮ್ಮ ಆತಂಕ ಏನು ಎಂದರೆ, ಆ ರಾಜ್ಯದ ಚುನಾವಣೆ ಈಗ ಬಂದಿದೆ. ಅಲ್ಲಿರತಕ್ಕಂತಹ ಆಡಳಿತ ಪಕ್ಷಕ್ಕೆ ನಿಮ್ಮ NDA (National Democratic Alliance) ಸರ್ಕಾರದ ಸಹಕಾರವಿದೆ. ಎಲ್ಲಿ ನಾವು ಈ ಮತ ಬ್ಯಾಂಕ್‌ಗಾಗಿ ನಮ್ಮ ಇಚ್ಛಾಶಕ್ತಿಯನ್ನು ಬಿಟ್ಟುಕೊಡುತ್ತೇವೋ ಅದರಿಂದ ಇವತ್ತು ನಾವು ಹಾಳಾಗುತ್ತಿದ್ದೇವೆ.

(ಮುಂದು)

**(338) 09.03.2021 04.50 ಎಸ್‌ವಿ–ವಿಕೆ**

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು):–**

ಯಾವುದೋ ಒಂದು ಪ್ರಾಂತೀಯ ಕಾರಣಕ್ಕಾಗಿ, ರಾಜಕಾರಣದ ವಿಷಯಕ್ಕಾಗಿ ಆ ಒಂದು ರಾಜ್ಯಕ್ಕೆ ಸಹಾಯ ಮಾಡುವುದಾದರೆ ಕರ್ನಾಟಕದ ಜೀವನದಿಯ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿಯೇ ಕರ್ನಾಟಕಕ್ಕೆ ಅನ್ಯಾಯವಾಗಿತ್ತು. ಅದನ್ನು ಸರಿಪಡಿಸಿಕೊಳ್ಳಲಿಕ್ಕೆ ನಮಗೆ ಆಗಲಿಲ್ಲ. ಆದರೆ ಇಂದು ಬರೆಯ ಮೇಲೆ ಬರೆ ಎಳೆಯುವ ರೀತಿಯಲ್ಲಿ ಇಂತಹ ಅನ್ಯಾಯಗಳು ಆಗುತ್ತಿದ್ದರೂ ಕೂಡ ನಾವು ಸುಮ್ಮನೆ ಕುಳಿತುಕೊಳ್ಳಬೇಕೆ?

ಕೇಂದ್ರದಲ್ಲಿ ಬಿಜೆಪಿ ಸರ್ಕಾರ, ರಾಜ್ಯದಲ್ಲಿಯೂ ಬಿಜೆಪಿ ಸರ್ಕಾರ ಇದ್ದರೆ ಸುವರ್ಣಯುಗ ಬರುತ್ತದೆ ಎಂದು ಹೇಳುತ್ತಿದ್ದಿರಿ. ಅಲ್ಲಿಯೂ ನಿಮ್ಮದೇ ಸರ್ಕಾರವಿದೆ. ಇಲ್ಲಿಯೂ ನಿಮ್ಮದೇ ಸರ್ಕಾರವಿದೆ. ನಮ್ಮ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆ ಎಂದು ದಯಮಾಡಿ ಹೋಗಿ ಹೇಳಿ. ಯಾವ ಧೈರ್ಯದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಲೆ, ಯಾವ ಆಧಾರದ ಮೇಲೆ ಈ ಯೋಜನೆಯನ್ನು ತಮಿಳುನಾಡು ಮಾಡುತ್ತಿದೆ? ಏಕೆ ನೀವು ಆ ಯೋಜನೆಯನ್ನು ನಿಲ್ಲಿಸುತ್ತಿಲ್ಲ? ಕರ್ನಾಟಕ ರಾಜ್ಯದಿಂದ 25 ಜನ ಲೋಕಸಭಾ ಸದಸ್ಯರನ್ನು ಗೆಲ್ಲಿಸಿ ಕಳುಹಿಸಲಾಗಿದೆ. ಕೇಂದ್ರದಲ್ಲಿ ಎಷ್ಟು ಜನ ಮಂತ್ರಿಗಳಿದ್ದಾರೆ? ಯಾರಿಗೂ ಕೂಡ ಪ್ರಧಾನ ಮಂತ್ರಿಗಳೊಂದಿಗೆ ಮಾತನಾಡುವ ಧೈರ್ಯವಿಲ್ಲವೇ? ಗೆಲ್ಲಿಸಿ ಕಳುಹಿಸಿದಂತಹ ಜನ ಇಂದು ಕಷ್ಟದಲ್ಲಿದ್ದು, ಅವರಿಗೆ ಅನ್ಯಾಯವಾಗುತ್ತಿದೆ. ಆದರೂ ಯಾರೂ ಚಕಾರವೆತ್ತುತ್ತಿಲ್ಲ. ನಿಮಗೆ ಧೈರ್ಯವಿಲ್ಲದಿದ್ದರೆ, ಸರ್ವಪಕ್ಷ ನಿಯೋಗವನ್ನು ಕರೆದುಕೊಂಡು ಹೋಗಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಇವರು ಏನು ಮಾತನಾಡಿದರೂ ನಾವು ಕೇಳಬೇಕೆ? 25 ಜನ ಸದಸ್ಯರನ್ನು ಜನ ಆಯ್ಕೆ ಮಾಡಿ ಕಳುಹಿಸಿದ್ದಾರೆ. ಜನಾದೇಶವನ್ನು ಆಕ್ಷೇಪ ಮಾಡುವುದಕ್ಕಾಗುತ್ತದೆಯೇ?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಜನಾದೇಶವನ್ನು ಪ್ರಶ್ನೆ ಮಾಡುವುದಿಲ್ಲ. ನೈತಿಕತೆಯನ್ನು ಪ್ರಶ್ನೆ ಮಾಡುತ್ತೇವೆ.

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ, ನೀವು ಯಾರಿಗೂ yield ಆಗಬೇಡಿ. ನಿಮ್ಮ ಮಾತು ಮುಂದುವರೆಸಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಕರ್ನಾಟಕ ರಾಜ್ಯದ ಪರವಾಗಿ ಕೇಂದ್ರದಲ್ಲಿ ಧ್ವನಿ ಎತ್ತಲು ಸರ್ಕಾರದ ಶಕ್ತಿ ಅಡಗಿಹೋಗಿದೆ. ಸರ್ವಪಕ್ಷದ ನಿಯೋಗವನ್ನು ಮಾಡಿ ಎಲ್ಲಾ ಪಕ್ಷದ ಮುಖಂಡರನ್ನು ಕರೆದುಕೊಂಡು ಹೋಗಬೇಕು. ನೀರಾವರಿ ಯೋಜನೆಗಳ ಬಗ್ಗೆ ಯಾರಿಗೆ ಹೆಚ್ಚಿನ ಅರಿವು, ಅನುಭವ ಇದೆಯೋ ಅವರನ್ನು ಕರೆದುಕೊಳ್ಳಬೇಕು. ನೇರವಾಗಿ ಪ್ರಧಾನಮಂತ್ರಿಯವರನ್ನು ಭೇಟಿ ಮಾಡೋಣ.

ರಾಜಕೀಯ ಮಾಡುವುದಕ್ಕಾಗಿ ಅಲ್ಲ, ನಮ್ಮ ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿ ನಾವೆಲ್ಲರೂ ನಿಯೋಗ ಹೋಗೋಣ. ನಮಗಾಗಿರುವಂತಹ ಅನ್ಯಾಯವನ್ನು ಸರಿಪಡಿಸುವ ರೀತಿಯಲ್ಲಿ ಕೆಲಸ ಮಾಡೋಣ. ಈ ದೇಶಕ್ಕೆ ಒಂದೇ ಕಾನೂನು. ಬಾಬಾಸಾಹೇಬ್ ಅಂಬೇಡ್ಕರ್ ಅವರು ರಚನೆ ಮಾಡಿರುವ ಸಂವಿಧಾನವು ಎಲ್ಲರಿಗೂ ಒಂದೇ. ಆದರೆ ಇಂದು ತಮಿಳುನಾಡು ರಾಜ್ಯವು ಇದೆಲ್ಲವನ್ನೂ ಧಿಕ್ಕರಿಸಿ ತನ್ನದೇ ಆದ ತೀರ್ಮಾನವನ್ನು ತೆಗೆದುಕೊಂಡು ಈ ಕೆಲಸವನ್ನು ಮಾಡಲಿಕ್ಕೆ ಹೊರಟಿರಬೇಕಾದರೆ ನಾವು ಸುಮ್ಮನೆ ನೋಡಬೇಕೆ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಕೆದಾಟು ಯೋಜನೆಯನ್ನು ನಾವು ಜಾರಿಗೆ ತಂದರೆ ನಾನಾಗಲೇ ಹೇಳಿದಂತೆ ಈಗಾಗಲೇ ಬರಪೀಡಿತ ಜಿಲ್ಲೆಗಳೆಂದು ಘೋಷಣೆಯಾಗಿರುವ ಐದಾರು ಜಿಲ್ಲೆಗಳಿಗೆ ನೀರು ಕೊಡುವಂತಹ ಕೆಲಸವಾಗುತ್ತದೆ. ಮಳಮಳೆಗಾಲದಲ್ಲಿ ಹೆಚ್ಚಿನ ನೀರು ಸಮುದ್ರವನ್ನು ಸೇರುತ್ತಿದ್ದು, ಅದನ್ನು ತಡೆಯುವಂತಹ ಕೆಲಸವಾಗುತ್ತದೆ. ನಾವು ಈ ಯೋಜನೆಗೆ Action Plan ಅನ್ನು ಮಾಡಿ ಸಿದ್ಧವಾಗಿಟ್ಟುಕೊಳ್ಳುವ ಅವಶ್ಯಕತೆ ಇಲ್ಲ. ತಮಿಳುನಾಡು ಸರ್ಕಾರ ಯಾವ ರೀತಿಯಲ್ಲಿ ಕಾನೂನನ್ನು ಕೈಗೆತ್ತಿಕೊಂಡು ಕೆಲಸ ಮಾಡಿದೆಯೋ, ಅದೇ ರೀತಿಯಾಗಿ ಕರ್ನಾಟಕ ಸರ್ಕಾರ ದಿಟ್ಟೆದೆಯಿಂದ ತೀರ್ಮಾನ ತೆಗೆದುಕೊಂಡು ಯೋಜನೆಗೆ ಶಂಕುಸ್ಥಾಪನೆಯನ್ನು ಮಾಡಬೇಕು. ಎಲ್ಲಾ ವಿರೋಧಪಕ್ಷದವರೂ ಸರ್ಕಾರದ ಸಹಾಯಕ್ಕೆ ನಿಲ್ಲುತ್ತೇವೆ. ಸರ್ಕಾರದ ಜೊತೆಗೆ ಇರುತ್ತೇವೆ. ಅಲ್ಲಿ ಅಡಿಗಲ್ಲು ಹಾಕಿ, ಅಣೆಕಟ್ಟು ನಿರ್ಮಾಣ ಪ್ರಾರಂಭ ಮಾಡಲಿ. ಎಷ್ಟೇ ಕಾನೂನು ತೊಡಕುಗಳು ಎದುರಾದರೂ ಸರ್ಕಾರದ ಜೊತೆಯಲ್ಲಿ ನಾವು ಇರುತ್ತೇವೆ. ಕರ್ನಾಟಕ ರಾಜ್ಯದ ಜನರ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿ ನಾವು ಸರ್ಕಾರದ ಜೊತೆಯಲ್ಲಿರುತ್ತೇವೆ ಎನ್ನುವಂತಹ ಮಾತನ್ನು ಹೇಳಬಯಸುತ್ತೇನೆ.

ಕರ್ನಾಟಕ ಸರ್ಕಾರ ಈಗ ತಮಿಳುನಾಡು ಕೈಗೆತ್ತಿಕೊಂಡಿರುವ ಯೋಜನೆಯನ್ನು ತಡೆಯಲಿ. ಕಾವೇರಿಯ ಉಗಮವಾಗುವುದು ಕೊಡಗಿನಲ್ಲಿ. ಮೈಸೂರು ನಗರಕ್ಕೆ ಕುಡಿಯುವ ನೀರು ಪೂರೈಸಲು ಸಾಧ್ಯವಾಗುತ್ತಿಲ್ಲ. ಮಂಡ್ಯ ಜಿಲ್ಲೆಯಿಂದ ಸಮುದ್ರಕ್ಕೆ ನಾವು ಕೊಡಲು ಸಾಧ್ಯವಾಗುತ್ತಿದೆ. ಈ ಹೆಚ್ಚಿನ ನೀರನ್ನು ನಾವು ಶೇಖರಿಸಿಟ್ಟುಕೊಂಡರೆ ಹಳೆ ಮೈಸೂರು ಭಾಗದ ಜಿಲ್ಲೆಗಳಿಗೆ ಕುಡಿಯುವ ನೀರಿಗೆ, ವ್ಯವಸಾಯಕ್ಕೆ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆಗೆ ಸಾಧ್ಯವಾಗುತ್ತದೆ ಎನ್ನುವಂತಹ ಮಾತನ್ನು ಹೇಳಿ ಅವಕಾಶವನ್ನು ಮಾಡಿಕೊಟ್ಟಂತಹ ಮಾನ್ಯ ಸಭಾಪತಿಯವರಿಗೆ ವಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಸಿ.ಎಂ.ಲಿಂಗಪ್ಪ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಹಿಂದಿನ ಮೈಸೂರು ಸಂಸ್ಥಾನದ ಜೀವನಾಡಿ ಕಾವೇರಿ ನದಿ. ಕೊಡಗಿನ ಆರಾಧ್ಯದೈವ ಕಾವೇರಿ. ಆದರೆ ಆ ಕಾವೇರಿ ತಾಯಿ ಶಾಪಗ್ರಸ್ತಳಾಗಿದ್ದಾಳೆಯೇನೋ ಎನ್ನುವ ಅನುಮಾನ ಒಮ್ಮೊಮ್ಮೆ ನಮ್ಮಲ್ಲಿ ಮೂಡುತ್ತದೆ. ಮದ್ರಾಸ್ ಪ್ರಾಂತ್ರ ಆಂಗ್ಲರ ಆಳ್ವಿಕೆಯಲ್ಲಿತ್ತು. ಕೃಷ್ಣರಾಜ ಒಡೆಯರ್ ಅವರು ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದರೂ ಕೂಡ ಆಂಗ್ಲರ ದರ್ಪಕ್ಕೆ ಪ್ರತಿಯಾಗಿ ಸ್ಪಂದಿಸುವ ಶಕ್ತಿ ಇರಲಿಲ್ಲವೇನೋ ಎನ್ನುವ ಭಾವನೆ ನಮ್ಮಲ್ಲಿ ಬರುತ್ತದೆ. ಕಾವೇರಿ ನದಿಯ ವಿಚಾರದಲ್ಲಿ 1924ರ ಒಪ್ಪಂದದಿಂದ ನಮ್ಮ ಬೆನ್ನುಮೂಳೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುರಿಯಿತು. ಅಂದಿನ ಮದ್ರಾಸ್ ಪ್ರಾಂತ್ಯದ ಆಂಗ್ಲ ಅಧಿಕಾರಿಗಳು ಏನು ಹೇಳಿದರೆ ಅದಕ್ಕೆ ಮಹಾರಾಜರು ಒಪ್ಪಿಗೆಯನ್ನು ಸೂಚಿಸಿದ್ದರು. ಮತ್ತೊಂದು ವಿಚಾರವೆಂದರೆ, ಅವರ ಬಳಿ ಹಣವಿತ್ತು. ಸ್ಟಾಲಿನ್ ಅಣೆಕಟ್ಟು ಕಟ್ಟುವುದಕ್ಕಾಗಲೀ ಅಥವಾ ಇನ್ನಿತರ ಅಣೆಕಟ್ಟು ಕಟ್ಟಲು ಹಣವಿತ್ತು. ಮೈಸೂರು ಮಹಾರಾಜರ ಬಳಿ ಹಣವಿರಲಿಲ್ಲ. ಇತರೆ ಅನೇಕ ಸಾಮಾಜಿಕ ಕಾರ್ಯಕ್ರಮಗಳನ್ನು ಅವರು ಹಮ್ಮಿಕೊಂಡಿದ್ದರು.

1974ನೇ ಇಸವಿಯಲ್ಲಿ ಪುನಃ ವಿವಾದ ಪ್ರಾರಂಭವಾಯಿತು. ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಇದನ್ನು ಬಗೆಹರಿಸಿಕೊಳ್ಳಿ ಎನ್ನುವಂತಹ ಮಾತು ಬಂದಿತು. ಅದು ಸಾಧ್ಯವಾಗಲಿಲ್ಲ. ನನಗೆ ಬಹಳ ಸ್ಪಷ್ಟವಾಗಿ ಗೊತ್ತಿರುವ ವಿಚಾರವೆಂದರೆ ದಿವಂಗತ ವೀರೇಂದ್ರ ಪಾಟೀಲರು ಎರಡನೆಯ ಬಾರಿಗೆ ಮುಖ್ಯಮಂತ್ರಿಗಳಾದಾಗ ಅಂದರೆ 1989ರಲ್ಲಿ ತಮಿಳುನಾಡಿನಲ್ಲಿ ನೀರಿನ ಅಭಾವ ಬಹಳವಾಗಿತ್ತು. ದಿವಂಗತ ಕರುಣಾನಿಧಿಯವರು ಒಬ್ಬ ನೀರಾವರಿ ಮಂತ್ರಿಯನ್ನು ಕಳುಹಿಸಿಕೊಟ್ಟರು. ನಾವೇ ಇತ್ಯರ್ಥ ಮಾಡಿಕೊಳ್ಳೋಣ, 165 ಟಿ.ಎಂ.ಸಿ. ನೀರನ್ನು ಕರ್ನಾಟಕ ಬಿಟ್ಟುಕೊಟ್ಟರೆ ನಾವು ಒಪ್ಪಂದಕ್ಕೆ ಸಹಿ ಹಾಕಿ ಬಿಡೋಣ ಎನ್ನುವಂತಹ ಮಾತನ್ನು ಅವರ ಮೂಲಕ ಹೇಳಿ ಕಳುಹಿಸಿದ್ದರು. ಆದರೆ ವೀರೇಂದ್ರ ಪಾಟೀಲರು 165 ಅಲ್ಲ, 100 ಟಿ.ಎಂ.ಸಿ. ನೀರನ್ನು ಕೂಡ ಕೊಡುವುದಿಲ್ಲ ಎಂದು ಅವರನ್ನು ಹಾಗೆಯೇ ಕಳುಹಿಸಿದರು. ಅವರನ್ನು ಭೇಟಿ ಮಾಡದೆ, ಕಾರ್ಯದರ್ಶಿಯವರ ಮೂಲಕ ಹೇಳಿ ಕಳುಹಿಸಿಬಿಟ್ಟರು. ಅಂತಹ ಒಂದು ಬದ್ಧತೆ ದಿವಂಗತ ವೀರೇಂದ್ರ ಪಾಟೀಲರಿಗಿತ್ತು. ಅವರು ಈ ನದಿಯು ಹಳೆಮೈಸೂರು ಪ್ರಾಂತ್ಯಕ್ಕೆ ಸೇರಿದ್ದು, ಇದರ ಹಿತ ಕಾಯ್ದರೆಷ್ಟು, ಕಾಯದಿದ್ದರೆಷ್ಟು ಎನ್ನುವ ಭಾವನೆ ಇದ್ದವರಲ್ಲ.

ಎಲ್ಲರಿಗೂ ತಿಳಿದಂತೆ ಮುಂದೆ ವಿಷಯ ಸಂಸತ್ತಿಗೆ ಹೋಯಿತು. ಸಂಸತ್ ಅದನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಕಳುಹಿಸಿತು.

**(ಮುಂದು)**

**(339) 09.03.2021, 5.00. KG.BNS**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸಿ.ಎಂ.ಲಿಂಗಪ್ಪ (ಮುಂದು):-**

Supreme Court Tribunal ಅನ್ನು ರಚನೆ ಮಾಡಬೇಕೆಂದು ಆದೇಶ ಮಾಡಿತು. ಅದೇ ಜಿಲ್ಲೆಯ ಮಾನ್ಯ ಸದಸ್ಯರುಗಳಾದ ಮರಿತಿಬ್ಬೇಗೌಡರವರು, ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ಮತ್ತು ಶ್ರೀ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್.ಅಪ್ಪಾಜಿಗೌಡರವರು ಇದ್ದಾರೆ. ನಾನು 1960ನೇ ಸಾಲಿನಿಂದೀಚೆಗೆ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳನ್ನು ಪರಿಚಯ ಮಾಡಿಕೊಂಡೆ. ನಾನು ಸಹ ಮೂಲ ಮಂಡ್ಯ ಜಿಲ್ಲೆಯವನು. ಆದರೆ, ನಾವು ಇಲ್ಲಿಗೆ ಬಂದು ಸೇರಿಕೊಂಡಿದ್ದೇವೆ, ಆ ಜಿಲ್ಲೆಗಳ ರಸ್ತೆಗಳಲ್ಲಿ ಬಸ್ ಅಥವಾ ರೈಲಿನಲ್ಲಿ ಹೋಗುತ್ತಿರಬೇಕಾದರೆ, ಎಲ್ಲೆಲ್ಲೂ ಹಸಿರು ತುಂಬಿರುವಂತಹ ದೃಶ್ಯಗಳು ನಮ್ಮ ಕಣ್ಣಿಗೆ ತಂಪಾಗಿ, ಆನಂದವಾಗಿ ಕಾಣಿಸುತ್ತವೆ. ಇತ್ತೀಚಿನ ತೀರ್ಮಾನದಂತೆ, ತಮಿಳುನಾಡಿಗೆ 404 ಟಿ.ಎಂ.ಸಿ., ಮತ್ತು ನಮ್ಮ ರಾಜ್ಯಕ್ಕೆ 284 ಟಿ.ಎಂ.ಸಿ., ಕೊಟ್ಟರು. ಆನಂತರ ಸ್ವಲ್ಪ ಹೆಚ್ಚಿಗೆ ಕೊಟ್ಟರು. ಮೊದಲು ಮಂಡ್ಯ ಜಿಲ್ಲೆಯಲ್ಲಿ ಬೇಕಾದಷ್ಟು ಪ್ರದೇಶದಲ್ಲಿ ಕಬ್ಬು ಮತ್ತು ಭತ್ತವನ್ನು ಬೆಳೆಯುತ್ತಿದ್ದರು. ಈಗ ಎಷ್ಟು ಪ್ರದೇಶದಲ್ಲಿ ಬೆಳೆಯುತ್ತಿದ್ದಾರೆ ಎಂಬುದನ್ನು ಗಮನಿಸಿ ನೋಡಿ. ಮೊದಲು ಬೆಳೆಯುತ್ತಿದ್ದ ಪ್ರದೇಶದ ಅರ್ಧ ಭಾಗದ ಪ್ರದೇಶದಲ್ಲಿ ಈಗ ಬೆಳೆಯುತ್ತಿಲ್ಲ. ಮಂಡ್ಯ ಜಿಲ್ಲೆ ಬಹಳ ಸಮೃದ್ಧಿಯಾಗಿತ್ತು ಮತ್ತು ಸಾಕಷ್ಟು ಜನ ಹಣವಂತರು ಇದ್ದಂತಹ ಪ್ರತೀತಿ ಇತ್ತು. ಆದರೆ, ಇವತ್ತು ಸಾಕಷ್ಟು ಕಷ್ಟವನ್ನು ಅನುಭವಿಸುತ್ತಿದ್ದಾರೆ. ಈ ತೀರ್ಮಾನಗಳು ಆಗಿದ್ದರೂ ಸಹ, ಆ ಜಿಲ್ಲೆಗೆ ಸರಿಯಾಗಿ ನೀರು ಹರಿಯುತ್ತಿಲ್ಲ. ಹಾಗಾಗಿ, ಅವರು ಸರಿಯಾದಂತಹ ಬೆಳೆ ಬೆಳೆಯಲು ಸಾಧ್ಯವಾಗುತ್ತಿಲ್ಲ.

ಮಾನ್ಯ ಸಭಾಪತಿಯವರೇ, ಈ ಮಧ್ಯದಲ್ಲಿ ಸರ್ಕಾರ ಮೇಕೆದಾಟು ಯೋಜನೆಯನ್ನು ಚಿಂತನೆ ಮಾಡಿತು. ತಮಿಳುನಾಡಿಗೆ ಹೋಗುವಂತಹ ನೀರಿಗೆ concrete slab ಅನ್ನು ಹಾಕಿ ಕಾಲುವೆಗಳಲ್ಲಿ ನೀರನ್ನು ಹರಿಸಿದರೆ, ಅವರು ಎಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಮಾಡಿಕೊಂಡಿದ್ದಾರೆ, ಅದಕ್ಕಿಂತ 50% ಹೆಚ್ಚಿನ ಪ್ರದೇಶಕ್ಕೆ ನೀರನ್ನು ಕೊಡಬಹುದು. ಆ ರಾಜ್ಯದಲ್ಲಿ ಬಹಳಷ್ಟು ಕಡೆ ಮಣ್ಣಿನ ಕಾಲುವೆಗಳಲ್ಲಿ ನೀರು ಹರಿಯುತ್ತದೆ. ಆ ಮಣ್ಣಿನ ಕಾಲುವೆಯಲ್ಲಿ ನೀರು ಇಂಗಿ ಕೊನೆಗೆ ತಿರುಚನಾಪಳ್ಳಿಯ ಬಳಿ ಹೋಗಿ ನೋಡಿದರೆ, ಎಷ್ಟು ಕಾವೇರಿ ನೀರು waste ಆಗಿ ಹೋಗುತ್ತಿದೆ ಎನ್ನುವುದು ತಿಳಿಯುತ್ತದೆ. ಇಷ್ಟಾದರೂ ಸಹ ತಮಿಳುನಾಡಿನವರಿಗೆ ನಮ್ಮ ರಾಜ್ಯದವರ ಮೇಲೆ ಪ್ರೀತಿ ಇಲ್ಲ. ಅವರು ನಮ್ಮನ್ನು ಶತ್ರುಗಳನ್ನಾಗಿಯೇ ಕಾಣುತ್ತಾರೆ.

ಮಾನ್ಯ ಸಭಾಪತಿಯವರೇ, ಕೆ.ಆರ್.ಎಸ್ ಮತ್ತು ಬಿಳಿಗುಂಡ್ಲುನಲ್ಲಿ ನಮ್ಮ ರಾಜ್ಯದ, ತಮಿಳುನಾಡು ರಾಜ್ಯದ ಹಾಗೂ ಕೇಂದ್ರ ಸರ್ಕಾರದ ಅಧಿಕಾರಿಗಳು ಇದ್ದಾರೆ. ಆದರೆ, ಅವರು ನಮ್ಮನ್ನು ಕಳ್ಳರನ್ನು ನೋಡುವ ರೀತಿಯಲ್ಲಿಯೇ ನೋಡುತ್ತಾರೆ. ನಾವು ಕೆ.ಆರ್.ಎಸ್.ನಲ್ಲಿ ಕಳ್ಳರು. ಅವರು ಸಾಚಾ ಮನುಷ್ಯರು. ನಮ್ಮ ನಾಡಿನಿಂದ ಹರಿಯುವಂತಹ ನೀರು. ನಾವು upper end ನಲ್ಲಿ ಇರುವಂತಹವರು, ನಮಗೆ ಸಾಕಷ್ಟು ನೀರು ಇಲ್ಲ. Lower end ನಲ್ಲಿ ಇರುವಂತಹವರು ಅವರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಡಿದು ಉಳಿದ ನೀರು ಬಂಗಾಳಕೊಲ್ಲಿಗೆ ಹೋಗುವಷ್ಟು ಹೆಚ್ಚಿಗೆ ನೀರನ್ನು ತಮಿಳುನಾಡಿನವರು ಪಡೆದುಕೊಂಡಿದ್ದಾರೆ. "ಬಾಯಿ ಇದ್ದವನು ಬರದಲ್ಲಿ ಗೆದ್ದ" ಎಂದು ಗಾದೆ ಮಾತಿದೆ. ಅವರು ಮೊದಲಿನಿಂದಲೂ ಹಾಗೆಯೇ ಮಾಡಿಕೊಂಡು ಬಂದಿದ್ದಾರೆ.

ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದಲ್ಲಿ ಕರ್ನಾಟಕದಿಂದ ಹೋದಂತಹ ಸಾಕಷ್ಟು ಅಧಿಕಾರಿಗಳು ಇಲ್ಲ. ಅಲ್ಲಿ ಪೂರ್ತಿ ತಮಿಳುನಾಡಿನ ಮತ್ತು ಕೇರಳದ ರಾಜ್ಯದವರ ಹೆಸರುಗಳೇ ತುಂಬಿಹೋಗಿವೆ. ಆ ರಾಜ್ಯಗಳ ಅಧಿಕಾರಿಗಳು ಅವರವರ ರಾಜ್ಯಗಳ ಹಿತವನ್ನು ಬಿಟ್ಟುಕೊಡಲಿಲ್ಲ. ಮೇಕೆದಾಟು ಯೋಜನೆ ಬಗ್ಗೆ ಹೇಳುವುದಾದರೆ, ನಾನು ಈ ಸರ್ಕಾರ ಎಂದು ಹೇಳುವುದಿಲ್ಲ. ಏಕೆಂದರೆ, ಈ ಯೋಜನೆಯನ್ನು ಒಂದು ತಿಂಗಳಿನಲ್ಲಿ ಅಥವಾ ಒಂದು ವರ್ಷದಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಈ ಯೋಜನೆ 2004-05 ರಲ್ಲಿ ಪ್ರಾರಂಭವಾಗಿದೆ. ಮೊದಲಿನಿಂದ ಅಧಿಕಾರದಲ್ಲಿ ಇದ್ದಂತಹ ಸರ್ಕಾರಗಳು ಇದರ ಬಗ್ಗೆ ವಿಶೇಷವಾದ ಕಾಳಜಿಯನ್ನು ತೆಗೆದುಕೊಂಡು ಇಷ್ಟೊತ್ತಿಗೆ ಈ ಯೋಜನೆಯನ್ನು ಸಂಪೂರ್ಣವಾಗಿ ಮಾಡಬಹುದಾಗಿತ್ತು. ಮೊದಲನೆಯದಾಗಿ, ನಾವು ಮೇಕೆದಾಟಿನಲ್ಲಿ ಅಡ್ಡಗಟ್ಟೆ ಹಾಕಿ ಒಂದು balancing reservoir ತರಹ ಮಾಡಿ, ನಾವು ಅವರಿಗೆ ಫೆಬ್ರವರಿ ಯಿಂದ ಮೇ ತಿಂಗಳನವರೆಗೆ ಕೊಡಬೇಕಾದ ನೀರನ್ನು ಇಲ್ಲಿ ಶೇಖರಣೆಯಾಗಿರುವಂತಹ ನೀರಿನಲ್ಲಿ ಕೊಡುತ್ತೇವೆಂದು ಹೇಳಬಹುದಾಗಿತ್ತು. ಎರಡನೆಯದಾಗಿ, ಅಲ್ಲಿ ಉತ್ಪಾದನೆಯಾಗುವಂತಹ ವಿದ್ಯುತ್‌ಚ್ಛಕ್ತಿಯಲ್ಲಿ ಅವರಿಗೂ ಕೊಡುತ್ತೇವೆಂದು ಹೇಳಬಹುದಾಗಿತ್ತು. ಮೂರನೆಯದಾಗಿ, ಮಾನ್ಯ ಸದಸ್ಯರುಗಳಾದ ನಾರಾಯಣಸ್ವಾಮಿಯವರು ಮತ್ತು ಶ್ರೀಕಂಠೇಗೌಡರವರು ಹೇಳಿದಂತೆ, ಬೆಂಗಳೂರು, ಕೋಲಾರ ಮತ್ತು ಚಿಕ್ಕಬಳ್ಳಾಪುರಕ್ಕೆ ಕುಡಿಯುವ ನೀರನ್ನು ಕೊಡುವಂತಹ ಯೋಜನೆಯನ್ನು ಮಾಡುತ್ತೇವೆಂದು ಹೇಳಿದ್ದರೂ ಸಹ, ತಮಿಳುನಾಡಿನವರು ಅದಕ್ಕೆ ತಕರಾರು ಮಾಡುತ್ತಿರಲಿಲ್ಲ.

ಮಾನ್ಯ ಸಭಾಪತಿಯವರೇ, ತಮಿಳುನಾಡಿನ ಮಾಜಿ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಕರುಣಾನಿಧಿಯವರ ಅವಧಿಯಲ್ಲಿ ಧರ್ಮಪುರಿ ಜಿಲ್ಲೆಗೆ ಕುಡಿಯುವ ನೀರಿಗೆ ಹೊಗೆನಕಲ್ ಬಳಿ ಒಂದು project ಅನ್ನು ಮಾಡಿದರು. ಆಗ ನಮ್ಮ ರಾಜ್ಯದಲ್ಲಿದ್ದ ಕನ್ನಡ ಹೋರಾಟಗಾರರು, ಅವರು-ಇವರು ಎಲ್ಲರೂ ಸೇರಿ ಪ್ರತಿಭಟನೆ ಮಾಡಿದರು. ನಾವು ಏನೂ ಮಾಡಿದರು ಸಹ, ಅವರು ಕೆಲಸವನ್ನು ನಿಲ್ಲಿಸಲಿಲ್ಲ. ಅವರು ಬಿಳಿಗುಂಡ್ಲುನಿಂದ ಕೆಳಕ್ಕೆ ನೀರನ್ನು ತೆಗೆದುಕೊಂಡಿದ್ದರೆ, ಅದಕ್ಕೆ ನಮ್ಮ ತಕರಾರು ಇರಲಿಲ್ಲ. ಆದರೆ, ಅವರು ಬಿಳಿಗೂಂಡ್ಲೂನಿಂದ ಮೇಲಕ್ಕೆ ಕುಡಿಯುವ ನೀರಿನ project ಅನ್ನು ಹೊಗೆನಕಲ್ ಬಳಿ ಮಾಡಿ ಧರ್ಮಪುರಿ ಜಿಲ್ಲೆಗೆ ಕುಡಿಯುವ ನೀರನ್ನು ಒದಗಿಸಿ ಕೊಟ್ಟರು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಕೆದಾಟಿನಿಂದ ಕೆಳಗಡೆ ಸುಮಾರು ದೂರ ಕರ್ನಾಟಕ ಇದೆ. ನಾವು ಅಲ್ಲಿ ಒಂದು ಅಡ್ಡಗಟ್ಟೆ ಹಾಕಿ ಒಂದು balancing reservoir ಮಾಡಬಹುದಾಗಿತ್ತು. ಒಂದು ವೇಳೆ ಮುಳುಗಡೆಯಾದರೆ, ನಮ್ಮ ರಾಜ್ಯದ ಅರಣ್ಯಪ್ರದೇಶ ಮುಳುಗಡೆಯಾಗುತ್ತಿತ್ತು. ಇಲ್ಲವೆಂದರೆ, ನಮ್ಮ ರಾಜ್ಯದ ಜಮೀನುಗಳು ಮುಳುಗಡೆಯಾಗುತ್ತಿತ್ತು. ನಮ್ಮ ರಾಜ್ಯದಲ್ಲಿ 26 ಜನ ಲೋಕಸಭಾ ಸದಸ್ಯರು ಇದ್ದಾರೆ, ಸಚಿವರು ಇದ್ದಾರೆ, ನಾನು ಅವರನ್ನು ಏಕೆ ಮಾಡಲಿಲ್ಲವೆಂದು ಕೇಳುವುದಿಲ್ಲ. ನಮ್ಮ ರಾಜ್ಯದ 26 ಲೋಕಸಭಾ ಸದಸ್ಯರು ಮತ್ತು ಮಾನ್ಯ ಮುಖ್ಯಮಂತ್ರಿಯವರು ಸರ್ವಪಕ್ಷಗಳ ನಿಯೋಗವನ್ನು ಮಾನ್ಯ ಪ್ರಧಾನ ಮಂತ್ರಿಯವರ ಬಳಿಗೆ ಕರೆದುಕೊಂಡು ಹೋಗಿ ಅವರ ಮನವೊಲಿಸಿ ಮೇಕೆದಾಟು ಯೋಜನೆಯನ್ನು ಮಾಡಿಕೊಟ್ಟರೆ ಬಹಳ ಒಳ್ಳೆಯದು. ನಂತರ ತಮಿಳುನಾಡಿಗೆ ಎಷ್ಟೇ ಮಾಡಿಕೊಡಲಿ, ನಾವು ಹಿಂದಿನ Cauvery Tribunal ತೀರ್ಮಾನಕ್ಕೆ ಬದ್ದರಾಗುತ್ತೇವೆ, ಮುಂದೆಯೂ ಸಹ ಬದ್ದರಾಗುತ್ತೇವೆ. ಅಲ್ಲದೇ, ಮೇಕೆದಾಟು ಯೋಜನೆ ಮಾಡಿಕೊಟ್ಟ ಮೇಲಂತೂ ಬದ್ದರಾಗುತ್ತೇವೆ. ಹಾಗಾಗಿ, ನಮ್ಮ ಆಡಳಿತಪಕ್ಷದ ನಾಯಕರು, ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರಿ ಗೋವಿಂದ ಕಾರಜೋಳರವರು, ಎಲ್ಲರೂ ಮಾನ್ಯ ಮುಖ್ಯಮಂತ್ರಿಯವರನ್ನು ಒಪ್ಪಿಸಿ ಆ ಯೋಜನೆಯನ್ನು ಮಾಡಿಕೊಟ್ಟರೆ ಬಹುಶಃ ಕರ್ನಾಟಕಕ್ಕೆ ಅವರ ಕೊಡುಗೆ ಅಪಾರವಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಮುಂದು)

**(340)09-03-2021(5-10)ಎಂವಿ-ಬಿಎನ್‌ಎಸ್**

**ಶ್ರೀ ಸಿ.ಎಂ.ಲಿಂಗಪ್ಪ (ಮುಂದು):-**

ಅವರು ಈ ಯೋಜನೆಯನ್ನು ಮಾಡಿಸಿಕೊಟ್ಟರೆ, ಬಹುಶಃ ಇದು ಕರ್ನಾಟಕಕ್ಕೆ ಅವರ ಕೊಡುಗೆ ಬಹಳ ಅಪಾರವಾಗುತ್ತದೆಂದು ಹೇಳುತ್ತೇನೆ. ಇನ್ನೊಂದು ಸ್ಪಷ್ಟೀಕರಣವೇನೆಂದರೆ, ನಾನು ಪ್ರಜಾವಾಣಿ ಪತ್ರಿಕಾ ವರದಿಯನ್ನಾಗಲಿ ಅಥವಾ ಮತ್ತೊಂದನ್ನಾಗಲಿ ಓದುವುದಿಲ್ಲ. ಆದರೂ ಇತ್ತೀಚೆಗೆ ನಮ್ಮ ಮಾನ್ಯ ಪ್ರಧಾನ ಮಂತ್ರಿಗಳ ಪ್ರೀತಿ ಅಥವಾ ಒಲವು ತಮಿಳುನಾಡಿನ ಕಡೆಗೆ ಇದೆಯೇನೋ ಎಂದು ಅನಿಸುತ್ತಿದೆ. ಹಾಗಾಗಿ ನಾನು ಮೊದಲೇ ಹೇಳಿದ ಹಾಗೆ, ಆ ಕಾವೇರಿ ತಾಯಿ ಶಾಪಗ್ರಸ್ತಳಾಗಿದ್ದಾಳೆ. ಕಾವೇರಿ ನದಿ ನೀರು ಸಹ ಶಾಪಗ್ರಸ್ತವಾಗಿದೆ. ಹಾಗಾಗಿ ಮುಂದೆಯೂ ಕೂಡ ಕಾವೇರಿ ನೀರು ನಮಗೆ ಲಭ್ಯವಾಗುವುದಿಲ್ಲವೇನೋ ಎನ್ನುವಂತಹ ಒಂದು ಅಂಜಿಕೆ ಮತ್ತು ಅನುಮಾನ ಬರುತ್ತಿದೆ. ಇದು ಸತ್ಯವಾಗದೆ ಇರಲಿ. ಮೇಕೆದಾಟು ಯೋಜನೆಗೆ ತಾವೆಲ್ಲರೂ ಬದ್ಧರಾಗಬೇಕು ಎನ್ನುವಂತಹ ಮಾತನ್ನು ಹೇಳಿ, ತಮಿಳುನಾಡು ರಾಜ್ಯದವರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿರುವಂಥದ್ದನ್ನು ಕಾನೂನು ಹೋರಾಟದ ಮುಖಾಂತರ ಅದನ್ನು ತಡೆ ಮಾಡಿ, ನಮ್ಮ ಹಕ್ಕನ್ನು ನಮಗೆ ಕೊಡಿಸಬೇಕೆಂಬ ಮಾತನ್ನು ಹೇಳಿ, ತಾವು ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೆ ತಾವು ಮಾತನಾಡಿ. ಆದರೆ, ಬಹಳ ಸಮಯ ಮಾತನಾಡಬೇಡಿ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ದಿವಸ ತಾವು ಹೇಳಿದ ಹಾಗೆ ಕೇಳೋಣ. ತಮಿಳುನಾಡಿನಲ್ಲಿ ಹೊಸದಾಗಿ ನದಿ ಜೋಡಣೆಯ ಯೋಜನೆ ಪ್ರಾರಂಭವಾಗಿರುವುದರ ಬಗ್ಗೆ, ಈಗಾಗಲೇ ಮಾನ್ಯ ಸದಸ್ಯರುಗಳು ಸದನದಲ್ಲಿ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಮೊದಲನೆಯದಾಗಿ, ಕಾವೇರಿ ನದಿ ಎಂದು ಹೇಳಿದರೆ, ನಾವು ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಸರ್ ಎಂ.ವಿಶ್ವೇಶ್ವರಯ್ಯನವರನ್ನು ಸ್ಮರಣೆ ಮಾಡಬೇಕು. ಕಾವೇರಿ ನದಿಯ ಜಲಾಶಯ ಪ್ರಾರಂಭವಾದಾಗಿನಿಂದ, ನಮ್ಮ ಕರ್ನಾಟಕ ರಾಜ್ಯದ ಹತ್ತು ಜಿಲ್ಲೆಗಳಿಗೆ ಕಾವೇರಿ ನದಿ ನೀರು ಬಳಕೆಯಾಗುತ್ತಿದೆ. ಕಾವೇರಿ ತಾಯಿ ನಾಲ್ಕು ರಾಜ್ಯಗಳಲ್ಲಿ ಹರಿಯುತ್ತಾಳೆ. ಆದರೆ, ಇವತ್ತು ಸುಪ್ರೀಂ ಕೋರ್ಟ್, ನ್ಯಾಯಾಧೀಕರಣ ಮತ್ತು ನೀರು ನಿರ್ವಹಣಾ ಮಂಡಳಿ ಇವೆಲ್ಲವೂ ಕೂಡ ಕೇಂದ್ರ ಸರ್ಕಾರದ ಮಧ್ಯಸ್ಥಿಕೆಯಲ್ಲಿ ಮಾಡಿಕೊಂಡು ಬಂದಿವೆ. ಆದರೆ, ಇದೆಲ್ಲದರಲ್ಲೂ ಕೂಡ ನಮಗೆ ಮಾಹಿತಿ ಲಭ್ಯವಾಗಿರುವಂಥದ್ದು, ಕಾವೇರಿ ತಾಯಿ ಕರ್ನಾಟಕದಿಂದ ಉಗಮಗೊಂಡಿದ್ದರೂ ಕೂಡ ಕರ್ನಾಟಕದ ಜನತೆಗೆ ಬಹಳ ಅನ್ಯಾಯವಾಗುತ್ತಿದೆ ಎಂದು. ಕೇರಳ ಮತ್ತು ಪುದುಚೆರಿಗಿಂತಲೂ ಕೂಡ ಎಲ್ಲೋ ಒಂದು ಕಡೆ ತಮಿಳುನಾಡಿಗೆ ಹೆಚ್ಚು ವರದಾನವಾಗುತ್ತಿದೆ. ಇವತ್ತು ಈ ಕಾವೇರಿ ನದಿ ನೀರಿನ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಎಲ್ಲಾ ಸರ್ಕಾರಗಳು ಕೂಡ ಆ ಸಂದರ್ಭಕ್ಕೆ ತಕ್ಕಂತೆ ರಾಜಕೀಯ ಮಾಡಿಕೊಂಡು ಬಂದರೂ ಸಹ ಕರ್ನಾಟಕ ರಾಜ್ಯದಲ್ಲಿ ರಾಜಕೀಯ ಪಕ್ಷಗಳಲ್ಲಿ ಮತ್ತು ಅಧಿಕಾರಕ್ಕೆ ಬಂದಂತಹ ಸರ್ಕಾರಗಳಲ್ಲಿ ಒಂದು ಹೊಂದಾಣಿಕೆಯ ಗಟ್ಟಿ ನಿಲುವು ಇಲ್ಲದೇ ಇದ್ದುದರಿಂದ, ಇವತ್ತು ನಾವು ಈ ಪರಿಸ್ಥಿತಿಗೆ ತಲುಪಿದ್ದೇವೆ. ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳೇ ಇದುವರೆವಿಗೂ ಕೂಡ ಆಡಳಿತ ನಡೆಸಿಕೊಂಡು ಬಂದಿವೆ. ಆ ಪ್ರಾದೇಶಿಕ ಪಕ್ಷಗಳು ಕೇಂದ್ರದಲ್ಲಿ ಯಾವುದೇ ಸರ್ಕಾರ ಬರಲಿ, ಅವರು ತಮ್ಮದೇ ಆದಂತಹ ಪ್ರಭಾವ ಬೀರಿ ಈ ಕಾವೇರಿ ನೀರನ್ನು ಹೆಚ್ಚಾಗಿ ಬಳಕೆ ಮಾಡಿಕೊಳ್ಳುವಂತಹ ಒಂದು ವ್ಯವಸ್ಥೆಯನ್ನು ರೂಢಿಸಿಕೊಂಡು ಬಂದಿದ್ದಾರೆ. ಆದರೆ, ಈ ದಿನ ತಮಿಳುನಾಡಿನಲ್ಲಿ ಚುನಾವಣೆ ಇರುವುದರಿಂದ ಒಂದು ಹೊಸ ಯೋಜನೆ ಪ್ರಾರಂಭವಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಮಿಳುನಾಡು ರಾಜ್ಯದವರು ಇಂತಹ ಒಂದು ಯೋಜನೆಯನ್ನು ಪ್ರಾರಂಭ ಮಾಡಿದ್ದರೂ ಸಹ ನಮ್ಮ ಕೇಂದ್ರ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಮೌನವಾಗಿರುವಂಥದ್ದು ನಮಗೆಲ್ಲರಿಗೂ ಬಹಳ ಬೇಸರ ತಂದಿರುವಂಥದ್ದನ್ನು ಇಲ್ಲಿ ಹೇಳಬೇಕಾಗುತ್ತದೆ.

ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡುತ್ತಾ ಮಂಡ್ಯ ಜಿಲ್ಲೆಯ ಕಾವೇರಿ ಕಣಿವೆಯಲ್ಲಿ ಬಹಳಷ್ಟು ಯೋಜನೆಗಳು ಪೂರ್ಣಗೊಂಡಿವೆ, ಆದುದರಿಂದ ಅನುದಾನವನ್ನು ಸ್ವಲ್ಪ ಕಡಿಮೆ ಮಾಡಿದ್ದೇವೆಂದು ಹೇಳಿದರು. ಮಳವಳ್ಳಿ ಮತ್ತು ಮದ್ದೂರು ತಾಲ್ಲೂಕುಗಳು ವಿಶ್ವೇಶ್ವರಯ್ಯ ನಾಲೆಯ ಕೊನೆಯ ಭಾಗಗಳು. ವಿಶ್ವೇಶ್ವರಯ್ಯ ನಾಲೆಯಿಂದ ಮಂಡ್ಯ ಜಿಲ್ಲೆಯ ಮಳವಳ್ಳಿ ಮತ್ತು ಮದ್ದೂರು ತಾಲ್ಲೂಕುಗಳಿಗೆ ಒಪ್ಪಂದದ ಪ್ರಕಾರ ಏನು ನೀರು ಕೊಡಬೇಕು ಅದನ್ನು ಇವತ್ತಿನವರೆಗೆ ಕೊಡುವುದಕ್ಕೆ ಆಗಿಲ್ಲ. ಕಾವೇರಿ ಆಧುನೀಕರಣ ಎಂದು ಎರಡು ಹಂತದಲ್ಲಿ ಆಧುನೀಕರಣವಾದರೂ ಕೂಡ tail end ಭಾಗಕ್ಕೆ ಅಂದರೆ, ಮಂಡ್ಯ ಜಿಲ್ಲೆಯ ಮಳವಳ್ಳಿ ಮತ್ತು ಮದ್ದೂರು ತಾಲ್ಲೂಕುಗಳಿಗೆ ಇನ್ನೂ ಕೂಡ ನೀರನ್ನು ಒದಗಿಸುವುದಕ್ಕೆ ಆಗಿಲ್ಲ. ಇಂತಹ ಒಂದು ಮೂಲಭೂತ ಯೋಜನೆಗಳು, ಬಹಳ ನೆನೆಗುದಿಗೆ ಬಿದ್ದಿವೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಕಾವೇರಿ ಜಲಾನಯನ ಪ್ರದೇಶದಲ್ಲಿ ಸುಮಾರು ಹನ್ನೆರಡು ಜಲಾಶಯಗಳಿವೆ. ಅವುಗಳೆಂದರೆ, ಕೆ.ಆರ್.ಎಸ್. ಜಲಾಶಯ, ಮಾರ್ಕೋನಹಳ್ಳಿ ಜಲಾಶಯ, ನುಗು ಜಲಾಶಯ, ಕಬಿನಿ ಜಲಾಶಯ, ಹಾರಂಗಿ ಜಲಾಶಯ, ಸುವರ್ಣಾವತಿ ಜಲಾಶಯ, ಗೊರೂರು ಜಲಾಶಯ, ಮಂಚನಬೆಲೆ ಜಲಾಶಯ, ತಾರಕ ಜಲಾಶಯ, ಅರ್ಕಾವತಿ ಜಲಾಶಯ, ವಾಟೆಹೊಳೆ ಜಲಾಶಯ, ಯಗಚಿ ಜಲಾಶಯ, ಇವುಗಳಿಗೆ ಪ್ರತಿ ವರ್ಷ ನೀರು ಹೋಗುವುದಿಲ್ಲ. ಇಷ್ಟು ವರ್ಷವಾದರೂ ಕೂಡ ನಾವು ಇನ್ನು ಇಂತಹ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಎಷ್ಟೇ ಮಳೆ ಬಂದು ಕಾವೇರಿಯಲ್ಲಿ ನೀರು ಹರಿದರೂ ಕೂಡ, ಕೆಲವು ಜಲಾಶಯಗಳಿಗೆ ನೀರು ಬರುತ್ತಿಲ್ಲ. ನಾವು ಇಂತಹ ಪರಿಸ್ಥಿತಿಯನ್ನು ಕೂಡ ನೋಡುತ್ತಿದ್ದೇವೆ. ಆದರೆ, ಈ ದಿನ ತಮಿಳುನಾಡಿನಲ್ಲಿ ಚುನಾವಣೆಯ ಸಂದರ್ಭದಲ್ಲಿ, ಹೊಸ ಯೋಜನೆಯ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಪ್ರಜಾವಾಣಿ ಪತ್ರಿಕೆಯಲ್ಲಿ ಏನು ವರದಿಯಾಗಿದೆ ಎಂದರೆ, 'ನದಿಗಳ ಜೋಡಣೆಗೆ ಕೇಂದ್ರ ಸರ್ಕಾರದ ನೆರವು' 'ಕಾವೇರಿ ಮತ್ತು ತಮಿಳುನಾಡು ವಿರುದ್ಧ ಚಕಾರವೆತ್ತದ ರಾಜ್ಯ' 'ತಮಿಳುನಾಡು ರೂಪಿಸಿರುವ ಯೋಜನೆ' 'ಕಾವೇರಿ ಯೋಜನೆ ರಾಜ್ಯಕ್ಕೆ ಅಪಾಯ' 'ಹೆಚ್ಚುವರಿ ನೀರು ಬಳಕೆಗೆ ಮುಂದಾದ ತಮಿಳುನಾಡು ಸರ್ಕಾರ'– 'ಕರ್ನಾಟಕ ಏನು ಮಾಡಬಹುದು' ಇವುಗಳೆಲ್ಲವೂ ಸಹ ಪತ್ರಿಕೆಗಳಲ್ಲಿ ಬಂದಿರುವಂತಹ ಹೆಡ್‌ಲೈನ್‌ಗಳು.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತು ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ಸರ್ಕಾರವಿದೆ. ಇದನ್ನು ನಾವುಗಳೆಲ್ಲರೂ ತುಂಬಾ ಸೌಭಾಗ್ಯದ ದಿನವೆಂದು ಭಾವಿಸಿಕೊಂಡಿದ್ದೇವೆ. ಚುನಾವಣೆ ಸಂದರ್ಭದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಒಂದೇ ಪಕ್ಷ ಅಧಿಕಾರಕ್ಕೆ ಬಂದರೆ, ನಮ್ಮೆಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ ಎಂದು ಎಲ್ಲಾ ಪಕ್ಷದ ನಾಯಕರು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಪ್ರಾದೇಶಿಕ ಪಕ್ಷದವರನ್ನು ಬಿಟ್ಟು, ರಾಷ್ಟ್ರೀಯ ಪಕ್ಷದವರೆಲ್ಲರೂ ಕೂಡ ಇದನ್ನೇ ಹೇಳುತ್ತಾರೆ. ಆದರೆ, ಇವತ್ತು ದುರ್ದೈವದ ಸಂಗತಿ ಏನೆಂದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರದಲ್ಲಿ ಒಂದೇ ಪಕ್ಷದ ಸರ್ಕಾರವಿದ್ದರೂ ಕೂಡ, ನಮ್ಮ ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಲಿಂಗಪ್ಪನವರು ಹೇಳಿದ ಹಾಗೆ, ಎಲ್ಲೋ ಒಂದು ಕಡೆ ತಮಿಳುನಾಡಿನಲ್ಲಿ ಚುನಾವಣೆ ಇದೆಯೆಂದು ಕೇಂದ್ರ ಸರ್ಕಾರ ಸ್ವಲ್ಪ ಮಲತಾಯಿಧೋರಣೆ ತೋರುತ್ತಿದೆ ಎನ್ನುವಂಥದ್ದು ಪತ್ರಿಕಾ ವರದಿಗಳಿಂದ ಮತ್ತು ಮಾಧ್ಯಮಗಳಿಂದ ನಮಗೆ ಸ್ಪಷ್ಟವಾಗುತ್ತಿದೆ. ದಯಮಾಡಿ ಇದರಿಂದ ನಮ್ಮ ನಾಡಿನ ಕಾವೇರಿ ಕೊಳ್ಳದ ಜನರ ಹಿತವನ್ನು ಕಾಪಾಡುವುದಕ್ಕೆ ಖಂಡಿತವಾಗಿ ಸಾಧ್ಯತೆಯಾಗುವುದಿಲ್ಲ. ನಮ್ಮಲ್ಲಿ ಏನೇ ಭಿನ್ನಾಭಿಪ್ರಾಯವಿರಲಿ, ಕಾವೇರಿ ನೀರಿಗಾಗಿ ನಾವೆಲ್ಲರೂ ಒಟ್ಟಾಗಿ ಹೋರಾಟದಲ್ಲಿ ಪಾಲ್ಗೊಳ್ಳಬೇಕು. ಈ ಯೋಜನೆಯನ್ನು ತಡೆಗಟ್ಟುವುದಕ್ಕೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಜೊತೆ ಒಂದು ಮಾತುಕತೆಯನ್ನು ಕೂಡ ಮಾಡದೇ ಇರತಕ್ಕಂಥದ್ದು, ನಮಗೆಲ್ಲರಿಗೂ ಅನುಮಾನಕ್ಕೆ ಅವಕಾಶ ಮಾಡಿಕೊಟ್ಟಿದೆ. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಪ್ರಧಾನ ಮಂತ್ರಿಗಳನ್ನು ಕೂಡಲೇ ಸಂಪರ್ಕ ಮಾಡಿ, ತಮಿಳುನಾಡಿನವರು ತೆಗೆದುಕೊಂಡಿರುವಂತಹ ಈ ಹೊಸ ಯೋಜನೆಯನ್ನು ದಯಮಾಡಿ ತಾತ್ಕಾಲಿಕವಾಗಿ ತಡೆ ಹಿಡಿಸಬೇಕು. ನಮ್ಮಲ್ಲಿರತಕ್ಕಂಥ ಬಹಳ ದೀರ್ಘ ಕಾಲದಿಂದ ನೆನಗುದಿಗೆ ಬಿದ್ದಿರತಕ್ಕಂಥ ನಮ್ಮ ಮೇಕೆದಾಟು ಯೋಜನೆಗೆ ಕೂಡ ತಾವು ಅನುಮತಿ ಕೊಡಿಸಬೇಕು. ಏಕೆಂದರೆ, ತಮಿಳುನಾಡು ರಾಜ್ಯ ಸಮುದ್ರ ಸೇರುವಂತಹ ಕಾವೇರಿ ನದಿಯ ಹೆಚ್ಚುವರಿ ನಲವತ್ತೈದು ಟಿಎಂಸಿ ನೀರನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಹೊರಟಿದೆ.

**(ಮುಂದು)**

**(341) 05.20 09.03.2021 ಎಲ್‌ಎಲ್/ಜಿಆರ್**

**ಶ್ರೀ ಮರಿತಿಬ್ಬೇಗೌಡ(ಮುಂದು);-**

ನಮ್ಮ ಕಾವೇರಿ ನದಿಯಿಂದ ಹೋಗತಕ್ಕಂತಹ ನೀರು ಹೆಚ್ಚುವರಿ ಆಗಿರುತ್ತದೆ. ಅದೇ ಕಾವೇರಿಯ ಹೆಚ್ಚುವರಿ ನೀರನ್ನು ನಾವು ಮೇಕೆದಾಟು ಎಂಬಲ್ಲಿ ಒಂದು ಹೊಸ ಯೋಜನೆ ಮಾಡಿ, ಆ ನೀರನ್ನು ತಡೆದಿಟ್ಟುಕೊಂಡು ವಿದ್ಯುಚ್ಛಕ್ತಿಗೆ ಬಳಸಿಕೊಳ್ಳುತ್ತೇವೆ ಮತ್ತು ಅಗತ್ಯ ಬಿದ್ದಾಗ ತಮಿಳುನಾಡಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುತ್ತೇವೆಂಬ ಮಾತನ್ನು ಹೇಳಿದಾಗ, ತಮಿಳುನಾಡು ಸರ್ಕಾರ ಇದಕ್ಕೆ ಬಹಳ ವಿರೋಧ ವ್ಯಕ್ತಪಡಿಸಿರುತ್ತದೆ. ಆ ಸಂದರ್ಭದಲ್ಲಿ ಕೇಂದ್ರ ಸರ್ಕಾರವೂ ಕೂಡ ಅದಕ್ಕೆ ಒಪ್ಪಿಗೆ ಸೂಚಿಸುವುದಕ್ಕೆ ಅಥವಾ ಕರ್ನಾಟಕದ ನೆರವಿಗೆ ಬರಲಿಲ್ಲ. ಇವೊತ್ತಿನ ದಿವಸ ಸಹ ಅದೇ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದರ ಜೊತೆಗೆ ಮತ್ತೊಂದು ದಿನಪತ್ರಿಕೆಯಲ್ಲಿ, **"ಹೊಸ ಯೋಜನೆ ಬಗ್ಗೆ ದಿಲ್ಲಿಯಲ್ಲಿ ಜಾರಕಿಹೊಳಿ"**, ರಾಜ್ಯ ಸಂಪನ್ಮೂಲ ಸಚಿವರಾದ ಶ್ರೀ ರಮೇಶ್ ಜಾರಕಿಹೊಳಿಯವರು ಶನಿವಾರ ದೆಹಲಿಗೆ ಬಂದಿದ್ದು, ರಾಜ್ಯದ ಜಲವ್ಯಾಜ್ಯಗಳ ಬಗ್ಗೆ ಚರ್ಚಿಸಲೆಂದೇ ಭಾನುವಾರ ರಾಜ್ಯ ಕಾನೂನು ತಂಡದ ಸಭೆ ಕರೆದಿದ್ದಾರೆಂದು 21ನೇ ತಾರೀಖಿನ ವಿಜಯವಾಣಿ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ. ಆದರೆ, ಅವರು ಯಾರನ್ನು ಭೇಟಿ ಮಾಡಿದರು; ಅಲ್ಲಿ ಕೇಂದ್ರದ ಜಲಸಂಪನ್ಮೂಲ ಸಚಿವರನ್ನು ಭೇಟಿ ಮಾಡಿದ್ದಾರೆಯೇ; ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದ್ದಾರೆಯೇ ಅಥವಾ ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದಾರೆಯೇ ಈ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಅದು ಅಷ್ಟಕ್ಕೆ ನಿಂತಿರುತ್ತದೆ. ಮುಂದೆ ಏನಾಯಿತು ಎಂಬ ಬಗ್ಗೆ ಹೆಚ್ಚಿನ ಮಾಹಿತಿ ಇರುವುದಿಲ್ಲ.

ಇವೊತ್ತಿನ ದಿವಸ ಕೇಂದ್ರ ಮತ್ತು ರಾಜ್ಯ ಈ ಎರಡೂ ಕಡೆಗಳಲ್ಲಿ ಒಂದೇ ಪಕ್ಷ ಅಧಿಕಾರದಲ್ಲಿರುವಾಗ ಕನ್ನಡ ನಾಡಿಗೆ ತೊಂದರೆಯಾಗುವುದಾದರೆ ಅಥವಾ ಕಾವೇರಿ ಕೊಳ್ಳದ ಜನರಿಗೆ ತೊಂದರೆಯಾಗುವುದಾದರೆ, ಇದು ಈ ರಾಜ್ಯದ ಜನರಿಗೆ ಮಾಡಿದಂತಹ ದ್ರೋಹವಾಗುತ್ತದೆ. ಈ ವಿಚಾರದಲ್ಲಿ ನಾನು ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷ ಅಧಿಕಾರದಲ್ಲಿದ್ದು, ರಾಜ್ಯದ ಹಿತವನ್ನು ಕಾಯುವಂತಹ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟಂತಹ ಸಚಿವರು ಕೇಂದ್ರದ ಜೊತೆ ಕೂಡಲೇ ಸಮಾಲೋಚನೆ ನಡೆಸಬೇಕೆಂಬುದು ನಮ್ಮೆಲ್ಲರ ಒಕ್ಕೊರಲಿನ ಒತ್ತಾಯವಾಗಿರುತ್ತದೆ. ಇದರಲ್ಲಿ ಯಾವುದೇ ರಾಜಕೀಯ ಇರುವುದಿಲ್ಲ. ಇವೊತ್ತಿನ ದಿವಸ ನಮ್ಮ ಸುತ್ತಮುತ್ತಲಿನ ಯಾವ್ಯಾವ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಅಧಿಕಾರದಲ್ಲಿವೆ ಅವೆಲ್ಲವೂ ಸಹ ಎಲ್ಲಾ ಕಾಲದಲ್ಲಿಯೂ ಅಂದರೆ ಕೇಂದ್ರದಲ್ಲಿ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದಾಗಲೂ ಸಹ ಸಂದರ್ಭಾನುಸಾರ ಎಲ್ಲಾ ಆರ್ಥಿಕ ನೆರವನ್ನು/ಸವಲತ್ತುಗಳನ್ನು ಪಡೆದುಕೊಳ್ಳುತ್ತಿವೆ. ಆದರೆ, ಕರ್ನಾಟಕ ರಾಜ್ಯದ ಜನತೆ ರಾಷ್ಟ್ರೀಯ ಪಕ್ಷಗಳನ್ನು ಬೆಂಬಲಿಸಿರುತ್ತಾರೆ. ಈ ಹಿಂದೆಯೂ ಕೂಡ ಕಾಂಗ್ರೆಸ್ ಸರ್ಕಾರ ಏಕಕಾಲದಲ್ಲಿ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಇದ್ದಂತಹ ಸಂದರ್ಭಗಳನ್ನು ನಾವು ನೋಡಿದ್ದೇವೆ. ಅದೇ ರೀತಿ ಬಿ.ಜೆ.ಪಿ., ಸರ್ಕಾರ ಕೇಂದ್ರ ಮತ್ತು ರಾಜ್ಯಗಳಲ್ಲಿ ಏಕಕಾಲದಲ್ಲಿ ಇರುವುದನ್ನು ಕಳೆದ ಎರಡು ಬಾರಿಯಿಂದ ನೋಡುತ್ತಿದ್ದೇವೆ. ಇಂತಹ ಸಂದರ್ಭಗಳಲ್ಲಿ ನಮ್ಮ ನಾಡಿನ ಜನರ, ಕಾವೇರಿ ಕೊಳ್ಳದ ಜನರ ಅಥವಾ ಕಾವೇರಿ ಮಾತೆಯನ್ನು ಉಳಿಸಿಕೊಳ್ಳುವುದಕ್ಕೆ ನಾವು ಒಗ್ಗಟ್ಟಿನಿಂದ ಹೋರಾಟ ಮಾಡಿಲ್ಲವೆಂದರೆ, ನಮ್ಮ ಪಕ್ಷಗಳ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಾಜಕೀಯ ಸಿದ್ಧಾಂತಗಳಿಗೆ ಜನತೆ ತಕ್ಕ ಪಾಠ ಕಲಿಸುವಂತಹ ದಿನ ಬರುತ್ತದೆ. ಇದು ಆಗಬಾರದು. ನೀರು ಎನ್ನುವುದು ಯಾವುದೇ ಪಕ್ಷಕ್ಕೆ ಅಥವಾ ಯಾವುದೇ ಜಾತಿ, ವರ್ಗಕ್ಕೆ ಸೇರಿದಂತಹದ್ದು ಅಲ್ಲ. ಇವೊತ್ತಿನ ದಿವಸ ಕಾವೇರಿ ಮಾತೆ ಇಲ್ಲವೆಂದರೆ, ಕರ್ನಾಟಕ ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿ ಎಲ್ಲರೂ ಪೇಪರ್ ಬಳಸಬೇಕಾಗುತ್ತದೆ. ಅಲ್ಲದೇ, ಅವರು ಒಂದು ದಿನ ಬದುಕುವುದಕ್ಕೆ ಅಥವಾ ವಾಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇಂತಹ ಒಂದು ಜೀವನದಿಯನ್ನು ನಾವು ಉಪಯೋಗಿಸಿಕೊಳ್ಳಬೇಕು.

ಮಾನ್ಯ ಪ್ರವಾಸೋದ್ಯಮ ಸಚಿವರಾದ ಶ್ರೀ ಸಿ.ಪಿ. ಯೋಗೇಶ್ವರ್‌ರವರು ಈ ಸದನದಲ್ಲಿ ಆಗಲೇ ಹಾಜರಿದ್ದರು. ಆದರೆ, ಈಗ ಹಾಜರಿರುವುದಿಲ್ಲ. ಇವೊತ್ತಿನ ದಿವಸ ಕಾವೇರಿ ನದಿ ಎಲ್ಲೆಲ್ಲಿ ಹರಿಯುತ್ತದೆ ಆ ಭಾಗದಲ್ಲಿನ ಕೆರೆಗಳನ್ನು ತುಂಬಿಸುವ ಯೋಜನೆಯನ್ನು ಇತ್ತೀಚೆಗೆ ಜಾರಿಗೆ ತಂದಿರುತ್ತದೆ. ಅದು ಎಷ್ಟೊಂದು ಉತ್ತಮವಾದಂತಹ ಯೋಜನೆಯಾಗಿರುತ್ತದೆ. ಏಕೆಂದರೆ, ಈ ಯೋಜನೆ ಬಂದ ನಂತರ, ಎಷ್ಟೋ ತಾಲ್ಲೂಕುಗಳಲ್ಲಿ/ಜಿಲ್ಲೆಗಳಲ್ಲಿ ಕೆರೆ ತುಂಬುವ ಯೋಜನೆಯಿಂದ ಅಂತರ್ಜಲ ವೃದ್ಧಿಯಾಗಿದೆ, ಬೇಸಾಯಕ್ಕೆ ಅನುಕೂಲವಾಗಿದೆ, ರೈತರ ಪಂಪ್‌ಸೆಟ್‌ಗಳಿಗೆ ಅನುಕೂಲವಾಗಿದೆ. ಇದರ ಜೊತೆಗೆ, ಕಾವೇರಿ ನದಿಯಿಂದ ಹರಿದು ಹೋಗುತ್ತಿದ್ದಂತಹ ನೀರಿನ ಬಳಕೆಯಿಂದ... ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯ ಪೂರ್ಣ ತಾಲ್ಲೂಕಿನಲ್ಲಿ ನೀರನ್ನು ಕಾಣದೇ ಇರುವಂತಹ ಅಂದರೆ, ಸುಮಾರು 1500 ಅಡಿಯಷ್ಟು ಕೊಳವೆಬಾವಿ ಕೊರೆಸಿದರೂ ನೀರು ಬಾರದೇ ಇರುವಂತಹ ತಾಲ್ಲೂಕು ಬಹುಶಃ ನಮ್ಮ ರಾಜ್ಯದಲ್ಲಿ ಇರುವುದು ಇದೊಂದು ತಾಲ್ಲೂಕು ಕಾಣುತ್ತದೆ. ಅಂತಹ ಒಂದು ಪ್ರದೇಶದಲ್ಲಿ ಇವೊತ್ತಿನ ದಿವಸ ಕೆರೆ ತುಂಬಿಸುವಂತಹ ಯೋಜನೆ ಜಾರಿಗೆ ತಂದಿದ್ದರಿಂದ ಬಹಳಷ್ಟು ನೀರಿನ ಸಮೃದ್ಧತೆಯನ್ನು ಕಾಣಬಹುದಾಗಿದೆ. ಅದರಿಂದಾಗಿ, ಜನ–ಜಾನುವಾರುಗಳಿಗೆ ಶುದ್ಧ ಕುಡಿಯುವ ನೀರು ಮತ್ತು ಅಂತರ್ಜಲ ಮಟ್ಟ ಬಹಳಷ್ಟು ವೃದ್ಧಿಯಾಗುವುದಕ್ಕೆ ಅನುಕೂಲವಾಗಿರುತ್ತದೆ. ಅಂತಹ ಯೋಜನೆಗಳನ್ನು ಹೆಚ್ಚು ಹೆಚ್ಚಾಗಿ ಜಾರಿಗೆ ತರಬೇಕು. ಉದಾಹರಣೆಗೆ ನಮ್ಮ ಮಳವಳ್ಳಿ ತಾಲ್ಲೂಕಿನ ಬಗ್ಗೆ ಹೇಳುವುದಾದರೆ, ಕಾವೇರಿ ನದಿ ಮಳವಳ್ಳಿ ತಾಲ್ಲೂಕಿನಲ್ಲಿಯೇ ಹರಿಯುತ್ತದೆ. ಅಲ್ಲಿಂದ ನೀರನ್ನು ಲಿಫ್ಟ್ ಮಾಡಿ ಮಳವಳ್ಳಿ ತಾಲ್ಲೂಕಿನ ಎಲ್ಲಾ ಕೆರೆಗಳನ್ನು ತುಂಬಿಸುವ ಯೋಜನೆ ಮಾಡಿದರೆ, ಎಷ್ಟೊಂದು ಸಮೃದ್ಧಿಯಾಗುತ್ತದೆ ಎನ್ನುವುದನ್ನು ನೆನಪು ಮಾಡುವುದಕ್ಕೆ ಬಯಸುತ್ತೇನೆ. ಈ ವಿಚಾರದಲ್ಲಿ ಯಾವುದೇ ರಾಜಕೀಯ ಆಗಲಿ ಮತ್ತೊಂದು ಆಗಲಿ ಇರುವುದಿಲ್ಲ. ಆದರೆ, ಇಂತಹ ಸಂದರ್ಭಗಳು ನಮ್ಮ ರಾಜ್ಯದಲ್ಲಿ ಬಂದಾಗ, ಬಿ.ಜೆ.ಪಿ. ಸರ್ಕಾರ ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಇರುವಂತಹ ಸಂದರ್ಭದಲ್ಲಿ ಹಾಗೂ ಕರ್ನಾಟಕ ಜನತೆ ಕೇಂದ್ರಕ್ಕೆ 25 ಲೋಕಸಭಾ ಸದಸ್ಯರನ್ನು ಕೊಟ್ಟಿರುವಂತಹ ಸಂದರ್ಭದಲ್ಲಿ ಇವರೆಲ್ಲರೂ ಕೂಡ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಎಲ್ಲಿಯೋ ಒಂದು ಕಡೆ ಕುಳಿತು ಸಭೆ ನಡೆಸಿ ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಬೇಕು. ಕಾವೇರಿ ನೀರಿಗೋಸ್ಕರ ಅಥವಾ ಮೇಕೆದಾಟು ಯೋಜನೆಗಾಗಿ ನಾವು ಹೋರಾಟ ಮಾಡಲೇಬೇಕು ಎನ್ನುವಂತಹ ಒಂದು ಕೂಗು ಹಾಕಿದರೆ ನಮಗೆಲ್ಲರಿಗೂ ಒಂದು ಸ್ವಲ್ಪ ಸಂತಸ; ನಮೆಲ್ಲರಿಗೂ ಒಂದು ರೀತಿಯ ಧೈರ್ಯ ಅಥವಾ ನಮ್ಮ ರಕ್ಷಣೆಗೆ ಕೇಂದ್ರ ಮತ್ತು ರಾಜ್ಯದಲ್ಲಿರುವ ಬಿ.ಜೆ.ಪಿ. ಸರ್ಕಾರ ಇದೆಯೆಂದು ಜನರು ನಿಟ್ಟುಸಿರು ಬಿಡುತ್ತಾರೆ.

ಅದರ ಜೊತೆಗೆ, ಎರಡೂ ಕಡೆಗಳಲ್ಲಿ ಒಂದೇ ಪಕ್ಷದ ಸರ್ಕಾರ ಅಧಿಕಾರದಲ್ಲಿರುವಾಗ ಕಟಿಬದ್ಧತೆಯಿಂದ ಕೆಲಸ ಮಾಡಿದರೆ, ಈ ಯೋಜನೆಯ ಲಾಭ ನಮ್ಮ ರಾಜ್ಯದ ಜನತೆಗೆ ಆಗುತ್ತದೆ. ಅದರ ಬಗ್ಗೆ ಸರ್ಕಾರ ಇನ್ನೂ ಚಿಂತನೆ ಮಾಡದೇ ಇರುವಂಥದ್ದು, ನನಗೆ ಅತ್ಯಂತ ನೋವಿನ ಸಂಗತಿಯಾಗಿರುತ್ತದೆ. ಇದರಿಂದಾಗಿ, ಖಂಡಿತವಾಗಿಯೂ ಕೂಡ ಈ ಸರ್ಕಾರಕ್ಕೆ ಒಳ್ಳೆಯತನವನ್ನು ಈ ನಾಡಿನ ಜನ ಬಯಸುವುದಿಲ್ಲ. ಇಂತಹ ಸಂದರ್ಭದಲ್ಲಿ ಇಷ್ಟೊತ್ತಿಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುವುದು ಅಥವಾ ಮತ್ತೊಂದು ಮಾಡುವುದಾಗಲಿ ಮಾಡಬೇಕಾಗಿತ್ತು. ಅದರ ಜೊತೆಗೆ, ರಾಜ್ಯದಲ್ಲಿ ಸರ್ವ ಪಕ್ಷಗಳ ಸಭೆ ಕರೆದು ಅದರ ಬಗ್ಗೆ ಒಂದು ಚಿಂತನೆ ಮಾಡಿ ನಾವು ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು; ಕೋರ್ಟಿನ ಮೊರೆ ಹೋಗಬೇಕು; ನ್ಯಾಯಾಧೀಕರಣದ ಮೊರೆ ಹೋಗಬೇಕು; ನೀರು ನಿರ್ವಹಣಾ ಮಂಡಳಿಯ ಮುಂದೆ ಅರ್ಜಿ ಹಾಕಬೇಕು ಅಥವಾ ಕಾನೂನಿನ ಸಮರವನ್ನಾದರೂ ಮಾಡುವ ಸಿದ್ಧತೆಗಳ ಬಗ್ಗೆ ಸರ್ಕಾರ ಇನ್ನೂ ಕಾರ್ಯೋನ್ಮುಖರಾಗದೇ ಇರುವಂಥದ್ದನ್ನು ನಾನು ಖಂಡಿಸುತ್ತೇನೆ. ಹಾಗಾಗಿ, ಈಗಲಾದರೂ ಈ ವಿಚಾರದ ಬಗ್ಗೆ ತತ್‌ಕ್ಷಣ ಒಗ್ಗಟ್ಟಿನ ಹೋರಾಟಕ್ಕೆ ಸರ್ಕಾರ ಸಿದ್ಧತೆ ಮಾಡಬೇಕು ಮತ್ತು ನಮ್ಮ ಈ ಒಂದು ಮೇಕೆದಾಟು ಯೋಜನೆಯನ್ನು ಕೂಡಲೇ ಪೂರ್ಣ ಜಾರಿಗೆ ತರಬೇಕು. ಇದರ ಜೊತೆಗೆ, ತಮಿಳುನಾಡಿನ ಈ ಹೊಸ ಯೋಜನೆಗೆ ಕೇಂದ್ರ ಸರ್ಕಾರದಿಂದ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡಬೇಕು ಮತ್ತು ನ್ಯಾಯಾಲಯದಿಂದ ಕಾನೂನಿನ ಮೊರೆ ಹೋಗಬೇಕೆಂದು ಹೇಳಿ ತಮ್ಮ ಮೂಲಕ ನಾನು ಈಗಿನ ಸರ್ಕಾರದಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ತಮಗೆ ವಂದಿಸುತ್ತೇನೆ. 'ಕಾವೇರಿ ಯೋಜನೆ ವಿಚಾರವಾಗಿ ರಾಜ್ಯಕ್ಕೆ ಅಪಾಯ' ಎನ್ನುವಂತಹ ಹೆಡ್‌ಲೈನ್‌ನಲ್ಲಿ ಬಂದಂತಹ ವಿಚಾರಗಳ ಬಗ್ಗೆ ಬಹಳ ಸುದೀರ್ಘವಾಗಿ ಅನೇಕ ಹಿರಿಯ ಸದಸ್ಯರು ಅದರಲ್ಲಿಯೂ ಕಾವೇರಿ ಕೊಳ್ಳದ ಅಪಾರ ಅನುಭವ ಹೊಂದಿದಂತಹ ಮಾನ್ಯ ಸದಸ್ಯರುಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಳಷ್ಟು ವಿಚಾರಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ನಾನು ಅದನ್ನು ಪುನರುಚ್ಚಾರಣೆ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳು ಆಗಲೇ ಮಾತನಾಡುತ್ತಾ, 'ಉತ್ತರ ಅಥವಾ ದಕ್ಷಿಣ ಅನ್ನಬಾರದು' ಎಂದು ಹೇಳಿದರು. ಹೌದು, ಆ ರೀತಿ ಯಾರು ಹೇಳಬಾರದು. ಅಖಂಡ ಕರ್ನಾಟಕದ ಕನಸು ಕಂಡವರು ನಾವು. ಅದರಲ್ಲಿಯೂ ವಿಶೇಷವಾಗಿ ಕಾವೇರಿ ಮತ್ತು ಕೃಷ್ಣೆ ಕನ್ನಡಾಂಬೆಯ ಎರಡು ಕಣ್ಣುಗಳಿದ್ದಂತೆ. ಮಾನ್ಯ ಸದಸ್ಯರು ಮಾತನಾಡುತ್ತಾ, ಕಾವೇರಿ ಮತ್ತು ಕೃಷ್ಣೆ ನದಿಗಳು ಮನುಷ್ಯನ ಎರಡು ಕಣ್ಣುಗಳು ಎಂದು ಹೇಳಿದರು. ಆದರೆ, ನಾನು ಅವು ಕನ್ನಡ ಮಾತೆಯ ಎರಡು ಕಣ್ಣುಗಳು ಎಂದು ಹೇಳುತ್ತೇನೆ. ದಕ್ಷಿಣಕ್ಕೆ ಕಾವೇರಿ ನದಿ ಜೀವನದಿಯಾದರೆ, ಉತ್ತರಕ್ಕೆ ಕೃಷ್ಣೆ ನದಿ ಜೀವನದಿಯಾಗಿದೆ. ಈ ಸಂದರ್ಭದಲ್ಲಿ ಕಾವೇರಿ ಕೊಳ್ಳದ ಜನತೆಗೆ ನ್ಯಾಯ ಒದಗಿಸಿದಂತಹ ಕೆ.ಆರ್.ಎಸ್., ಅಣೆಕಟ್ಟು ನಿರ್ಮಿಸುವುದಕ್ಕೆ ಕಾರಣೀಭೂತರಾದಂತಹ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಅಂದಿನ ದಿವಾನರಾಗಿದ್ದಂತಹ ಭಾರತರತ್ನ ಸರ್. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಅವರನ್ನು ಇವೊತ್ತಿನ ದಿವಸ ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಅವರು ಇವೊತ್ತಿನ ದಿವಸ ಯಾವ ನ್ಯಾಯ ಒದಗಿಸಿದರೆಂದರೆ, ಕೆ.ಆರ್.ಎಸ್. ಅಣೆಕಟ್ಟು ನಿರ್ಮಾಣ ಮಾಡುವ ಮಧ್ಯದಲ್ಲಿ ಆರ್ಥಿಕ ಅಡಚಣೆಯಿಂದ ಕಾಮಗಾರಿ ನಿಂತು ಹೋದಾಗ, ಅರಮನೆಯ ವಜ್ರ, ವೈಢೂರ್ಯ, ಬಂಗಾರ, ಧನ, ದೌಲತ್ತು ಎಲ್ಲವನ್ನೂ ಬ್ಯಾಂಕಿನಲ್ಲಿ ಒತ್ತೆ ಇಟ್ಟು ಹಣ ತಂದು ಕೆ.ಆರ್.ಎಸ್., (ಕನ್ನಂಬಾಡಿ) ಅಣೆಕಟ್ಟು ನಿರ್ಮಾಣ ಮಾಡಿದ್ದನ್ನು ನಾವು ಇವೊತ್ತಿನ ದಿವಸ ನೆನಪು ಮಾಡಿಕೊಳ್ಳಬೇಕು. ಇದರ ಜೊತೆಗೆ, ಈ ಚಿಂತಕರ ಚಾವಡಿಯನ್ನು 114 ವರ್ಷಗಳ ಹಿಂದೆ ಹುಟ್ಟು ಹಾಕಿದವರು ಸಹ ಅವರೇ ಆಗಿದ್ದಾರೆ. ಈ ದಿನ ಬೆಳಗ್ಗೆ ಮಾನ್ಯ ಮುಖ್ಯಮಂತ್ರಿಯವರು ಈ ಸದನದಲ್ಲಿ ಹಾಜರಿದ್ದಾಗ ಸಾಕಷ್ಟು ವಿಷಯಗಳ ಬಗ್ಗೆ ಚರ್ಚೆಯಾಗಿರುತ್ತದೆ.

(ಮುಂದು)

**(342) 09.03.2021 5.30 ವೈಎಲ್-ಜಿಆರ್**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಅತ್ಯಂತ ಪ್ರತಿಷ್ಠಿತ ಸಕ್ಕರೆ ಕಾರ್ಖಾನೆಯಾದ Mysugar (Mysore Sugar Company Ltd.,) ಎಂಬುದು ಈ ದೇಶಕ್ಕೆ ಸ್ವತಂತ್ರ ಬರುವ ಪೂರ್ವದಲ್ಲಿಯೇ ಹುಟ್ಟಿದ್ದು. ಕನ್ನಂಬಾಡಿ ಅಣೆಕಟ್ಟು, ಸಕ್ಕರೆ ಕಾರ್ಖಾನೆ ಹಾಗೂ ಚಿತಂಕರ ಛಾವಣಿಯಾದ ಮೇಲ್ಮನೆಯಲ್ಲಿ ಉಜ್ವಲ ಇತಿಹಾಸವುಳ್ಳ ಪವಿತ್ರ ಸದನವನ್ನು ಹುಟ್ಟು ಹಾಕಿದವರು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್. ನಾನು ಒಬ್ಬನೇ ಯೋಚನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದಂತಹ ಸಂದರ್ಭದಲ್ಲಿ 'ಪ್ರಭುತ್ವದ ಆಡಳಿತ ಬೇಡ ಎಂದು ಇವತ್ತು ಪ್ರಜೆಗಳ ಆಡಳಿತ ಬಂದಿರಬೇಕೆಂದು' ನನಗೆ ಅನ್ನಿಸುತ್ತದೆ. ರಾಜರ ಆಡಳಿತ ಮತ್ತು ಪ್ರಜೆಗಳ ಆಡಳಿತವನ್ನು ತುಲನಾತ್ಮಕವಾಗಿ ನೋಡಿದಾಗ ನಾಲ್ವಡಿ ಕೃಷ್ಣರಾಜ ಒಡೆಯರು ಜಲಾಶಯವನ್ನು ನಿರ್ಮಿಸಲು ತಮ್ಮ ಸ್ವಂತ ಅರಮನೆಯ ಸಂಪತ್ತನ್ನೇ ಒತ್ತೆಯಾಗಿಟ್ಟರು. ಪ್ರಜಾಪ್ರಭುತ್ವ ಬಂದ ಮೇಲೆ ಜಲಾಶಯವನ್ನು ನಿರ್ಮಿಸಿಲ್ಲ. ಪ್ರಭುತ್ವದ ಆಡಳಿತದಲ್ಲಿ ನಿರ್ಮಿಸಿರುವಂಥದು. ಅದನ್ನು ನಾವು ಈಗ ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ತಮ್ಮ ಸ್ವಂತ ವಸ್ತುಗಳಾದ ವಜ್ರ, ವೈಡೂರ್ಯ, ಬಂಗಾರವನ್ನು ಒತ್ತೆಯಾಗಿಟ್ಟಿದ್ದರು. ಆದರೆ, ಈಗಿನ ಪ್ರಜಾಪ್ರಭುತ್ವದ ವ್ಯವಸ್ಥೆ ಯಾವ ರೀತಿ ಇದೆ ಎಂದರೆ, ಶಾಸಕರಾಗಲಿ, ಸಚಿವರಾಗಲಿ ಒಂದೇ ಅಧಿಕಾರಾವಧಿಯಲ್ಲಿ ಆತನ ಮನೆಯ ತುಂಬಾ ಸಂಪತ್ತು ತುಂಬಿ ತುಳುಕಾಡುತ್ತದೆ. ರಾಜಕಾರಣ ಮಾಡಿದರೆ ಈ ರೀತಿ ಮಾಡಬೇಕೆನ್ನುವ ರೀತಿ ಸಂಪಾದನೆ ಮಾಡುತ್ತಾರೆ. ಆದರೆ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಯಾವ ರೀತಿ ಜನಪರ ಚಿಂತನೆ ಮಾಡುತ್ತಿದ್ದರು ಎಂಬುದನ್ನು ಯೋಚನೆ ಮಾಡಿದರೆ ಬಹಳ ಆಶ್ಚರ್ಯವಾಗುತ್ತದೆ. ನಾನು ಮಂಡ್ಯಕ್ಕೆ ಹೋಗಿದ್ದಂಥ ಸಂದರ್ಭದಲ್ಲಿ ನಮ್ಮ ಸ್ನೇಹಿತರೊಬ್ಬರು ಬೆಳಗ್ಗೆ ತಿಂಡಿಗೆ ನನ್ನನ್ನು ಅವರ ಮನೆಗೆ ಆಹ್ವಾನಿಸಿದರು. ಆಗ ನಾನು ಅವರ ಮನೆಗೆ ಹೋದಾಗ ಆ ಮನೆಯಲ್ಲಿದ್ದ ಹೆಣ್ಣು ಮಕ್ಕಳು ಒಂದು ಭಾವಚಿತ್ರಕ್ಕೆ ಪೂಜೆ ಮಾಡುತ್ತಿದ್ದರು. ನಾನು ಸಹ ಆ ಭಾವಚಿತ್ರ ಯಾರದು ಇರಬಹುದೆಂದು ತಿಳಿದುಕೊಳ್ಳುವ ಆಸಕ್ತಿಯಿಂದಾಗಿ ಆ ಭಾವ ಚಿತ್ರದ ಸಮೀಪಕ್ಕೆ ಹೋಗಿ ನೋಡಿದರೆ, ಅದು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಶ್ರೀ ಸರ್.ಎಂ.ವಿಶ್ವೇಶ್ವರಯ್ಯನವರು ಜೊತೆಯಲ್ಲಿರುವ ಭಾವ ಚಿತ್ರವಾಗಿತ್ತು. ಆಗ ನಾನು 'ಏತಕ್ಕೆ ಇವರುಗಳ ಭಾವಚಿತ್ರವನ್ನಿಟ್ಟುಕೊಂಡು ಪೂಜೆ ಮಾಡುತ್ತಿದ್ದೀರಿ ಎಂದು ಕೇಳಿದ್ದೆ. ಅದಕ್ಕೆ ಅವರು ನಮ್ಮ ಮನೆಯಲ್ಲಿ ಮಾತ್ರವಲ್ಲ, ಪ್ರತಿಯೊಂದು ಮನೆಯಲ್ಲಿಯು ಇವರುಗಳ ಭಾವಚಿತ್ರ ಇಟ್ಟು ಪೂಜೆ ಮಾಡುತ್ತಿದ್ದಾರೆ' ಎನ್ನುವಂಥ ಮಾತನ್ನು ಹೇಳಿದರು. ಈಗಾಗಲೇ ಸಿ.ಎಂ.ಲಿಂಗಪ್ಪನವರು ಬಹಳ ಚೆನ್ನಾಗಿ ಮಾತನಾಡಿದರು. ಇವತ್ತು ಮಂಡ್ಯದಲ್ಲಿ ಎಲ್ಲಿ ನೋಡಿದರೂ ಕಣ್ಣಿಗೆ ಹಚ್ಚು ಹಸಿರಿನಿಂದ ಕಾಣುವಂಥ ಭತ್ತ, ಕಬ್ಬು ಬೆಳೆ ಸಮೃದ್ಧಿಯಾಗುವುದಕ್ಕೆ ಅವರು ಕಾರಣಕರ್ತರಾಗಿದ್ದು, ಅವರಿಗೆ ಋಣಿಯಾಗಿರಬೇಕೆಂದು ಅವರ ಭಾವಚಿತ್ರವನ್ನಿಟ್ಟು ಪೂಜೆ ಮಾಡುತ್ತಿದ್ದಾರೆ. ಜೊತೆಗೆ ಓಣಿಗಳಲ್ಲೆಲ್ಲಾ, ಸರ್ಕಲ್‌ಗಳಲ್ಲೆಲ್ಲಾ ಅವರ ಪುತ್ಥಳಿಯನ್ನು ಕಾಣುತ್ತೇವೆ. ರಾಜರು ಇಷ್ಟೆಲ್ಲಾ ಕಷ್ಟಪಟ್ಟು ನೋವನ್ನು ಅನುಭವಿಸಿ, ರಾಜ್ಯದ ಜನತೆಗೆ, ಕಾವೇರಿ ಕುಲದವರಿಗೆ ನ್ಯಾಯ ಒದಗಿಸಿದ್ದಾರೆ, ಅದನ್ನು ಹೊಸದಾಗಿ ಮಾಡುವುದಕ್ಕೆ ಹೋಗುವುದು ಬೇಡ. ಕೊನೆಪಕ್ಷ ಅದನ್ನು ಉಳಿಸಿಕೊಂಡು ಹೋಗುವ ಕೆಲಸವಾದರೂ ನಮ್ಮಿಂದ ಆಗಬೇಕಲ್ಲವೇ? ಕೃಷ್ಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನದಿಯ ವಿಚಾರಕ್ಕೆ ಸಂಬಂಧಿಸಿದಂತೆ, 519.6 ಮೀಟರ್ ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು 524.26 ಮೀಟರ್ ಎತ್ತರಕ್ಕೆ ಏರಿಸುವ ಮೊದಲು ಸದ್ಯದ ಪರಿಸ್ಥಿತಿಯಲ್ಲಿ,... ಕಳೆದ ಎರಡು ವರ್ಷಗಳಿಂದ ಪ್ರವಾಹ ಬಂದು 400, 500 ಟಿ.ಎಂ.ಸಿ., ನೀರು ಆಂಧ್ರಪ್ರದೇಶಕ್ಕೆ ಹರಿದು ಹೋಗಿದೆ. ಕಾವೇರಿ ನದಿಯಿಂದ 100 ಟಿ.ಎಂ.ಸಿ. ನೀರು ತಮಿಳುನಾಡಿಗೆ ಹರಿದು ಹೋಗಿದ್ದರೆ, 300, 400 ಟಿ.ಎಂ.ಸಿ. ನೀರು ಆಂಧ್ರಪ್ರದೇಶಕ್ಕೆ ಹೋಗಿದ್ದೆ. ಸರ್ವೋಚ್ಚ ನ್ಯಾಯಾಲಯದಲ್ಲಿ 'ವ್ಯರ್ಥವಾಗಿ ಸಮುದ್ರಕ್ಕೆ ಹೋಗುವ ನೀರು ಏನಿದೆ, ಅದನ್ನು ಆಂಧ್ರಪ್ರದೇಶದವರು temporary structure ಮಾಡಿಕೊಂಡು, ಆ ನೀರನ್ನು ಬಳಕೆ ಮಾಡಬೇಕೆಂದು' ತೀರ್ಪು ನೀಡಿದೆ. ಆದರೆ, ಅದಕ್ಕೆ it should not be a permanent structure, ಶಾಶ್ವತ ಕಟ್ಟಡವಾಗಬಾರದು ಎಂದು ಷರತ್ತನ್ನು ವಿಧಿಸಲಾಗಿದೆ. ನಾಳೆ ದಿವಸ easementary rights claim ಮಾಡುವ ಸಾಧ್ಯತೆ ಇರುತ್ತದೆ. 2018ನೇ ಸಾಲಿನಲ್ಲಿ ಸರ್ವೋಚ್ಚ ನ್ಯಾಯಾಲಯದ ಹೊರಡಿಸಿದ ತೀರ್ಪಿನ ಪ್ರಕಾರ 404 ಟಿ.ಎಂ.ಸಿ., ನೀರು ತಮಿಳುನಾಡಿಗೆ ಹಂಚಿಕೆಯಾದರೆ, 284 ಟಿ.ಎಂ.ಸಿ., ನೀರನ್ನು ಕರ್ನಾಟಕಕ್ಕೆ ಹಂಚಿಕೆ ಮಾಡಿದ್ದಾರೆ. ಬಿಳಿಗುಂಡ್ಲು ಜಲಾಶಯದಿಂದ 177 ಟಿ.ಎಂ.ಸಿ., ನೀರನ್ನು ನಾವು ಬಳಸುತ್ತಿದ್ದೇವೆ. 177 ಟಿ.ಎಂ.ಸಿ.,ನೀರು ಬಿಳಿಗುಂಡ್ಲು ಜಲಾಶಯದಿಂದ ಹೊರಗೆ ಹೋಗಿ ಅಂದಾಜು 40 ರಿಂದ 45 ಟಿ.ಎಂ.ಸಿ., ನೀರು ಹೆಚ್ಚುವರಿಯಾಗಿ ನಮಗೆ ಉಳಿಯುತ್ತದೆ. ಆ ಹೆಚ್ಚುವರಿ ನೀರನ್ನು ನಾವು ಸದ್ವಿನಿಯೋಗ ಮಾಡಿಕೊಂಡು ಮೇಕೆದಾಟು ಜಲಾಶಯವನ್ನು ನಿರ್ಮಾಣ ಮಾಡಬೇಕಿದೆ. ಆ ಜಲಾಶಯವನ್ನು ನಿರ್ಮಿಸುವ ಉದ್ದೇಶವೇನೆಂದರೆ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸಬಹುದು. ಮೇಕೆದಾಟು ಜಲ ವಿದ್ಯುತ್ ಯೋಜನೆಯ ಜೊತೆಗೆ ಮಾರ್ಕಂಡೇಯ ಯೋಜನೆಯಿಂದ ನಮ್ಮ ರಾಜ್ಯವು higher riparian State, ತಮಿಳುನಾಡು lower riparian State. ನಾವು ನೀರು ಬಿಟ್ಟಾಗ ಅಲ್ಲಿಗೆ ಹೋಗುವಂತಾಗಬೇಕು. ಆದರೆ, ನನಗೆ ಇರುವಂಥ ಆತಂಕವೇನೆಂದರೆ, ಆಲಮಟ್ಟಿ ಜಲಾಶಯದಿಂದ ಕೃಷ್ಣ ನದಿಯ ನೀರು ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶದ ಮೂಲಕ ಹರಿದು ಸಮುದ್ರಕ್ಕೆ ಸೇರುತ್ತದೆ. ಅದನ್ನು temporary structure ಮಾಡಿಕೊಂಡು ಉಪಯೋಗ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದ್ದಾರೆ. But, they cannot claim the same as a permanent structure. ನಾಳೆ ದಿವಸ 519.60 ಮೀಟರ್‌ನಿಂದ 524.26 ಮೀಟರ್‌ನಷ್ಟು ಆಲಮಟ್ಟಿ ಜಲಾಶಯ ಎತ್ತರವಾಗಬಹುದು. ಕೃಷ್ಣ ಮೇಲ್ದಂಡೆ ಯೋಜನೆಯ ಮೂರನೇ ಹಂತ ಸುಮಾರು ಒಂದು ಲಕ್ಷ ಕೋಟಿ ಮೌಲ್ಯದ ಯೋಜನೆಯಾಗಿದೆ. ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಾರಿ ಸರ್ಕಾರವು ರೂ.5600.00 ಕೋಟಿ ನೀಡಿದೆ. ಆದರೆ, ಆ ಹೆಚ್ಚುವರಿ ನೀರನ್ನು ಅವರು ಉಪಯೋಗ ಮಾಡುತ್ತಾರೆ. ಅದಕ್ಕೆ ಸರ್ವೋಚ್ಚ ನ್ಯಾಯಾಲಯವು ಷರತ್ತನ್ನು ವಿಧಿಸಿದೆ, ಆಲಮಟ್ಟಿ ಜಲಾಶಯವನ್ನು ಎತ್ತರಿಸಿದಾಗ ನಮ್ಮ ಪಾಲಿನ 907 ಟಿ.ಎಂ.ಸಿ., ನೀರಿನ ಹಕ್ಕು ಏನಿದೆ, more or less of one or two T.M.C., subject to correction ಇರುತ್ತದೆ. ಕಾವೇರಿ ನದಿಯ ಮೂರುವರೆ ಪಟ್ಟು ಹೆಚ್ಚು ನೀರು ಕೃಷ್ಣ ನದಿಗೆ ಹಂಚಿಕೆಯಾಗಿದೆ. ಅವರು ಆ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಂಡು, ನಮಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ನಾಳೆ ದಿವಸ ಮತ್ತೆ ನಮಗೆ ಇಷ್ಟು ನೀರು ಬೇಕೆಂದು claim ಮಾಡಬಾರದು. ಈಗ ತಮಿಳುನಾಡಿನಲ್ಲಿ 760 ಕಿಲೋ ಮೀಟರ್ ಉದ್ದದ ಕಾವೇರಿ, ವೆಲ್ಲಾರ್, ವೈಗೈ, ಗುಂಡಾರ್ ನದಿಗಳನ್ನು ಮೂರು ಹಂತಗಳಲ್ಲಿ ಜೋಡಣೆಯನ್ನು ಮಾಡುವುದಕ್ಕೆ ಹೊರಟಿದ್ದಾರೆ. ಮೊದಲನೆ ಹಂತಕ್ಕೆ ಈಗಾಗಲೇ ತಮಿಳುನಾಡಿನ ಮುಖ್ಯಮಂತ್ರಿಗಳಾದ ಶ್ರೀ ಪಳನಿಸ್ವಾಮಿಯವರು ಭೂಮಿ ಪೂಜೆ ಮಾಡಿದ್ದು, ಒಂದನೇ ಹಂತದ ಕಾಮಗಾರಿ ಕೆಲಸ ಪ್ರಾರಂಭಗೊಂಡಿದೆ. ಅವರು ಯಾರ ಹತ್ತಿರ ಸಹ ಈ ನದಿಗಳ ಜೋಡಣೆ ಬಗ್ಗೆ ಮಾತನಾಡಿಯೇ ಇಲ್ಲ. ಮಾನ್ಯ ಗೋವಿಂದ ಕಾರಜೋಳರವರು ಇಲಾಖೆಯ ಉಸ್ತುವಾರಿ ಸಚಿವರಾಗಿದ್ದು, ಶ್ರೀ ಪಳನಿಸ್ವಾಮಿಯವರು ನದಿಗಳ ಜೋಡಣೆ ಬಗ್ಗೆ ಮಾನ್ಯ ಸಚಿವರೊಂದಿಗೆ ಏನಾದರೂ ಚರ್ಚೆ ಮಾಡಿದ್ದಾರೆಯೇ? ಕಾವೇರಿ ನದಿಯ ಜೊತೆಗೆ 3 ನದಿಗಳನ್ನು ಸೇರಿಸಿ, ಹದಿನಾಲ್ಕು ಸಾವಿರದ ನಾಲ್ಕು ನೂರು ಕೋಟಿಯ ಬೃಹತ್ ಯೋಜನೆಯನ್ನು ಮೂರು ಹಂತದಲ್ಲಿ ಮಾಡುತ್ತೇವೆ ಎಂದು ಪತ್ರಿಕೆಯಲ್ಲಿ ವರದಿಯಾಗಿದ್ದೆ. ಈಗಾಗಲೇ ಮಾನ್ಯ ನಾರಾಯಣಸ್ವಾಮಿಯವರು ಮಾತನಾಡಿದಕ್ಕೆ ಮಾನ್ಯ ಸಚಿವರು ಅವರಿಗೆ ವಾಪಸ ಬೈದರು. ಪ್ರಜಾವಾಣಿ ಪತ್ರಿಕೆಯನ್ನು ಉಲ್ಲೇಖ ಮಾಡಿ, ಮಾನ್ಯ ನಾರಾಯಣಸ್ವಾಮಿಯವರು ಹೇಳಿದರು. ಕೇಂದ್ರ ಸರ್ಕಾರದ ಆರ್ಥಿಕ ಸಹಾಯ ಈ ಯೋಜನೆಗೆ ಇದೆ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು ತಮಿಳುನಾಡಿಗೆ ಭೇಟಿ ನೀಡಿದಾಗ ಕೆಲವು ಕಾರಣದಿಂದಾಗಿ ಆ ಕಾರ್ಯಕ್ರಮವು ರದ್ದಾಗಿತ್ತು. ಇದರಿಂದಾಗಿ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು ಮತ್ತೊಮ್ಮೆ ಬಂದು ಆ ಕಾರ್ಯಕ್ರಮಕ್ಕೆ ಅಡಿಪಾಯ ಹಾಕುತ್ತಾರೆ ಎಂದು ಪ್ರಜಾವಾಣಿ ಪತ್ರಿಕೆಯಲ್ಲಿ ವರದಿಯಾಗಿದೆ. ಈ ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗದ ಜೊತೆಗೆ ಮಾಧ್ಯಮರಂಗವೂ ಸೇರ್ಪಡೆಗೊಂಡು ನಾಲ್ಕು ಅಂಗಗಳಿವೆ. ನಾವು ಯಾವುದನ್ನು ನಂಬಬೇಕು. ಆ ರೀತಿ ಇಲ್ಲವೆಂದರೆ, ಸರ್ಕಾರವು ಅದು ಶುದ್ಧ ಸುಳ್ಳು, ಹಸಿಸುಳ್ಳು, ತಪ್ಪು ಎಂದು ಹೇಳಲಿ. ನಮಗೂ ಸಹ ಅದೇ ಮಾತು ಬೇಕಾಗಿರುವುದು. ಒಂದು ವೇಳೆ ಸುಳ್ಳಾಗಿದ್ದರೆ ನಮಗೆ ಆಕಾಶವೇ ಸಮೀಪವಾದಷ್ಟು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂತೋಷವಾಗುತ್ತದೆ. ಅದು ಸತ್ಯವಾಗಿದರೆ ನಾವು ಸತ್ತೇ ಹೋದಂತಾಗುತ್ತದೆ. ಇಂತಹ ಬೃಹತ್ ಯೋಜನೆಯಲ್ಲಿ ಮೂರು ಹಂತದಲ್ಲಿ ಆ ನೀರನ್ನು ಬಳಕೆ ಮಾಡಿಕೊಂಡು, ಒಂದನೇ ಹಂತದಲ್ಲಿ 342 ಕೆರೆಗಳಿಗೆ ನೀರನ್ನು ತುಂಬಿಸಿ, 42,120 ಎಕರೆ ಜಾಗದಲ್ಲಿ ನೀರಾವರಿ ಮಾಡುತ್ತಾರೆ. ಎರಡನೇ ಹಂತದಲ್ಲಿ 220 ಕೆರೆಗಳಿಗೆ ನೀರನ್ನು ತುಂಬಿಸಿ, 23,245 ಎಕರೆ ಜಾಗದಲ್ಲಿ ನೀರಾವರಿ ಮಾಡುತ್ತಾರೆ.

**(ಮುಂದು)**

**(343)09.03.2021/5.40/ಎಸ್‌ಕೆ-ಎಂಡಿ**

**ಶ್ರೀ ಎಸ್.ಆರ್. ಪಾಟೀಲ್ (ಮುಂದು):-**

ಮೂರನೇ ಹಂತದಲ್ಲಿ 492 ಕೆರೆಗಳನ್ನು ತುಂಬಿಸಿ, ಈ ಹದಿನಾಲ್ಕು ಸಾವಿರ ಕೋಟಿ ವೆಚ್ಚದಲ್ಲಿ ಮೂರು ನದಿಯ ಜೋಡಣೆಯಿಂದ ಸುಮಾರು 44,547 ಕೆರೆಗಳನ್ನು ತುಂಬಿಸಿದ್ದರಿಂದ ಸುಮಾರು 1,09,962 ಎಕರೆ ನೀರಾವರಿಯಾಗುತ್ತದೆ. ಸುಮಾರು 1054 ಕೆರೆಗಳಿಗೆ ನೀರನ್ನು ತುಂಬಿಸುತ್ತಾರೆ. ತಮಿಳು ನಾಡಿನ ದಕ್ಷಿಣ ಭಾಗದಲ್ಲಿರುವ ಎಲ್ಲಾ ಜಿಲ್ಲೆಗಳಲ್ಲಿ ಅಂತರ್ಜಲ ವೃದ್ಧಿಯಾಗುತ್ತದೆ. Water table will come up. ಇಂತಹ ಬೃಹತ್ ಯೋಜನೆಗೆ ಅಡಿಗಲ್ಲು ಹಾಕಿದ್ದಾರೆ. ಪ್ರಧಾನ ಮಂತ್ರಿಯವರು ಬಂದಾಗ, ಅವರನ್ನು ಕೂಡ ಅಲ್ಲಿಗೆ ಕರೆದುಕೊಂಡು ಹೋಗಿ, ಅಡಿಗಲ್ಲನ್ನು ಹಾಕಿಸೋಣವೆಂಬುದರ ಬಗ್ಗೆ ಪತ್ರಿಕೆಯಲ್ಲಿ ಬಂದಿದ್ದರ ಬಗ್ಗೆ ನಾನು ಹೇಳುತ್ತಿದ್ದೇನೆ. Whether it is right or wrong, ಅದು ತಪ್ಪು ಎಂದರೆ ಬಹಳ ಸಂತೋಷ. ಇದೆಲ್ಲಾ ಸುಳ್ಳು, ಅವರು ಅಡಿಪಾಯನೇ ಹಾಕಿಲ್ಲ ಮತ್ತು ಈ ಯೋಜನೆ ಇಲ್ಲ ಎಂದರೆ, ನಮ್ಮ ಎರಡು ಕಣ್ಣು ಕುರುಡೇ? ಕನ್ನಡ ನಾಡಿನ ನೆಲ, ಜಲ ಮತ್ತು ಗಡಿ ಪ್ರಶ್ನೆ ಬಂದಾಗ, ನಾವು ಪಕ್ಷ, ಜಾತಿ, ಧರ್ಮವನ್ನು ಮೀರಿ, ಇಡೀ ಕನ್ನಡಿಗರೆಲ್ಲರೂ ಒಂದಾಗಿ ಹೋರಾಟ ಮಾಡುತ್ತೇವೆ. ಯಾರಿಗೂ ಕೂಡ ಪಕ್ಷ, ಪಂಗಡ ಯಾವುದೇ ಸಂಬಂಧವಿರುವುದಿಲ್ಲ. ಕನ್ನಡ ನಾಡಿನ ನೆಲ, ಜಲ ಮತ್ತು ಗಡಿ ಪ್ರಶ್ನೆ ಬಂದಾಗ, ನಾವೆಲ್ಲರೂ ಒಂದೇ ಕನ್ನಡಾಂಬೆಯ ಮಕ್ಕಳಾಗಿ, ಒಂದೇ ರಕ್ತವನ್ನು ಹಂಚಿಕೊಂಡು ಹುಟ್ಟಿದ ಸಹೋದರ, ಸಹೋದರಿಯರು ಎಂಬ ಭಾವನೆಯಿಂದ ನಾವೆಲ್ಲರೂ ಹೋರಾಟ ಮಾಡುತ್ತೇವೆ. ಸುಮಾರು 14,400 ಕೋಟಿ ರೂಪಾಯಿಗಳ ಇಂತಹ ಈ ಒಂದು ಬೃಹತ್ ಯೋಜನೆ ಏನಾದರೂ ಕಾರ್ಯಗತವಾದರೆ, ಮೇಕೆದಾಟು ಯೋಜನೆ, ಜಲ ವಿದ್ಯುತ್ ಯೋಜನೆ, ಮಾರ್ಕಂಡಯ್ಯ ಯೋಜನೆ, they will get an easementary right. You cannot use single drop of water. 45 ಟಿ.ಎಂ.ಸಿ. ಹೆಚ್ಚುವರಿ ನೀರನ್ನು ಉಪಯೋಗ ಮಾಡುವುದಕ್ಕೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುವುದಿಲ್ಲ. ಅವರು permanent structure ಮಾಡಿ, ನದಿಯ ಜೋಡಣೆ ಮಾಡುತ್ತಾರೆ. ಆಗ ನಾವು ಅವರಿಗೆ ಏನು ಮಾಡುವುದು? ಈಗ ಸರ್ಕಾರಕ್ಕೆ ನೀವೇನಾದರೂ ಈ ವಿಚಾರದಲ್ಲಿ ಕೇಳಿದ್ದೀರಾ ಎಂದು ಪ್ರಶ್ನಿಸಬೇಕಾಗುತ್ತದೆ. ಬಜೆಟ್ ಪುಸ್ತಕದಲ್ಲಿ ನೀರಾವರಿಯ ಬಗ್ಗೆ ಉಲ್ಲೇಖಿಸಿರುವುದನ್ನು ಓದಿಕೊಂಡು ಬಂದು ನಾನು ಹೇಳಿದ್ದೇನೆ. ಈ ಮಹತ್ವವುಳ್ಳ ವಿಚಾರದ ಬಗ್ಗೆ ನಾನು ತಮ್ಮ ಗಮನಕ್ಕೆ ತರುತ್ತೇನೆ. ನಿನ್ನೆ ಬಜೆಟ್ ಮಂಡನೆ ಮಾಡಿರುವಂತಹ ಬಜೆಟ್ ಪುಸ್ತಕದ ಪುಟ ಸಂಖ್ಯೆ 30, 90ನೇ paragraph ದಲ್ಲಿ ತುಂಗಾಭದ್ರಾ ಜಲಾಶಯದಲ್ಲಿ ಹೂಳು ತುಂಬಿ ನೀರಿನ ಸಂಗ್ರಹಣೆಯಲ್ಲಿ ಉಂಟಾಗಿರುವ ಕೊರತೆಯನ್ನು ಸರಿದೂಗಿಸಲು ಕೊಪ್ಪಳ ಜಿಲ್ಲೆಯ ನವಲಿ ಬಳಿ ಸಮಾನಾಂತರ ಜಲಾಶಯ ನಿರ್ಮಿಸುವ ಕುರಿತು ಈಗಾಗಲೇ ಘೋಷಿಸಿದಂತೆ ವಿವರವಾದ ಯೋಜನಾ ವರದಿ ತಯಾರಿ ಕಾರ್ಯ ಕೈಗೊಂಡಿದ್ದು, ಯೋಜನಾ ಸರ್ವೇ ಕಾರ್ಯ ಪ್ರಗತಿಯಲ್ಲಿರುತ್ತದೆ. ಈ ಭಾಗದ ಪ್ರದೇಶದಲ್ಲಿ ಹೆಚ್ಚು ಮಳೆಯಾಗಿ ತುಂಗಾಭದ್ರಾ ನದಿಗೆ ಹೆಚ್ಚು ನೀರು ಬಂದರೆ, ಹೆಚ್ಚುವರಿ ನೀರು ನಮಗೆ ದೊರೆತರೆ, ಆ ಸಮಾನಾಂತರ ಜಲಾಶಯವನ್ನು ಕೊಪ್ಪಳ ಜಿಲ್ಲೆ ನವಲಿ ಬಳಿ ನಿರ್ಮಾಣ ಮಾಡಬೇಕೆಂದು ನಾವು ಕೈಗೊಂಡಿದ್ದೇವೆ. ಆದರೆ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದರೆ, ಈ ಬಗ್ಗೆ ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳೊಂದಿಗೆ ಸಮಾಲೋಚಿಸಿ ಸೂಕ್ತ ಸಹಮತಿಯೊಂದಿಗೆ ಶೀಘ್ರವಾಗಿ ಕಾರ್ಯಾನುಷ್ಠಾನ ಮಾಡಲಾಗುವುದು. ನಮ್ಮಲ್ಲಿ ಹೆಚ್ಚುವರಿ ನೀರು (surplus water) ಉಪಯೋಗ ಮಾಡಬೇಕಾದರೆ, parallel project ನ್ನು reservoir ಮಾಡಬೇಕಲ್ಲಾ, ಅದಕ್ಕೆ ಆಂಧ್ರ ಪ್ರದೇಶ ಮತ್ತು ತೆಲಂಗಾಣದವರು ಅವರನ್ನು ನಾವು ಕೇಳಿ, ಅವರು ಒಪ್ಪಿದರೆ, ಬಾಕಿಯವರನ್ನು ಕೇಳುವ ಹಾಗಿಲ್ಲ. ಈಗ ಅವರೇನು ನಮ್ಮನ್ನು ಕೇಳಿದ್ದಾರಾ? ಸುಮಾರು 14,400 ಕೋಟಿ ರೂಪಾಯಿ ವೆಚ್ಚದ ಯೋಜನೆಗೆ ಒಂದು ಸಾವಿರಕ್ಕೂ ಹೆಚ್ಚು ಕೆರೆಗಳು, ಒಂದು ಲಕ್ಷಕ್ಕೂ ಹೆಚ್ಚು ಎಕರೆ ಭೂಮಿಯನ್ನು ನೀರಾವರಿ ಮಾಡುವಂತಹ ಬೃಹತ್ ಯೋಜನೆಗೆ ಅಡಿಗಲ್ಲು ಹಾಕಿ, ಶಂಕುಸ್ಥಾಪನೆ ಆಗಿರುವ ಬಗ್ಗೆ ಪತ್ರಿಕೆಯಲ್ಲಿ ಹೇಳಿರುವಂತಹದ್ದು ಸರಿಯಿದೆ. ಕೇಂದ್ರ ಸರ್ಕಾರದ ಆರ್ಥಿಕ ನೆರವು ಕೂಡ ದೊರೆಯುತ್ತದೆ ಎಂದು ಹೇಳುತ್ತಾರೆ. ಮುಂದೆ ನಮ್ಮ ಗತಿ ಏನು? ಅದಕ್ಕೆ ಮಾನ್ಯ ನಾರಾಯಣಸ್ವಾಮಿಯವರು ಹೇಳಿದರು. ಈ ರಾಜ್ಯದಲ್ಲಿರುವ ಭಾರತೀಯ ಜನತಾ ಪಕ್ಷದ ಇಪ್ಪತ್ತಾರು ಜನರನ್ನು ಈ ರಾಜ್ಯದ ಜನರು ಆಶೀರ್ವಾದ ಮಾಡಿ, ಲೋಕಸಭೆಯ ಸದಸ್ಯರನ್ನಾಗಿ ಆಯ್ಕೆ ಮಾಡಿ ಕಳುಹಿಸಿದ್ದಾರೆ. ತಾವು ಮಂಡ್ಯದ ಒಬ್ಬರಿಗೆ ಸಪೋರ್ಟ್ ಮಾಡಿದ್ದೀರಿ. ಮಾನ್ಯ ಬಿ.ಸಿ. ಪಾಟೀಲ್‌ರವರೇ, ನಮ್ಮನ್ನು ಬಿಟ್ಟು, ತಾವೆಲ್ಲರೂ ಕೂಡಿ 120 ಕ್ಕಿಂತ ಹೆಚ್ಚಿಗೆ ಇದ್ದೀರಾ. ತಾವು ಮೊನ್ನೆ ಭಾರತೀಯ ಜನತಾ ಪಕ್ಷದಿಂದ ಟಿಕೆಟ್ ತೆಗೆದುಕೊಂಡು ಬಂದು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚುನಾವಣೆಯಿಂದ ಆಯ್ಕೆಯಾಗಿ ಬಂದಿರಿ. ಈ ರಾಜ್ಯದ ಜನರು 120 ಕ್ಕಿಂತ ಹೆಚ್ಚು ಜನ ಶಾಸಕರನ್ನು ವಿಧಾನ ಸಭೆಗೆ ಆಯ್ಕೆ ಮಾಡಿದ್ದಾರೆ ಮತ್ತು 26 ಜನರನ್ನು ಲೋಕಸಭೆ ಸದಸ್ಯರಾಗಿ ಆಯ್ಕೆ ಮಾಡಿದ್ದಾರೆ. ಎ.ಐ.ಎ.ಡಿ.ಎಂ.ಕೆ. ಯವರ ಜೊತೆ ರಾಜಕೀಯ ಮೈತ್ರಿಯಿದೆ. ನನಗೆ ಅನಿಸಿದ ಮಟ್ಟಿಗೆ ಭಾರತ ಜನತಾ ಪಕ್ಷದ ಒಬ್ಬ ಎಂ.ಎಲ್.ಎ. ಯವರು ಇದ್ದಾರೆ ಎಂಬ ಬಗ್ಗೆ ಮಾನ್ಯ ಯೊಗೇಶ್ವರ್‌ರವರೇ ತಮಗೆ ಗೊತ್ತಿರಬೇಕು. ಒಬ್ಬರಿದ್ದಾರೆ ಅಥವಾ ಇಬ್ಬರಿದ್ದಾರೆ ಎಂಬುದು ನನಗೆ ಗೊತ್ತಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):–** ಶೂನ್ಯ ಇದ್ದಾರೆ.

**Sri S.R.PATIL:-** It is zero. It is most authenticated information. ತಮ್ಮದು ಏನೂ ಇಲ್ಲ. ತಮ್ಮ ಬೀಜನೇ ಮೊಳಕೆ ಹೊಡೆದಿಲ್ಲ. ಅವರ ಜೊತೆ ಏನಪ್ಪಾ ನಿಮ್ಮದು? Double Engine ಸರ್ಕಾರ. ಬೆಂಗಳೂರಿನಲ್ಲಿ ಒಂದು ಇಂಜಿನ್, ದೆಹಲಿಯಲ್ಲಿ ಒಂದು ಇಂಜಿನ್ ಈ ರೀತಿ ಎರಡು ಇಂಜಿನ್‌ಗಳಿವೆ. ಯಾರು ಎಷ್ಟು powerful ಇರಬಹುದು; ಅವೆರಡು engine ಏನಾಗಿದೆ ಎಂದರೆ, ಒಂದು ಇಂಜಿನ್ ಎದುರು ಹೋಗುತ್ತದೆ. ಮತ್ತೊಂದು ಇಂಜಿನ್ ಹಿಂದೆ ಹೋಗುತ್ತದೆ. ಅದು ಎತ್ತಿನ ಗಾಡಿಯಿದ್ದ ಹಾಗೆ. ಎಲ್ಲರೂ ಸೇರಿ ಇಂಜಿನ್‌ನ್ನು ಪುಷ್ ಮಾಡಿದರೆ, ವೇಗವಾಗಿ ಹೋಗುತ್ತಿತ್ತು. ಮಾನ್ಯ ವಿಶ್ವನಾಥ್‌ರವರಿಗೆ ಗೊತ್ತಿದೆ. ಅವರು ಎಲ್ಲವನ್ನೂ frank ಆಗಿ ಹೇಳುತ್ತಾರೆ. ನನಗೆ ಆತಂಕವಿರುವುದೇನೆಂದರೆ, ಜಲಾಶಯವನ್ನಾಗಿ ಮಾಡಿಕೊಂಡಾಗ, ಬಹಳ ಅಂದರೆ, 30 ಟಿ.ಎಂ.ಸಿ. ಹೂಳು ತುಂಬಿದೆ. ಅದರಲ್ಲಿ 15 ಟಿಎಂಸಿ ಯಷ್ಟು ನೀರು ದೊರೆಯುತ್ತದೆ. ಮಾನ್ಯ ಸದಸ್ಯರು 30 ಟಿಎಂಸಿ ಎಂದು ಹೇಳುತ್ತಿದ್ದಾರೆ. You take it as granted. ಇದು ಬಹಳ ಮಹತ್ವದ ವಿಚಾರವಾಗಿದೆ. It is very minute. ಇದು ಕ್ಲಿಷ್ಟವಾದಂತಹ ವಿಚಾರವಾಗಿದೆ. ಅವರು ನಮ್ಮನ್ನು ಕೇಳೇ ಇಲ್ಲ. ಮೇಕೆದಾಟು ಯೋಜನೆಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ತಕರಾರು ಅರ್ಜಿಯನ್ನು ಸಲ್ಲಿಸಿದ್ದಾರೆ. ಕಾವೇರಿ ನಿರ್ವಹಣಾ ಸಮಿತಿಗೆ ಅರ್ಜಿಯನ್ನು ಹಾಕಿದ್ದಾರೆ. ಮಾನ್ಯ ಪ್ರಧಾನ ಮಂತ್ರಿಯವರಿಗೆ ನೂರಾರು ಬಾರಿ ಅರ್ಜಿಯನ್ನು ಕೊಟ್ಟಿದ್ದಾರೆ. ಮೇಕೆದಾಟು ಮಾಡಲೇಬಾರದು ಎಂದು ಹೇಳಿದ್ದಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ನಮ್ಮದೇನೂ ಅರ್ಜಿಯೇ ಇಲ್ಲ. ಕಾವೇರಿ ನಿರ್ವಹಣಾ ಸಮಿತಿಯಿಂದ ವರದಿಯೂ ಇಲ್ಲ. ಅಲ್ಲಿಯೂ ನಮ್ಮದೂ ಏನೂ ಇಲ್ಲ. ಅಲ್ಲಿಯೂ ಕೂಡ ನಾವು objection ಕೊಟ್ಟಿಲ್ಲ. ಮಾನ್ಯ ಪ್ರಧಾನ ಮಂತ್ರಿಯವರನ್ನು ಸಹ ಕಂಡು ಭೇಟಿಯಾಗಿಲ್ಲ. ನಿಮಗೆ ಇರುವಷ್ಟು ಹಕ್ಕು ತಮಿಳುನಾಡಿಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೆಯೇ? ಮಾನ್ಯ ಹರಿಪ್ರಸಾದ್‌ರವರು ಈ ಸದನದ ಹಿರಿಯ ಸದಸ್ಯರು. ರಾಷ್ಟ್ರದಲ್ಲಿ ರಾಜಕಾರಣ ಮಾಡಿ ಬಂದಂತಹವರು. ಎಲ್ಲಾ ರಾಜ್ಯದ ಬಗ್ಗೆ ಮಾಹಿತಿ ಇರುವಂತಹವರು. ಅಲ್ಲಿ ತಮ್ಮದು ಏನೂ ಇಲ್ಲ. ಬರೀ ಶೂನ್ಯ. ಈಗ ಎ.ಐ.ಎ.ಡಿ.ಎಂ.ಕೆ ಯವರ ಜೊತೆ ಕೂಡಿ ಹೊಸ ಬೀಗತನ ಮಾಡುತ್ತಿದ್ದಾರೆ. ನಮ್ಮ ರಾಜ್ಯವನ್ನು ಬಲಿ ಕೊಡುವಂತಹ ಪರಿಸ್ಥಿತಿಯಾಗಿದೆ. 45 ಟಿ.ಎಂ.ಸಿ. ನೀರು ಮೇಕೆದಾಟು ಯೋಜನೆಯನ್ನು you cannot take up at all. ಅವರದು ಪೂರ್ತಿ ಆಯಿತು ಎಂದರೆ, ಅವರಿಗೆ ಆ ನೀರು ಎಲ್ಲಿ ಹೋಗುತ್ತದೆ ಎಂದರೆ, ಹೆಚ್ಚುವರಿ ನೀರನ್ನು ಉಪಯೋಗ ಮಾಡಿದರೆ, they are at the lower riparian state. ನಾವು higher riparian state, ನಾವು ಮೇಲಿದ್ದೇವೆ. ಅವರು ಶೇಕಡ 200 ರಷ್ಟು ನಮಗೆ object ಮಾಡುತ್ತಾರೆ. ಇಲ್ಲಿ ಹೆಚ್ಚುವರಿ ನೀರನ್ನು ಬಳಕೆ ಮಾಡುತ್ತಿದ್ದೇವೆ. They will have an easementary right. ಮನೆ ಎದುರಿಗೆ ಖಾಸಗಿ ರಸ್ತೆ ಇರಬಹುದು. ಆ ರಸ್ತೆಯಲ್ಲಿ ಹಾದು ಹೋಗುವುದಕ್ಕೆ 12 ವರ್ಷದಿಂದ ಸತತವಾಗಿ ಒಬ್ಬ ಮನುಷ್ಯನಿಗೆ ಅವಕಾಶ ಮಾಡಿದರೆ, ownership of adverse possession, means you cannot stop it after a lapse of twelve years period. ಆ ರಸ್ತೆಯಲ್ಲಿ ಹಾದು ಹೋಗುವುದಕ್ಕೆ 12 ವರ್ಷದಿಂದ ಸತತವಾಗಿ ಒಬ್ಬ ಮನುಷ್ಯನಿಗೆ ಅವಕಾಶ ಮಾಡಿ, ಆದರೆ 13ನೇ ವರ್ಷಕ್ಕೆ ಏನೂ ಇಲ್ಲ. ಇಲ್ಲಿ ಹಾದು ಹೋಗಬೇಡ if you say no to right of way, ನಿಮ್ಮ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತಾರೆ. ಈಗ ಅವರಿಗೆ easementary right ಇರುತ್ತದೆ. ತಾವು ಒಂದು ಯೋಜನೆಯನ್ನು ತೆಗೆದುಕೊಳ್ಳಬೇಕೆಂದರೆ, we will discuss with Andhra Pradesh and Telangana states ಎಂದು ಬಜೆಟ್ ಪುಸ್ತಕದಲ್ಲಿ ಬರೆದಿಟ್ಟು ಬಿಟ್ಟಿದ್ದೀರಿ.

**ಶ್ರೀ ಗೋವಿಂದ ಎಂ. ಕಾರಜೋಳ (ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ):–** ಮಾನ್ಯ ಸಭಾಪತಿಯವರೇ, ಅವರಿಗೆ disturb ಮಾಡಬಾರದು ಎಂದು ನಾನು ಸುಮ್ಮನೆ ಕುಳಿತಿದ್ದೆ. ಮಲಪ್ರಭಾ ಮತ್ತು ಘಟಪ್ರಭಾ ನದಿ ಏನಿದೆ, ಅದರ ಸಂಪೂರ್ಣ ಹಕ್ಕು ನಮ್ಮದೇ ಇದೆ. ತುಂಗಾಭದ್ರಾ inter-state river ಆಗಿದೆ. ನಾವು ತುಂಗಾಭದ್ರಾ ನದಿಯಲ್ಲಿ ಯಾವುದೇ ಪ್ರಾಜೆಕ್ಟ್ ಮಾಡಬೇಕೆಂದರೆ, ನಾವು ತೆಲಂಗಾಣ ಮತ್ತು ಆಂಧ್ರಪ್ರದೇಶದವರ ಜೊತೆ ಸಂಪರ್ಕ ಮಾಡಲೇಬೇಕಾಗುತ್ತದೆ. ಅವರ ಒಪ್ಪಿಗೆಯನ್ನು ಪಡೆಯಲೇಬೇಕಾಗುತ್ತದೆ. ಅದನ್ನು ಮಾಡುವುದಕ್ಕೆ ಬರುವುದಿಲ್ಲ. ಅದು inter-state river ಇರುವುದರಿಂದ ಅವರ ಒಪ್ಪಿಗೆಯನ್ನು

ತೆಗೆದುಕೊಳ್ಳಬೇಕಾಗುತ್ತದೆ. ನಾವು ಪ್ರಾಜೆಕ್ಟ್ ಮಾಡಿದರೆ, ನೀರು ಏನು ಹಂಚಿಕೆಯಾಗುವ basis ಮೇಲೆ ಅವರೂ ಕೂಡ ಪ್ರಾಜೆಕ್ಟ್ ಕಾಸ್ಟನ್ನು ಹಂಚಿಕೆ ಮಾಡಬೇಕಾಗುತ್ತದೆ.

**Sri S.R.PATIL:-** Yes, correct. (ಮುಂದು)

**(344) 09.03.2021, 5.50, ಟಿಸಿಹೆಚ್–ಎಂಡಿ**

**Sri K.T.SRIKANTEGOWDA:-** Cauvery is also inter-state river.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಶ್ರೀಕಂಠೇಗೌಡರವರೇ, ನಾನು ಅದರ ಬಗ್ಗೆ explain ಮಾಡುತ್ತೇನೆ. ನನಗೆ ಬೇಕಾಗಿದ್ದೇ ಅದು. ಕಾವೇರಿ ನದಿ inter-state river ಅಲ್ಲವೇ? ಅವರು ಉತ್ತರ ಕೊಡುವಾಗ ಹೇಳಲಿ. ಡಾ॥ತೇಜಸ್ವಿನಿ ಗೌಡರವರೇ, ತಾವು ದಯಮಾಡಿ interruption ಮಾಡಬೇಡಿ. With due respect to you, ನಾನು ನಿಮ್ಮ ವ್ಯಕ್ತಿತ್ವಕ್ಕೆ ಗೌರವ ಕೊಟ್ಟು ನಾನು ಹೇಳುತ್ತಿದ್ದೇನೆ. ಇದು ಕೂಡ inter-state river ಆಗಿದೆ.

**ಡಾ॥ತೇಜಸ್ವಿನಿ ಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಈ ಹಿಂದೆ ತಮಿಳುನಾಡು ಮುಖ್ಯಮಂತ್ರಿಯವರಾದ ಶ್ರೀಮತಿ ಜಯಲಲಿತಾ ರವರ ಎ.ಐ.ಎ.ಡಿ.ಎಂ.ಕೆ ಜೊತೆ ಕಾಂಗ್ರೆಸ್ ಪಕ್ಷ ಕೂಡ ಇತ್ತು.

**ಶ್ರೀ ಎಸ್.ಆರ್.ಪಾಟೀಲ್:–** ಇದು ಕೂಡ inter-state river.

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಶ್ರೀಮತಿ ಜಯಲಲಿತಾ ರವರು ಮುಖ್ಯಮಂತ್ರಿಯಾಗಿದ್ದಾಗ ಕಾಂಗ್ರೆಸ್ ಪಕ್ಷ ಕೂಡ political alliance ಇತ್ತು ಎನ್ನುವುದನ್ನು ನೆನಪು ಮಾಡಿದೆ ಅಷ್ಟೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಅವರೇನು ಮಾಡಿಲ್ಲವೇ? ನೀವು ಏನು ಮಾಡಿದಿರಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇರಬಹುದು. ಡಾ॥ತೇಜಸ್ವಿನಿ ಗೌಡರವರು ಪಾರ್ಲಿಮೆಂಟ್ ಸದಸ್ಯರಾಗಿದ್ದವರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಕಾವೇರಿ . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು. ಅದಕ್ಕೆ ನಾನು ಹೇಳಿದೆನು. ಕಾವೇರಿ ಕೂಡ inter-state river. ಕಾವೇರಿಯಲ್ಲಿ ತಮಿಳುನಾಡಿನವರು ಏನಾದರು ಒಂದು ಪ್ರಾಜೆಕ್ಟ್ ತೆಗೆದುಕೊಳ್ಳಬೇಕಾದರೆ, ಕರ್ನಾಟಕ ರಾಜ್ಯವನ್ನು consult ಮಾಡಬೇಕು. ಈಗ ಏನು ತುಂಗಭದ್ರಾ ನದಿ inter-state river ನ್ನು ಕರ್ನಾಟಕ ರಾಜ್ಯಕ್ಕೂ ಸಂಬಂಧಿಸಿದ್ದನ್ನು ನಾವು ಏನಾದರೂ ಪ್ರಾಜೆಕ್ಟ್ ಮಾಡಬೇಕಾದರೆ, ಆಂಧ್ರಪ್ರದೇಶದ ಅನುಮತಿ ತೆಗೆದುಕೊಳ್ಳುತ್ತೇವೆ. ಅದೇ ರೀತಿ ತಮಿಳುನಾಡಿನವರು ಯಾವುದೇ ಒಂದು ಪ್ರಾಜೆಕ್ಟ್‌ನ್ನು ಮಾಡಬೇಕಾದರೆ, ಕರ್ನಾಟಕದ ಅನುಮತಿಯನ್ನು ಪಡೆದುಕೊಳ್ಳಬೇಕಲ್ಲವೇ? ಇದನ್ನೇ ನಾನು ಹೇಳುತ್ತಿದ್ದೇನೆ. ತಮಿಳುನಾಡಿನವರು ಏನಾದರೂ ನಮ್ಮ ರಾಜ್ಯದ ಅನುಮತಿ ಪಡೆದುಕೊಂಡಿದ್ದಾರೆಯೇ? ಅವರ್ಯಾರು ನಮ್ಮನ್ನು ಕೇಳಲೇ ಇಲ್ಲ. ಮತ್ತೆ ನಮ್ಮವರು ಏನು ಮಾಡುತ್ತಾರೆ. ಒಂದು ಪತ್ರಿಕೆಯ ಮುಖಪುಟದಲ್ಲಿ "ಕಾವೇರಿ ಯೋಜನೆ ರಾಜ್ಯಕ್ಕೆ ಅಪಾಯ, ಕಾವೇರಿ ವಿಚಾರದಲ್ಲಿ ತಮಿಳುನಾಡು ವಿರುದ್ಧ ಚಕಾರವೆತ್ತದ ರಾಜ್ಯ" ಎಂದು ವರದಿಯಾಗಿದೆ. ನಮ್ಮ ಸರ್ಕಾರ ಏನೂ ಚಕಾರ ಎತ್ತಿಲ್ಲ. ರಾಜ್ಯದಲ್ಲಿ ಏನೋ ಮಾಡಿಕೊಳ್ಳುತ್ತಾರೆ ಬಿಡಿ ಎಂದುಕೊಳ್ಳುತ್ತಾರೆ. ಈ ರೀತಿಯಾದರೆ ಮುಂದೆ ಗತಿಯೇನು? ಮೇಕೆದಾಟಿನಿಂದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕುಡಿಯುವ ನೀರಿನ ಯೋಜನೆಯಾಗಿದೆ. ಎತ್ತಿನಹೊಳೆ ನೀರಾವರಿ ಯೋಜನೆ ಇದೆ. ಈಗ ನಾನು ಅದನ್ನು ಓದುವುದಿಲ್ಲ. ಈಗ ಇದಕ್ಕೆ ಏನೂ ಸಂಬಂಧವೆನಿಸುವುದಿಲ್ಲ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಸುಮಾರು 14,000 ಕೋಟಿ ರೂಪಾಯಿಗಳ ಯೋಜನೆ ಪ್ರಾರಂಭವಾಗಿದೆ. ಅದಕ್ಕೆ ಒಂದು ರೂಪಾಯಿ ಕೂಡ ಮೀಸಲಿಟ್ಟಿಲ್ಲ. ನಾನು ವಿಷಯಾಂತರ ಮಾಡುವುದಿಲ್ಲ. ಮುಂದಿನ ದಿನಗಳಲ್ಲಿ ಬಜೆಟ್‌ನಲ್ಲಿ ಮಾತನಾಡಲಾಗುವುದು. ನಾನು ನೀರಾವರಿ ಯೋಜನೆಗಳ ಬಗ್ಗೆ ವಿಸ್ತೃತವಾಗಿ ಮಾತನಾಡುತ್ತೇನೆ. ಆಗ ನೀವು ಸಮಯ ಆಯಿತು ಎಂದು ಬೆಲ್ ಮಾಡಬೇಡಿ.

**ಸಭಾಪತಿಯವರು:-** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಈಗ ತಮ್ಮ ಮಾತನ್ನು ಮುಗಿಸಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನಗೆ ಏನು ನೋವಿದೆಯೆಂದರೆ, ಅವರು ಈಗಾಗಲೇ ಎಲ್ಲಾ ಸಿದ್ದಗೊಳಿಸಿಕೊಂಡು ಭೂಮಿ ಪೂಜೆಯನ್ನು ಮಾಡಿದ್ದಾರೆ. ಆ ರಾಜ್ಯದ ಮುಖ್ಯಮಂತ್ರಿಗಳು ಒಂದನೇ ಹಂತ ಪ್ರಾರಂಭ ಮಾಡಿದ್ದಾರೆ. ಅವರಿಗೆ ದುಡ್ಡು ಎಲ್ಲೆಲ್ಲೋ ಬರುತ್ತದೆಂದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಾರೆ. ನಿಮಗೆ ಏನಿದೆ ಆಧಾರವೆಂದು ಹೇಳುತ್ತಾರೆ, ನಾವು ಈ ಪತ್ರಿಕೆಯಲ್ಲಿ ವರದಿಯಾಗಿರುವುದನ್ನು ಹೇಳುತ್ತಿದ್ದೇವೆ. It may be right or wrong. If it is wrong, I will be the happiest man on this earth. ನಾನು ನಿಮಗಿಂತಲೂ ಹೆಚ್ಚು ಖುಷಿಪಡುತ್ತೇನೆ. ಒಂದುವೇಳೆ ಅದು ಸತ್ಯವಾಗಿದ್ದರೆ, 'ನಮ್ಮ ಗತಿ ಗಂಗವ್ವ' ಆಗುತ್ತದೆ. ಮಾನ್ಯ ಸಭಾಪತಿಯವರೇ ನಿಮಗೆ ಇದರ ಅರ್ಥ ತಿಳಿಯುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು ನಮ್ಮನ್ನು ಸಂಜೆ 5.30 ಗಂಟೆಗೆ ಒಂದು ಸಭೆ ಕರೆದಿದ್ದಾರೆ. ನಾವೆಲ್ಲರೂ ಅಲ್ಲಿಗೆ ಹೋಗಬೇಕಿದೆ. ಇದನ್ನು ನಾಳೆ ಮುಂದುವರೆಸೋಣ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿ ಮುಗಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರೇ, ತಾವು ನಾಳೆ ಮಾತನಾಡಿ ಮುಗಿಸಿದ ನಂತರ ಅವರು ಉತ್ತರ ಕೊಡಲಿ. ಇನ್ನೂ ಅನೇಕ ಸದಸ್ಯರುಗಳು ಮಾತನಾಡಬೇಕಿದೆ. ಮಾನ್ಯ ಅಪ್ಪಾಜಿಗೌಡರವರು ಹಾಗೂ ತಾವು ಮಾತನಾಡಬೇಕಿದೆ.

**ಸಭಾಪತಿಯವರು:–** ಮಾನ್ಯ ಎಸ್.ಆರ್.ಪಾಟೀಲ್‌ರವರು ಮಾತನಾಡಲಿ. ಇಲ್ಲ ಇದು ಕೊನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು ಸಂಜೆ 5.30 ಗಂಟೆಗೆ ಸಭೆಯನ್ನು ಕರೆದಿದ್ದಾರೆ.

**ಸಭಾಪತಿಯವರು:–** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ತಾವು ಕುಳಿತುಕೊಳ್ಳಿ. ಮಾನ್ಯ ಎಸ್.ಆರ್.ಪಾಟೀಲ್‌ರವರೇ, ತಾವು ಮಾತನಾಡಿ ಮುಗಿಸಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಆಯಿತು. ನಾನು ಮಾತನಾಡಿ ಮುಗಿಸುತ್ತೇನೆ. ನೋಡಿ, ಈಗಾಗಲೇ ಮೇಕೆದಾಟು ಯೋಜನೆ ಸಂಬಂಧ ಸನ್ಮಾನ್ಯ ಪ್ರಧಾನಮಂತ್ರಿಯವರಿಗೆ ಅನೇಕ ಬಾರಿ reminder ಹಾಕಿದ್ದಾರೆ. ಆಮೇಲೆ ಈ ಯೋಜನೆ ಆಗಬಾರದೆಂದು ಗೌರವಾನ್ವಿತ ಸುಪ್ರೀಂಕೋರ್ಟ್‌ಗೆ ತಕರಾರು ಅರ್ಜಿಯನ್ನು ಹಾಕಿದ್ದಾರೆ. ಕಾವೇರಿ ನೀರು ನಿರ್ವಹಣಾ ಸಮಿತಿ ಮುಂದೆ ಇದರ ಬಗ್ಗೆ ತಕರಾರು ಎತ್ತಿದ್ದಾರೆ. ಅದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ, ಕಾವೇರಿ ನದಿ ನಿರ್ಮಾತೃ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್. ಇದು 1911ರಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆಯೇ ಆಗಿದೆ. 1964ರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರಿಯವರು ರೈಲ್ವೇ ಸಚಿವರಾಗಿದ್ದರು. ಅವರು ಮಾನ್ಯ ಪ್ರಧಾನ ಮಂತ್ರಿಯಾಗಿದ್ದಾಗ ಮಾಡಿದ್ದಲ್ಲ. ಅವರು ಇದಕ್ಕೆ ಅಡಿಗಲ್ಲು ಹಾಕಿದರು. ಅವರು ಮರಣ ಹೊಂದಿ ಸುಮಾರು 56 ವರ್ಷವಾಗಿದೆ. ಒಂದು ಲಕ್ಷ ಕೋಟಿ ವೆಚ್ಚ ಮಾಡಿದ್ದಾರೆ. ಮೂರನೇ ಹಂತ ಹಾಗೆಯೇ ಇದೆ. ದಕ್ಷಿಣ ಕರ್ನಾಟಕದಲ್ಲಿ ಅಂತಹ ಪುಣ್ಯಾತ್ಮ ಮಹಾರಾಜರು ಇದ್ದರು. ಅದೇ ರೀತಿ ನಮ್ಮ ಕಡೆ ಕೂಡ ಮುಧೋಳ್, ಜಮಖಂಡಿ ಮತ್ತು ಸವಣೂರಿನಲ್ಲಿ ಬಹಳಷ್ಟು ಮಹಾರಾಜರು ಇದ್ದರು.

**ಶ್ರೀ ಗೋವಿಂದ ಎಂ. ಕಾರಜೋಳ, (ಉಪಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ):–** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಆದಿಲ್‌ಶಾಹಿ ಮಹಾರಾಜರು ಕೂಡ ಇದ್ದರು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಆದಿಲ್‌ಶಾಹಿ ಮಹಾರಾಜರು ಕೂಡ ಇದ್ದರು. ಬಿಜಾಪುರ ಹಾಗೂ ಹೈದ್ರಾಬಾದ್ ನಿಜಾಮರು ಕೂಡ ಇದ್ದರು. ನಾನು ಇನ್ನೊಂದು ಸಂತೋಷದ ಸುದ್ದಿಯನ್ನು ಹೇಳುತ್ತೇನೆ. ತುಂಗಭದ್ರಾ ಪ್ರಾಜೆಕ್ಟ್ ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಆಗಿಲ್ಲ. ಹೈದ್ರಾಬಾದಿನ ನಿಜಾಮರು ಅರ್ಧ dam ಕಟ್ಟಿದ್ದಾರೆ. ಆಂಧ್ರಪ್ರದೇಶದ ತುಂಗಾಭದ್ರ dam ನ್ನು ಶೇ.50–50 ಕಟ್ಟಿದ್ದಾರೆ. ಇಲ್ಲಿ ಮಾನ್ಯ ಕೊಂಡಯ್ಯನವರು ಇದ್ದಿದ್ದರೆ, ಅದರ ಬಗ್ಗೆ ಹೇಳುತ್ತಿದ್ದರು. ಆಗಲೇ ಅವರು ಕಟ್ಟಿದ್ದಾರೆ. ಇವರಿಗಿಂತ ಅವರು far better ಅಲ್ಲವೇ? Elected Government ಗಿಂತ ಶೇ.100 ಚೆನ್ನಾಗಿತ್ತು. ಅರ್ಧ ಹೈದರಾಬಾದಿನ ನಿಜಾಮರೇ ಕಟ್ಟಿದ್ದಾರೆ. ಉಳಿದ ಅರ್ಧ ಭಾಗ ಆಂಧ್ರದವರು ಕಟ್ಟಿದ್ದಾರೆ. ಅದು ಈ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಪೂರ್ವದಲ್ಲೇ ಆಗಿದೆ. ಅವರು ಹೇಳಿದ್ದಕ್ಕೆ ನಾನು ಹೇಳಿದೆನು. ನಾನು ಯಾರನ್ನೂ defend ಮಾಡುವುದಿಲ್ಲ. ರಾಜರ ಆಡಳಿತ ಇದಕ್ಕಿಂತ ಚೆನ್ನಾಗಿತ್ತು ಎಂದು ಹೇಳುತ್ತಿದ್ದೇನೆ. ಅವರು ಮಾಡಿದ್ದನ್ನು ನಾವು ಇಟ್ಟುಕೊಳ್ಳುವುದಕ್ಕೆ ಆಗುತ್ತಿಲ್ಲ. ಅದನ್ನು ನಾವು ಮಾರಾಟ ಮಾಡುತ್ತಿದ್ದೇವೆ. ಉದಾಹರಣೆಗೆ ಈಗ ನೋಡಿ ಸಕ್ಕರೆ ಕಾರ್ಖಾನೆ ಮಾರಾಟ ಮಾಡುತ್ತಿದ್ದೇವೆ. ಮತ್ತೆ ಅವರು ಕೊಟ್ಟು ಹೋದಂತಹ ನೀರನ್ನು ನೀವು ತೆಗೆದುಕೊಂಡು ಹೋಗಿ ಎಂದು ಹೇಳುತ್ತಿದ್ದಾರೆ. ಅಂದರೆ ಅದಕ್ಕಾಗಿ ಪ್ರಭುತ್ವದ ಆಡಳಿತ ನಮಗಿಂತಲೂ ಚೆನ್ನಾಗಿತ್ತಲ್ಲವೇ? ಆಗ ಅರಮನೆಯಲ್ಲಿ ಬೆಳ್ಳಿ–ಬಂಗಾರವನ್ನು ಏನಾದರೂ ಒತ್ತೆ ಇಟ್ಟಿದ್ದಾರೆಯೇ? ಈಗ ನಾವು ಬೆಳ್ಳಿ–ಬಂಗಾರವನ್ನು ಮನೆಯಲ್ಲಿ ತಂದು ತುಂಬಿಕೊಳ್ಳುತ್ತಿದ್ದೇವೆ. Let me compare, I do not mind. ನಾವು ನಮ್ಮ ದೋಷಗಳನ್ನು ಹೇಳಿಕೊಳ್ಳುವುದರಲ್ಲಿ ಏನು ತಪ್ಪಿದೆ. ಇದು ಆಗಬಾರದೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಹೇಳುತ್ತಿದ್ದೇನೆ. ಅದಕ್ಕೆ ನಾನು ತಮ್ಮ ಮುಖಾಂತರ ಈ ಸರ್ಕಾರಕ್ಕೆ ಎರಡೂ ಕೈಜೋಡಿಸಿ ಮನವಿ ಮಾಡಿಕೊಳ್ಳುತ್ತೇನೆ. This is a very serious matter. ಕಾವೇರಿ ಈ ನಾಡಿನ ಜಲದ ಪ್ರಶ್ನೆ. ಕಾವೇರಿ ಈ ನಾಡಿನ ಜೀವ ನದಿ. ಈ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಪೂರ್ವದಲ್ಲಿಯೇ ಆ ಪ್ರಾಜೆಕ್ಟ್‌ನ್ನು ಪ್ರಾರಂಭ ಮಾಡಿದ್ದಾರೆ. ಇವತ್ತಿನ ದಿವಸ ನಾವೆಲ್ಲರೂ ಸಂತೋಷದಿಂದ, ಗೌರವದಿಂದ, ಸ್ವಾಭಿಮಾನದಿಂದ ಬದುಕುತ್ತಿದ್ದೇವೆಂದರೆ, ಅದು ಮಾನ್ಯ ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಪುಣ್ಯದಿಂದ. ಇವತ್ತಿನ ದಿವಸ ಅವರು ಆರ್ಥಿಕವಾಗಿ ಪ್ರಭಲರಾಗಿದ್ದಾರೆ. ನಮ್ಮ ಉತ್ತರ ಕರ್ನಾಟಕ ಹಿಂದುಳಿದಿದೆ ಎಂದು ಹೇಳುತ್ತಿದ್ದೇವೆ. ನಮ್ಮ ರಾಜಮಹಾರಾಜರಿಗೆ ಬೇರೆ ಬೇರೆಯವರ ಮೇಲೆ ವ್ಯಾಮೋಹ ಇತ್ತು. ಮಾನ್ಯ ಸಭಾಪತಿಯವರೇ, ಅದು ನಿಮಗೂ ಕೂಡ ಗೊತ್ತು.

**ಸಭಾಪತಿಯವರು:-** ಬೀಳಗಿ ಮಹಾರಾಜರಿಗೆ ಇರಲಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಬೀಳಗಿಯಲ್ಲಿ ಮಹಾರಾಜರು ಇರಲಿಲ್ಲ. ಸುಮ್ಮನೆ ನಮ್ಮಂಥ ಸಾದ ರೈತರಿದ್ದರು. ನಮ್ಮದು ಬಾಂಬೆ...

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ಬೇಗ ತಮ್ಮ ಮಾತನ್ನು ಮುಗಿಸಿ. ತಾವು ಮಾತನಾಡುವುದಕ್ಕೆ ಪ್ರಾರಂಭವಾಗಿ ಅರ್ಧ ಗಂಟೆಯ ಮೇಲಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಇದಕ್ಕೆ ಸರ್ಕಾರ ಬೇಗನೆ ಎಚ್ಚೆತ್ತುಕೊಳ್ಳಬೇಕು. You have got every right. ಮಾನ್ಯ ಪ್ರಧಾನ ಮಂತ್ರಿಯವರ ಮುಂದೆ ನೀವು ಕೇಳುವಂತಹ ಹಕ್ಕು ನಿಮಗೆ ಇದೆ. You have got a moral right. ಇಷ್ಟು ದೊಡ್ಡ ಪ್ರಮಾಣದಲ್ಲಿ massive mandate ಭಾರತೀಯ ಜನತಾ ಪಕ್ಷದ ಸರ್ಕಾರಕ್ಕೆ ಅಧಿಕಾರ ಕೊಟ್ಟಿದ್ದೀರಿ. ರಾಜ್ಯದಲ್ಲೂ ಅವರದೇ ಸರ್ಕಾರ ಮತ್ತು ಕೇಂದ್ರದಲ್ಲೂ ಅವರದೇ ಸರ್ಕಾರ, ಎರಡೂ ಕಡೆ ಒಂದೇ ಸರ್ಕಾರವಿದ್ದರೆ ಸ್ವರ್ಗವೇ ಧರೆಗೆ ಇಳಿಯುವುದಕ್ಕೆ ಸಾಧ್ಯವಿದೆ ಎಂದು ಹೇಳುತ್ತಿದ್ದರು. Double Engine ಸರ್ಕಾರ. ಹಾಗಾದರೆ, ನೀವು ಎಷ್ಟು ವೇಗವಾಗಿ ಹೋಗಬೇಕು. ಅದಕ್ಕೆ ನೀವು You utilize it, you have got every right. ಮಾನ್ಯ ಪ್ರಧಾನ ಮಂತ್ರಿಯವರಿಗೆ ಹೇಳಿ, ನೋಡಿ ನಿಮಗೆ ಇಷ್ಟು massive mandate ಕೊಟ್ಟಿದ್ದೇವೆ. ನಮ್ಮ ನೆಲ ಮತ್ತು ಜಲದ ಪ್ರಶ್ನೆ. ನಮ್ಮ ಜೀವ ನದಿಯಾದ ಕಾವೇರಿಯ ಪ್ರಶ್ನೆ. ಅವರು ಇವತ್ತಿನ ದಿವಸ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಮಿಳುನಾಡಿನವರ ಜೊತೆಯಲ್ಲಿ ಬೀಗತನ ಮಾಡಿಕೊಡಿರಬಹುದು. ಮೈತ್ರಿ ಕೋಟ ಮಾಡಿಕೊಂಡಿರಬಹುದು. ಆ ಒಂದು ಕಾರಣಕ್ಕಾಗಿ ನೀವು ನಮಗೆ ಅನ್ಯಾಯ ಮಾಡಬೇಡಿ ಎಂದು ಹೇಳಿ. You have got every right to ask the Hon'ble Prime Minister. ನೀವು ನಮ್ಮನ್ನು ಮಾನ್ಯ ಪ್ರಧಾನ ಮಂತ್ರಿಗಳ ಬಳಿಗೆ ಕರೆದುಕೊಂಡು ಹೋದರೆ, ನಾವು ನಿಮ್ಮ ಜೊತೆ ಬರುತ್ತೇವೆ. We will strengthen your hands. ನಾವು ಅವರ ಕೈಗಳನ್ನು ಬಲಪಡಿಸುತ್ತೇವೆ. ನೀವು ನಮ್ಮನ್ನು ಮಾನ್ಯ ಪ್ರಧಾನ ಮಂತ್ರಿಗಳ ಬಳಿಗೆ ಕರೆದುಕೊಂಡು ಹೋಗಿ. ಮಾನ್ಯ ಉಪ ಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳರವರೇ, ನಿಮಗೆ ಹೊಸದಾಗಿ ಚಾರ್ಜ್ ಕೊಟ್ಟಿದ್ದಾರಂತೆ.

**ಶ್ರೀ ಸಿ.ಪಿ.ಯೋಗೇಶ್ವರ್ (ಪ್ರವಾಸೋದ್ಯಮ ಇಲಾಖೆ ಸಚಿವರು):–** ಮಾನ್ಯ ಸಭಾಪತಿಯವರೇ, ಕಳೆದ ಸರ್ಕಾರದಲ್ಲಿ ನೀವು ಮೇಕೆದಾಟು ಯೋಜನೆಯನ್ನು ಪ್ರಾರಂಭ ಮಾಡಿದ್ದರೆ, ಈಗ ನಾವು ಅದನ್ನು continue ಮಾಡುತ್ತಿದ್ದೆವು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನೋಡಿ, ನೀವು ಮಾಡಲಿಲ್ಲ, ನೀವು ಹಾಗೆ ಮಾಡಿದ್ದೀರಿ ಎನ್ನುವುದಲ್ಲ,. . .

**ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಅವರು ಹಾಗೆ ಮಾಡಲಿಲ್ಲ. ಈಗ ನಾವು ಮಾಡುತ್ತಿದ್ದೇವೆ ಅಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಆಯಿತು, ನಾವು ಮಾಡಲಿಲ್ಲ...

**ಸಭಾಪತಿಯವರು:–** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಈಗ ತಾವು ಮಾತನಾಡಿ ಮುಗಿಸಿ.

**(ಗೊಂದಲ)**

**ಡಾ||ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಸುಮಾರು ಒಂಬತ್ತು ಸಾವಿರ ಕೋಟಿ ಹಣ ನೀಡಿದ್ದಾರೆ.

**(ಗೊಂದಲ)**

**Sri B.K.HARIPRASAD:-** Technical approval ತೆಗೆದುಕೊಂಡಿದ್ದು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಆಯಿತು, ಯಾರೋ ಮಾಡಲಿ ಬಿಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, I appreciate your stand. ನಾವು ಮಾಡಲಿಲ್ಲವೆಂದರೆ, ಈಗ ಅವರು ಮಾಡಲಿ ಎಂದು ಹೇಳುತ್ತೇವೆ. ಅವರು ಮತ್ತೆ ಬರುತ್ತಾರಲ್ಲವೇ? ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರಿಗೆ ನಾವು ಅಭಿನಂದಿಸುತ್ತೇನೆ.

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ, ರಾಜ್ಯದ ಅಭಿವೃದ್ಧಿಯ ವಿಚಾರ ಬಂದಾಗ ತಾವೆಲ್ಲರೂ ಹಿರಿಯರಿದ್ದೀರಿ. ಇಂತಹ. . .

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, There should not be politics. ಚುನಾವಣೆ ಬಂದಾಗ...

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಇಂತಹ ಸಂದಿಗ್ಧ ಪರಿಸ್ಥಿಯಲ್ಲೂ ಕೂಡ ಸರ್ಕಾರ ಅದಕ್ಕೆ ಒಂಬತ್ತು ಸಾವಿರ ಕೋಟಿ ಹಣವನ್ನು ಇಟ್ಟಿದೆ. ಬೇರೆಯದರಲ್ಲಿ ಟೀಕೆ ಮಾಡಲಿ. ಆದರೆ, ಮೇಕೆದಾಟು ಯೋಜನೆ ಶುರುವಾಗುತ್ತದೆ ಎಂಬುದಕ್ಕೆ ತಮ್ಮೆಲ್ಲರ ಸಹಕಾರ ಹಾಗೂ appreciation ಬೇಕಾಗುತ್ತದೆ.

**(ಮುಂದು)**

**(345)9.3.2021/6.00/ಎಂ.ಎಂ-ಎ.ಕೆ**

**ಡಾ: ತೇಜಸ್ವಿನಿಗೌಡ (ಮುಂದು):–** ಪ್ರಪೋಸಲ್ ಎಂದರೆ, . . .

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಹಿಂದಿನಿಂದ ನೀವು ಮಾಡಿದ್ದರೆ ನಮಗೆ ಅನುಕೂಲವಾಗುತ್ತಿತ್ತು ಎಂದು ಹೇಳಿದರು. ಆಯಿತು, ನಾವು ಮಾಡಲಿಲ್ಲ, ಅದಕ್ಕೆ ನಮ್ಮನ್ನು ಇಲ್ಲಿ ಕೂರಿಸಿದ್ದಾರೆ. I will bow my head down to the verdict given by the people of this State. ಪ್ರಬುದ್ಧ ಮತದಾರರು ಕೊಟ್ಟ ನಿರ್ಣಯವನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇವೆ ಮತ್ತು ಗೌರವಿಸುತ್ತೇವೆ. ನಮ್ಮನ್ನು ಪ್ರತಿಪಕ್ಷದಲ್ಲಿ ಕೂರಲು ಹೇಳಿದ್ದಾರೆ, ಸಂತೋಷದಿಂದ ನಾವು ಪ್ರತಿಪಕ್ಷದಲ್ಲಿ ಪ್ರಾಮಾಣಿಕತೆಯಿಂದ, ನಿಷ್ಠೆ, ದಕ್ಷತೆಯಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೇವಾ ಮನೋಭಾವದಿಂದ ಕರ್ತವ್ಯ ಪ್ರಜ್ಞೆಯಿಂದ ನಮ್ಮ ಕೆಲಸವನ್ನು ಮಾಡುತ್ತೇವೆ, ನಿಮಗೆ ಸಲಹೆ ಸೂಚನೆಗಳನ್ನು ಕೊಡುತ್ತೇವೆ. ನಿಮಗೆ ಸಲಹೆ ಸೂಚನೆಗಳನ್ನು ಕೊಡುವುದಕ್ಕೆ ನಮ್ಮನ್ನು ಇಲ್ಲಿ ಕೂರಿಸಿದ್ದಾರೆ. You take it in a good spirit. ನೀವು ಸ್ವಾಗತ ಮಾಡಿ. My criticism will not be destructive. It will be a constructive criticism. ರಚನಾತ್ಮಕವಾದ ಟೀಕೆಗಳನ್ನು ಮಾಡುತ್ತೇವೆ. ನೀವು ತಪ್ಪಿದಾಗ, ಎಡವಿದಾಗ consequence ಈ ರೀತಿ ಆಗುತ್ತದೆ. ರಾಜ್ಯದ ನೆಲ, ಜಲ ಮತ್ತು ಗಡಿ ಪ್ರಶ್ನೆ ಬಂದಾಗ ನಾವು ನಿಮ್ಮ ಜೊತೆ ಇರುತ್ತೇವೆ. ನಿಮ್ಮ ಹೆಗಲಿಗೆ ಹೆಗಲು, ಕೈಗೆ ಕೈ ಹಚ್ಚುತ್ತೇವೆ. ಆ ದೃಷ್ಟಿಯಿಂದ ಇದನ್ನು ತಕ್ಷಣವೇ ನೀವು ಕಾನೂನು ತಜ್ಞರ ಜೊತೆ ಮತ್ತು ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡಿ ಒಂದು ನಿಮಿಷವೂ ತಡ ಮಾಡದೇ, without wasting a single second, you should jump to the conclusion. ಚರ್ಚೆ ಮಾಡಿ ಬೇಗನೆ ಈ ಸದನ ಮುಗಿಯುತ್ತಲೇ ನೀವು ನಮಗೊಂದು ಸಂತೋಷದ ಸುದ್ದಿ ಕೊಡಬೇಕು. ಅವರನ್ನು ಒಪ್ಪಿಸಿರಿ, ಇಲ್ಲದಿದ್ದರೆ ನಮ್ಮ ಮೇಕೆದಾಟು ಹೋಗುತ್ತದೆ, ಮಾರ್ಕಂಡೇಯವೂ ಹೋಗುತ್ತದೆ ಹಾಗೂ ಜಲವಿದ್ಯುತ್ ಕೂಡ ಹೋಗುತ್ತದೆ. ಅದಕ್ಕಾಗಿ ತಮ್ಮ ಮುಖಾಂತರ ಇನ್ನೊಮ್ಮೆ ನಾನು ಎರಡೂ ಕೈಗಳನ್ನು ಜೋಡಿಸಿ ಇವರಿಗೆ ಮನವಿ ಮಾಡಿಕೊಳ್ಳುತ್ತೇನೆ, ಈ ವಿಚಾರವಾಗಿ the government should not take it lightly. ನೀವು ಹಗುರವಾಗಿ ಸ್ವೀಕಾರ ಮಾಡಬೇಡಿ. The government should be serious about it. ಅಷ್ಟೇ ಗಂಭೀರತೆಯಿಂದ ಪ್ರಧಾನಮಂತ್ರಿಯವರ ಬಳಿಗೆ ಹೋಗಿ ಪ್ರಧಾನಮಂತ್ರಿಯವರಿಂದ ತಮಿಳುನಾಡಿನವರಿಗೆ ಸರಿಯಾದಂತಹ ಶಾಸ್ತಿ ಮಾಡಿಸಿ. ನೀವು ಅವರಿಗೆ ಇವರಿಗೆ ಕೇಳಬೇಕೆನ್ನುತ್ತೀರಿ, ಅವರು ನಿಮ್ಮನ್ನು ಕೇಳಿದ್ದಾರೆಯೇ? ಆ ದೃಷ್ಟಿಯಿಂದ ಸರ್ವಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಹೋಗುತ್ತೀರಾ ಹೋಗಿ. ಬೇಡವೆಂದರೆ, ನಿಮಗೇನು ಅವಶ್ಯಕತೆಯೇ ಇಲ್ಲ;

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ. ಕೆಲವು ಸದಸ್ಯರು ನಮ್ಮ ಸರ್ಕಾರ ಇದ್ದಾಗ ಮಾಡಲಿಲ್ಲ ಎಂದು ಹೇಳಿದರು. ನಮ್ಮ ಸರ್ಕಾರ ಇದ್ದಾಗಲೇ ಮೇಕೆದಾಟು ಯೋಜನೆಗೆ technical approval ತೆಗೆದುಕೊಂಡಿದ್ದೇವೆ. ನಾವು ತೆಗೆದುಕೊಂಡ ಮೇಲೆ ಪಾರ್ಲಿಮೆಂಟ್‌ನಲ್ಲಿ ಎಲ್ಲಾ ಎ.ಐ.ಎ.ಡಿ.ಎಂ.ಕೆ, ಡಿ.ಎಂ.ಕೆ., ಸದಸ್ಯರೆಲ್ಲಾ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸೇರಿ ಆ ಪ್ರಾಜೆಕ್ಟ್‌ನ್ನು ನಿಲ್ಲಿಸಬೇಕೆಂದು ಕೋರ್ಟ್ ಮೆಟ್ಟಿಲನ್ನೂ ಹತ್ತಿದರು, ಪ್ರಧಾನಮಂತ್ರಿಯವರನ್ನೂ ನೋಡಿದರು. ಅದೇ ರೀತಿ ನಮ್ಮ ಪಕ್ಷದವರು ಮಾನ್ಯ ಎಸ್.ಆರ್. ಪಾಟೀಲರು ಸಹ ತಮ್ಮಲ್ಲಿ ಮನವಿ ಮಾಡುತ್ತಿರುವುದು ಇಷ್ಟೇ, ತಾವೆಲ್ಲಾ ಹೋಗಿ ಅವರೇನು ಪ್ರಾಜೆಕ್ಟ್ ಪ್ರಾರಂಭ ಮಾಡುತ್ತಿದ್ದಾರೆ ಅದನ್ನು ನಿಲ್ಲಿಸಿ ಎಂದು ಮನವಿ ಮಾಡುತ್ತಿದ್ದೇವೆ ವಿನಃ ಕಟ್ಟುವುದು, ಬಿಡುವುದು ಆಮೇಲೆ. 'ಕಾವೇರಿ' ಪ್ರಶ್ನೆ ನಿನ್ನೆ ಮೊನ್ನೆಯ ಪ್ರಶ್ನೆಯಲ್ಲ. ಕಾವೇರಿ ನದಿ ಎಷ್ಟು ಹಳೆಯ ನದಿಯೋ ಅಷ್ಟು ಹಳೆಯ ಸಮಸ್ಯೆ ಇದು. ರಾತ್ರಿ ಹಗಲಾಗುವಷ್ಟರಲ್ಲಿ ಈ ಸಮಸ್ಯೆ ಬಗೆಹರಿಯುವುದಿಲ್ಲ. ಇದರಲ್ಲಿ ರಾಜಕೀಯವೂ ಸಹ ಸರಿಯಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ಮೇಕೆದಾಟು ಯೋಜನೆಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಎರಡನೆಯದಾಗಿ ಈ ಯೋಜನೆಗೆ ಬೇಗನೆ ಸಮ್ಮತಿ ಪಡೆಯುವ ಪ್ರಕ್ರಿಯೆ ತ್ವರಿತಗೊಳ್ಳಬೇಕು. ಮೂರನೆಯದಾಗಿ ತಮಿಳುನಾಡು ಯೋಜನೆಗೆ ಸುಪ್ರೀಂಕೋರ್ಟ್‌ಗೆ ಹೋಗುತ್ತೀರೋ ಹೋಗಿ ಅಥವಾ ನ್ಯಾಯಾಧಿಕರಣದ ಮುಂದೆ ಹೋಗುತ್ತೀರೋ ಹೋಗಿ, ಕೇಂದ್ರಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೀರೋ ಮಾಡಿಕೊಳ್ಳಿ, ನಮ್ಮ ಸಲಹೆಯ ಪ್ರಕಾರ ಅವರಿಗೆಲ್ಲಾ ನೈತಿಕ ಹಕ್ಕಿದೆ. ಈ ದೇಶದ ಗೌರವಾನ್ವಿತ ಪ್ರಧಾನಮಂತ್ರಿಯವರಾದ ನರೇಂದ್ರ ಮೋದಿಯವರ ಮುಂಗೈ ಹಿಡಿದು ಕೇಳುವಂತಹ ಹಕ್ಕಿದೆ ಇವರಿಗೆ. They have given a massive mandate. ಪ್ರಧಾನಮಂತ್ರಿಯವರು ತಕ್ಷಣವೇ ಭೇಟಿ ಕೊಡುವುದಕ್ಕೆ ಹೋಗುವುದಿಲ್ಲ, ನಾನು ಅದರ ಬಗ್ಗೆ ರಾಜಕಾರಣದ ಮಾತನಾಡುವುದಿಲ್ಲ. ಅವರೇನು ಹದಿನಾಲ್ಕುವರೆ ಸಾವಿರ ಕೋಟಿ ಯೋಜನೆಯನ್ನು utilize ಮಾಡಿಕೊಳ್ಳುವುದಕ್ಕೆ ಹೊರಟಿದ್ದಾರೆ ಅದು ನಿಲ್ಲದಿದ್ದರೆ ನಾಳೆ easementary right ಬರುತ್ತದೆ. ನಾಳೆ ನಮ್ಮ surplus water ಅನ್ನು ಬಳಕೆ ಮಾಡುವುದಕ್ಕೆ ಕಾನೂನಿನ ತೊಡಕು ಬರುತ್ತದೆ. ನಾನು ನಿಶ್ಚಿತವಾಗಿ ಪ್ರತಿಪಕ್ಷದ ನಾಯಕನಾಗಿ ಕಾನೂನಿನ ಅರಿವಿನಿಂದ, ಜ್ಞಾನದಿಂದ ನಿಮಗೆ ಈ ಮಾತನ್ನು ಹೇಳುತ್ತೇನೆ. ದಯಮಾಡಿ ಆ ದಿಸೆಯಲ್ಲಿ ಕಾರ್ಯೋನ್ಮುಖರಾಗಿ ಎಂದು ತಮ್ಮ ಮುಖಾಂತರ ಈ ಸರ್ಕಾರಕ್ಕೆ ಒತ್ತಾಯ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಉಪಮುಖ್ಯಮಂತ್ರಿಯವರೇ, ಉತ್ತರವನ್ನು ಈಗ ಹೇಳುವಿರೋ ಇಲ್ಲ ನಾಳೆಗೆ ಹೇಳುವಿರೋ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ. ಕಾರಜೋಳ (ಉಪಮುಖ್ಯಮಂತ್ರಿಗಳು, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಈಗಲೇ ಹೇಳುತ್ತೇನೆ. ತಮಿಳುನಾಡು ಸರ್ಕಾರವು ಕಾವೇರಿ ನದಿ ನೀರಿನ ಪಾತ್ರದಲ್ಲಿ ಅಕ್ರಮವಾಗಿ ಯೋಜನೆಗಳನ್ನು ರೂಪಿಸಿ ನೀರನ್ನು ಕಬಳಿಸುವಂತಹ ಹುನ್ನಾರ ಮಾಡುತ್ತಿದೆ ಎಂದು ಆರೋಪಿಸಿ ನಿಯಮ 68ರಲ್ಲಿ ಆರು ಜನ ಶಾಸಕರು ಮಾತನಾಡಿದ್ದಾರೆ. ಮಾನ್ಯ ಶ್ರೀಕಂಠೇಗೌಡರು, ಮಾನ್ಯ ತಿಪ್ಪೇಸ್ವಾಮಿಯವರು, ಮಾನ್ಯ ನಾರಾಯಣಸ್ವಾಮಿಯವರು ಮತ್ತು ಮಾನ್ಯ ಲಿಂಗಪ್ಪನವರು, ಮಾನ್ಯ ಮರಿತಿಬ್ಬೇಗೌಡರು;

**ಶ್ರೀ ಎನ್. ಅಪ್ಪಾಜಿಗೌಡ:-** ಮಾನ್ಯ ಸಚಿವರೇ, ನಮಗೆ statement copy ಬರಲೇ ಇಲ್ಲ. ಎಲ್ಲಾ ಮುಗಿದ ಮೇಲೆ ಕೊಡುತ್ತೀರಾ?

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಕೊಡುತ್ತೇನೆ. ಪ್ರತಿಪಕ್ಷ ನಾಯಕರಾದ ಮಾನ್ಯ ಎಸ್.ಆರ್. ಪಾಟೀಲರು ಕೂಡ ಮಾತನಾಡಿದ್ದಾರೆ.

**ಸಭಾಪತಿಯವರು:-** ಇದಕ್ಕೆ statement ಇಲ್ಲ, ಮಾನ್ಯ ಸಚಿವರು ಉತ್ತರ ಹೇಳುತ್ತಾರೆ. ಅದರ ಪ್ರತಿಯನ್ನು ಆಮೇಲೆ ಕೊಡಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಅತ್ಯಂತ ಮಹತ್ವದ ವಿಷಯವನ್ನು ಸದನದಲ್ಲಿ ಚರ್ಚೆ ಮಾಡಿದ್ದಾರೆ. ಒಂದು ಮಾತನ್ನು ಮಾನ್ಯ ಎಸ್.ಆರ್. ಪಾಟೀಲರು ಮತ್ತು ಶ್ರೀಕಂಠೇಗೌಡರು ಆತಂಕವನ್ನು ಏನು ವ್ಯಕ್ತ ಮಾಡಿದ್ದಾರೆ ಆ ಆತಂಕಕ್ಕೆ ಅವಕಾಶವಿಲ್ಲ. ಕರ್ನಾಟಕದ ನೆಲ, ಜಲದ ಪ್ರಶ್ನೆ ಬಂದಾಗ ನಮ್ಮ ಸರ್ಕಾರ ಯಾರ ಜೊತೆಯಲ್ಲೂ compromise ಮಾಡುವುದಿಲ್ಲ, ಯಾರ ಮಾತಿಗೂ ಮಣೆ ಹಾಕುವುದಿಲ್ಲ, ಖಂಡಿತವಾಗಿಯೂ ನಮ್ಮ ಸರ್ಕಾರ ರಾಜ್ಯದ ಹಿತವನ್ನು, ಜನರ, ರೈತರ ಹಿತವನ್ನು ಕಾಪಾಡುವುದಕ್ಕೆ ಸದಾ ಸಿದ್ಧವಿದೆ. ಆ ನಿಟ್ಟಿನಲ್ಲಿ ನಾವು ಕಾರ್ಯಕ್ರಮಗಳನ್ನು ರೂಪಿಸುತ್ತೇವೆ. ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ ಯೋಜನೆಯಡಿಯಲ್ಲಿ ಮಹಾನದಿ ಮತ್ತು ಗೋದಾವರಿ ನದಿ ಕಣಿವೆಗಳ ಹೆಚ್ಚುವರಿ ನೀರನ್ನು ಕೊರತೆ ಕಣಿವೆಗಳಾದ ಕೃಷ್ಣಾ, ಕಾವೇರಿ, ಪಾಲಾರ್, ಪೆನ್ನಾರ್, ವೈಗೈ ಹಾಗೂ ಗುಂಡಾರ್ ಕಣಿವೆಗಳಿಗೆ ನೀರನ್ನು ತಿರುವುಗೊಳಿಸಲು ನದಿ ಜೋಡಣೆ ಯೋಜನೆಯನ್ನು ತಯಾರಿಸುತ್ತಿದೆ. ಸದರಿ ಯೋಜನೆಗಳಡಿಯಲ್ಲಿ ಕರ್ನಾಟಕಕ್ಕೆ ನ್ಯಾಯಸಮ್ಮತವಾದ ಪಾಲು ನೀಡದೇ ಇರುವ ಕಾರಣ 2010ರಲ್ಲಿ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪತ್ರ ವ್ಯವಹಾರ ಪ್ರಾರಂಭವಾಗಿದೆ. ಎರಡನೆಯದಾಗಿ, ಕೇಂದ್ರ ಸರ್ಕಾರವು 2015ರಲ್ಲಿ ರಾಜ್ಯಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡಿರುವ ಉತ್ತರದಲ್ಲಿ ಮಹಾನದಿ ಹಾಗೂ ಗೋದಾವರಿ ಕಣಿವೆಗಳ ಹೆಚ್ಚುವರಿ ನೀರಿನ ಹಂಚಿಕೆ ವಿಷಯವನ್ನು ಗೋದಾವರಿ ಮತ್ತು ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನಲ್ಲಿರುವ ಅವಕಾಶವನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕವು ಸೇರಿದಂತೆ ಎಲ್ಲಾ ಸಂಬಂಧಿಸಿದ ರಾಜ್ಯಗಳಿಗೆ ನಿರ್ಧರಿಸಲಾಗುವುದೆಂದು ಹಾಗೂ ಯಾವುದೇ ಇತ್ಯರ್ಥವಾಗದ ಅಥವಾ ಸಂಬಂಧಿಸದ ವಿಷಯಗಳಿಗೆ ಕರ್ನಾಟಕವು ಅಂತರರಾಜ್ಯ ಜಲ ಕಾಯಿದೆ, 1956ರ ಅವಕಾಶದಡಿಯಲ್ಲಿ ಕೇಂದ್ರ ಸರ್ಕಾರವನ್ನು ಕೋರಬಹುದೆಂದು ತಿಳಿಸಿದೆ. ಮೂರನೆಯದಾಗಿ, 2019-20ರಲ್ಲಿ ಗೋದಾವರಿ, ಕಾವೇರಿ ಯೋಜನೆಯಡಿಯಲ್ಲಿ ಗೋದಾವರಿ ಕಣಿವೆಯ 247 ಟಿ.ಎಂ.ಸಿ ಹೆಚ್ಚುವರಿ ನೀರನ್ನು ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಕೃಷ್ಣಾ, ಪಾಲಾರ್, ಪೆನ್ನಾರ್ ಮತ್ತು ಕಾವೇರಿ ಕಣಿವೆಗಳಿಗೆ ನೀರನ್ನು ತಿರುವುಗೊಳಿಸಲು National Water Development Agency (N.W.D.A) ರವರು D.P.R (Detailed Project Report) ತಯಾರಿಸಿದ್ದು ಸದರಿ ವರದಿಯಲ್ಲಿ ಕರ್ನಾಟಕದ ಕಾವೇರಿ, ಕೃಷ್ಣಾ ಹಾಗೂ ಇತರೆ ಕಣಿವೆಗಳಿಗೆ ಯಾವುದೇ ನೀರಿನ ಹಂಚಿಕೆಯನ್ನು ಪ್ರಸ್ತಾಪಿಸಿಲ್ಲದಿರುವುದಕ್ಕೆ ರಾಜ್ಯವು ತೀವ್ರವಾದ ಆಕ್ಷೇಪಣೆಯನ್ನು ಕೇಂದ್ರ ಸರ್ಕಾರಕ್ಕೆ ಹಾಗೂ ನದೀ ಜೋಡಣೆಯ ವಿಶೇಷ ಸಮಿತಿ ಸಭೆಗಳಲ್ಲಿ ತಿಳಿಸಿರುತ್ತದೆ. ಈ ವಿಷಯದ ಕುರಿತು ಮಾನ್ಯ ಮುಖ್ಯಮಂತ್ರಿಗಳಿಂದ ಪ್ರಧಾನಮಂತ್ರಿಯವರಿಗೆ ಮತ್ತು ಕೇಂದ್ರ ಜಲಶಕ್ತಿ ಸಚಿವರಿಗೆ ಪತ್ರಗಳನ್ನು ಬರೆಯಲಾಗಿದೆ. ಸದರಿ ಪತ್ರಕ್ಕೆ ಕೇಂದ್ರ ಜಲಶಕ್ತಿ ಸಚಿವರು ಉತ್ತರಿಸಿದ್ದು ಡಿ.ಪಿ.ಆರ್., ಅಂತಿಮಗೊಂಡ ನಂತರ ನೀರಿನ ಹಂಚಿಕೆ ವಿಷಯವನ್ನು ಭಿತ-ಭಛುಟಿ ರಾಜ್ಯಗಳೊಂದಿಗೆ ಸಮಾಲೋಚಿಸಿ ನಿರ್ಧರಿಸಲಾಗುವುದೆಂದು ತಿಳಿಸಿರುತ್ತಾರೆ.

**(ಮುಂದು)**

**(346) 09-03-2021/ 06-10/ ಕೆಹೆಚ್-ಎಕೆ**

**ಶ್ರೀ ಗೋವಿಂದ ಎಂ.ಕಾರಜೋಳ (ಮುಂದು):-**

ನದಿ ಜೋಡಣೆಯಿಂದ ಲಭ್ಯವಾಗುವ ಹೆಚ್ಚುವರಿ ನೀರಿನ ಪ್ರಮಾಣವನ್ನು ಯಾವುದೇ ರಾಜ್ಯಕ್ಕೆ ಹಂಚಿಕೆ ತೋರಿಸದೇ ತಿರುವುಗೊಳಿಸಲಾಗುವ ಕಣಿವೆಗಳಿಗೆ ಮಾತ್ರ ನೀರಿನ ಪ್ರಮಾಣದ ಹಂಚಿಕೆಯನ್ನು ಸೂಚಿಸುವಂತೆ ಹಾಗೂ ಸಂಬಂಧಿಸಿದ ಎಲ್ಲಾ co-basin ರಾಜ್ಯಗಳಿಗೆ ಒದಗಿಸಲಾಗಿರುವ ನೀರಿನ ಪ್ರಮಾಣವನ್ನು ಒಮ್ಮತದಿಂದ ನಿರ್ಧರಿಸಬೇಕಾಗುತ್ತದೆ ಎಂಬ ರಾಜ್ಯದ ನಿಲುವನ್ನು N.W.D.A ದಿನಾಂಕ:18-09-2020 ರಂದು ನಡೆದ ಸಮಲೋಚನಾ ಸಭೆಯಲ್ಲಿ ಹಾಗೂ ದಿನಾಂಕ:07-12-2020

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಂದು ಜರುಗಿದ ನದಿ ಜೋಡಣೆ ವಿಶೇಷ ಸಮಿತಿ ಸಭೆಯಲ್ಲಿ ಪ್ರಸ್ತಾಪಿಸಲಾಗಿದೆ. ಸದರಿ ಪ್ರಸ್ತಾವನೆಗೆ ಕರ್ನಾಟಕ ರಾಜ್ಯದಿಂದಾಗಲಿ, ಇನ್ನಿತರ ಸಂಬಂಧಿಸಿದ ಕಣಿವೆ ರಾಜ್ಯಗಳಿಂದಾಗಲಿ ಅಥವಾ ಕೇಂದ್ರ ಸರ್ಕಾರದಿಂದಾಗಲಿ ಇಲ್ಲಿಯವರೆಗೆ ಒಪ್ಪಿಗೆ ಅಥವಾ ಅನುಮೋದನೆ ದೊರೆತಿರುವುದಿಲ್ಲ. ಏತನ್ಮಧ್ಯೆ, ತಮಿಳುನಾಡು ಸರ್ಕಾರವು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ ಯೋಜಿಸಿರುವ ಕಾವೇರಿ, ವೈಗೈ (Vaigai), ಗುಂಡಾರು (Gundar) ನದಿ ಜೋಡಣೆಯ ಕಾಮಗಾರಿಯನ್ನು ಮುಂಚಿತವಾಗಿ ತೆಗೆದುಕೊಳ್ಳಲು ಉದ್ದೇಶಿಸಿದ್ದು, 6941 ಕೋಟಿ ರೂಪಾಯಿಗಳಿಗೆ ಅನುಮೋದನೆ ನೀಡಿದೆ. ರಾಷ್ಟ್ರೀಯ ತಿರುವು ಯೋಜನೆಯಿಂದ ಲಭ್ಯವಾಗುವ ನೀರನ್ನು ತಿರುವುಗೊಳಿಸಲು ಕಾಲಾವಕಾಶವಾಗಿರುವುದರಿಂದ, ಅಲ್ಲಿಯವರೆಗೆ ಮೆಟ್ಟೂರು ಜಲಾಶಯದಿಂದ ಲಭ್ಯವಾಗುವ ಸುಮಾರು 8.6 ಟಿ.ಎಂ.ಸಿ ನೀರನ್ನು ಸದರಿ ಲಿಂಕ್ ಮುಖಾಂತರ ತೆಗೆದುಕೊಂಡು ಹೋಗಲು ತಮಿಳುನಾಡು ಸರ್ಕಾರ ಪ್ರಸ್ತಾಪಿಸಿದೆ. N.W.D.A ರೂಪಿಸಿರುವ ಕಾವೇರಿ, ವೈಗೈ, ಗುಂಡಾರು ಯೋಜನೆಯಿಂದ ತಿರುವುಗೊಳಿಸಲಾಗಿರುವ ನೀರಿನ ಪ್ರಮಾಣವು ಲಭ್ಯವಾಗುವವರೆಗೆ ಕಾವೇರಿ ಕಣಿವೆಯಲ್ಲಿ ಸಿಗುವ ಹೆಚ್ಚುವರಿ ನೀರನ್ನು ಬಳಸಿಕೊಳ್ಳಲು ಮೊದಲ ಹಂತದಲ್ಲಿ ದಕ್ಷಿಣ ವೆಲ್ಲಾರ್ ಲಿಂಕ್ ಕಾಲುವೆ ನಿರ್ಮಾಣದ ತಾತ್ವಿಕ ಅನುಮೋದನೆ ನೀಡುವಂತೆ ಹಾಗೂ ಆರ್ಥಿಕ ನೆರವಿಗಾಗಿ ಕಾವೇರಿ, ವೈಗೈ, ಗುಂಡಾರು ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸುವಂತೆ ತಮಿಳುನಾಡು ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದೆ. ಸದರಿ ಪ್ರಸ್ತಾವನೆಯ ಬಗ್ಗೆ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದ ಅಭಿಪ್ರಾಯವನ್ನು ಕೇಂದ್ರ ಜಲ ಸಂಪನ್ಮೂಲ ಸಚಿವಾಲಯವು ಕೋರಿದ್ದರ ಮೇರೆಗೆ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರವು ರಾಜ್ಯದ ಅಭಿಪ್ರಾಯವನ್ನು ಕೋರಿದೆ. ಕಾವೇರಿ ನ್ಯಾಯಾಧೀಕರಣದ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯವು ಮಾರ್ಪಾಡು ಮಾಡುವಂತೆ ಸಾಮಾನ್ಯ ವರ್ಷದಲ್ಲಿ ತಮಿಳುನಾಡಿಗೆ ವಾರ್ಷಿಕ 177.25 ಟಿ.ಎಂ.ಸಿ ನೀರಿನ ಪ್ರಮಾಣವನ್ನು ಬಿಳಿಗುಂಡ್ಲು ಮಾಪನ ಕೇಂದ್ರದಲ್ಲಿ ರಾಜ್ಯದಿಂದ ನೀಡಬೇಕಾಗಿದ್ದು, ಸದರಿ ಪ್ರಮಾಣವನ್ನು ನೀಡಿದ ನಂತರ ರಾಜ್ಯದ ಕಾವೇರಿ ಕಣಿವೆಯಲ್ಲಿ ಉತ್ಪತ್ತಿಯಾಗುವ ಹೆಚ್ಚುವರಿ ಪ್ರಮಾಣವನ್ನು ಬಳಸಲು ಕರ್ನಾಟಕಕ್ಕೆ ಹಕ್ಕಿದೆ ಎಂಬುದು ರಾಜ್ಯ ಸರ್ಕಾರದ ನಿಲುವಾಗಿರುತ್ತದೆ. ತಮಿಳುನಾಡು ಕೈಗೊಳ್ಳುತ್ತಿರುವ ಕಾವೇರಿ ದಕ್ಷಿಣ ವೆಲ್ಲಾರ್ ಯೋಜನೆಯ ಬಗ್ಗೆ ರಾಜ್ಯ ಸರ್ಕಾರದಿಂದ, ಕೇಂದ್ರ ಜಲಸಂಪನ್ಮೂಲ ಸಚಿವಾಲಯ, ಕೇಂದ್ರ ಜಲ ಆಯೋಗ ಹಾಗೂ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರಕ್ಕೆ ಬರೆದಿರುವಂತಹ ಪತ್ರ ದಿನಾಂಕ:17-02-2021 ರಲ್ಲಿ ಆಯಾಯ ರಾಜ್ಯದ ಆಕ್ಷೇಪಣೆಯನ್ನು ತಿಳಿಸಲಾಗಿದೆ. ತಮಿಳುನಾಡಿನ ಸದರಿ ಯೋಜನೆ ಕಾನೂನು ಹಾಗೂ ಇತರೆ ಅಂಶಗಳಿಗೆ ವಿರುದ್ಧವಾಗಿದ್ದು, ಯಾವುದೇ ತೀರುವಳಿ ನೀಡದಂತೆ ಮತ್ತು ರಾಷ್ಟ್ರೀಯ ಯೋಜನೆ ಎಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಘೋಷಿಸದಿರುವಂತೆ ಕೋರಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ಮತ್ತು ಕೇಂದ್ರದ ಜಲಶಕ್ತಿ ಸಚಿವರಿಗೆ ದಿನಾಂಕ:01-03-2020 ರಂದು ಬರೆದಿರುವ ಪತ್ರದಲ್ಲಿ ತಮಿಳುನಾಡು ರಾಜ್ಯವು ಕೈಗೊಂಡಿರುವ ಯೋಜನೆಯ ಬಗ್ಗೆ ರಾಜ್ಯದ ಆಕ್ಷೇಪಣೆಯನ್ನು ತಿಳಿಸಿ, ಸದರಿ ಯೋಜನೆಗೆ ಕೇಂದ್ರ ಸರ್ಕಾರವು ತೀರುವಳಿ ನೀಡಬಾರದೆಂದು ಹಾಗೂ ಯೋಜನೆಯನ್ನು ಮುಂದುವರೆಸದಂತೆ ತಮಿಳುನಾಡು ರಾಜ್ಯಕ್ಕೆ ನಿರ್ದೇಶನವನ್ನು ನೀಡುವಂತೆ ಕೋರಲಾಗಿದೆ. ಸದರಿ ಯೋಜನೆಯ ಬಗ್ಗೆ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ದಿನಾಂಕ:21-02-2021 ರಂದು ನವದೆಹಲಿಯಲ್ಲಿ ಜಲಸಂಪನ್ಮೂಲ ಸಚಿವರು ಕಾನೂನು ಮತ್ತು ತಾಂತ್ರಿಕ ಪರಿಣಿತರೊಂದಿಗೆ ಹಾಗೂ ದಿನಾಂಕ:26-02-2021 ರಂದು ಬೆಂಗಳೂರಿನಲ್ಲಿ ಜಲಸಂಪನ್ಮೂಲ ಸಚಿವರು, ಗೃಹ ಸಚಿವರು ಮತ್ತು ಸಂಸದೀಯ, ಶಾಸನ ರಚನಾ ಇಲಾಖೆ ಸಚಿವರು ರಾಜ್ಯದ ಕಾನೂನು ಮತ್ತು ತಾಂತ್ರಿಕ ತಂಡದೊಂದಿಗೆ ಚರ್ಚಿಸಿರುತ್ತಾರೆ. ತಮಿಳುನಾಡು ರಾಜ್ಯವು ಕಾವೇರಿ ನ್ಯಾಯಾಧೀಕರಣದ ತೀರ್ಪಿನ ಉಲ್ಲಂಘನೆಯಾಗಿ ಕಾವೇರಿ ಕಣಿವೆ ಹೆಚ್ಚುವರಿ ನೀರಿನ ಬಳಕೆಗಾಗಿ ಯೋಜಿಸಿರುವ ಕಾವೇರಿ ವೆಲ್ಲಾರ್ ಯೋಜನೆಯನ್ನು ಕೈಗೊಳ್ಳದಂತೆ ಕ್ರಮವಹಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಕಾನೂನಾತ್ಮಕವಾಗಿ ಹಾಗೂ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುವ ಕುರಿತು ಕಾನೂನು ತಂಡದೊಂದಿಗೆ ಸಮಲೋಚಿಸುತ್ತಿದ್ದು, ಕಾವೇರಿ ಕಣಿವೆ ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಅಷ್ಟೇ ಅಲ್ಲದೇ, ಈಗ ನಾವು ಹೆಚ್ಚುವರಿ ನೀರನ್ನು ಅಂದರೆ, surplus water ಅನ್ನು ಉಪಯೋಗ ಮಾಡುವುದಕ್ಕೆ ಪ್ಲಾನಿಂಗ್ ಕೂಡ ಮಾಡುತ್ತಿದ್ದೇವೆ. ಇದಲ್ಲದೇ ಈಗಾಗಲೇ ಮುಖ್ಯಮಂತ್ರಿಗಳಿಗೆ ನಮ್ಮ ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳು ಕಡತವನ್ನು ಕಳುಹಿಸಿದ್ದಾರೆ. All Party Meeting ಅನ್ನು ಸದ್ಯದಲ್ಲಿಯೇ ಕರ್ನಾಟಕದಲ್ಲಿ ಮಾಡಬೇಕೆಂಬ ವಿಚಾರ ಕೂಡ ಇದೆ. ನಾನು ಈ ಸಂದರ್ಭದಲ್ಲಿ ಮಾನ್ಯ ಪ್ರತಿಪಕ್ಷದ ನಾಯಕರಿಗೆ ಮತ್ತು ಈ ಮನೆಯ ಎಲ್ಲಾ ಸದಸ್ಯರಿಗೂ ಕೂಡ ವಿನಂತಿ ಮಾಡುವುದೇನೆಂದರೆ, ಯಾವುದೇ ಆತಂಕಕ್ಕೆ ಒಳಗಾಗುವಂತಹ ಅವಶ್ಯಕತೆ ಇಲ್ಲ ಮತ್ತು ಯಾವುದೋ ಪತ್ರಿಕೆಯಲ್ಲಿ ಬಂದಿರುವಂತಹ ವಿಚಾರವಾಗಿ 'ಅದರಲ್ಲಿ ಪ್ರಧಾನ ಮಂತ್ರಿಗಳು ಭಾಗವಹಿಸುತ್ತಾರೆ. ಇದಕ್ಕೆ ಕೇಂದ್ರ ಸರ್ಕಾರ ಅನುದಾನ ನೀಡಿದೆ' ಎನ್ನುವಂತಹ ಮಾಹಿತಿ ಸರಿಯಾದುದು ಅಲ್ಲ. ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳಾಗಲಿ, ಜಲಸಂಪನ್ಮೂಲ ಸಚಿವರಾಗಲಿ, ಆ ಕಾರ್ಯಕ್ರಮಕ್ಕೆ ಯಾವುದಕ್ಕೂ ಕೂಡ ಭಾಗಿಯಾಗುತ್ತಾರೆ ಎನ್ನುವಂತಹದ್ದರ ಬಗ್ಗೆ ಆಲೋಚನೆ ಮಾಡಿಲ್ಲ ಎನ್ನುವಂತಹದ್ದನ್ನು ಬಹಳ ಸ್ಪಷ್ಟವಾಗಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಕೇಂದ್ರ ಸರ್ಕಾರ ಆ ಯೋಜನೆಗೆ ಅನುದಾನವನ್ನು ಕೂಡ ನೀಡಿಲ್ಲ ಎನ್ನುವಂತಹದ್ದನ್ನು ಈ ಸದನದಲ್ಲಿ ಸ್ಪಷ್ಟಪಡಿಸುವುದಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ಸರ್ಕಾರ ಮೇಕೆದಾಟು ಯೋಜನೆಯ ಬಗ್ಗೆ ಈಗಾಗಲೇ ನಾವು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ದಿನಾಂಕ:18–01–2019 ರಂದು 9,000 ಕೋಟಿ ರೂಪಾಯಿಗಳ ಯೋಜನೆಯನ್ನು ಕೇಂದ್ರ ಜಲ ಆಯೋಗಕ್ಕೆ ಈಗಾಗಲೇ ಕಳುಹಿಸಲಾಗಿದೆ. ಅವತ್ತಿನ ಪ್ರಸ್ತಾವನೆ ಹೋಗಿದೆ. ಕೇಂದ್ರ ಜಲ ಆಯೋಗದವರು ಅದನ್ನು ಪರಿಶೀಲನಾ ಹಂತದಲ್ಲಿ ಇಟ್ಟಿದ್ದಾರೆ. Technical Committee ರವರು ಕೂಡ ಪರಿಶೀಲನೆ ಮಾಡುತ್ತಿದ್ದಾರೆ. ಅಷ್ಟೇ ಅಲ್ಲದೇ ಆ ಯೋಜನೆಗೆ 5221 ಹೆಕ್ಟೇರ್ ಭೂಮಿ ಅವಶ್ಯಕತೆ ಇದೆ. ಭೂಮಿ submerge ಆಗುತ್ತದೆ. ವನ್ಯ ಜೀವಿ ಪ್ರದೇಶದಿಂದ 3181.9 ಹೆಕ್ಟೇರ್, ಮೀಸಲು ಅರಣ್ಯ ಪ್ರದೇಶದಿಂದ 1869.5 ಹೆಕ್ಟೇರ್ ಮತ್ತು ಅರಣ್ಯ ಪ್ರದೇಶದಿಂದ 5051 ಹೆಕ್ಟೇರ್, ರೆವಿನ್ಯೂ ಪ್ರದೇಶದಿಂದ 201 ಹೆಕ್ಟೇರ್ ಭೂಮಿ ಬೇಕಾಗುತ್ತದೆ. ಅದಕ್ಕೆ ಈಗಾಗಲೇ forest clearance ಸಲುವಾಗಿ, environment clearance ಸಲುವಾಗಿ ಎಲ್ಲಾ ಕಡೆಯೂ ಕೂಡ ನಮ್ಮ ಅಧಿಕಾರಿಗಳು ನಿರಂತರವಾಗಿ ಪ್ರಯತ್ನವನ್ನು ಮಾಡುತ್ತಿದ್ದಾರೆ. ನಾನು ಇಷ್ಟೇ ಹೇಳುವುದಕ್ಕೆ ಬಯಸುತ್ತೇನೆ. ಕಾನೂನು ಕ್ರಮ ತೆಗೆದುಕೊಳ್ಳುವುದಲ್ಲದೇ, ಅವರಿಗೆ ಅನುಮತಿ ಕೊಡುವುದಕ್ಕೆ ಸಾಧ್ಯವೇ ಇಲ್ಲ. ಕೇಂದ್ರ ಸರ್ಕಾರವಾಗಲಿ, Central Water Commission ರವರಾಗಲಿ Cauvery Water Management Authority ಯವರಾಗಲಿ ಅನುಮತಿಯನ್ನು ಕೊಡುವುದಕ್ಕೆ ಸಾಧ್ಯ ಇಲ್ಲ. ಏಕೆಂದರೆ, ಇದೊಂದು ಕಾನೂನುಬಾಹಿರವಾದಂತಹ ಕ್ರಮವಾಗುತ್ತದೆ. ಅದಕ್ಕಾಗಿ ಯಾರೂ ಕೂಡ ಅನುಮತಿ ಕೊಡುವುದಿಲ್ಲ. ನಮ್ಮ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಕಾನೂನಾತ್ಮಕ ಹೋರಾಟ ಮತ್ತು ಪ್ರಧಾನ ಮಂತ್ರಿಯವರ ಜೊತೆಯಲ್ಲಿ ಮತ್ತು ಕೇಂದ್ರ ಜಲಸಂಪನ್ಮೂಲ ಸಚಿವರ ಜೊತೆಯಲ್ಲಿ ಆಯಿತು. ಈಗಾಗಲೇ ನಿರಂತರವಾದಂತಹ ಪ್ರಯತ್ನ ನಡೆಯುತ್ತಿದೆ ಮತ್ತು ಪತ್ರ ವ್ಯವಹಾರ ಕೂಡ ನಡೆಯುತ್ತಿದೆ. ಅದಕ್ಕೆ ನಾನು ಇಷ್ಟೇ ಹೇಳುವುದಕ್ಕೆ ಬಯಸುತ್ತೇನೆ. ಹೆಚ್ಚು ಆತಂಕಕ್ಕೆ ಒಳಗಾಗುವಂತಹ ಅವಶ್ಯಕತೆ ಇಲ್ಲ. ತಮ್ಮ ಅಭಿಪ್ರಾಯಗಳನ್ನು ಕೇಳಿದ್ದೇನೆ. ತಾವು ಕೂಡ ಏನು All Party Meeting ಅನ್ನು ಕರೆಯುತ್ತೀರಿ. ಆ ಸಂದರ್ಭದಲ್ಲಿ ಇನ್ನು ಹೆಚ್ಚಿನ ಸಲಹೆ–ಸೂಚನೆಗಳನ್ನು ನಮ್ಮಲ್ಲಿರುವಂತಹ ಮಾಹಿತಿಯನ್ನು ಒದಗಿಸುವುದಕ್ಕೆ ತಾವು ಮನಸ್ಸು ಮಾಡಬಹುದು ಎಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. ಈಗಾಗಲೇ ತಮಿಳುನಾಡಿನಲ್ಲಿ ಶಂಕುಸ್ಥಾಪನೆ ಆಗಿದೆ. ಅಲ್ಲಿ ಕೆಲಸ ಕೂಡ ಪ್ರಾರಂಭವಾಗಿದೆ. ಅದರ ಬಗ್ಗೆ ಕೇಂದ್ರ ಸರ್ಕಾರ ಅವರಿಗೆ ಕೆಲಸ ಮಾಡಬಾರದು ಎಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಏಕೆ ಸೂಚನೆ ಕೊಟ್ಟಿಲ್ಲ? ಇಲ್ಲಿ ಅಂತರರಾಜ್ಯ ನದಿ ಇದೆ. ಬೇರೆ ರಾಜ್ಯದಲ್ಲಿ ತುಂಗಾಭದ್ರಾ ನದಿಯ ಬಗ್ಗೆ ತಾವು ಏನು ಹೇಳಿದ್ದೀರಿ, ಅದೇ ರೀತಿ ಕೇಂದ್ರ ಸರ್ಕಾರ ಏಕೆ ಮಧ್ಯಪ್ರವೇಶ ಮಾಡಿ ತಡೆಹಿಡಿಯಲಿಲ್ಲ?

**(ಮುಂದು)**

**(347) 09/03/2021/ಎಸ್‌ಪಿಆರ್/ಆರ್‌ಎನ್/6:20**

**ಶ್ರೀ ಎನ್.ಅಪ್ಪಾಜಿಗೌಡ(ಮುಂದು):-**

ಪ್ರಸ್ತುತ ತಮಿಳುನಾಡು ರಾಜ್ಯದ ಚುನಾವಣೆಯು ನಡೆಯುವುದರಿಂದ, ಆ ರಾಜ್ಯಕ್ಕೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ ಕೇಂದ್ರ ಸರ್ಕಾರವು ಕರ್ನಾಟಕ ರಾಜ್ಯದ ಮೇಲೆ ಪಕ್ಷಪಾತ ತೋರುತ್ತಿದೆ ಎಂದು ನಾನು ಹೇಳುತ್ತಿದ್ದೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಉಪಮುಖ್ಯಮಂತ್ರಿಗಳು ತಾವು ಹೇಳಿರುವ ಹೇಳಿಕೆಯನ್ನು ತಿದ್ದುಪಡಿ ಮಾಡಬೇಕು. ಏಕೆಂದರೆ, ನಾನು deficit ಅಂಶದ ಬಗ್ಗೆ ಆಗಿನಿಂದಲೂ ಹೇಳುತ್ತಿದ್ದೇನೆ. ಈ ವಿಚಾರದ ಬಗ್ಗೆ ನ್ಯಾಯಾಧೀಕರಣದಲ್ಲಿಯೂ ಸಹ ಹೆಚ್ಚಿನ ನೀರು ಅಥವಾ ಅತೀವೃಷ್ಠಿಯ ನೀರು ಇಲ್ಲ. ಈ ಅಂಶದ ಬಗ್ಗೆ ನಿಲುವು ತೆಗೆದುಕೊಂಡರೆ ಮಾತ್ರವೇ ನಾವು ಉಳಿದುಕೊಳ್ಳುವುದಕ್ಕಾಗುತ್ತದೆ. ಅಲ್ಲಿ ನೀರು ಇದೆ, ಅದನ್ನು ಬಳಕೆ ಮಾಡುತ್ತೇವೆ ಎಂದು ನ್ಯಾಯಾಧೀಕರಣದಲ್ಲಿ ಹೇಳಿದರೆ, ಅದು ತಪ್ಪಾಗುತ್ತದೆ. ಅಲ್ಲಿ ಒಂದು ವೇಳೆ ನೀರು ಹೆಚ್ಚಿಗೆ ಸಿಗುವುದಾದರೆ, ಅದನ್ನು ಈಗಾಗಲೇ ಸ್ಥಗಿತಗೊಂಡಿರುವ 9 ಏತ ನೀರಾವರಿ ಯೋಜನೆಗಳಿಗೆ ಹಾಗೂ ಅಲ್ಲಿರುವ ಎರಡು ಲಕ್ಷ ಎಕರೆಗಿಂತಲೂ ಅಧಿಕವಾಗಿರುವ ನೀರಾವರಿ ಪ್ರದೇಶಗಳಿಗೆ ಆ ನೀರನ್ನು ಬಳಕೆ ಮಾಡಲು ಪ್ರಯತ್ನಿಸಬೇಕು. ಸರ್ಕಾರವು ದಯಮಾಡಿ, ಕಬಿನಿಯ ಎರಡನೇ ಹಂತದ ಮತ್ತು ಮಾರ್ಕಂಡೇಯದ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. ಈ ಕಾರಣಗಳಿಗಾಗಿ ಪ್ರಸ್ತುತ ವಿಚಾರದಲ್ಲಿ ಸರ್ಕಾರವು ತೆಗೆದುಕೊಂಡಿರುವ ನಿಲುವು ಸರಿಯಿಲ್ಲ. ಈ ಅಂಶವನ್ನು ಇಲಾಖಾಧಿಕಾರಿಗಳು ಸಚಿವರಿಗೆ ಹೇಳಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಅಲ್ಲಿ ಹೆಚ್ಚಿನ ನೀರು ಎಲ್ಲಿದೆ? ತಮಿಳುನಾಡಿನವರು ನ್ಯಾಯಾಧೀಕರಣದಲ್ಲಿ ಅರ್ಜಿಯನ್ನು ಸಲ್ಲಿಸಿರುವ ಬಗ್ಗೆ ಸರ್ಕಾರವೇ ತಿಳಿಸುತ್ತಿದೆ. ಒಂದು ವೇಳೆ ಹೆಚ್ಚಿನ ನೀರನ್ನು ಬಳಕೆ ಮಾಡಿದ್ದಲ್ಲಿ ಅದು ನ್ಯಾಯಾಲಯದ ಆದೇಶದ ಉಲ್ಲಂಘನೆಯಾಗುತ್ತದೆ ಎಂದೂ ಸಹ ಸಚಿವರೇ ಹೇಳುತ್ತಿದ್ದಾರೆ. ಆದರೆ, ಸಚಿವರೇ ಅಲ್ಲಿ ಹೆಚ್ಚಿನ ನೀರು ಇದೆ, ಅದನ್ನು ಬಳಕೆ ಮಾಡಲಾಗುವುದು ಎಂಬುದಾಗಿ ಹೇಳುತ್ತಿದ್ದಾರೆ. ಕಾವೇರಿ ಜಲಾನಯನ ಭಾಗದಲ್ಲಿ ನೆನೆಗುದಿಗೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿದ್ದಿರುವ ನಮ್ಮ ರಾಜ್ಯದ ನೀರಾವರಿ ಯೋಜನೆಗಳನ್ನು ಸರ್ಕಾರವು ಅಭಿವೃದ್ಧಿ ಪಡಿಸುವುದಕ್ಕಾಗಿ suffering ಅಚ್ಚುಕಟ್ಟು ಪ್ರದೇಶಗಳಲ್ಲಿ ನೀರುಣಿಸುವುದಕ್ಕಾಗಿ ಅಲ್ಲಿ ಲಭ್ಯವಿರುವ ಹೆಚ್ಚಿನ ನೀರನ್ನು ಬಳಸಿಕೊಳ್ಳಲಾಗುವುದು ಎಂಬ ನಿಲುವನ್ನು ಸರ್ಕಾರವು ತೆಗೆದುಕೊಳ್ಳಬೇಕು.

ಮೇಕೆದಾಟನ್ನು ನಾವು ನಿರ್ಮಿಸಿದ್ದೇವೆ. ಬೇಸಿಗೆ ಅವಧಿಯಲ್ಲಿ ಅಂದರೆ, ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಮಾಹೆಯಾನ 2.5 ಟಿ.ಎಂ.ಸಿ. ಪ್ರಮಾಣದಷ್ಟು ನೀರನ್ನು ತಮಿಳುನಾಡು ರಾಜ್ಯಕ್ಕೆ ನೀಡಬೇಕು. ಆದರೆ ಆ ಸಂದರ್ಭದಲ್ಲಿ ನೀರು ಲಭ್ಯವಿರುವುದಿಲ್ಲ. ಆ ಕಾರಣಕ್ಕಾಗಿ ಮಾತ್ರವೇ ನಾವು ಸದರಿ ಯೋಜನೆಯನ್ನು ಪ್ರಸ್ತಾಪಿಸಿದ್ದೇವೆ. ಇದನ್ನು ನಮ್ಮ ರಾಜ್ಯದಲ್ಲಿ ಮೈತ್ರಿ ಸರ್ಕಾರವು ಅಸ್ತಿತ್ವದಲ್ಲಿದ್ದಾಗ ಶ್ರೀ ಹೆಚ್.ಡಿ.ಕುಮಾರಸ್ವಾಮಿ ರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಮಾಡಿ, ಅನುಮೋದನೆ ನೀಡಲಾಗಿತ್ತು. ಅವತ್ತಿನ ದಿವಸ ಶ್ರೀ ನಿತೀನ್ ಗಡ್ಕರಿರವರು ಸಚಿವರಾಗಿದ್ದರು. ಈ ವಿಚಾರದಲ್ಲಿ ಅವರೇ ಪರಿಸರ ಮಂತ್ರಾಲಯದಿಂದ ಅನುಮೋದನೆಯನ್ನು ಪಡೆಯಲು ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದರು. ಸರ್ಕಾರವು ದಯಮಾಡಿ ತಮ್ಮ ನಿಲುವನ್ನು ಬದಲಾಯಿಸಿಕೊಳ್ಳಬೇಕೆಂದು ಹೇಳುತ್ತಾ, ಈ ವಿಚಾರದಲ್ಲಿ ಸ್ಪಷ್ಟೀಕರಣವನ್ನು ನೀಡಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಉಪಮುಖ್ಯಮಂತ್ರಿಗಳು ನೀಡಿರುವ ಉತ್ತರದ ಪ್ರತಿಯು ನಮಗೆ ಲಭ್ಯವಾಗಿಲ್ಲ. ನಾನು ಮೂರು ವಿಚಾರಗಳನ್ನು ಪ್ರಸ್ತಾಪಿಸಿದ್ದು, ಅವುಗಳ ಬಗ್ಗೆ ಸ್ಪಷ್ಟೀಕರಣವನ್ನು ಕೇಳಲಿಚ್ಛಿಸುತ್ತೇನೆ. ಇವತ್ತಿನ ದಿವಸ 8.6 ಟಿ.ಎಂ.ಸಿ.ನಷ್ಟು ಹೆಚ್ಚುವರಿ ನೀರು ಇದೆ, ಅದನ್ನು ಹೊಸ ಕಾಲುವೆಗಳ ಮೂಲಕ ಬಳಕೆ ಮಾಡಿಕೊಳ್ಳುವ ಪ್ರಯತ್ನ ಮತ್ತು ಮೆಟ್ಟೂರು ಅಣೆಕಟ್ಟಿನಲ್ಲಿ ಹೆಚ್ಚುವರಿ ನೀರು ಇದೆ ಎಂಬುದಾಗಿ ಉಪಮುಖ್ಯಮಂತ್ರಿಗಳು ತಿಳಿಸಿದರು. ಈಗಾಗಲೇ 3,300 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹೊಸ ಕಾಲುವೆಗಳನ್ನು ತೋಡಿ, ಹೊಸ ನೀರಾವರಿ ಪ್ರದೇಶಕ್ಕೊಳಪಡಿಸುವ ಕಾರ್ಯಕ್ರಮಕ್ಕೆ ಶಂಕುಸ್ಥಾಪನೆಯಲ್ಲ, ಉದ್ಘಾಟನೆಯನ್ನು ತಮಿಳುನಾಡಿನವರು ಯಾರದೇ ಅನುಮತಿಯನ್ನು ಪಡೆಯದೇ ಮಾಡಿದ್ದಾರೆ. ಈ ಸಂಗತಿಯು ಉಪಮುಖ್ಯಮಂತ್ರಿಗಳಿಗೆ ತಿಳಿದಿರಲಿ. ತಮಿಳುನಾಡಿನವರು ಕೇಂದ್ರ ಸರ್ಕಾರದ ಅಥವಾ ಜಲ ನಿರ್ವಹಣಾ ಮಂಡಳಿಯ ಯಾರದ್ದೇ ಅನುಮತಿಯನ್ನು ಪಡೆದಿಲ್ಲ. ಮುಂದುವರೆದು, ನಮ್ಮಿಂದ ನಿರಪೇಕ್ಷಣಾವನ್ನೂ ಸಹ ಪಡೆದಿಲ್ಲ. ಈ ರೀತಿಯಾಗಿ ಆ ರಾಜ್ಯದವರು ಎಷ್ಟರಮಟ್ಟಿಗೆ ಕೆಲಸ ನಿರ್ವಹಿಸುತ್ತಾರೆನ್ನುವುದಕ್ಕೆ ಉದಾಹರಣೆಯನ್ನು ನೀಡುತ್ತಿದ್ದೇನೆ. ಹೆಚ್ಚುವರಿ 8.6 ಟಿ.ಎಂ.ಸಿ. ನೀರು ಬಳಸಿಕೊಳ್ಳುವ ಪ್ರಯತ್ನವೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹ ಮುಗಿದು ಹೋಗಿದೆ. There is no excess water in Mettur Dam. ಈ ವಿಚಾರದಲ್ಲಿ ನನ್ನ ಪ್ರಶ್ನೆ ಏನೆಂದರೆ, ಮೊದಲನೆಯದಾಗಿ ರಾಜ್ಯ ಸರ್ಕಾರವು ತಕ್ಷಣವೇ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗುತ್ತೀರೋ ಅಥವಾ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡುತ್ತೀರೋ ಒಟ್ಟಾರೆಯಾಗಿ ಅಲ್ಲಿನ ಕಾಮಗಾರಿಗಳಿಗೆ ತಡೆಯಾಜ್ಞೆಯನ್ನು ಪಡೆದುಕೊಳ್ಳಬೇಕು. ಪರ್ಯಾಯ ಮಾರ್ಗವಾಗಿ ನಮ್ಮ ಮೇಕೆದಾಟು ಯೋಜನೆಗೆ ಡಿ.ಪಿ.ಆರ್. ದೊರೆತಿದೆ ಎಂದು ಸರ್ಕಾರವು ಹೇಳುತ್ತಿದ್ದು, ಆ ಯೋಜನೆಗಳನ್ನು ಪ್ರಾರಂಭಿಸಬೇಕು. 11,940 ಕೋಟಿ ರೂಪಾಯಿಗಳ ಯೋಜನೆಗೆ ತಮಿಳುನಾಡು ಸರ್ಕಾರವು ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ಅದೇ ರೀತಿಯಾಗಿ ನಮ್ಮ ಸರ್ಕಾರವೂ ಸಹ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿ, ತಕ್ಷಣವೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು.

ಮುಂದುವರೆದು, ಮಾರ್ಕಂಡೇಯ ಕುಡಿಯುವ ನೀರಿನ ಯೋಜನೆಯನ್ನು ಸರ್ಕಾರವು ಕೈಗೆತ್ತಿಕೊಳ್ಳಬೇಕ; ಇದಕ್ಕೆ ಯಾವುದೇ ಅಡ್ಡಿ ಇಲ್ಲ. ಇವತ್ತಿನ ದಿವಸ ಉನ್ನತ ಮಟ್ಟದ ಕಾಲುವೆ ನಿರ್ಮಾಣ ಯೋಜನೆಯೂ ಸಹ ಬಾಕಿಯಿದೆ. ಆ ಭಾಗದ ಶಾಸಕರಾದ ಶ್ರೀ ಸಿ.ಪಿ.ಯೋಗೇಶ್ವರ್‌ರವರಿದ್ದಾರೆ. ಅಲ್ಲಿನ ಕೆರೆಗಳನ್ನು ತುಂಬಿಸುವ ಕೆಲಸಗಳು ಬಾಕಿಯಿವೆ. ಅಲ್ಲಿ 115 ಅಡಿ ಎತ್ತರದಲ್ಲಿ ಕೇವಲ 45 ದಿನಗಳವರೆಗೆ ಮಾತ್ರವೇ ನೀರನ್ನು ಹರಿಸಲಾಗುವುದು. ಆ ಭಾಗದ ನದಿಗಳನ್ನು, ಕೆರೆಗಳನ್ನು ತುಂಬಿಸುವ ಮತ್ತು ಕುಡಿಯುವ ನೀರಿನ ಯೋಜನೆಗಳು ಬಾಕಿ ಇವೆ. ಇವುಗಳಿಗೆ ಯಾರ ಅನುಮತಿಯ ಅವಶ್ಯಕತೆ ಇಲ್ಲ. ಪ್ರವಾಹವನ್ನು ನಿಯಂತ್ರಿಸಬೇಕೆಂದು ನಾವುಗಳು ಹೇಳುತ್ತಿರುತ್ತೇವೆ. ಈ ಯೋಜನೆಯು ಪ್ರವಾಹವನ್ನು ನಿಯಂತ್ರಿಸುವ ಪರ್ಯಾಯ ಮಾರ್ಗವಾಗಿದೆ ಮತ್ತು ಅಲ್ಲಿನ ನೀರು ಸಮುದ್ರಕ್ಕೆ ಹೋಗುವ ಬದಲು ಸದ್ಬಳಕೆ ಮಾಡಿಕೊಳ್ಳುವುದಾಗಿದೆ. ಇಂತಹ ಯೋಜನೆಗಳನ್ನು ಸರ್ಕಾರವು ಏಕೆ ಘೋಷಿಸುತ್ತಿಲ್ಲ? ಇಂತಹ ಯೋಜನೆಗಳನ್ನು ಅನುಮೋದಿಸಿ, ಶಂಕುಸ್ಥಾಪನೆಯನ್ನು ಮಾಡಬೇಕು. ಇದಕ್ಕಾಗಿ ಕೇವಲ 3,200 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಕಳೆದೆರೆಡು ದಶಕಗಳಿಂದ ಈ ಯೋಜನೆಗಳು ನೆನೆಗುದಿಗೆ ಬಿದ್ದಿವೆ. ಕಬಿನಿ ಹಿನ್ನೀರಿನ 3,300 ಕೋಟಿ ರೂಪಾಯಿಗಳ ಯೋಜನೆಯಿಂದಾಗಿ 95 ಸಾವಿರರಿಂದ ಒಂದು ಲಕ್ಷದ ಎಕರೆ ಜಮೀನಿಗೆ ನೀರಾವರಿಯಾಗುತ್ತದೆ. ಕಬಿನಿ ಹಿನ್ನೀರಿನ ಏತ ನೀರಾವರಿ ಯೋಜನೆಗಳು ಕಳೆದ 15 ವರ್ಷಗಳಿಂದ ಬಾಕಿಯಿವೆ. ಈ ಎರಡು ಯೋಜನೆಗಳನ್ನು ಸರ್ಕಾರವು ಏಕೆ ಅನುಮೋದಿಸುತ್ತಿಲ್ಲ? ಇದಕ್ಕೆ ಯಾರಿಂದಲೂ ನಿರಪೇಕ್ಷಣೆಯ ಅವಶ್ಯಕತೆ ಇಲ್ಲ. ಈ ವಿಚಾರದಲ್ಲಿ ನಮ್ಮ ವಾದವೇನೆಂದರೆ, ತಕ್ಷಣವೇ ತಮಿಳುನಾಡಿನವರು ಟೆಂಡರ್ ಕರೆದಿರುವ ಕಾಮಗಾರಿಗಳನ್ನು ತಡೆಯಬೇಕು ಮತ್ತು ಅದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರ್ಯಾಯವಾಗಿ ನಮ್ಮ ಕಾಮಗಾರಿಗಳನ್ನು ಪ್ರಾರಂಭಿಸಬೇಕು. ತಮಿಳುನಾಡಿನವರು ಯೋಜನೆಗಳನ್ನು ಪ್ರಾರಂಭಿಸಿದರೆ, ನಾವೂ ಸಹ ನಮ್ಮ ಯೋಜನೆಗಳನ್ನು ಪ್ರಾರಂಭಿಸಬೇಕು. ಏಕೆಂದರೆ ನಾವು ಅವರಿಗಿಂತಲೂ ಮುಂಚಿತವಾಗಿ ಯೋಜನೆಗಳನ್ನು ಪ್ರಾರಂಭಿಸಿದ್ದೇವೆ. ಆದರೆ ಅವುಗಳೆಲ್ಲವೂ ನೆನೆಗುದಿಗೆ ಬಿದ್ದಿವೆ. ಹೀಗಾಗಿ ಅವುಗಳೆಲ್ಲವನ್ನೂ ಪ್ರಾರಂಭಿಸುವುದರ ಜೊತೆಗೆ ತಮಿಳುನಾಡಿನವರ ಯೋಜನೆಗಳು ನಡೆಯಲಿ, ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ, ನಮ್ಮ ಯೋಜನೆಗಳನ್ನು ಸ್ಥಗಿತಗೊಳಿಸಲಾಗಿದೆ. ಅದೇ ರೀತಿಯಾಗಿ ತಮಿಳುನಾಡಿನವರ ಯೋಜನೆಗಳೂ ಸಹ ಸ್ಥಗಿತಗೊಳ್ಳಬೇಕು. ಈ ವಿಚಾರದಲ್ಲಿ ಹಾಗೂ ತಮಿಳುನಾಡಿನವರ ಮೇಲೆ ನಮ್ಮ ಕ್ರಮವೇನು? ಈ ಅಂಶಗಳ ಬಗ್ಗೆ ಸರ್ಕಾರವು ದಯಮಾಡಿ ಸ್ಪಷ್ಟೀಕರಣವನ್ನು ನೀಡಬೇಕು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಉಪಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಎಂ.ಕಾರಜೋಳರವರು ಬಹುತರವಾಗಿ ನಾವು ಚರ್ಚಿಸಿದ ಎಲ್ಲಾ ವಿಚಾರಗಳನ್ನು ಮತ್ತು ನಾವು ವ್ಯಕ್ತಪಡಿಸಿರುವ ಆತಂಕಗಳನ್ನು ಅವರು ನೀಡಿರುವ ಉತ್ತರದಲ್ಲಿ ಒಪ್ಪಿಕೊಂಡಿದ್ದಾರೆ. ಪ್ರಶ್ನಿತ ಯೋಜನೆಗಳ ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ದೇಶದ ಪ್ರಧಾನಮಂತ್ರಿಗಳು ಹೋಗುವುದಿಲ್ಲ ಮತ್ತು ಆ ಯೋಜನೆಗಳಿಗೆ ಕೇಂದ್ರ ಸರ್ಕಾರವು ಅನುದಾನ ನೀಡುವುದಿಲ್ಲ ಎನ್ನುವ ಅಂಶಗಳನ್ನು ಹೊರತುಪಡಿಸಿದರೆ, ಎಲ್ಲವನ್ನೂ ಉಪಮುಖ್ಯಮಂತ್ರಿಗಳು ತಿಳಿಸಿದ್ದಾರೆ. ನಮ್ಮ ನಾಡಿನ ಜೀವನದಿ ಕಾವೇರಿಯ ಬಗ್ಗೆ ನಾವು ವ್ಯಕ್ತಪಡಿಸಿರುವ ಕಳಕಳಿಯನ್ನು ಬಹುತರವಾಗಿ ಉಪಮುಖ್ಯಮಂತ್ರಿಗಳು ತಮ್ಮ ಭಾಷಣದ ಮುಖಾಂತರ ಒಪ್ಪಿಕೊಂಡಿದ್ದಾರೆ. ನಮ್ಮ ಆತಂಕದ ಬಗ್ಗೆ ಉಪಮುಖ್ಯಮಂತ್ರಿಗಳು ತಮ್ಮ ಸುದೀರ್ಘವಾದ ಲಿಖಿತ ಉತ್ತರದಲ್ಲಿಯಾಗಲೀ ಅಥವಾ ಸ್ವಯಂ ವಿವರಣೆ ನೀಡುವಲ್ಲಿ ಒಂದು ಬಾರಿಯಾದರೂ ದೇಶದ ಪ್ರಧಾನ ಮಂತ್ರಿಗಳಿಗೆ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಮನವಿ ಮಾಡಿರುವ ಬಗ್ಗೆ ತಿಳಿಸಿರುವುದಿಲ್ಲ. ಈ ವಿಚಾರದಲ್ಲಿ ಪ್ರಧಾನಮಂತ್ರಿಗಳನ್ನು ಸಂಪರ್ಕಿಸಿರುವುದಿಲ್ಲ ಮತ್ತು ನಮ್ಮ ರಾಜ್ಯ ಸರ್ಕಾರವು ಯಾವುದೇ ರೀತಿಯ ಮನವಿಯನ್ನು ಸಲ್ಲಿಸಿರುವುದಿಲ್ಲ ಹಾಗೂ ಪತ್ರವನ್ನು ಬರೆದಿರುವುದಿಲ್ಲ. ಮೇಕೆದಾಟು ವಿಚಾರದಲ್ಲಿ ತಮಿಳುನಾಡು ಸರ್ಕಾರವು, they have gone personally and met the Hon'ble Prime Minister with repeated reminders and requested to stop Mekedatu. ಈ ವಿಚಾರದಲ್ಲಿ ತಮಿಳುನಾಡಿನವರು ಗರಿಷ್ಠ ಪ್ರಯತ್ನಗಳನ್ನು ಮಾಡಿದ್ದಾರೆ. ಆದರೆ ನಮ್ಮ ರಾಜ್ಯದವರು ದೇಶದ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುವುದು ಒಂದೆಡೆಗೆ ಇರಲಿ, ಇದರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ಒಂದು ಪತ್ರವನ್ನಾದರೂ ಸಹ ಬರೆದಿರುವುದಿಲ್ಲ. ನೆರೆಯ ರಾಜ್ಯದ ಜಲಸಂಪನ್ಮೂಲ ಸಚಿವರು ರಾಷ್ಟ್ರೀಯ ಜಲ ಆಯೋಗಕ್ಕೆ ಹಲವಾರು ಪತ್ರಗಳನ್ನು ಬರೆದಿರುವ ಬಗ್ಗೆ ತಿಳಿಸಿದ್ದಾರೆ. ತಮಿಳುನಾಡಿನ ಯೋಜನೆಗಳಿಗೆ ಕೇಂದ್ರ ಸರ್ಕಾರವು ಅನುದಾನ ಹಾಗೂ ಬೆಂಬಲ ನೀಡುವುದಿಲ್ಲವೆಂದು ನಮ್ಮ ಉಪಮುಖ್ಯಮಂತ್ರಿಗಳು ತಿಳಿಸಿದ್ದಾರೆ. ತಮಿಳುನಾಡಿನವರು ತಮ್ಮ ಯೋಜನೆಗಳಿಗೆ ಟೆಂಡರ್ ಕರೆದು, ಏಜೆನ್ಸಿಗಳನ್ನು ನಿಗದಿಪಡಿಸಿದ್ದಾರೆ. ಮುಂದುವರೆದು, 9,000 ಕೋಟಿ ರೂಪಾಯಿಗಳ ಮೊದಲನೇ ಹಂತದ ಯೋಜನೆಯ ಕಾಮಗಾರಿಗಳಿಗೆ ಅಲ್ಲಿನ ಮುಖ್ಯಮಂತ್ರಿಗಳು ಶಂಕುಸ್ಥಾಪನೆಯನ್ನು ಮಾಡಿ, ಯೋಜನೆಗಳನ್ನು ಆರಂಭಿಸಿದ್ದಾರೆ. ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಪ್ರಸ್ತಾಪಿಸಿದಂತೆ, ಅದಕ್ಕಿಂತಲೂ ಮುಂಚಿತವಾಗಿ ಪ್ರಾರಂಭವಾದ ನಮ್ಮ ಮೇಕೆದಾಟು ಯೋಜನೆಯು ಸ್ಥಗಿತಗೊಂಡಿದೆ. ಸರ್ವೋಚ್ಛ ನ್ಯಾಯಾಲಯದಲ್ಲಿ ನಮ್ಮ ರಾಜ್ಯದವರು ಕನಿಷ್ಠ ಒಂದು ಅರ್ಜಿಯನ್ನಾದರೂ ಸಲ್ಲಿಸಿಲ್ಲ ಮತ್ತು ನೆರೆಯ ರಾಜ್ಯದ ಕಾಮಗಾರಿಗಳಿಗೆ ತಡೆಯಾಜ್ಞೆಯನ್ನು ಪಡೆಯಬೇಕು. ತಮಿಳುನಾಡಿನವರು ಸರ್ವೋಚ್ಛ ನ್ಯಾಯಾಲಯದಲ್ಲಿ ತಕರಾರು ಅರ್ಜಿಯನ್ನು ಸಲ್ಲಿಸಿದ್ದಾರೆ. Passing of Interlocutory Order is left to Apex Court of this land. ಅದೇ ರೀತಿಯಾಗಿ ನಮ್ಮ ರಾಜ್ಯಕ್ಕೆ ಅನ್ಯಾಯವಾಗುತ್ತದೆ ಎಂದು ಹೇಳಿ ನಮ್ಮಿಂದ ನ್ಯಾಯಾಲಯದಲ್ಲಿ ತಕರಾರು ಅರ್ಜಿಯನ್ನು ಸಲ್ಲಿಸಬೇಕು. ನಾಳೆಯ ದಿನ ತಮಿಳುನಾಡಿನವರು ಕಾವೇರಿ ನದಿ ನೀರಿನ ಬಳಕೆ ಮಾಡಿದರೆ, ಅವರಿಗೆ reseventary ಹಕ್ಕು ಬರುತ್ತದೆ ಮತ್ತು ಇದರಿಂದಾಗಿ ನಮ್ಮೆಲ್ಲ ಯೋಜನೆಗಳಿಗೆ ತೊಂದರೆಯಾಗುತ್ತದೆ ಎನ್ನುವ ಬಗ್ಗೆ ಸರ್ವೋಚ್ಛ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಆದರೆ ಸರ್ಕಾರವು ಈ ವಿಚಾರದಲ್ಲಿ ಯಾವುದೇ ಅರ್ಜಿಗಳನ್ನು ಸಲ್ಲಿಸಿರುವುದಿಲ್ಲ ಮತ್ತು ಪ್ರಧಾನಮಂತ್ರಿಗಳೊಂದಿಗೆ ದೂರವಾಣಿ ಮುಖೇನ ಮಾತನಾಡಿರುವುದಿಲ್ಲ ಹಾಗೂ ಯಾವುದೇ ಮನವಿಗಳನ್ನು ಸಲ್ಲಿಸಿರುವುದಿಲ್ಲ. ಅವರನ್ನು ಭೇಟಿ ಮಾಡುವುದು ದೂರದ ಮಾತಾಗಿದೆ. ರಾಜ್ಯ ಸರ್ಕಾರವು ಈ ವಿಚಾರದಲ್ಲಿ ದಿವ್ಯ ನಿರ್ಲಕ್ಷ್ಯತನವನ್ನು ತೋರಿದೆ. ಸರ್ಕಾರವು ನಮ್ಮ ಭಾಗದ ಜೀವನದಿಯಾದ ಕಾವೇರಿಗೆ ನ್ಯಾಯ ಒದಗಿಸುತ್ತಾರೆ ಎನ್ನುವುದರ ಬಗ್ಗೆ ನಮಗೆ ಎಳ್ಳಷ್ಟೂ ವಿಶ್ವಾಸವಿಲ್ಲ. ಸರ್ಕಾರವು ನೀಡಿರುವ ಉತ್ತರದಿಂದ ನಮಗೆ ಅತೃಪ್ತಿಯಾಗಿದ್ದು, ನಾವುಗಳೆಲ್ಲರೂ ಸದನದಿಂದ ಹೊರಗೆ ಹೋಗುತ್ತೇವೆ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದಿಂದ ಹೊರಗೆ ಹೋದರು)**

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರದ ಉತ್ತರದಿಂದ ನಮಗೆ ಬಹಳ ದುಃಖವಾಗುತ್ತದೆ. ತಮಿಳುನಾಡಿನಲ್ಲಿ ಪ್ರಾರಂಭಗೊಂಡಿರುವ ಯೋಜನೆಗಳಿಗೆ ಕೇಂದ್ರ ಸರ್ಕಾರವು ಆರ್ಥಿಕ ನೆರವು ನೀಡುತ್ತದೆ ಎನ್ನುವ ವಿಚಾರವನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಆದರೆ, ಕೇಂದ್ರ ಸರ್ಕಾರವು ಆರ್ಥಿಕ ನೆರವು ನೀಡುತ್ತಿಲ್ಲ ಹಾಗೂ ಅಲ್ಲಿನ ಯೋಜನೆಗಳಿಗೆ ಅನುಮತಿ ನೀಡುವುದಿಲ್ಲವೆಂದು ಎನ್ನುವ ಸಂದೇಶವನ್ನು ಪ್ರಧಾನ ಮಂತ್ರಿಗಳ ಕಛೇರಿಯಿಂದ ಹೊರಡಿಸಲಿ. ಸರ್ಕಾರವು ಈ ರೀತಿಯಾಗಿ ಏಕೆ ಮಾಡಿಲ್ಲ? ಕೇಂದ್ರ ಸರ್ಕಾರವು ಆರ್ಥಿಕ ನೆರವು ನೀಡುವುದಿಲ್ಲ ಮತ್ತು ಆ ಯೋಜನೆಗಳನ್ನು ಮಾಡುವುದಕ್ಕೆ ಬಿಡುವುದಿಲ್ಲ ಎನ್ನುವಂತಹ ಸಂದೇಶಗಳನ್ನು ಪ್ರಧಾನ ಮಂತ್ರಿಗಳ ಕಛೇರಿಯಿಂದ ಇಷ್ಟು ದಿನಗಳವರೆಗೆ ರಾಜ್ಯ ಸರ್ಕಾರವು ಏಕೆ ಹೊರಡಿಸುವುದಕ್ಕಾಗಲಿಲ್ಲ? ಈ ವಿಚಾರದಲ್ಲಿ ಪ್ರಧಾನ ಮಂತ್ರಿಗಳನ್ನು ಏಕೆ ಭೇಟಿ ಮಾಡುವುದಕ್ಕಾಗಲಿಲ್ಲ? ನ್ಯಾಯ ಮಂಡಳಿ ಮತ್ತು ನಿರ್ವಹಣಾ ಮಂಡಳಿಗಳಲ್ಲಿ ತಮಿಳುನಾಡಿನವರಿಗೆ ನ್ಯಾಯ ದೊರಕುವುದಿಲ್ಲ ಮತ್ತು ಅವರ ಯೋಜನೆಗಳಿಗೆ ಅನುಮತಿ ದೊರೆಯುವುದಿಲ್ಲವೆಂದು ಉಪಮುಖ್ಯಮಂತ್ರಿಗಳು ಹೇಳಿದರು. ಜಲ ನಿರ್ವಹಣಾ ಮಂಡಳಿ ಮತ್ತು ನ್ಯಾಯ ಮಂಡಳಿಯಲ್ಲಿರುವವರು ನಮ್ಮ ಚಿಕ್ಕಪ್ಪನ ಮಕ್ಕಳೇ? ನ್ಯಾಯ ದೊರೆಯುವುದಿಲ್ಲವೆಂದು ಇಷ್ಟೊಂದು ನೇರವಾಗಿ ಸರ್ಕಾರವು ಹೇಳುತ್ತಿದೆ. ಈ ವಿಚಾರದಲ್ಲಿ ಕರ್ನಾಟಕದ ಪರವಾಗಿ ಯಾರಾದರೂ ನ್ಯಾಯ ನೀಡಿದ್ದಾರೆಯೇ? ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ದೇಶದ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿರುವ ಸಂಗತಿಯು ಯಾವುದೇ ಪತ್ರಿಕೆಯಲ್ಲಾಗಲೀ ವರದಿಯಾಗಿಲ್ಲ. ರಾಜ್ಯದ ಮುಖ್ಯಮಂತ್ರಿಗಳು ನಮ್ಮ ಕರ್ನಾಟಕ ರಾಜ್ಯದ ಯೋಜನೆಗಳಾಗಬೇಕು ಮತ್ತು ತಮಿಳುನಾಡಿನ ಯೋಜನೆಗಳಿಗೆ ನಮ್ಮ ವಿರೋಧವಿದೆ ಎಂದು ಹೇಳುವ ಗಡಸು ಮತ್ತು ಗಟ್ಟಿ ಮಾತನ್ನು ನಾವು ಯಾವ ಮಾಧ್ಯಮದಲ್ಲಿಯೂ ಸಹ ನೋಡಿಲ್ಲ. **XXX** ದೇಶದ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುವ ತಾಕತ್ತು ರಾಜ್ಯ ಸರ್ಕಾರಕ್ಕಿದೆಯೇ? ಪ್ರಧಾನ ಮಂತ್ರಿಗಳು ನಿಮ್ಮ ಭೇಟಿಗೆ ಅವಕಾಶವನ್ನು ನೀಡುತ್ತಾರೆಯೇ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ.ಕಾರಜೋಳ(ಉಪಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ರೀತಿಯಾಗಿ ಹೇಳುವುದು ಸರಿಯಲ್ಲ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಪ್ರಧಾನ ಮಂತ್ರಿಗಳು ರಾಜ್ಯ ಸರ್ಕಾರದ ಭೇಟಿಗೆ ಅವಕಾಶವನ್ನು ನೀಡುತ್ತಾರೆಯೇ? ಪ್ರಧಾನ ಮಂತ್ರಿಗಳು ಇವರನ್ನು ಹತ್ತಿರಕ್ಕೂ ಸ್ಪಹ ಬಿಟ್ಟುಕೊಳ್ಳುವುದಿಲ್ಲ.

**(ಗೊಂದಲ)**

**(ಮುಂದು)**

**(348)/9-3-2021/6-30/ಎಲ್ಎಂ/ಆರ್ಎನ್**

**(ಗೊಂದಲ)**

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಗಳೆ, **XXX** ಎಂದರೆ ಏನು ಅರ್ಥ? ಆ ಪದವನ್ನು ಕಡತದಿಂದ ತೆಗೆದು ಹಾಕಬೇಕು.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಕರ್ನಾಟಕದ ಜನರಿಗೆ ದ್ರೋಹ ಮಾಡುತ್ತಿದ್ದೀರಿ. ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುವ ತಾಕತ್ತು ಇದೆಯಾ ನಿಮಗೆ,

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ವಿರೋಧ ಪಕ್ಷಗಳ ಈ ನಡತೆಯನ್ನು ನಾವು ಖಂಡಿಸುತ್ತೇವೆ. ಇದೊಂದು ಪರಂಪರೆಯಾಗಿದೆ.

**(ಗೊಂದಲ)**

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಗಳೆ, **XXX** ಎನ್ನುವ ಪದವನ್ನು ಕಡತದಿಂದ ತೆಗೆದು ಹಾಕಿ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:–** **ತೆಗೆಸೋಣ.**

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಇದು ತಮಿಳುನಾಡಿನವರ ಹುನ್ನಾರ. ಇದಕ್ಕೆ ಆದಷ್ಟು ಬೇಗ ಸರ್ಕಾರ ತಡೆಯಾಜ್ಞೆಯನ್ನು ತರಬೇಕು. ಕೂಡಲೇ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕೆಂದು ಹೇಳಿ, ಸರ್ಕಾರದ ಉತ್ತರವನ್ನು ಖಂಡಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

**(ಈ ಹಂತದಲ್ಲಿ ಸರ್ಕಾರದ ನಿಲುವನ್ನು ಪ್ರತಿಭಟಿಸಿ ಜನತಾದಳ(ಜಾತ್ಯಾತೀತ) ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)**

**ಶ್ರೀ ಗೋವಿಂದ ಎಂ. ಕಾರಜೋಳ(ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಇಲಾಖೆ):–** ಮಾನ್ಯ ಸಭಾಪತಿಗಳೆ, ಕಾವೇರಿ ನೀರಿನ ವಿಚಾರದಲ್ಲಿ ಯಾವುದೆ ಭಿಂಟಂಡಿಡಿಂಟಖುಜ ನ್ನು ಸರ್ಕಾರ ಮಾಡಿಕೊಳ್ಳುವುದಿಲ್ಲ ಎನ್ನುವುದನ್ನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಜಲಸಂಪನ್ಮೂಲ ಸಚಿವರಿಗೆ, ಮಾನ್ಯ ಪ್ರಧಾನ ಮಂತ್ರಿಗಳಿಗೆ ಈ ವಿಚಾರವಾಗಿ ಪತ್ರವನ್ನು ಬರೆದಿದ್ದಾರೆ, ಇಲಾಖೆಯಿಂದಲೂ ಪತ್ರ ವ್ಯವಹಾರವನ್ನು ಮಾಡಲಾಗಿದೆ.

**ಸಭಾಪತಿಯವರು:–** ಈ ವಿಚಾರವಾಗಿ ಮಾನ್ಯ ಪ್ರಧಾನ ಮಂತ್ರಿಗಳಿಗೆ ಸರ್ಕಾರದಿಂದ ಪತ್ರ ಬರೆಯಲಾಗಿದೆಯೇ?

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಗಳೆ, ಪತ್ರವನ್ನು ಬರೆಯಲಾಗಿದೆ. ಅದರ ಕಾಪಿಯನ್ನು ತಮಗೆ ಕಳುಹಿಸಿಕೊಡುತ್ತೇನೆ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:–** ಹೇಳುವುದನ್ನೂ ವಿರೋಧ ಪಕ್ಷದವರು ಸರಿಯಾಗಿ ಕೇಳುವುದಿಲ್ಲ. ಸಭಾತ್ಯಾಗ ಮಾಡುವುದು ಒಂದು ಪರಂಪರೆಯಾಗಿಬಿಟ್ಟಿದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಆಯಿತು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಗಳೆ, Chairman, Cauvery Development Authority ರವರಿಗೆ ಪತ್ರವನ್ನು ಬರೆದಿದ್ದೇವೆ. ಎಲ್ಲಾ ವಿಚಾರದಲ್ಲಿಯು ನಮ್ಮ ಸರ್ಕಾರ ಪ್ರಾಮಾಣಿಕವಾದ  ಪ್ರಯತ್ನವನ್ನು ಮಾಡಿದೆ. ಅಷ್ಟೇ ಅಲ್ಲ, ನಾವು ಸರ್ವಪಕ್ಷಗಳ ಸಭೆಯನ್ನು ಕರೆಯುತ್ತಿದ್ದೇವೆ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಕಡತವನ್ನು ಕಳುಹಿಸಿದ್ದೇವೆ. ಇಷ್ಟರಲ್ಲಿಯೇ ಸಭೆಯನ್ನು ಕರೆಯುತ್ತೇವೆ, ಆಗ ತಾವು ಎಲ್ಲರೂ ಬಂದು ಸಲಹೆ-ಸೂಚನೆಗಳನ್ನು ಕೊಡಿ, ನಿಮ್ಮ ಆತಂಕ ಏನು ಎನ್ನುವುದನ್ನು ಹೇಳಿ ಎಂದು ವಿರೋಧ ಪಕ್ಷದವರಿಗೆ ಮುಕ್ತವಾಗಿ ಹೇಳಿದ್ದೇವೆ. ಆದರೂ ಇವರಿಗೆ ರಾಜಕಾರಣ ಮಾಡುವುದು ಬೇಕಾಗಿದೆ. ಅದಕ್ಕೆ ನಾವು ಏನು ಮಾಡಲು ಆಗುವುದಿಲ್ಲ. ನೀರಿನ ವಿಚಾರದಲ್ಲಿ ರಾಜಕಾರಣ ಮಾಡುವುದು ಸರಿಯಲ್ಲ. ನಮ್ಮ ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ. ದಿನಾಂಕ:21-2-2021ರಂದು ದೆಹಲಿಯಲ್ಲಿ legal team ಜೊತೆಯಲ್ಲಿ ಈ ವಿಚಾರವಾಗಿ ಚರ್ಚೆಯಾಗಿದೆ. ಅದೆಲ್ಲವನ್ನು ನಾವು ಬಹಿರಂಗಪಡಿಸಲು ಆಗುವುದಿಲ್ಲ. Technical team ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ಆ ನಿಟ್ಟಿನಲ್ಲಿ ಎಲ್ಲಾ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಆದರೆ ಇವರು ರಾಜಕಾರಣ ಮಾಡಿಕೊಂಡು ಸಭಾತ್ಯಾಗ ಮಾಡಿದರೆ ನಾವೇನು ಮಾಡಲು ಆಗುವುದಿಲ್ಲ. ಕೇಳುವಷ್ಟು ಸೌಜನ್ಯತೆ ಇಲ್ಲ ಅಂದರೆ ಹೇಗೆ? ಸರ್ಕಾರ **XXX** ಮಾಡುತ್ತದೆ ಎಂದು ಹೇಳುವುದು ಸರಿಯಲ್ಲ. ನಮ್ಮ ಸರ್ಕಾರ ನೀರಾವರಿ ವಿಚಾರದಲ್ಲಿ, ರಾಜ್ಯದ ನೆಲ-ಜಲ ವಿಚಾರ ಬಂದಾಗ, ರಾಜ್ಯದ ಹಿತದ ದೃಷ್ಟಿಯಿಂದ compromise ಮಾಡಿಕೊಳ್ಳುವಂತಹ ಪ್ರಶ್ನೆ ಇಲ್ಲವೇ ಇಲ್ಲ. ನಮ್ಮ ಪಾಲಿನ ಒಂದು ಹನಿ ನೀರನ್ನು ಬೇರೆಯವರು ಕಬಳಿಸಲು ಬಿಡುವುದಿಲ್ಲ ಎನ್ನುವುದನ್ನು ಈ ಸದನದ ಮೂಲಕ ಹೇಳಬಯಸುತ್ತೇನೆ.

**ಸಭಾಪತಿಯವರು:-** ಅರ್ಧ ಗಂಟೆ ಕಾಲಾವಧಿ ಚರ್ಚೆ ತೆಗೆದುಕೊಳ್ಳಲು ನೋಟಿಸ್ ಕೊಟ್ಟಿರುವಂತಹ ಸದಸ್ಯರು ಇಲ್ಲ. ಆದ್ದರಿಂದ ಈಗ ಬಜೆಟ್ ಮೇಲಿನ ಚರ್ಚೆಯನ್ನು ತೆಗೆದುಕೊಳ್ಳಲಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ವಿಶ್ವನಾಥ್‌ರವರು ಬಜೆಟ್ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡಬೇಕು.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಅಡಗೂರು ಹೆಚ್. ವಿಶ್ವನಾಥ್:-** ಮಾನ್ಯ ಸಭಾಪತಿಗಳೆ, ಇದು ಃಣಾಜಂಜಣ ಖಿಭುಂಟಿ. ಇದನ್ನು ತಾವು ಗಮನಿಸಬೇಕು. ಬಜೆಟ್ ಮೇಲಿನ ಚರ್ಚೆಯನ್ನು ಸಂಜೆ ಆರುವರೆಗೆ ತೆಗೆದುಕೊಳ್ಳುವುದು ಸರಿಯಲ್ಲ. ಖಚಿಟಿಭಿಣುಣಥಿ ಂಜಿ ಣುಜ ಃಣಾಜಂಜಣ, ಸಂಜೆ ಹೊತ್ತಿಗೆ ಆ ಹುರುಪೆ ಹೊರಟು ಹೋಗುತ್ತದೆ.

**ಸಭಾಪತಿಯವರು:-** ಹಾಗಿದರೆ ತಾವು ನಾಳೆ ಮಾತನಾಡಿ.

**Sri ADAGUR H.VISHWANATH:** No, I am very sorry. Business Advisory Committee ನಲ್ಲಿ ಈ ರೀತಿ ತೀರ್ಮಾನ ತೆಗೆದುಕೊಳ್ಳುವುದಲ್ಲ. ಬಜೆಟ್ ಅಧಿವೇಶನದಲ್ಲಿ, ಬಜೆಟ್ ಚರ್ಚೆಯನ್ನು ಎರಡೂ ಮನೆಗಳಲ್ಲಿ ಬೆಳಗ್ಗೆಯೇ ತೆಗೆದುಕೊಳ್ಳಬೇಕು. ಪ್ರಶ್ನೋತ್ತರ, ಶೂನ್ಯವೇಳೆ ಮತ್ತು ಅತ್ಯಂತ ತುರ್ತು ವಿಷಯಗಳಿಗೆ ಸಮಯವನ್ನು ಕೊಟ್ಟು ಉಳಿದ ಎಲ್ಲ ಸಮಯವನ್ನು ಬಜೆಟ್ ಮೇಲಿನ ಚರ್ಚೆಗೆ ಮೀಸಲಿಡಬೇಕು. ಪ್ರತಿ ಇಲಾಖೆಯ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಪ್ರತಿ ಮಂತ್ರಿಯವರು ಉತ್ತರ ಕೊಡಬೇಕಾಗುತ್ತದೆ. 30 ದಿನಗಳ ಬಜೆಟ್ ಅಧಿವೇಶನ ಎಂದು ಏಕೆ ಕರೆಯುತ್ತಾರೆ? ಅರ್ಧ ಗಂಟೆ ಮಾತನಾಡಿ ಹೊರಟುಹೋಗಲು ಅಲ್ಲ. ಆದ್ದರಿಂದ ನಾಳೆ ತೆಗೆದುಕೊಳ್ಳಿ. ನಾನು ನಾಳೆ ಮಾತನಾಡುತ್ತೇನೆ. ನಾನು 1978ರಲ್ಲಿ ಶಾಸಕನಾಗಿ ಬಂದಿದ್ದೇವೆ, ತಾವು 1980ರಲ್ಲಿ ಶಾಸಕರಾಗಿ ಬಂದಿದ್ದೀರಿ. ತಮಗೆ ಗೊತ್ತಿದೆ, ಆಗ ಪ್ರತಿ ಇಲಾಖೆಯ ಬೇಡಿಕೆ ಮೇಲೆ ಚರ್ಚೆಯಾಗುತ್ತಿತ್ತು. ಪ್ರತಿಯೊಂದು ಇಲಾಖೆಯ ಮಂತ್ರಿಗಳು ಉತ್ತರ ಕೊಡುತ್ತಿದ್ದರು.

**ಸಭಾಪತಿಯವರು:-** ತಾವು ಹೇಳುವುದು ಸರಿ ಇದೆ. ಅದನ್ನು ನಾನು ಒಪ್ಪುತ್ತೇನೆ.

**ಶ್ರೀ ಅಡಗೂರು ಹೆಚ್. ವಿಶ್ವನಾಥ್:-** ಇವತ್ತು ಹಾಗೆ ಆಗುತ್ತಿಲ್ಲ. ಆದ್ದರಿಂದ ಇವತ್ತು ಬೇಡ ನಾಳೆ ಚರ್ಚೆಯನ್ನು ತೆಗೆದುಕೊಳ್ಳಿ.

**ಸಭಾಪತಿಯವರು:-** ಆಯಿತು ತಾವು ಹೇಳಿದಂತೆ ನಾಳೆಯೇ ತೆಗೆದುಕೊಳ್ಳುತ್ತೇನೆ. ಸದನವನ್ನು ಈಗ ನಾಳೆ ಬೆಳಗ್ಗೆ 10 ಗಂಟೆ 30 ನಿಮಿಷದವರೆಗೆ ಮುಂದೂಡಲಾಗುತ್ತದೆ.

**(ಸದನವು ಸಂಜೆ 6 ಗಂಟೆ 35 ನಿಮಿಷಕ್ಕೆ ಮುಕ್ತಾಯಗೊಂಡು, ಬುಧವಾರ ದಿನಾಂಕ 10-3-2021ರಂದು ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

<><><>